# ಐನ್‌ಸ್ಟೈನ್

ಶ್ರೀ ಹೆಚ್. ವಿ. ಶ್ರೀರಂಗರಾಜು

C. Bhaskara
I PUC. SJRC
Bangalore-9

PRESCRIBED BY THE BOARD OF
PRE-UNIVERSITY EDUCATION, BANGALORE

# ಐನ್ ಸ್ಟೈನ್

ಎಚ್. ವಿ. ಶ್ರೀರಂಗರಾಜ್

Prescribed by: The Board of Pre-University Education
BANGALORE.

Published by :

The Director of Printing, Stationery & Publications, (Text Books)
BANGALORE.

**೧೯೭೯**

**ಮುದ್ರಣ :**
ಶ್ರೀ ಗಣೇಶ್ ಪ್ರಿಂಟರ್ಸ್, **ಅಳಕೆ, ಮಂಗಳೂರು**—೫೭೫ ೦೦೩.

ಐನ್‌ಸ್ಟೈನ್ ಪುಸ್ತಕದ ಸರ್ವ ಸ್ವಾಮ್ಯವನ್ನು ಪ್ರೀ ಯೂನಿವರ್ಸಿಟಿ ಮಂಡಲಿಗೆ ಪಠ್ಯ ಪುಸ್ತಕಾವಧಿಯವರೆಗೆ ನಿಬಂಧನೆಗಳಿಗೆ ಒಳಪಟ್ಟಂತೆ ಒಪ್ಪಿಸಿದ್ದಕ್ಕಾಗಿ ಪುಸ್ತಕದ ಲೇಖಕರಿಗೆ ಪ್ರೀ ಯೂನಿವರ್ಸಿಟಿ ಶಿಕ್ಷಣ ಇಲಾಖೆಯು ಋಣಿಯಾಗಿದೆ

ಸ. ಹಾಲಪ್ಪ

ನಿರ್ದೇಶಕರು,

ಪ್ರೀ ಯೂನಿವರ್ಸಿಟಿ ಶಿಕ್ಷಣ ಇಲಾಖೆ

# ಪರಿವಿಡಿ


| | | |
|---|---|---|
| ೧. | ಪ್ರಾರಂಭ ಜೀವನ | ೧ |
| ೨. | ಉದಯಮುಖ | ೯ |
| ೩. | ಭೌತಶಾಸ್ತ್ರ ವಿಶಾರದ | ೧೬ |
| ೪. | ಸತ್ಯಾಗ್ರಹಿ | ೩೩ |
| ೫. | ಶಾಂತಿದೂತ | ೫೬ |
| ೬. | ಹಾಲಾಹಲ | ೮೪ |
| ೭. | ಹೊಸ ಬಾಳು | ೧೦೪ |
| ೮. | ವಿಶ್ವ ಧರ್ಮಾವಲಂಬಿ | ೧೧೬ |
| ೯. | ಮೃತ್ಯೋರ್ಮಾ ಅಮೃತಂ ಗಮಯ | ೧೨೨ |

# ೧ ಪ್ರಾರಂಭ ಜೀವನ

**ಹಿನ್ನೆಲೆ**

ನೂರಿನ್ನೂರು ವರ್ಷಗಳ ಹಿಂದೆ ಜರ್ಮನಿಯಲ್ಲಿ ಹಲವು ಸಣ್ಣ ಸಣ್ಣ ಸ್ವತಂತ್ರ ರಾಜ್ಯಗಳಿದ್ದವು. ಉತ್ತರ ಭಾಗದ ಪ್ರಷ್ಯಾರಾಜ್ಯ ಅವುಗಳಲ್ಲೊಂದು, ವಿಸ್ತೀರ್ಣದಲ್ಲಿಯೂ ಬಲದಲ್ಲಿಯೂ ಅದೇ ಪ್ರಮುಖವೆನಿಸಿತ್ತು. ವಿಲ್‌ಹೆಲ್ಮ್ ಎಂಬ ರಾಜನು ಆಳುತ್ತಿದ್ದಾಗ ೧೮೬೨ರಲ್ಲಿ ಒಟ್ಟೊವಾನ್ ಬಿಸ್‌ಮಾರ್ಕ್ ಎಂಬ ಮೇಧಾವಿಯು ಅದರ ಪ್ರಧಾನಿಯಾದನು. ದೇಶದ ಯುವಕರಿಗೆಲ್ಲ ಕಡ್ಡಾಯವಾಗಿ ಸೈನಿಕ ಶಿಕ್ಷಣವನ್ನಿತ್ತು ಉತ್ತಮವಾದ ಸೈನ್ಯವನ್ನೇ ರ್ಪಡಿಸಿ ಪ್ರಷ್ಯದ ಪ್ರಾಬಲ್ಯವನ್ನು ಹೆಚ್ಚಿಸಿ ಬಿಸ್‌ಮಾರ್ಕ್ ಖ್ಯಾತಿ ಪಡೆದನು.

ಇದಕ್ಕೆ ಮೊದಲು ದಕ್ಷಿಣ ಭಾಗದ ಆಸ್ಟ್ರಿಯಾ ರಾಜ್ಯವು ಜರ್ಮನ್ ರಾಜ್ಯಗಳಿಗೆಲ್ಲ ಮುಖಂಡ ಸ್ಥಾನದಲ್ಲಿತ್ತು. ಬಿಸ್ಮಾರ್ಕನು ಅದರ ಮೇಲೆ ಯುದ್ಧಸಾರಿ ಮೂರೇ ವಾರಗಳಲ್ಲಿ ಅದನ್ನು ಸಂಪೂರ್ಣವಾಗಿ ಸೋಲಿಸಿದನು. ಸೋತ ಆಸ್ಟ್ರಿಯವು ಪ್ರಷ್ಯದ ಮುಖಂಡತನವನ್ನು ಒಪ್ಪಿಕೊಳ್ಳಬೇಕಾಯಿತು. ನೆರೆಯ ರಾಜ್ಯಗಳು ವಿಜಯಿಯಾದ ರಾಜ್ಯದೊಡನೆ ಸೇರಲು ಸಂತೋಷದಿಂದ ಸಮ್ಮತಿಸಿದವು. ಬಹಳ ಕಾಲದಿಂದ ಹಿಂದುಳಿದಿದ್ದ ದೇಶವನ್ನು ಬಿಸ್ಮಾರ್ಕನು ಪ್ರಗತಿಪರ ರಾಷ್ಟ್ರವನ್ನಾಗಿ ಮಾರ್ಪಡಿಸಿದನು. ಅವನ ಪ್ರಯತ್ನದಿಂದ ಜರ್ಮನಿಯ ಎಲ್ಲ ರಾಜ್ಯಗಳೂ ಒಂದುಗೂಡಿ ಜರ್ಮನ್ ಜನಾಂಗವಾಯಿತು,

ಯುದ್ಧಪ್ರಿಯತೆ, ಕಠಿನತೆ, ಶಿಸ್ತು ಇವು ಪ್ರಷ್ಯನರ ವಿಶಿಷ್ಟ ಗುಣಗಳಾಗಿದ್ದುವು. ಇತರ ರಾಜ್ಯಗಳ ಜನರು ಅವರನ್ನು ಮೆಚ್ಚಿದ್ದರು; ಧೀಮಂತರು ಕೂಡ ಅವರ ಅನುಕರಣೆ ಮಾಡಲಾರಂಭಿಸಿದ್ದರು. ಆದರೆ ಜರ್ಮನಿಯ ನೈಋತ್ಯ ಭಾಗದ ಸ್ವೇಬಿಯಾ ರಾಜ್ಯದಲ್ಲಿ ಮಾತ್ರ ಜನ ಜೀವನ ಬೇರೆ ತೆರನಾಗಿತ್ತು. ಅವರು ಆತ್ಮಸಂಸ್ಕಾರಕ್ಕೆ ಹೆಚ್ಚು ಮನ್ನಣೆ ಕೊಡುತ್ತಿದ್ದುದರಿಂದ ಸಂಗೀತ, ಸಾಹಿತ್ಯ, ಮತ, ಧರ್ಮ, ತತ್ವಜ್ಞಾನಗಳೆಂದರೆ ಅವರಿಗೆ ಪಂಚಪ್ರಾಣ. ಅವರ ಭಾಷೆ ಪ್ರಷ್ಯನ್ ಭಾಷೆಗಿಂತ ಮೃದು ಮತ್ತು ಹೆಚ್ಚು ಸಂಸ್ಕಾರಗೊಂಡುದಾಗಿದ್ದಿತು, ಅವರು ಭಾವ ಪ್ರಪಂಚದಲ್ಲಿ ನಲಿದಾಡಬಲ್ಲವರಾದರೂ ವ್ಯವಹಾರ ಜ್ಞಾನಶೂನ್ಯರಾಗಿರಲಿಲ್ಲ, ವಿವಿಧ ಧರ್ಮೀಯರಾದರೂ ಪರಸ್ಪರ ವಿಶ್ವಾಸ ತೋರಿ ಸೌಹಾರ್ದದಿಂದಿದ್ದರು.

ಜರ್ಮನಿಯ ಮಿಕ್ಕ ಭಾಗಗಳಲ್ಲಿ ಯಹೂದಿಗಳಿಗೂ ಕ್ರೈಸ್ತರಿಗೂ ಸಾಮರಸ್ಯವಿರಲಿಲ್ಲ. ಭಾಷೆ, ಸಂಸ್ಕೃತಿ, ಆಚಾರ, ವ್ಯವಹಾರ–ಎಲ್ಲದರಲ್ಲಿಯೂ ಅವರ ನಡುವೆ ವಿಶೇಷ ಅಂತರವಿತ್ತು. ಪ್ರಷ್ಯನ್ ಪ್ರಭಾವಕ್ಕೊಳಗಾದ ಪ್ರದೇಶದಲ್ಲಿದ್ದ ಯಹೂದಿಗಳು ಹೊಸ

ರಾಷ್ಟ್ರವನ್ನೂ ಆದರ ಮುಖಂಡರನ್ನೂ ಮೆಚ್ಚಿಕೊಂಡಿದ್ದರೂ ಬಹುಸಂಖ್ಯಾತ ಕ್ರೈಸ್ತರ ಜೀವನದಲ್ಲಿ ಅವರು ಒಂದಾಗಿ ಬಾಳಲಿಲ್ಲ. ಸ್ವೇಬಿಯಾ ಪ್ರದೇಶದ ಯಹೂದಿಗಳು ಮಾತ್ರ ಆದಕ್ಕೆ ಅಪವಾದವಾಗಿ ಕ್ರೈಸ್ತರೊಡನೆ ಹಾಸುಹೊಕ್ಕಾಗಿ ಅಣ್ಣತಮ್ಮಂದಿರಂತೆ ನಡೆದರು.

ಹೊಸ ಸಾಮ್ರಾಜ್ಯವು ಮೇಲಿಂದ ಮೇಲೆ ಜಯಗಳನ್ನು ಗಳಿಸಿದುದರಿಂದ ಜರ್ಮನಿಯ ಜನನಾಯಕರಲ್ಲಿ ಅಹಂಕಾರ ಮೂಡಿತು. ಅದರ ಪ್ರತಿಧ್ವನಿ ಜನತೆಯಲ್ಲಿಯೂ ಕಾಣಿಸಿತು. ಆದರೂ ಸ್ವೇಬಿಯಾ ರಾಜ್ಯದ ಜನರು ಆ ವ್ಯಾಮೋಹಕ್ಕೆ ಒಳಗಾಗಲಿಲ್ಲ, ಅವರು ಸರಳಜೀವನದಲ್ಲಿ ಸಂತೃಪ್ತಿಪಡುತ್ತ ಪರಹಿತಾಕಾಂಕ್ಷಿಗಳಾಗಿ ದುಡಿಯುತ್ತಿದ್ದರು. ಆಲ್ಬರ್ಟ್ ಐನ್‌ಸ್ಟೈನ್ ಜನಿಸಿದುದು ಅಂಥ ನಿರಾಡಂಬರದ ಒಂದು ಕುಟುಂಬದಲ್ಲಿ.

## ಬಾಲ್ಯ ಮತ್ತು ಪ್ರಾಥಮಿಕ ವಿದ್ಯಾಭ್ಯಾಸ

ಉಲ್ಮ್ ನಗರದಲ್ಲಿ ವಾಸಿಸುತ್ತಿದ್ದ ಹರ್ಮಾನ್ ಐನ್‌ಸ್ಟೈನನು ಯಹೂದಿ. ಹಿರಿಯರಿಂದ ಪರಂಪರಾನುಗತವಾಗಿ ಬಂದ ಪ್ರತಿಯೊಂದು ಕಂದಾಚಾರವನ್ನೂ ಅವನು ಅನುಸರಿಸತಕ್ಕವನಾಗಿರಲಿಲ್ಲ. ಆದರೆ ತನ್ನ ಧರ್ಮದ ಸತ್‌ಸಂಪ್ರದಾಯಗಳನ್ನು ಮೀರದಿರುವುದು ಅವನಿಗೆ ಬಾಲ್ಯಾರಭ್ಯ ಅಭ್ಯಾಸವಾಗಿತ್ತು. ಜರ್ಮನ್ ಕಾವ್ಯಗಳು ಅವನಿಗೆ ಅಚ್ಚುಮೆಚ್ಚು; ಸಾಹಿತ್ಯಾಭ್ಯಾಸ ಅವನ ದಿನಚರಿಯಲ್ಲಿ ಹೆಣೆದುಕೊಂಡಿತ್ತು. ಅವನು ವೃತ್ತಿಯಲ್ಲಿ ವರ್ತಕನಾದರೂ ದಿನವೆಲ್ಲ, ವರ್ಷವೆಲ್ಲ, ದುಡ್ಡಿಗೆ ಅಂಟಿಕೊಂಡಿರದೆ ಬಿಡುವಾದಾಗಲೆಲ್ಲ ಸುತ್ತಮುತ್ತಲಿನ ಸುಂದರ ಪ್ರದೇಶಗಳಿಗೆ ಹೋಗಿ ಮನಸ್ಸನ್ನು ಹಸನುಮಾಡಿಕೊಳ್ಳುತ್ತಿದ್ದನು. ಅವನ ಪತ್ನಿ ಪೌಲಿನ್. ಅವಳೂ ಸಂಗೀತಪ್ರಿಯೆ, ಸೌಂದರ್ಯೋಪಾಸಿಕೆ. ಅವಳ ಹಾಸ್ಯಪ್ರವೃತ್ತಿ ಹರ್ಮಾನನ ಮೆಚ್ಚುಗೆಗೆ ಪಾತ್ರವಾಗಿತ್ತು. ಅಂಥ ಅನುರೂಪ ದಂಪತಿಗಳ ಉದರದಲ್ಲಿ ೧೮೭೯ರ ಮಾರ್ಚಿ ೧೪ರ ದಿನ ಆಲ್ಬರ್ಟ ಐನ್‌ಸ್ಟೈನ್ ಜನಿಸಿದನು.

ಆಲ್ಬರ್ಟನಿಗೆ ಒಂದು ವರ್ಷ ತುಂಬುವ ಹೊತ್ತಿಗೆ ಹರ್ಮಾನನು ತನ್ನ ಊರನ್ನು ಬಿಡಬೇಕಾಗಿ ಬಂದಿತು; ಅವನ ಕುಟುಂಬವು ಮ್ಯೂನಿಚ್ ನಗರದಲ್ಲಿ ನೆಲಸಿತು. ಹರ್ಮಾನ್ ಮತ್ತು ಅವನ ತಮ್ಮ ಇಬ್ಬರೂ ಸೇರಿ ಅಲ್ಲಿ ಒಂದು ಕಾರ್ಖಾನೆಯನ್ನು ಸ್ಥಾಪಿಸಿದರು. ತಮ್ಮನು ಯಂತ್ರಶಿಲ್ಪಿಯಾಗಿದ್ದು ಕಾರ್ಖಾನೆಯನ್ನು ನಡೆಸುತ್ತಿದ್ದನು; ಕಾರ್ಖಾನೆಯ ಉತ್ಪನ್ನ ವಸ್ತುಗಳ ಮಾರಾಟದ ವ್ಯವಸ್ಥೆ ಅಣ್ಣನ ಪಾಲಿನ ಕೆಲಸವಾಯಿತು.

ಐನ್‌ಸ್ಟೈನ್ ದಂಪತಿಗಳು ವಲಸೆಬಂದ ಈ ಪ್ರದೇಶದಲ್ಲಿ ಕ್ಯಾಥಲಿಕ್ ಶಾಲೆಗಳೇ ಹೆಚ್ಚಾಗಿದ್ದವು. ಅವರು ಮಗನನ್ನು ಅಂಥ ಒಂದು ಶಾಲೆಗೆ ಕಳುಹಿಸಿದರು. ಶಾಲೆಯಲ್ಲಿ ಆಲ್ಬರ್ಟನೊಬ್ಬನೇ ಯಹೂದಿ. ಆದರೂ ತಾನು ಬೇರೆ ಮತಕ್ಕೆ ಸೇರಿದವನೆಂಬ ಭಾವನೆ ಬಾಲಕನ ಮನಸ್ಸಿಗೆ ಬರಲಿಲ್ಲ. ಅವನು ಎಲ್ಲ ಮಕ್ಕಳೊಡನೆ ಸ್ನೇಹದಿಂದ ನಲಿದಾಡಿದನು. ಪಾಠಗಳಲ್ಲಿ ಅವನದು ಮೇಲುಗೈಯಾಗತೊಡಗಿತು. ಕ್ಯಾಥಲಿಕ್ ಧರ್ಮಶಾಸ್ತ್ರವನ್ನು ಕೂಡ ಅವನು ಅತ್ಯಾಸಕ್ತಿಯಿಂದ ಕಲಿತನು.

ಆಟದಲ್ಲಿ ಆಲ್ಬರ್ಟ್ ಹಿಂದೆ. ಮಿಕ್ಕ ಮಕ್ಕಳು ಕುಣಿದು ಕುಪ್ಪಳಿಸಿ ಕೇಕೆ ಹಾಕುತಿದ್ದರೆ ಅವನು ಮೂಲೆಯಲ್ಲಿ ನಿಂತು ನೋಡುತ್ತಿದ್ದನು. ಬೀದಿಯಲ್ಲಿ ಸೈನಿಕರು 'ಲೆಫ್ಟ್ ರೈಟ್' ಮಾಡಿಕೊಂಡು ಹೋಗುವಾಗ ಬೇರೆ ಮಕ್ಕಳು ಅವರ ಹಿಂದೆ ಓಡುತ್ತಲೋ ತಾಳಕ್ಕೆತಕ್ಕಂತೆ ಹೆಜ್ಜೆಯಿಡುತ್ತಲೋ ತಂದೆತಾಯಿಗಳಿಗೆ ಸಂತಸವನ್ನುಂಟುಮಾಡುತ್ತಿದ್ದರು. ಆಲ್ಬರ್ಟ್ ನಾದರೋ ಸೈನ್ಯವನ್ನು ಕಂಡೊಡನೆ ಕಿಟ್ಟನೆ ಕಿರಿಚಿಕೊಂಡು ಮನೆಗೋಡುತ್ತಿದ್ದನು.

ಒಂಬತ್ತು ವರ್ಷಕ್ಕೆ ಆಲ್ಬರ್ಟ್‌ನು ಪ್ರಾಥಮಿಕಶಾಲೆಯ ಮೇಲಿನ ತರಗತಿಯನ್ನು ಮುಟ್ಟಿದನು. ಅಷ್ಟಾದರೂ ಅವನ ಬಾಯಿಂದ ಬೇಗನೆ ಮಾತು ಹೊರಡುತ್ತಿರಲಿಲ್ಲ. ಯಾವುದನ್ನು ಹೇಳಬೇಕಾದರೂ ಅವನಿಗೆ ತುಂಬ ಕಾಲ ಬೇಕಾಗುತ್ತಿತ್ತು. ಸರಿಯಾಗಿ ವಿಚಾರ ಮಾಡಿ ಅವಶ್ಯವಾದುದನ್ನು ಮಾತ್ರ ಹೇಳುವುದು ಅವನ ಅಭ್ಯಾಸವಾಗಿತ್ತು. ಅವನು ಆಡಿದ ಮಾತು ಎಂದೂ ಸಟೆಯಾಗುತ್ತಿರಲಿಲ್ಲ. ಅವನ ಪ್ರಾಮಾಣಿಕತೆ ಸಂಗಡಿಗರ ಮನಸ್ಸನ್ನು ಸೆಳೆಯಿತು. ಆದುದರಿಂದ ಅವನಿಗೆ ಸತ್ಯ ಹರಿಶ್ಚಂದ್ರ ಎಂಬ ಅರ್ಥದ ಬಿರುದು ಬಂದಿತ್ತು.

ಬರುಬರುತ್ತ ಆಲ್ಬರ್ಟ್‌ನಿಗೆ ಶಾಲೆಯಲ್ಲಿ ಬೇಸರ ಉಂಟಾಯಿತು. ಪಾಠಗಳನ್ನು ಯಾಂತ್ರಿಕವಾಗಿ ಕಲಿಯುವುದರಲ್ಲಿ ಅವನ ಆಸಕ್ತಿ ಉಳಿಯಲಿಲ್ಲ. ಮನಸ್ಸಿಗೆ ಬಂದ ಸಂಶಯ ಗಳನ್ನು ನೀಗಿಕೊಳ್ಳಲು ಅಲ್ಲಿ ಅವಕಾಶವಿರಲಿಲ್ಲ. ಅಧ್ಯಾಪಕರು ಪ್ರಶ್ನೆ ಕೇಳಿದಾಗ ಮಾತ್ರ ವಿದ್ಯಾರ್ಥಿಗಳು ಎದ್ದು ಉತ್ತರ ಕೊಡಬೇಕು; ಬೇರೆ ಸಮಯಗಳಲ್ಲಿ ಬಾಯಿ ಮುಚ್ಚಿಕೊಂಡು ಕೈ ಕಾಲುಗಳನ್ನಾಡಿಸದೆ ಸುಮ್ಮನಿರಬೇಕು. ಅತಿ ವಿಧೇಯತೆ, ಅತಿ ಶಿಸ್ತು! ಈ ಶಾಲೆ ಆಲ್ಬರ್ಟ್‌ನಿಗೆ ಸೈನಿಕರ ಶಿಬಿರದಂತೆ ತೋರಿತು.

**ಜಿಮ್ನಾಷಿಯಮ್**

ಹತ್ತು ವರ್ಷ ತುಂಬುವ ವೇಳೆಗೆ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿದ ಆಲ್ಬರ್ಟ್‌ನು ಲ್ಯೂಟ್‌ಪೋಲ್ಡ್ ಜಿಮ್ನಾಷಿಯಮ್ ಎಂಬ ಸೆಕೆಂಡರಿ ಶಾಲೆಯನ್ನು ಸೇರಿದನು. ಅಲ್ಲಿನ ಪಾಠಗಳೂ ಅವನಿಗೆ ಸರಿಬೀಳಲಿಲ್ಲ. ವಿದ್ಯಾರ್ಥಿ ಅಸಾಧಾರಣ ಚಾತುರ್ಯವನ್ನು ತೋರಿಸುವುದಕ್ಕಾಗಲೀ ವಿಶೇಷ ಆಸಕ್ತಿಯಿರುವ ವಿಷಯವನ್ನು ಹೆಚ್ಚಾಗಿ ಕಲಿಯುವದಕ್ಕಾಗಲಿ ಅಲ್ಲಿಯೂ ಅನುಕೂಲತೆ ಇರಲಿಲ್ಲ. ವಿದ್ಯಾರ್ಥಿಗಳಿಗೆ ಪಾಠಗಳು ಅರ್ಥವಾಗಲಿ ಇಲ್ಲದಿರಲಿ, ಅವುಗಳನ್ನು ಕಂಠಪಾಠ ಮಾಡಬೇಕಾಗಿತ್ತು. ಗ್ರೀಕ್, ಲ್ಯಾಟಿನ್ ಭಾಷೆಗಳಿಗೂ ಅವುಗಳ ವಿವರವಾದ ವ್ಯಾಕರಣಗಳಿಗೂ ಪಾಠಪಟ್ಟಿಯಲ್ಲಿ ಅಗ್ರಸ್ಥಾನವಿತ್ತು. ಅವುಗಳನ್ನು ಕಲಿಯ ಲಾರದ ವಿದ್ಯಾರ್ಥಿಗಳು ಶಾಲಾಸಮಯದ ನಂತರ, ಗೆಳೆಯರೆಲ್ಲ ಬಯಲಿನಲ್ಲಿ ಆಡುತ್ತಿರುವ ವೇಳೆಯಲ್ಲಿ ಶಾಲೆಯಲ್ಲಿಯೇ ನಿಂತು ವ್ಯಾಕರಣದ ಕಹಿ ಮಾತ್ರೆಗಳನ್ನು ನುಂಗ ಬೇಕಾಗಿತ್ತು. ಆ ಸಮಯದಲ್ಲಿ ಶಿಕ್ಷಕರು ಸರದಿಯ ಪ್ರಕಾರ ಒಬ್ಬೊಬ್ಬರ ಮೇಲ್ವಿಚಾರಣೆಗೋಸ್ಕರ ನಿಂತಿರುತ್ತಿದ್ದರು. ಬೇಸರದ ಶಾಲೆಯಲ್ಲಿ, ಬೇಡದ ಶಿಕ್ಷಕನ ಅಧೀನದಲ್ಲಿ ಅವಧಿಗಿಂತ ಹೆಚ್ಚು ಹೊತ್ತು ಇರಬೇಕೆಂದರೆ ಎಂಥ ಯಮಯಾತನೆ ಎಂಬುದನ್ನು ಆಲ್ಬರ್ಟ್‌ನು ಅನುಭವದಿಂದ ತಿಳಿದನು. ರೂಯಿಸ್ ಎಂಬ ಉಪಾಧ್ಯಾಯನ ಸರದಿ ಬಂದಾಗ ಮಾತ್ರ ಆಲ್ಬರ್ಟ್‌ನಿಗೆ

ಆ ಶಿಕ್ಷೆ ಸುಖಕರವಾಗಿ ತೋರುತ್ತಿತ್ತು. ಸಾಹಿತ್ಯವನ್ನು ರೂಯಿಸ್ ಬೋಧಿಸುತ್ತಿದ್ದ ರೀತಿ ಅವನಿಗೆ ಮೆಚ್ಚಿಕೆಯಾಗಿತ್ತು. ಪ್ರಾಚೀನ ಸಂಸ್ಕೃತಿಯ ಸ್ವರೂಪವನ್ನು ಜರ್ಮನ್ ಕಾವ್ಯ ಸಾಮ್ರಾಜ್ಯದ ಸೊಬಗನ್ನೂ ಮನಮುಟ್ಟುವಂತೆ ವಿವರಿಸುತ್ತಿದ್ದ ಆ ಗುರುವನ್ನು ಕಂಡರೆ ಮಾತ್ರ ಆಲ್ಬರ್ಟನಿಗೆ ಅತಿ ಮಮತೆಯಿತ್ತು.

ಮನೆಯ ವಾತಾವರಣ

ಶಾಲೆಯ ಸ್ಥಿತಿ ಅಸಮರ್ಪಕವಾಗಿದ್ದರೂ ಆಲ್ಬರ್ಟನಿಗೆ ಮನೆ ಬಹು ಪ್ರಿಯವಾಗಿತ್ತು. ಪ್ರೀತಿಯ ಚಿಕ್ಕಪ್ಪನು ಮನಸ್ಸಿಗೆ ಉಲ್ಲಾಸ ಬರುವಂತೆ ಬೀಜಗಣಿತವನ್ನು ಹೇಳಿಕೊಡುತ್ತಿದ್ದನು. ಹಲವು ಸಮಸ್ಯೆಗಳಿಗೆ ಆಲ್ಬರ್ಟನು ನೂತನ ರೀತಿಯಲ್ಲಿ ಉತ್ತರಗಳನ್ನು ಕಂಡುಹಿಡಿದು ಅವನನ್ನು ಮೆಚ್ಚಿಸಿ ತಾನೂ ಸಂತಸಗೊಳ್ಳುತ್ತಿದ್ದನು. ಒಂದು ಸಲ ರೇಖಾಗಣಿತದ ಪುಸ್ತಕವೊಂದು ಕೈಗೆ ಸಿಕ್ಕಿ ಅವನ ಮನಸ್ಸನ್ನು ಸೂರೆಗೊಂಡಿತು. ಯಾರ ಸಹಾಯವೂ ಇಲ್ಲದೆ ಅವನು ಪುಸ್ತಕವನ್ನೆಲ್ಲ ಓದಿ ಮನನ ಮಾಡಿಕೊಂಡನು. ಅದರಲ್ಲಿನ ಪ್ರತಿಯೊಂದು ಹೇಳಿಕೆ, ಸಾಧನೆ, ಸಮರ್ಥನೆಗಳೂ ಅವನಿಗೆ ಅಮಿತಾನಂದವನ್ನು ನೀಡಿದವು.

ವಿಜ್ಞಾನವು ಆಲ್ಬರ್ಟನ ಆಸಕ್ತಿಯನ್ನು ಕೆರಳಿಸಿತು. ಅವನು ಐದು ವರ್ಷದ ಮಗುವಾಗಿದ್ದಾಗ ತಂದೆಯ ಕೈಯಲ್ಲಿ ಒಂದು ದಿಕ್ಸೂಚಿಯನ್ನು ನೋಡಿದ್ದನು. ಅದನ್ನು ಎಷ್ಟೆಷ್ಟು ತಿರುಗಿಸಿದರೂ ಸೂಜಿಯ ತುದಿ ಉತ್ತರಕ್ಕೇ ತಿರುಗುವುದೆಂಬ ಸೋಜಿಗವು ಬಾಲಕನ ಮನಸ್ಸನ್ನು ಆಕರ್ಷಿಸಿತ್ತು. ಸೂಜಿ ಒಂದೇ ದಿಕ್ಕಿಗೆ ತಿರುಗಿ ನಿಲ್ಲುವುದರ ಗುಟ್ಟೇನು? ಬೇರೆ ದಿಕ್ಕಿಗೆ ತಿರುಗಿಸಿದರೂ ಅದು ಪುನಃ ಸ್ವಸ್ಥಾನವನ್ನು ಸೇರುವುದು ಯಾವ ಶಕ್ತಿಯಿಂದ? ಈ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರ ದೊರೆಯದಿದ್ದರೂ ಅವು ಅವನ ಮನಸ್ಸಿನಲ್ಲಿ ಅಚ್ಚಳಿಯದೆ ನಿಂತುಕೊಂಡವು.

ಒಬ್ಬ ಬಡ ಹುಡುಗನನ್ನು ಪ್ರತಿ ಗುರುವಾರ ಊಟಕ್ಕೆ ಕರೆದು ಸತ್ಕರಿಸುವುದು ಯಹೂದಿಗಳಲ್ಲಿ ಸಂಪ್ರದಾಯ. ಒಳ್ಳೆಯ ಸಂಪ್ರದಾಯವಾದುದರಿಂದ ಹರ್ಮಾನನು ಇದನ್ನು ಪಾಲಿಸುತ್ತಿದ್ದನು. ಅವನ ಅತಿಥಿ ಒಬ್ಬ ವೈದ್ಯಕ ವಿದ್ಯಾರ್ಥಿ. ಕಿರಿಯ ಆಲ್ಬರ್ಟನಿಗೆ ಆ ವಿದ್ಯಾರ್ಥಿಯು ಪ್ರಕೃತಿ ವಿಜ್ಞಾನದ ಕೆಲವು ಸರಳ ಪುಸ್ತಕಗಳ ಪರಿಚಯ ಮಾಡಿಕೊಟ್ಟನು. ಆ ಪುಸ್ತಕಗಳಿಂದ ಬಾಲಕನಿಗೆ ಒಂದು ಹೊಸ ಪ್ರಪಂಚವನ್ನೇ ತೆರೆದು ಕೊಟ್ಟಂತಾಯಿತು.

ಆರು ವರ್ಷ ವಯಸ್ಸಿನಲ್ಲೇ ಆಲ್ಬರ್ಟನಿಗೆ ಸಂಗೀತ ಶಿಕ್ಷಣ ಪ್ರಾರಂಭವಾಯಿತು. ಮೊದಮೊದಲು ಅದರಲ್ಲಿ ಬೇಸರ ಹುಟ್ಟಿದರೂ ಕಾಲಕ್ರಮದಲ್ಲಿ ಸಂಗೀತಾಭಿರುಚಿ ಹುಟ್ಟಿ ಕೊನೆಗೆ ಆ ಗಂಧರ್ವವಿದ್ಯೆಯೂ ಅವನಿಗೆ ಅತ್ಯಂತ ಪ್ರಿಯವಾಯಿತು. ಮೊಸಾರ್ಟನ ಕೃತಿಗಳಿಗೆ ಅವನು ಮನಸೋತನು; ಹದಿನಾಲ್ಕು ವರ್ಷ ವಯಸ್ಸಾಗುವ ವೇಳೆಗೆ ಸಂಗೀತದಲ್ಲಿ ತಕ್ಕಷ್ಟು ಪಾಂಡಿತ್ಯವನ್ನೂ ಆಲ್ಬರ್ಟನು ಸಂಪಾದಿಸಿದನು.

ಆಲ್ಬರ್ಟನ ಮನಸ್ಸಿನ ಮೇಲೆ ಅವನ ಧರ್ಮವೂ ಸ್ಥಿರಮುದ್ರೆಯನ್ನೊತ್ತಿತ್ತು. ಪ್ರಾಥಮಿಕ ಶಾಲೆಯಲ್ಲಿ ಅವನಿಗೆ ಕ್ಯಾಥಲಿಕ್ ಪಂಥದ ಪರಿಚಯವುಂಟಾಯಿತು. ಜಿಮ್ನಾ

ಷಿಯಂ ಶಿಕ್ಷಣದ ಅಂಗವಾಗಿ 'ಹಳೆಯ ಒಡಂಬಡಿಕೆ'ಯನ್ನು ಓದಿದ ಬಳಿಕ ಬೈಬಲ್ ಸಂಪ್ರದಾಯದಲ್ಲಿ ಅಗಾಧ ಶ್ರದ್ಧೆಯುಂಟಾಗಿ ಅದರ ಆಧ್ಯಾತ್ಮಿಕ ಸಂಪತ್ತಿಗೆ ಮನಸೋತನು. ಆಲ್ಬರ್ಟ್ ಧರ್ಮಕ್ಕೆ ಶರಣುಹೋದನು. ಆದರೆ ಎಂದೂ ಬಲಾತ್ಕಾರದಿಂದ ಧರ್ಮ ಸಂಸ್ಥೆಗಳಿಗೆ ಹೋದವನಲ್ಲ, ಒತ್ತಾಯಕ್ಕೋಸ್ಕರ ಪ್ರಾರ್ಥನೆ ಮಾಡಿದವನಲ್ಲ. ಕುರುಡು ನಂಬಿಕೆಯಿಂದ ವ್ರತಗಳನ್ನು ಆಚರಿಸುವುದು ಅವನಿಗೆ ಸ್ವಲ್ಪವೂ ಹಿಡಿಸಲಿಲ್ಲ. ಅರ್ಥವಿಲ್ಲದ ಅಂಧಾಚಾರಗಳಲ್ಲಿ ಅವನಿಗೆ ತಿರಸ್ಕಾರ; ಅಂತಹ ಸಂಪ್ರದಾಯಗಳ ದಾಸ್ಯಕ್ಕೆ ಒಳಪಟ್ಟವರ ಬಗ್ಗೆ ಅವನಿಗೆ ಕನಿಕರ ಉಂಟಾಗುತ್ತಿತ್ತು.

### ಇಟಲಿಯ ಕರೆ

ಹರ್ಮಾನನು ಮ್ಯೂನಿಚ್ಚಿಗೆ ಬಂದ ಕೆಲವು ವರ್ಷಗಳಲ್ಲಿ ಅವನ ವ್ಯಾಪಾರ ಕುಸಿಯತೊಡಗಿತು; ಜೀವನ ದುರ್ಭರವಾಯಿತು. ಕೊನೆಗೆ ಅವನು ಅಲ್ಲಿಂದ ಕಾರ್ಖಾನೆಯನ್ನು ಮುಚ್ಚಿ ಇಟಲಿಯ ಮಿಲಾನ್ ನಗರಕ್ಕೆ ಹೋಗಿ ಬೇರೊಂದು ಕಾರ್ಖಾನೆಯನ್ನು ತೆರೆದನು; ಆದರೆ ಜಿಮ್ನಾಷಿಯಂ ಸೇರಿದ ಆಲ್ಬರ್ಟನನ್ನು ಅಲ್ಲಿಂದ ಬಿಡಿಸುವುದು ಸರಿದೋರದೆ ಒಂದು ವಿದ್ಯಾರ್ಥಿನಿಲಯದಲ್ಲಿರಿಸಿದನು.

ಈ ವೇಳೆಗೆ ಆಲ್ಬರ್ಟ್ ಗಣಿತ ಮತ್ತು ವಿಜ್ಞಾನಶಾಸ್ತ್ರಗಳಲ್ಲಿ ಹೆಚ್ಚಿನ ಜ್ಞಾನವನ್ನು ಸಂಪಾದಿಸಿದ್ದನು. ಅವನ ಪ್ರಾಯಕ್ಕೆ ಅದು ಅಸಾಮಾನ್ಯ ನೈಪುಣ್ಯವೆನಿಸಿತ್ತು. ಅವನ ಪ್ರತಿಭೆ ಸ್ವಲ್ಪ ಸ್ವಲ್ಪವಾಗಿ ಪ್ರಕಾಶಕ್ಕೆ ಬಂತು. ಆದರೆ ಭಾಷೆಗಳನ್ನು ಕಲಿಯುವುದರಲ್ಲಿ ಅವನು ತೀರ ಹಿಂದೆ ಬಿದ್ದನು. ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕಾದರೆ ಅವುಗಳನ್ನು ಕಲಿಯುವುದು ಅನಿವಾರ್ಯವಾಗಿತ್ತು.

ತನಗೆ ಪ್ರಿಯವಾದ ಶಾಸ್ತ್ರಗಳಲ್ಲಿ ಇನ್ನಷ್ಟು ಪಾಂಡಿತ್ಯಪಡೆಯಲು ಅಡ್ಡಿಬಂದ ಗ್ರೀಕ್, ಲ್ಯಾಟಿನ್ ಭಾಷೆಗಳಲ್ಲಿ ಆಲ್ಬರ್ಟನಿಗೆ ಜುಗುಪ್ಸೆ ಹುಟ್ಟಿತು. ಮೊದಲೇ ಶಾಲೆಯ ಯಾಂತ್ರಿಕ ನಿಯಮಗಳ ನಿರ್ಬಂಧಗಳಿಂದ ನೊಂದಿದ್ದ ಆವನ ಮನಸ್ಸು ಮತ್ತಷ್ಟು ದುಗುಡಕ್ಕೊಳಗಾಯಿತು. ತಂದೆತಾಯಿಗಳು ದೂರವಾದುದರಿಂದ ಅವನಿಗೆ ಬಾಳು ಕಹಿಯೆನಿಸಿತು. ಶಾಲೆಯ ಆಟಪಾಠಗಳಿಗೆ ಹೋಗದೆ ಯಾರೊಡನೆಯೂ ಸೇರದೆ ಅವನು ಏಕಾಕಿಯಾಗಿರ ತೊಡಗಿದನು. ಕೊನೆಗೆ ಶಾಲೆಯನ್ನು ಬಿಟ್ಟು ತಂದೆತಾಯಿಗಳನ್ನು ಸೇರಬೇಕೆಂಬ ಆಸೆ ಬಲವಾಯಿತು.

ಆಲ್ಬರ್ಟನು ಮ್ಯೂನಿಚ್ ನಗರದಿಂದ ಹೊರಟುಹೋಗಲು ತೃಪ್ತಿಕರವಾದ ಕಾರಣ ಬೇಕಾಗಿತ್ತು. ಬೇರೆ ಉಪಾಯ ಕಾಣದೆ ಅವನು ವೈದ್ಯರಲ್ಲಿಗೆ ಹೋಗಿ ತನ್ನ ದೇಹಸ್ಥಿತಿ ಸ್ವಲ್ಪವೂ ಸರಿಯಾಗಿಲ್ಲವೆಂದು ಹೇಳಿದನು. ಅವರು ಆವನನ್ನು ಪರೀಕ್ಷಿಸಿದರು. ಅವನ ನರಗಳು ಹದಗೆಟ್ಟಿವೆ ಎಂದು ನಿರ್ಧಾರವಾಯಿತು. ಆರು ತಿಂಗಳಕಾಲ ಪೂರ್ಣ ವಿಶ್ರಾಂತಿ ಆವಶ್ಯಕವೆಂದೂ ಸ್ಥಳಾಂತರದಿಂದ ಕ್ಷೇಮವಾಗುವದೆಂದೂ ವೈದ್ಯರಿಂದ ಆಲ್ಬರ್ಟಗೆ ಸರ್ಟಿ

ಫಿಕೆಟ್ ದೊರೆಯಿತು. ಗಣಿತದಲ್ಲಿ ಆವನಿಗಿದ್ದ ಅಸಾಧಾರಣ ಕುಶಲತೆಯನ್ನು ವರ್ಣಿಸುವ ಒಂದು ಯೋಗ್ಯತಾಪತ್ರವನ್ನೂ ಗಣಿತಾಧ್ಯಾಪಕರಿಂದ ಪಡೆದನು. ಮಿಲಾನಿನ ಸಮೀಪದ ಒಂದು ಶಾಲೆಯಲ್ಲಿ ತನಗೆ ಒಪ್ಪಿದ ಓದನ್ನು ಮುಂದುವರಿಸಲು ಸಾಧ್ಯವಾದೀತೆಂದು ಆವನಿಗೆ ತೋರಿತು.

ಈ ನಡುವೆ ಮ್ಯೂನಿಚ್ ಶಾಲೆಯ ಅಧಿಕಾರಿಗಳಿಗೆ ಆಲ್ಬರ್ಟನ ವಿಚಿತ್ರ ವರ್ತನೆ ಸರಿಬೀಳಲಿಲ್ಲ; ಅವನನ್ನು ಶಾಲೆಯಲ್ಲಿ ಇರಗೊಳಿಸಿದರೆ ಅವನ 'ರೋಗ' ಇತರರಿಗೆ ಅಂಟಿ ಶಾಲೆಯ ಸಂಪ್ರದಾಯ ಕೆಟ್ಟು ಹೋದೀತೆಂದು ಅವರು ಹೆದರಿದರು. ಅವನ ತರಗತಿಯ ಅಧ್ಯಾಪಕರು ಅವನನ್ನು ಏಕಾಂತಕ್ಕೆ ಕರೆದು ಶಾಲೆಯನ್ನು ಬಿಡಬೇಕೆಂದು ತಿಳಿಸಿದರು. ತನ್ನ ಅಪರಾಧವೇನೆಂದು ಅವನು ಕೇಳಿದನು. "ನಿನ್ನಿಂದ ಬೇರೆಯ ಹುಡುಗರು ಕೆಡುವ ಸಂಭವ ಕಾಣುತ್ತಿದೆ. ಶಾಲೆಯ ಹಿತದೃಷ್ಟಿಯಿಂದ ಅಧಿಕಾರಿಗಳು ಈ ನಿರ್ಧಾರವನ್ನು ಕೈಗೊಂಡಿದ್ದಾರೆ" ಎಂದು ಉತ್ತರ ದೊರೆಯಿತು. ರೋಗಿ ಬಯಸಿದ ಹಾಲನ್ನು ವೈದ್ಯನೇ ವಿಧಿಸಿದಂತಾಯಿತು. ಪಂಜರದಿಂದ ಹೊರಬಂದ ಗಿಳಿ ಕಾಡಿಗೋಡಿತು.

### ಸ್ವಿಸ್ ಸೆಕೆಂಡರೀ ಸ್ಕೂಲ್

ಇಟಲಿ ದೇಶವು ಸಂಗೀತ, ಚಿತ್ರ, ವಾಸ್ತುಶಿಲ್ಪ, ಮೊದಲಾದ ಲಲಿತ ಕಲೆಗಳ ತವರು; ಪ್ರಕೃತಿಸೌಂದರ್ಯಕ್ಕೆ ನೆಲೆವೀಡು, ಎಲ್ಲೆಲ್ಲಿಯೂ ಭವ್ಯ ದೇವಾಲಯಗಳು, ಮನಮೋಹಕ ಚಿತ್ರಶಾಲೆಗಳು, ಮಧುರಗಾನ, ಜನರ ಭಾಷೆ ಮೃದು ಮನೋಹರ: ಎಲ್ಲಕ್ಕೂ ಮಿಗಿಲಾಗಿ ತಮ್ಮ ತಮ್ಮ ಸ್ವಭಾವಕ್ಕೆ ತಕ್ಕಂತೆ ಜೀವನವನ್ನು ರೂಪಿಸಿಕೊಂಡ ಜನಗಳು. ಬಾಹ್ಯಾಧಿಕಾರದ ಭಾರ ಎಲ್ಲಿಯೂ ಕಾಣಿಸುತ್ತಿರಲಿಲ್ಲ. "ಸೈನ್ಯಶಾಸನಕ್ಕೆ ದಾಸರಾಗಿ ಆತ್ಮವಿಕ್ರಯ ಮಾಡಿಕೊಂಡು ಸಂಗೀತ ಸಾಹಿತ್ಯಾದಿಗಳನ್ನು ವನವಾಸಕ್ಕಟ್ಟಿದ್ದ ಒರಟು ಜರ್ಮನರಲ್ಲಿ, ಆತ್ಮಾರಾಮದಲ್ಲಿರುವ ಈ ಸ್ವತಂತ್ರ ಸುಖ ಜೀವಿಗಳೆಲ್ಲಿ!" ಎಂಬ ಭಾವನೆ ಬಂದೊಡನೆ ಆಲ್ಬರ್ಟನು ಹರ್ಷೋನ್ಮತ್ತನಾಗುತ್ತಿದ್ದನು.

ಈ ಸಂತೋಷ ಬಹುಕಾಲ ಬಾಳಲಿಲ್ಲ. ಒಂದು ದಿನ ತಂದೆ ಮಗನನ್ನು ಕರೆದು, "ಆಲ್ಬರ್ಟ್, ಇಲ್ಲಿಯೂ ನನ್ನ ಉತ್ಪತ್ತಿ ಇಳಿಮುಖವಾಗಿದೆ. ಇನ್ನು ನಿನ್ನನ್ನು ಓದಿಸಲಾರೆ; ಆದಷ್ಟು ಬೇಗನೆ ನೀನು ಯಾವುದಾದರೂ ಒಂದು ಉದ್ಯೋಗವನ್ನು ಹಿಡಿಯಬೇಕು" ಎಂದನು. ಈ ಮಾತು ಆಲ್ಬರ್ಟನ ಮೇಲೆ ಸಿಡಿಲಿನಂತೆ ಎರಗಿತು. ದಿಕ್ಸೂಚಿಯನ್ನು ನೋಡಿದಾಗ ಹುಟ್ಟಿಕೊಂಡ ಸಂಶಯಗಳು ನಿವಾರಣೆಯಾಗದೆ ಇದ್ದುದರಿಂದ ಅದರ ಗುಟ್ಟನ್ನು ಅರಿತುಕೊಳ್ಳಬೇಕೆಂಬ ಆಶೆ ದಿನ ದಿನಕ್ಕೂ ತೀವ್ರವಾಗುತ್ತಿತ್ತು. ಗಣಿತ ಶಾಸ್ತ್ರಾಭ್ಯಾಸವೂ ಅವನ ಮನಸ್ಸಿನಲ್ಲಿ ಸಾಮ್ರಾಜ್ಯ ಸ್ಥಾಪನೆ ಮಾಡಿತ್ತು. ಇಂಥ ಪ್ರಬಲವಾದ ಆಶೆಯನ್ನು ಮಣ್ಣುಗೂಡಿಸಲು ಸಾಧ್ಯವೇ? ಅಥವಾ ಹೊಟ್ಟೆ ಬಟ್ಟೆಗಾಗಿ ಹಾಗೆ ಮಾಡುವುದು

ಯೋಗ್ಯವೇ? ಅಲ್ಲದಿದ್ದಲ್ಲಿ ತನ್ನ ಜ್ಞಾನದಾಹವನ್ನು ತಣಿಸುವ ಬಗೆ ಹೇಗೆ? ಈ ಪ್ರಶ್ನೆಗಳು ಆಲ್ಬರ್ಟನನ್ನು ಕೊರೆಯತೊಡಗಿದವು.

ಜೂರಿಕ್ ನಗರದ ಸ್ವಿಸ್ ಫೆಡರಲ್ ಪಾಲಿಟೆಕ್ನಿಕ್ ಸ್ಕೂಲ್ ಎಂಬ ಔದ್ಯೋಗಿಕ ಶಿಕ್ಷಣಶಾಲೆ ಮಧ್ಯಯುರೋಪಿನಲ್ಲಿ – ಜರ್ಮನಿಯನ್ನುಳಿದು – ಅತ್ಯಂತ ಪ್ರಸಿದ್ಧವಾಗಿತ್ತು. ಆಲ್ಬರ್ಟನು ಆ ಶಾಲೆಗೆ ಸೇರಬೇಕೆಂದು ನಿರ್ಧರಿಸಿದನು. ಅಲ್ಲಿ ಭೌತಶಾಸ್ತ್ರ, ಗಣಿತಶಾಸ್ತ್ರಗಳ ಉನ್ನತಾಭ್ಯಾಸಕ್ಕೆ ಅವಕಾಶವಿತ್ತು. ವೃತ್ತಿಶಿಕ್ಷಣವೂ ದೊರಕುತ್ತಿತ್ತು. ಅಲ್ಲಿಗೆ ಸೇರಿದರೆ ತನ್ನ ಮತ್ತು ತಂದೆಯ ಇಷ್ಟಗಳೆರಡೂ ನೆರವೇರುವುದೆಂದು ಆಲ್ಬರ್ಟ ಭಾವಿಸಿದನು.

ಸೆಕೆಂಡರಿ ಶಾಲೆಯ ಡಿಪ್ಲೊಮಾ ಇಲ್ಲದವರು ಆ ಔದ್ಯೋಗಿಕ ಶಾಲೆಗೆ ಸೇರಬೇಕಾದರೆ ಒಂದು ಪ್ರವೇಶ ಪರೀಕ್ಷೆಗೆ ಕುಳಿತು ತೇರ್ಗಡೆಯಾಗಬೇಕಾಗಿತ್ತು. ಆಲ್ಬರ್ಟನು ಆ ಪರೀಕ್ಷೆಯನ್ನು ಎದುರಿಸಬೇಕಾಯಿತು. ಗಣಿತ ಮತ್ತು ಭೌತ ವಿಜ್ಞಾನದಲ್ಲಿ ತನ್ನ ಓರಗೆಯವರಿಗಿಂತ ಅತಿ ಹೆಚ್ಚು ಸಾಮರ್ಥ್ಯವಿದ್ದರೂ, ಭಾಷೆಗಳಲ್ಲಿಯೂ ಪ್ರಕೃತಿವಿಜ್ಞಾನದಲ್ಲಿಯೂ ಬೇಕಾದಷ್ಟು ಅಂಕಗಳು ಸಿಗದೆ ಇದ್ದುದರಿಂದ ಅವನಿಗೆ ಪ್ರವೇಶ ದೊರೆಯಲಿಲ್ಲ. ತನ್ನ ಆಶೆಯೆಲ್ಲವೂ ಪುಡಿಪುಡಿಯಾಯಿತೆಂದೆಣಿಸಿ ಅವನು ಚಿಂತಾಕ್ರಾಂತನಾದನು.

ಮುಖ್ಯೋಪಾಧ್ಯಾಯನು ಅವನನ್ನು ಶಾಲೆಗೆ ಸೇರಿಸದೆ ಹೋದರೂ ಅವನಲ್ಲಿದ್ದ ಗಣಿತ ಚಾತುರ್ಯವನ್ನು ನೋಡಿ ತಲೆದೂಗಿದನು; ಹೇಗಾದರೂ ಮಾಡಿ ಅವನನ್ನು ತನ್ನ ಶಾಲೆಗೆ ಸೇರಿಸಿಕೊಳ್ಳಬೇಕೆಂದು ಮನಸ್ಸು ಮಾಡಿದನು. ಆರೌ ಎಂಬ ಒಂದು ಚಿಕ್ಕ ಪಟ್ಟಣದಲ್ಲಿನ ಶಾಲೆಯಲ್ಲಿ ಒಂದು ವರ್ಷ ವ್ಯಾಸಂಗ ಮಾಡಿ ಡಿಪ್ಲೊಮಾ ತೆಗೆದುಕೊಳ್ಳುವಂತೆ ತನ್ನ ಭಾವಿ ವಿದ್ಯಾರ್ಥಿಗೆ ಸಲಹೆ ಕೊಟ್ಟನು.

ಮೊದಲೇ ಒಂದು ಸೆಕೆಂಡರಿ ಶಾಲೆಯ ಕಟು ಅನುಭವವನ್ನು ಪಡೆದಿದ್ದ ಆಲ್ಬರ್ಟ್ ಈಗ ಉತ್ಸಾಹಶೂನ್ಯನಾದನು. ತನ್ನ ಮನಸ್ಸಿಗೆ ಹತ್ತದ ವಿಷಯಗಳನ್ನು ಪುನಃ ಕಲಿಯಲು, ಕಲಿತು ಪರೀಕ್ಷೆಯಲ್ಲಿ ತೇರ್ಗಡೆಯಾಗುವ ಸಾಹಸಕ್ಕೆ ಕೈಯಿಕ್ಕಲು, ಅವನಿಗೆ ಇಷ್ಟವಾಗಲಿಲ್ಲ. ಆದರೂ ಯೋಚಿಸಿ ಯೋಚಿಸಿ, ತನ್ನ ಆಕಾಂಕ್ಷೆಯನ್ನು ಪೂರೈಸಿಕೊಳ್ಳಲು ಆ ಶಾಲೆಯನ್ನು ಸೇರದೆ ಬೇರೆ ದಾರಿಯಿಲ್ಲವೆಂದು ತೀರ್ಮಾನಿಸಿ, ಆರೌ ಪಟ್ಟಣಕ್ಕೆ ಹೋಗಿ ಶಾಲೆಯನ್ನು ಸೇರಿಕೊಂಡನು.

ಆ ಶಾಲೆಯ ನಡವಳಿಕೆಯಿಂದ ಆಲ್ಬರ್ಟನಿಗೆ ಆಶ್ಚರ್ಯವಾಯಿತು. ಆನಂದವೂ ಆಯಿತು. ಉಪಾಧ್ಯಾಯರು ಬಂಧುಗಳಂತೆ ನಿಸ್ಸಂಕೋಚವಾಗಿ ವಿದ್ಯಾರ್ಥಿಗಳೊಡನೆ ಕಲೆಯುತ್ತಿದ್ದರು; ಅವರ ಸಂದೇಹಗಳನ್ನರಿತು ಅವುಗಳನ್ನು ನಿವಾರಿಸುತ್ತಿದ್ದರು. ಶಾಲೆಯ ವ್ಯವಸ್ಥೆಯಲ್ಲೂ ಜಿಮ್ನಾಷಿಯಂಗಿಂತ ಎಷ್ಟೋ ಅಂತರವಿತ್ತು. ವಿದ್ಯಾರ್ಥಿಗಳು ತಮಗೆ ಪ್ರಿಯವಾದ ವಿಷಯಗಳನ್ನು ಹೆಚ್ಚು ಹೊತ್ತು ಕಲಿಯಲು ಅವಕಾಶವಿತ್ತು. ವಿವಿಧ ವಿಷಯಗಳ ಅಧ್ಯಯನಕ್ಕೆ ಸಹಾಯವಾಗುವ ಸಲಕರಣೆಗಳು ಸುಲಭವಾಗಿ ಸಿಗುತ್ತಿದ್ದವು. ಇಂಥ ಸನ್ನಿವೇಶ ಆಲ್ಬರ್ಟನಿಗೆ ಸಹಜವಾದ ಹಿತವೆನಿಸಿತು. ಬರಬರುತ್ತ ಅವನಿಗೆ ಗಣಿತಕ್ಕಿಂತ

ಭೌತಶಾಸ್ತ್ರ ಹೆಚ್ಚು ಪ್ರಿಯವಾಗತೊಡಗಿತು. ಕಾಲಕ್ರಮದಲ್ಲಿ ಆ ಶಾಲೆಯನ್ನು ದಾಟಿ ಜೂರಿಕ್‌ನ "ಪಾಲಿಟೆಕ್ನಿಕ್" ಔದ್ಯೋಗಿಕ ಶಾಲೆಯನ್ನು ಪ್ರವೇಶಿಸಿದನು.

### ಪಾ ಲಿ ಟೆ ಕ್ನಿ ಕ್

ಭೌತಶಾಸ್ತ್ರದ ಬೋಧಕರಿಗೆ ತರಬೇತು ಕೊಡುವ ಒಂದು ಶಾಖೆ ಇಲ್ಲಿ ಇದ್ದುದರಿಂದ ಆಲ್ಬರ್ಟನು ತನ್ನ ಹಿಂದಿನ ನಿರ್ಧಾರವನ್ನು ಬದಲಾಯಿಸಿದನು. ಯಂತ್ರೋದ್ಯೋಗಕ್ಕೆ ನೆರವಾಗುವ ಶಿಕ್ಷಣವನ್ನು ಪಡೆಯುವ ಅಭಿಲಾಷೆ ಇನ್ನೇಕೆ? ಭೌತ ಶಾಸ್ತ್ರದ ಅಧ್ಯಾಪಕನಾದರೆ ತನ್ನ ಮೆಚ್ಚಿನ ಆ ಶಾಸ್ತ್ರವನ್ನು ಅನವರತ ಅಭ್ಯಸಿಸಬಹುದು; ಜೊತೆಗೆ ಸಂಪಾದನೆಯ ಮಾರ್ಗವೂ ಆಯಿತು, ಎಂದುಕೊಂಡನು.

ಆಲ್ಬರ್ಟನಿಗೆ ಇಲ್ಲಿಯೂ ಆಶಾಭಂಗವಾಯಿತು. ತನ್ನ ಜ್ಞಾನದಾಹ ತಣಿಯುವ ಸೂಚನೆ ಇಲ್ಲ, ಎಂದು ಗೊತ್ತಾಯಿತು. ಇದು ಔದ್ಯೋಗಿಕ ಶಾಲೆಯಾದುದರಿಂದ ಆ ಉದ್ಯೋಗಕ್ಕೆ ಎಷ್ಟು ಭೌತಶಾಸ್ತ್ರಜ್ಞಾನ ಅತ್ಯವಶ್ಯವೋ ಅಷ್ಟನ್ನು ಮಾತ್ರ ಪಾಠ ಹೇಳುತ್ತಿದ್ದರು. ಅವನ ಗುರಿ ಸಂಪೂರ್ಣಜ್ಞಾನ, ಸರ್ವಾಂಗಜ್ಞಾನ, ಸಮ್ಯಗ್‌ಜ್ಞಾನ ಅದು ಇಲ್ಲಿ ಸಿದ್ಧಿಸುವದೆಂತು? ಅಂದಿನ ಪ್ರಖ್ಯಾತ ವಿಜ್ಞಾನಿಗಳಾದ ಹರ್ಟ್ಸ್, ಮ್ಯಾಕ್ಸ್‌ವೆಲ್ ಮೊದಲಾದವರ ಗ್ರಂಥ ಲೇಖನಗಳನ್ನು ಹಗಲಿರುಳು ಕಷ್ಟಪಟ್ಟು ಓದಿ ಅವುಗಳ ಸಾರವನ್ನು ಗ್ರಹಿಸಿದನು. ಮನಸ್ಸು ಪುಷ್ಟವಾಯಿತು, ತುಷ್ಟವಾಯಿತು.

ಮಿಂಕೋವ್ಸ್ಕಿ ಎಂಬ ರಷಿಯನ್ ವಿದ್ವಾಂಸನು ಉದ್ಯೋಗಶಾಲೆಯ ಗಣಿತಾಧ್ಯಾಪಕನಿದ್ದನು. ಅವನ ಸಹವಾಸ ಆಲ್ಬರ್ಟನಿಗೆ ಸಂತೋಷದಾಯಕವಾಯಿತು. ಮುಂದೆ ಪ್ರಖ್ಯಾತನಾದ ಫ್ರೆಡರಿಕ್ ಆ್ಯಡ್ಲರ್ ಮತ್ತು ಆಲ್ಬರ್ಟನ ಭಾವೀ ಪತ್ನಿ ಮಿಲೇವಾ ಇಲ್ಲಿ ಅವನ ಸಹಪಾಠಿಗಳಾದರು.

ಈ ಸಮಯದಲ್ಲಿ ಆಲ್ಬರ್ಟನಿಗೆ ಯಹೂದಿಮತ ಮತ್ತು ಜರ್ಮನ್ ರಾಷ್ಟ್ರ — ಇವೆರಡರಲ್ಲಿಯೂ ಜುಗುಪ್ಸೆ ಹುಟ್ಟಿತು. ಅವನು ಮೊದಲು ತನ್ನ ಮತದಿಂದ ಹೊರಬಂದನು; ಇನ್ನಾವ ಮತಕ್ಕೂ ಸೇರುವುದಿಲ್ಲವೆಂದೂ ಪ್ರತಿಜ್ಞೆಮಾಡಿದನು. ಹಾಗೆಯೇ ಜರ್ಮನ್ ಪೌರತ್ವಕ್ಕೂ ತಿಲಾಂಜಲಿಯಿತ್ತನು. ಯಾವ ರಾಷ್ಟ್ರಕ್ಕೂ ಸೇರದೆ ಬಾಳುವುದು ಕಷ್ಟವಾಗಿ ಸ್ವಿಟ್ಸರ್ಲಂಡಿನ ಪ್ರಜೆಯಾಗುವದು ಹಿತವೆನಿಸಿತು. ಸ್ವಿಸ್ ಪೌರತ್ವ ದೊರೆಯಲು ಪ್ರತಿ ತಿಂಗಳೂ ತೆರಬೇಕಾದ ಹಣದ ಅಡಚಣೆ ಮಾತ್ರ ಬಾಧಿಸಿತು. ತಂದೆ ಬಡತನದಲ್ಲಿ ಒದ್ದಾಡುತ್ತಿದ್ದಾಗ ತನ್ನ ವಿದ್ಯಾಭ್ಯಾಸದ ಖರ್ಚಿನ ಜೊತೆಗೆ ಈ ಹೊಸ ಪೌರತ್ವದ ಶುಲ್ಕಕ್ಕೋಸ್ಕರ ಕೂಡ ಅವನನ್ನು ಕಾಡುವದು ಹೇಗೆ ಎಂದುಕೊಳ್ಳುತ್ತಿದ್ದಾಗ ಆ ಕಠಿಣ ಪ್ರಸಂಗದಲ್ಲಿ, ವಿಧಿವಶಾತ್ ಹತ್ತಿರದ ನೆಂಟರೊಬ್ಬರು ಸಹಾಯ ಮಾಡಿದರು.

ಇಪ್ಪತ್ತನೆ ವಯಸ್ಸಿನ ಹೊತ್ತಿಗೆ ಆಲ್ಬರ್ಟ ಔದ್ಯೋಗಿಕ ಶಾಲೆಯ ಆವರಣದಿಂದ ಹೊರಬಂದು ವಿಶಾಲ ವಿಶ್ವವನ್ನು ಎದುರಿಸಿದನು.

# ೧ ಉದಯಮುಖ

**ಕೆಲಸಕ್ಕಾಗಿ ಹುಡುಕಾಟ; ಪೇಟೆಂಟ್ ಆಫೀಸಿನಲ್ಲಿ ಕೆಲಸ**

ವಿದ್ಯಾಭ್ಯಾಸ ಮುಗಿದನಂತರ ಮಧ್ಯಮವರ್ಗದ ಎಲ್ಲರಂತೆ ಐನ್‌ಸ್ಟೈನರೂ ತಮ್ಮ ಜೀವಿಕೆಯನ್ನು ತಾವೇ ಗಳಿಸಿಕೊಳ್ಳಬೇಕಾಯಿತು. ಸಾಕಷ್ಟು ಆರ್ಥಿಕ ಅನುಕೂಲವಿದ್ದಿದ್ದರೆ ಐನ್‌ಸ್ಟೈನರು ನಿಶ್ಚಿಂತೆಯಿಂದ ತಮ್ಮ ಕಾಲವನ್ನೆಲ್ಲಾ ತಮ್ಮ ಜೀವನದ ಗುರಿಯಾದ ಶಾಸ್ತ್ರ ಸಂಶೋಧನೆಗೆ ವಿನಿಯೋಗಿಸಬಹುದಾಗಿದ್ದಿತು. ಆದರೆ ಅವರಿಗೆ ಹಿರಿಯರ ಆಸ್ತಿಯಾಗಲೀ ಧನಾಢ್ಯ ಸ್ನೇಹಿತರ ಬೆಂಬಲವಾಗಲೀ ಇರಲಿಲ್ಲ. ಆದುದರಿಂದ ಅವರು ವಿದ್ಯಾರ್ಥಿ ದೆಸೆ ಮುಗಿದ ಕೂಡಲೇ ಸಂಪಾದನೆಯ ಮಾರ್ಗವನ್ನು ಹುಡುಕಬೇಕಾಯಿತು. ಆದೇ ಸಮಯದಲ್ಲಿ ತಮ್ಮ ಜೀವನದ ಗುರಿಯನ್ನೂ ಅವರು ಪೂರ್ಣವಾಗಿ ಮರೆಯುವಂತಿರಲಿಲ್ಲ; ಅದು ಅವರಿಗೆ ರಕ್ತಗತವಾಗಿ ಹೋಗಿತ್ತು. ತಮ್ಮ ಜೀವನದ ಗುರಿಯನ್ನು ಸಾಧಿಸುವುದಕ್ಕೆ ಅನುಕೂಲವಾಗಿದ್ದು ಸಾಕಷ್ಟು ವರಮಾನ ಬರುವ ವೃತ್ತಿಯನ್ನೇ ಹಿಡಿಯಬೇಕಾಗಿತ್ತು. ಸ್ವಿಟ್ಸರ್ಲೆಂಡ್ ದೇಶದಲ್ಲಿ ಆಗಿನ ಕಾಲದಲ್ಲಿ ದೊರೆಯಬಹುದಾದ ಅಂಥ ವೃತ್ತಿಯೆಂದರೆ ಉಪಾಧ್ಯಾಯನ ಕೆಲಸ. ವಿಶ್ವವಿದ್ಯಾನಿಲಯದಲ್ಲಿಯೋ ಅಥವಾ ಔದ್ಯೋಗಿಕ ಶಾಲೆಯಲ್ಲಿಯೋ ಹೆಸರಾಂತ ಒಬ್ಬ ಪ್ರೊಫೆಸರನ ಸಹಾಯಕನಾಗಿ ಸೇರಿಕೊಂಡರೆ ತಮ್ಮ ಎರಡು ಆಸೆಯುಗಳನ್ನೂ ಏಕಕಾಲದಲ್ಲಿ ಪಡೆಯಬಹುದೆಂದು ಅವರಿಗೆ ಮನವರಿಕೆಯಾಗಿತ್ತು. ಅಂತಹ ಒಂದು ಕೆಲಸ ದೊರಕಿಸಿಕೊಳ್ಳುವುದು ಅವರ ತಾತ್ಕಾಲಿಕ ಆಸೆಯಾಯಿತು. ಈ ಒಂದು ಕೆಲಸವನ್ನು ಗಳಿಸಿಕೊಳ್ಳಲು ಅವರು ತಮಗೆ ಬಂದಿದ್ದ ಯೋಗ್ಯತಾಪತ್ರಗಳೊಂದಿಗೆ ಒಂದು ಸಂಸ್ಥೆಯಿಂದ ಮತ್ತೊಂದು ಸಂಸ್ಥೆಗೆ ಅಲೆದರು. ಎಲ್ಲಿಯೂ ಅವರಿಗೆ ಅನುಕೂಲವಾದ ಕೆಲಸ ದೊರಕಲಿಲ್ಲ. ಯಾವ ಪ್ರೊಫೆಸರರು ಐನ್‌ಸ್ಟೈನರಿಗೆ ಅತ್ಯುತ್ತಮವಾದ ಶಿಫಾರಸು ಪತ್ರಗಳನ್ನು ಕೊಟ್ಟಿದ್ದರೋ ಅವರೇ ಅನೇಕ ಸಂದರ್ಭಗಳಲ್ಲಿ ಅವರಿಗೆ ನಕಾರ ಹೇಳಿದರು. ತಮ್ಮಲ್ಲಿ ಕೆಲಸಕ್ಕೆ ಸೇರಿಸಿಕೊಂಡರೆ ಈ ಯುವಕ ತಮ್ಮನ್ನು ಮೂಲೆಗೆ ಹಾಕುವನೆಂಬ ದಿಗಿಲು ಅವರ ಮನಸಿನಲ್ಲಿತ್ತೋ ಏನೋ! ಅಂತು ಐನ್‌ಸ್ಟೈನರಿಗೆ ತಮ್ಮ ಹಿರಿಯ ಗುರುಗಳಿಂದ ಏನೂ ಪ್ರಯೋಜನವಾಗಲಿಲ್ಲ. ಇನ್ನು ಕೆಲವು ಸಂದರ್ಭಗಳಲ್ಲಿ ಕೆಲಸ ದೊರಕಿಸಿಕೊಳ್ಳಲು ಅವರ ಮತ ಅಡ್ಡಿಯಾಗಿ ನಿಂತಿತು. ಏಕೆಂದರೆ ಸ್ವಿಟ್ಸರ್‌ಲೆಂಡ್ ದೇಶದಲ್ಲಿ ಉಳಿದೆಲ್ಲ ಪಾಶ್ಚಾತ್ಯ ರಾಷ್ಟ್ರಗಳಂತೆ ಯಹೂದಿಗಳು ಒಂದು ವಿಧವಾದ ಬಹಿಷ್ಕಾರಕ್ಕೆ ಒಳಗಾಗಿದ್ದರು. ಮತ್ತೆ ಕೆಲವು ಸಮಯದಲ್ಲಿ ಇವರು ಸ್ವಿಸ್ ಪ್ರಜೆಯಲ್ಲವೆಂಬ ಅಂಶವೇ ಅನರ್ಹತೆಗೆ ಕಾರಣವಾಯಿತು. ಇಂತಹ ಅಹಿತವಾದ ವಾತಾವರಣವು ಐನ್‌ಸ್ಟೈನರಲ್ಲಿ ತೀರ ನಿರಾಸೆಯನ್ನು ಮೂಡಿಸಿತು. ಅವರು ವಿಶ್ವ

ವಿದ್ಯಾನಿಲಯದಲ್ಲಿ ಕೆಲಸ ಸಿಕ್ಕುವ ಆಸೆಯನ್ನು ಸಂಪೂರ್ಣವಾಗಿ ತೊರೆದರು. ಸೆಕೆಂಡರಿ ಶಾಲೆಯಲ್ಲಾದರೂ ಉಪಾಧ್ಯಾಯರಾಗಿ ಸೇರಬೇಕೆಂದು ಅವರು ನಿಶ್ಚೈಸಿದರು. ಕೆಲಸ ಖಾಲಿ ಇದೆ-ಎಂದು ತಿಳಿದುಬಂದ ಶಾಲೆಗಳಿಗೆಲ್ಲಾ, ಅವರು ಅರ್ಜಿ ಹಾಕಿಕೊಂಡರು. ಆದರೆ ಅವರ ಪ್ರಯತ್ನವೆಲ್ಲಾ ವಿಫಲವಾಯಿತು. ಅನೇಕ ದಿನಗಳ ಪ್ರಯತ್ನದ ಅನಂತರ ಔದ್ಯೋಗಿಕ ಶಾಲೆಯಲ್ಲಿ ಕೇವಲ ಹಂಗಾಮಿ ಕೆಲಸವೊಂದು ಐನ್‌ಸ್ಟೈನರಿಗೆ ದೊರಕಿತು. ಸ್ವಲ್ಪ ದಿನಗಳ ನಂತರ ಈ ಕೆಲಸದಿಂದಲೂ ಅವರಿಗೆ ನಿವೃತ್ತಿಯಾಯಿತು. ಯಥಾಪ್ರಕಾರ ಕೆಲಸದ ಬೇಟೆ ಅವರ ಪಾಲಿಗೆ ಬಂದಿತು.

ಹೀಗೆ ಬಹುದಿನಗಳು ಕಳೆದ ಮೇಲೆ ಜಿಮ್ನಾಷಿಯಂ ಶಾಲೆಯೊಂದರಲ್ಲಿ ಐನ್‌ಸ್ಟೈನರಿಗೆ ಉಪಾಧ್ಯಾಯನ ಕೆಲಸ ದೊರಕಿತು. ಆ ಶಾಲೆಯು ರೈನ್ ಪ್ರದೇಶದಲ್ಲಿರುವ ಷಾಫನ್ (Shaffhausen) ಎಂಬ ಪಟ್ಟಣದಲ್ಲಿತ್ತು. ಇದು ಒಂದು ಖಾಸಗೀ ಶಾಲೆ, ಶಾಲೆಯ ವಿದ್ಯಾರ್ಥಿಗಳೆಲ್ಲರೂ ಅದಕ್ಕೆ ಸೇರಿದ ವಿದ್ಯಾರ್ಥಿನಿಲಯದಲ್ಲೇ ವಾಸಿಸಬೇಕಾಗಿತ್ತು. ಶಾಲೆ ಮತ್ತು ಅದಕ್ಕೆ ಸೇರಿದ ವಿದ್ಯಾರ್ಥಿನಿಲಯ-ಇವುಗಳೆರಡೂ ಒಬ್ಬ ವ್ಯಕ್ತಿಯ ಆಸ್ತಿಯಾಗಿದ್ದು ಅವನ ಮೇಲ್ವಿಚಾರಣೆಗೆ ಒಳಪಟ್ಟಿದ್ದವು. ಐನ್‌ಸ್ಟೈನ್ ಈ ಶಾಲೆಯ ಇಬ್ಬರು ವಿದ್ಯಾರ್ಥಿಗಳಿಗೆ ಮಾತ್ರ ಪಾಠ ಹೇಳಿ ಅವರ ಮೇಲ್ವಿಚಾರಣೆಯನ್ನು ನೋಡಿಕೊಳ್ಳಬೇಕಾಗಿತ್ತು. ಈ ಕೆಲಸವು ಅವರಿಗೆ ತುಂಬ ಆನಂದದಾಯಕವಾಗಿ ತೋರಿತು. ಪಾಠ ಹೇಳುವ ಕ್ರಮದಲ್ಲಿ ಹೊಸ ಪ್ರಯೋಗಗಳನ್ನು ಮಾಡಿ ಉತ್ತಮ ಕ್ರಮವನ್ನು ಕಂಡುಹಿಡಿಯಲು ಅವರು ಪ್ರಯತ್ನ ಪಡುತ್ತಿದ್ದರು. ಜೊತೆಗೆ ತಮಗೆ ದೊರಕಿದ್ದ ವಿದ್ಯಾರ್ಥಿಗಳ ಮನಸ್ಸನ್ನು ತಿದ್ದಲು ಅವರು ಪ್ರಯತ್ನಿಸಿದರು. ಐನ್‌ಸ್ಟೈನರ ಈ ಸದುದ್ದೇಶಪೂರಿತವಾದ ಕಾರ್ಯವು ಉಳಿದ ಉಪಾಧ್ಯಾಯರಿಗೆ ಹಿತವಾಗಿ ತೋರಲಿಲ್ಲ, ಅವರೆಲ್ಲರೂ ಒಟ್ಟಾಗಿ ಐನ್‌ಸ್ಟೈನರ ಶ್ರಮವನ್ನು ಹಾಳು ಮಾಡುತ್ತಾ ಬಂದರು. ಹೀಗಾಗಿ ಐನ್‌ಸ್ಟೈನರಿಗೆ ತುಂಬಾ ಆಶಾಭಂಗ ಉಂಟಾಯಿತು. ಹೇಗಾದರೂ ಮಾಡಿ ತಮ್ಮ ಆಶಯವನ್ನು ನೆರವೇರಿಸಿಕೊಳ್ಳುವ ಉದ್ದೇಶದಿಂದ ಅವರು ಶಾಲೆಯ ಯಜಮಾನನಲ್ಲಿಗೆ ಹೋಗಿ ಆ ಬಾಲಕರಿಬ್ಬರನ್ನೂ ತಮ್ಮ ವಶಕ್ಕೇ ಕೊಡಬೇಕೆಂದು ಕೇಳಿಕೊಂಡರು. ಯಜಮಾನನಿಗೆ ಈ ಕೋರಿಕೆ ಸರಿ ಕಾಣಲಿಲ್ಲ. ತಾನು ಮಾಡಿದ ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕೆಂದು ಕೇಳುತ್ತಿರುವ ಹೊಸ ಉದ್ಯೋಗಿ ಒಬ್ಬ ದಂಗೆಕೋರನೆಂದು ಅವನು ತಪ್ಪರ್ಥ ಮಾಡಿಕೊಂಡನು. ಇವನ ಕೋಪದ ಫಲವಾಗಿ ಐನ್‌ಸ್ಟೈನರಿಗೆ ಬಹುದಿನಗಳ ಮೇಲೆ ದೊರಕಿದ್ದ ಕೆಲಸ ಹೋಯಿತು. ಒಂದು ಕೆಟ್ಟ ಪದ್ಧತಿ ವಿದ್ಯಾರ್ಥಿಗಳಷ್ಟನ್ನೇ ಅಲ್ಲದೆ ಉಪಾಧ್ಯಾಯರೆಲ್ಲರ ಆತ್ಮವನ್ನೂ ಹೇಗೆ ಬಲಿ ತೆಗೆದುಕೊಂಡು ಅವರ ವ್ಯಕ್ತಿತ್ವವನ್ನೇ ಹಾಳು ಮಾಡುವುದೆಂಬುದು ಅವರಿಗೆ ಚೆನ್ನಾಗಿ ಮನದಟ್ಟಾಯಿತು. ಶಾಲೆಯ ಸ್ಥಿತಿಯೂ ಅವರಿಗೆ ಅಷ್ಟೇ ವ್ಯಾಕುಲವನ್ನುಂಟುಮಾಡಿತ್ತು. ಅವರಿಗೆ ನಿರುದ್ಯೋಗದಿಂದ ಉಂಟಾದ ವೇದನೆಗಿಂತ ಹೆಚ್ಚಿನದಾಗಿತ್ತು ಆ ವ್ಯಾಕುಲತೆ.

ಅಂದಿನ ಸಾಮಾಜಿಕ ಸ್ಥಿತಿ ಮತ್ತು ವಿದ್ಯಾಭ್ಯಾಸ ಪದ್ಧತಿಗಳಿಂದುಂಟಾದ ಬೇಸರ,

ನಿರುದ್ಯೋಗದಿಂದ ಬಂದ ವ್ಯಾಕುಲತೆ-ಇವುಗಳಿಂದ ಐನ್‌ಸ್ಟೈನರ ಮನಸ್ಸು ಪ್ರಕ್ಷೋಭೆಗೊಂಡಿತು. ಅವರಲ್ಲಿ ಯಾವಾಗಲೂ ಕಂಡುಬರುತ್ತಿದ್ದ ಉತ್ಸಾಹ ಮಾಯವಾಯಿತು. ಜೀವನದಲ್ಲಿ ಜುಗುಪ್ಸೆ ತೋರಿ ಬಂದಿತು. ಇಂಥ ಕಷ್ಟ ಸಮಯದಲ್ಲಿ ಬಾಲ್ಯಸ್ನೇಹಿತನೊಬ್ಬನ ನೆರವು ಅವರಿಗೆ ಅನಿರೀಕ್ಷಿತವಾಗಿ ದೊರಕಿತು. ಆ ಗೆಳೆಯನು ಬರ್ನ್ ಪಟ್ಟಣದ ಪೇಟೆಂಟ್ ಆಫೀಸಿನ ಮುಖ್ಯಾಧಿಕಾರಿಯನ್ನು ಐನ್‌ಸ್ಟೈನರಿಗೆ ಪರಿಚಯ ಮಾಡಿಕೊಟ್ಟನು. ಗೆಳೆಯನ ಸಲಹೆಯ ಮೇರೆಗೆ ಐನ್‌ಸ್ಟೈನರು ಮುಖ್ಯಾಧಿಕಾರಿಯನ್ನು ಅನೇಕ ಸಲ ಕಂಡರು. ಆತನಿಗೆ ಐನ್‌ಸ್ಟೈನರ ನಡೆನುಡಿಗಳೂ ಮೇಧಾಶಕ್ತಿಯೂ ಮೆಚ್ಚಿಗೆಯಾದುವು. ತನ್ನ ಆಫೀಸಿನಲ್ಲಿ ವರ್ಷಕ್ಕೆ ೩೫೦೦ ಫ್ರಾಂಕ್ ಸಂಬಳ ತರುವ ಉದ್ಯೋಗ ಒಂದನ್ನು ಐನ್‌ಸ್ಟೈನರಿಗೆ ಕೊಡಿಸಿದನು.

ಈ ಕೆಲಸವೂ ಅವರಿಗೆ ಸಂತೋಷಕರವಾಗಿಯೇ ಇದ್ದಿತು. ಏಕೆಂದರೆ ಭೌತಶಾಸ್ತ್ರದಲ್ಲಿ ಸಂಶೋಧನೆ ನಡೆಸಲು ಅಲ್ಲಿ ಸ್ವಲ್ಪ ಮಟ್ಟಿಗೆ ಅವಕಾಶವಿದ್ದಿತು. ಅನೇಕ ಶಾಸ್ತ್ರಜ್ಞರೂ, ಯಂತ್ರಶಿಲ್ಪಿಗಳೂ ಕಂಡುಹಿಡಿದ ನಾನಾ ವಿಧವಾದ ಉಪಕರಣಗಳು ಪೇಟೆಂಟ್ ಆಫೀಸಿಗೆ ರಿಜಿಸ್ಟರಿಗಾಗಿ ಬರುತ್ತಿದ್ದುವು. ಇವುಗಳೆಲ್ಲವನ್ನೂ, ಅವರು ಕೂಲಂಕಷವಾಗಿ ಪರೀಕ್ಷಿಸಿ ಅವು ಪೇಟೆಂಟ್ ಆಗಲು ಅರ್ಹವಾಗಿವೆಯೋ ಇಲ್ಲವೇ ಎಂಬುದರ ಬಗ್ಗೆ ತಮ್ಮ ಅಭಿಪ್ರಾಯವನ್ನು ಕೊಡಬೇಕಾಗಿದ್ದಿತು. ಹೀಗೆ ಅವರು ತಮಗೆ ವಹಿಸಲ್ಪಟ್ಟ ಕಾರ್ಯದಲ್ಲಿ ತೊಡಗಿರುವಾಗ ಹೊಸ ಯಂತ್ರಗಳು ಯಾವ ನಿಯಮದ ಪ್ರಕಾರ ರಚಿತವಾಗಿದೆ ಎಂಬುದನ್ನು ಸಂಶೋಧಿಸುತ್ತಿದ್ದರು. ಯಂತ್ರದ ರಚನೆಗೆ ಆಧಾರವಾಗಿರುವ ಭೌತಶಾಸ್ತ್ರದ ನಿಯಮ ಮತ್ತು ಸೂತ್ರಗಳನ್ನು ಕಂಡುಹಿಡಿಯುವುದು ಒಂದು ದೊಡ್ಡ ಸಂಶೋಧನೆಯಷ್ಟೇ ಕ್ಲಿಷ್ಟವಾಗಿದ್ದಿತು. ಆದುದರಿಂದ ಅವರಿಗೆ ಈ ಕೆಲಸ ಹಿತವಾಗಿ ಕಂಡುಬರುತ್ತಿತ್ತು. ಈ ತರಹದ ಸಂಶೋಧನೆಯ ಜೊತೆಗೆ ಐನ್‌ಸ್ಟೈನರು ಮತ್ತೊಂದು ಹವ್ಯಾಸವನ್ನೂ ಇಟ್ಟುಕೊಂಡಿದ್ದರು. ಅದೇನೆಂದರೆ ಪೇಟೆಂಟ್ ಆಫೀಸಿಗೆ ಬರುತ್ತಿದ್ದ ಯಂತ್ರಗಳನ್ನು ರಚಿಸಿದ ಶಿಲ್ಪಿಗಳು ಉಪಯೋಗಿಸಿಕೊಳ್ಳದೆ ಬಿಟ್ಟಿದ್ದ ಭೌತಶಾಸ್ತ್ರದ ನಿಯಮಗಳನ್ನನುಸರಿಸಿ ಹೊಸ ಉಪಕರಣಗಳನ್ನು ರಚಿಸುತ್ತಿದ್ದುದು, ಬಹು ಸೂಕ್ಷ್ಮವಾಗಿರುವ ವಿದ್ಯುತ್ಕಣ ಶಕ್ತಿಯನ್ನು ಅಳೆಯಬಲ್ಲ ಉಪಕರಣಗಳನ್ನು ಐನ್‌ಸ್ಟೈನರು ಈ ಸಮಯದಲ್ಲಿ ರಚಿಸಿದರು. ಈ ಯಂತ್ರವು ವಿದ್ಯುತ್ಕಣಗಳಿಗೆ ಸಂಬಂಧಪಟ್ಟ ಪ್ರಯೋಗಗಳಿಗೆ ಅತ್ಯುಪಯುಕ್ತವಾಯಿತು.

## ವಿವಾಹ, ಸಾಂಸಾರಿಕ ಜೀವನ ಮತ್ತು ವ್ಯಾಸಂಗ

ಐನ್‌ಸ್ಟೈನರಿಗೆ ಪೇಟೆಂಟ್ ಆಫೀಸಿನ ಕೆಲಸದಿಂದ ತಕ್ಕಷ್ಟು ವರಮಾನ ಬರುತ್ತಿತ್ತು. ಆಫೀಸಿನ ಸನ್ನಿವೇಶವೂ ಹಿತಕರವಾಗಿಯೇ ಇದ್ದು ಅವರ ಮನಸ್ಸು ಶಾಂತಿಯನ್ನು ಪಡೆಯಿತು, ಜೀವನದಲ್ಲಿ ಉಲ್ಲಾಸ ತಲೆದೋರಿತು. ಇಪ್ಪತ್ತೈದರ ತರುಣನಿಗೆ ಇಂಥ ಅನುಕೂಲ ಸಮಯದಲ್ಲಿ ಜೀವನದ ಗೆಳತಿಯನ್ನು ಪಡೆದುಕೊಳ್ಳುವ ಹಂಬಲ ಉಂಟಾಗುತ್ತದಲ್ಲವೆ?

ಐನ್‌ಸ್ಟೈನರಿಗೆ ತಾವು ಸಂಸಾರ ಹೂಡುವುದಕ್ಕೆ ಕಾಲ ತುಂಬ ಅನುಕೂಲವಾಗಿದೆ ಎಂದು ಕಂಡುಬಂದಿತು. ಹೀಗಾಗಿ ಅವರು ಮದುವೆಯಾಗುವ ನಿಶ್ಚಯವನ್ನು ಮಾಡಿದರು.

ಮಿಸ್ ಮಿಲೇವ ಮ್ಯಾಟ್ರಿಷ್ ಎಂಬಾಕೆ ಐನ್‌ಸ್ಟೈನರಿಗೆ ಜೂರಿಕ್ ಔದ್ಯೋಗಿಕ ಶಾಲೆಯಲ್ಲಿ ಸಹಪಾಠಿಯಾಗಿದ್ದಳು. ಆಕೆಯು ಸ್ವದೇಶ ಸರ್ಬಿಯಾ; ಆಕೆ ಕ್ರೈಸ್ತಮತದ ಒಂದು ಶಾಖೆಯಾದ ಸನಾತನ ಗ್ರೀಕ್ ಸಂಪ್ರದಾಯದವಳು. ಐನ್‌ಸ್ಟೈನರಂತೆ ಮಿಲೇವರವರಿಗೂ ಭೌತಶಾಸ್ತ್ರದಲ್ಲಿ ಅಪಾರವಾದ ಆಸಕ್ತಿ ಇತ್ತು. ಅವರಂತೆಯೇ ಆಕೆಯೂ ಬಹು ಸರಳ ಸ್ವಭಾವದವಳು. ಇತರ ಯುವತಿಯರಂತೆ ತನ್ನ ಬೆಡಗು ಬಿನ್ನಾಣಗಳಿಂದ ಯುವಕರನ್ನು ಮರಳು ಮಾಡುವ ಸ್ವಭಾವ ಆಕೆಗಿರಲಿಲ್ಲ. ಇಂತಹ ವಿದುಷಿ ಮಿಲೇವ, ಐನ್‌ಸ್ಟೈನರ ಮನಸ್ಸನ್ನು ಸೂರೆಗೊಂಡಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಈ ಇಬ್ಬರು ಸಹಪಾಠಿಗಳೂ ಅನೇಕ ವೇಳೆ ಭೌತಶಾಸ್ತ್ರದ ಗೂಢಸಮಸ್ಯೆಗಳನ್ನು ಚರ್ಚಿಸಲು ಒಟ್ಟಿಗೆ ಸೇರುತ್ತಿದ್ದರು. ಅಂಥ ಕೆಲವು ಸಂದರ್ಭಗಳಲ್ಲಿ ಐನ್‌ಸ್ಟೈನರು ತಮ್ಮನ್ನು ತಾವೇ ಮರೆತು ತಮಗೆ ಪ್ರಿಯವಾದ ಶಾಸ್ತ್ರದ ವಿಷಯವಾಗಿ ದೀರ್ಘ ಉಪನ್ಯಾಸಗಳನ್ನು ಮಾಡಿದ್ದು ಉಂಟು; ಮಿಲೇವ ಅವುಗಳನ್ನು ಅತಿ ಆಸಕ್ತಿಯಿಂದ, ಗೌರವದಿಂದ ಕೇಳುತ್ತಿದ್ದಳು. ಐನ್‌ಸ್ಟೈನರ ಪ್ರತಿಭೆ, ಸಾಮರ್ಥ್ಯ, ಸದ್ಗುಣಗಳು ಮಿಲೇವಾಗೆ ಮೆಚ್ಚಿಕೆಯಾಗಿದ್ದುವು. ಹೀಗೆ ಉಂಟಾದ ಮೆಚ್ಚಿಗೆ ಅನುರಾಗವಾಗಿ ಬೆಳೆದು ಪ್ರೇಮದಲ್ಲಿ ತನ್ನ ಸಾರ್ಥಕತೆಯನ್ನು ಕಂಡುಕೊಂಡಿತು. ಕಾಲ ಒದಗಿದ ಕೂಡಲೇ ವಿವಾಹವಾಗುವುದಾಗಿ ಇಬ್ಬರೂ ನಿಶ್ಚೈಸಿಕೊಂಡಿದ್ದರು. ಅವರಿಬ್ಬರ ನಿರ್ಧಾರವು ಬರ್ನ್‌ಪಟ್ಟಣದಲ್ಲಿ ೧೯೦೩ರಲ್ಲಿ ಕೈಗೂಡಿತು.

ವಿವಾಹವಾದ ಕೆಲವು ವರ್ಷಗಳಲ್ಲೇ ಐನ್‌ಸ್ಟೈನರಿಗೆ ಇಬ್ಬರು ಗಂಡು ಮಕ್ಕಳು ಹುಟ್ಟಿದರು. ಈ ಮಧ್ಯೆ ಕಾಲಕಳೆದಂತೆ ದಂಪತಿಗಳ ಪ್ರೇಮವು ಬೆಳೆಯುವುದರ ಬದಲು ವಿವಾಹಪೂರ್ವ ಪ್ರೀತಿಯು ಕುಂದುತ್ತಾ ಬಂದಿತ್ತು. ಗಂಡ ಹೆಂಡಿರು ಒಬ್ಬರಿಗೊಬ್ಬರು ಹೊಂದಿಕೊಳ್ಳುವದು ಕಷ್ಟವಾಗಿ ಸಂಸಾರದಲ್ಲಿ ಆನಂದ ಕಡಿಮೆಯಾಗಿತ್ತು. ಇಂಥ ಸಮಯದಲ್ಲಿ ಎಳೆಮಕ್ಕಳ ಲಲ್ಲೆಮಾತು, ಮುಗ್ಧ ನಗೆ, ಬಾಲಲೀಲೆಗಳು ಐನ್‌ಸ್ಟೈನ್ ದಂಪತಿಗಳ ಮನಸ್ಸಿನ ಕಹಿಯನ್ನು ಸ್ವಲ್ಪಮಟ್ಟಿಗೆ ಅಳಿಸಿದುವು.

ಐನ್‌ಸ್ಟೈನರ ಹಿತವಾದ ಸಂಸಾರವಾಗಲೀ ಅನುಕೂಲವಾದ ಆರ್ಥಿಕ ಸಂಪತ್ತಾಗಲೀ ಅವರನ್ನು ತಮ್ಮ ಜೀವನದ ಗುರಿಯಿಂದ ವಿಮುಖರನ್ನಾಗಿ ಮಾಡಲಿಲ್ಲ. ತಮ್ಮ ಧ್ಯೇಯ ಸಾಧನೆಗೆ ಅವರು ಹಗಲೂ ಇರುಳೂ ಶ್ರಮಿಸುತ್ತಿದ್ದರು. ಸಂಸಾರವೂ, ಉದ್ಯೋಗವೂ ಅವರ ಶಾಸ್ತ್ರಸಂಶೋಧನೆಗೆ ತಡೆಗಳಾಗುವ ಬದಲು ನೀರಸವಾಗಬಹುದಾದ ಸಂಶೋಧನೆಗೆ ಆನಂದವನ್ನು ಕೊಡಬಲ್ಲ ರಸಾಗಾರಗಳಾಗಿದ್ದವು. ಸಾಮಾನ್ಯವಾಗಿ ಮನುಷ್ಯ ತನ್ನ ಸಂಸಾರದ ಪೋಷಣೆಗೆ ಬೇಕಾಗುವ ಹಣವನ್ನು ಸಂಪಾದಿಸುವುದರಲ್ಲೇ ತನ್ನ ಜೀವನವನ್ನೆಲ್ಲಾ ಸವೆಯಿಸುತ್ತಾನೆ. ಆ ಸಂಸಾರ ಹಿತವಾಗಿದ್ದರೆ ಅದರ ಬಂಧನ ಮತ್ತಷ್ಟು ಬಿಗಿಯಾಗಿರುತ್ತದೆ. ಹಾಗೆಯೇ ಅವನು ಹಿಡಿದಿರುವ ವೃತ್ತಿ ಸಾಕಷ್ಟು ಅಧಿಕಾರವನ್ನೂ ಐಶ್ವರ್ಯವನ್ನೂ

ತರುವುದಾಗಿದ್ದರೆ, ಪದವಿಯ ವ್ಯಾಮೋಹ ಉಳಿದೆಲ್ಲವನ್ನೂ ಮರೆಯಿಸುತ್ತದೆ. ಉದ್ಯೋಗ ಸಂಸಾರಗಳೆರಡೂ ಅನುಕೂಲವಾಗಿದ್ದರಂತೂ ಅವನು ಜಗತ್ತನ್ನು ಕುರಿತು ಚಿಂತಿಸುವುದೇ ಇಲ್ಲ. ಐಹಿಕ ಜೀವನದ ಸುಖದಲ್ಲೆ ಅವನು ಮತ್ತನಾಗಿ ಉದಾತ್ತ ವಿಷಯಗಳಿಂದ ದೂರ ನಾಗಿರುತ್ತಾನೆ,

ಇದು ಸಾಮಾನ್ಯ ಜನರ ಜೀವನವಾದರೆ, ತಮ್ಮ ಧ್ಯೇಯವನ್ನು ಸಾಧಿಸಿಕೊಳ್ಳುವ ಭರದಲ್ಲಿ ಐಹಿಕ ಜೀವನವನ್ನು ಬರಡುಮಾಡಿಕೊಳ್ಳುವ ಮತ್ತೊಂದು ಗುಂಪೂ ಉಂಟು. ಈ ಜನರು ಜಗತ್ತೂ ಸಂಸಾರವೂ ಬರೀ ಭ್ರಮೆಯೆಂದು ತಿಳಿದು, ಅವು ತಮ್ಮ ಧ್ಯೇಯ ಸಾಧನೆಗೆ ಪ್ರತಿಬಂಧಕಗಳೆಂಬ ದೃಷ್ಟಿಯಿಂದ ಪ್ರಪಂಚವನ್ನೇ ತೊರೆದು, ವನಗುಹೆಗಳನ್ನು ಸೇರಿ ತಮ್ಮ ಬಾಳನ್ನು ಕಳೆಯುತ್ತಾರೆ. ಸಂಸಾರದಲ್ಲಿ ದೊರೆಯಬಹುದಾದ ಸೊಬಗು ಸಂತೋಷಗಳನ್ನು ತಮ್ಮ ಪಾಲಿಗೆ ಇಲ್ಲದಂತೆ ಮಾಡಿಕೊಳ್ಳುತ್ತಾರೆ. ಪ್ರಾಪಂಚಿಕ ವ್ಯವಹಾರ ಗಳಿಂದ ದೊರೆಯಬಹುದಾದ ನಿರಾಶೆ, ನಿರ್ದಯಿತೆಗಳೆಲ್ಲವುಗಳಿಂದಲೂ ಅವರು ದೂರ ವಾಗಿದ್ದು ಜೀವನದಲ್ಲಿನ ಕಷ್ಟಕಾರ್ಪಣ್ಯಗಳು ಸಂಪಾದಿಸಿಕೊಡಬಹುದಾದ ಮಾರ್ದವವನ್ನು ಕಳೆದುಕೊಂಡವರಾಗಿರುತ್ತಾರೆ. ಈ ಎರಡು ಗುಂಪುಗಳಿಗೂ ಸೇರದೆ 'ಬಂದ ಬಂದದ್ದೆಲ್ಲ ಸಂದ ಪ್ರಸಾದ'ವೆಂದು ಜಗತ್ತಿನ ಕಷ್ಟ ಸುಖಗಳೆಲ್ಲದನ್ನೂ ಗೊಣಗದೆ ಹಿಗ್ಗದೆ ಅನುಭವಿಸಿ, ತನ್ನ ಧ್ಯೇಯವನ್ನು ಸಾಧಿಸಿಕೊಳ್ಳಬಲ್ಲ ಜೀವನ್ಮುಕ್ತರು ಅತಿ ವಿರಳ. ಇಂಥ ಮಾನವ ಶ್ರೇಷ್ಠರು ಸಂಸಾರದಲ್ಲಿದ್ದರೂ ಕಮಲಪತ್ರದ ಮೇಲಿನ ನೀರಿನಂತೆ ಅದರ ಬಂಧನದಿಂದ ವಿಮುಕ್ತರಾಗುತ್ತಾರೆ; ಸಂಸಾರವನ್ನೇ ಸತ್ಯಾನ್ವೇಷಣೆಗೆ ಸಾಧನವನ್ನಾಗಿ ಬಳಸಿಕೊಳ್ಳುತ್ತಾರೆ. ಐನ್‌ಸ್ಟೈನರು ಮಹಾತ್ಮಾ ಗಾಂಧಿಯವರಂತೆ ಈ ವಿರಳ ಪಂಙ್ತಿಗೆ ಸೇರಿದವರು.

ಐನ್‌ಸ್ಟೈನರ ವ್ಯಾಸಂಗ ಸಂಶೋಧನೆಗಳು ನಿರಂತರವಾಗಿ ನಡೆಯತೊಡಗಿದವು. ತಮಗೆ ದೊರೆತ ವಿರಾಮಕಾಲದಲ್ಲೆಲ್ಲ ಅವರು ಭೌತಶಾಸ್ತ್ರದ ಮೂಲವಿಷಯಗಳನ್ನು ಕುರಿತು ಯೋಚಿಸುತ್ತಿದ್ದರು. ವಿಶ್ವದ ಪ್ರತಿಯೊಂದು ಘಟನೆಗೂ ಕಾರಣವಾದ ಮೂಲನಿಯಮವನ್ನು ಕಂಡುಹಿಡಿಯುವುದು ಅವರ ಮುಖ್ಯ ಗುರಿಯಾಗಿದ್ದಿತು, ಅವರಿಗಾದರೋ ಇಂಥ ಗೂಢ ವಾದ ಸಮಸ್ಯೆಯನ್ನು ಬಿಡಿಸುವಷ್ಟು ವಿರಾಮ ಸಿಕ್ಕುತ್ತಿರಲಿಲ್ಲ. ಬೆಳಗಿನಿಂದ ಸಂಜೆಯವರೆಗೆ ಆಫೀಸಿನಲ್ಲಿ ಕುಳಿತು ತನ್ನ ಪಾಲಿಗೆ ಬಂದ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸಬೇಕು; ಮನೆಗೆ ಬಂದ ಕೂಡಲೇ ಮಡದಿ ಮಕ್ಕಳ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಅವರ ಸುಖ ಸಂತೋಷಗಳಲ್ಲಿ ಭಾಗಿಯಾಗಬೇಕು. ಇವುಗಳ ಮಧ್ಯೆ ದೊರೆಯಬಹುದಾದ ಕಾಲದಲ್ಲಿ ಹಿಂದಿನ ವಿಜ್ಞಾನಿಗಳ ತಲೆ ಕೆಡಿಸಿದ್ದ ಆಳವಾದ ಸಮಸ್ಯೆಗಳಿಗೆ ಅವರು ಸಮರ್ಪಕವಾದ ಉತ್ತರವನ್ನು ಕಂಡುಹಿಡಿಯಬೇಕಾಗಿದ್ದಿತು. ತಮಗೆ ದೊರೆಯುತ್ತಿದ್ದ ಸ್ವಲ್ಪ ವಿರಾಮಕಾಲ ದಲ್ಲಿ ಆ ಸಮಸ್ಯೆಗಳಿಗೆ ಉತ್ತರವನ್ನು ಕಂಡುಹಿಡಿಯುವುದು ಅಸಾಧ್ಯವೆಂದು ಐನ್‌ಸ್ಟೈನರಿಗೆ ಮನವರಿಕೆಯಾಯಿತು. ಮನವರಿಕೆಯಾದದ್ದೇ ತಡ, ಅವರ ರಾತ್ರಿಯ ನಿದ್ದೆಗೆ ಸಂಚಕಾರ ಬಂದಿತು; ಅವರು ರಾತ್ರಿಯೆಲ್ಲ ಆಲೋಚನೆಯಲ್ಲಿ ಕಳೆಯತೊಡಗಿದರು. ತಮ್ಮ ಪಾಲಿಗೆ

ಬಂದ ಆಫೀಸಿನ ಕೆಲಸವನ್ನು ಅತಿ ಶೀಘ್ರವಾಗಿ ಮುಗಿಸಿ ಉಳಿದ ಕಾಲದಲ್ಲೆಲ್ಲ ತಮ್ಮ ತಲೆಯಲ್ಲಿ ಗುಂಯ್‌ಗುಡುತ್ತಿದ್ದ ಸಮಸ್ಯೆಗಳನ್ನು ಕುರಿತು ಧ್ಯಾನಿಸುತ್ತಿದ್ದರು. ಅನೇಕ ವೇಳೆ ಸಮಸ್ಯೆಯಲ್ಲಿ ತಲ್ಲೀನರಾಗಿ ತಮ್ಮನ್ನೂ ತಾವು ಕುಳಿತಿದ್ದ ಆಫೀಸನ್ನೂ ಮರೆಯುತ್ತಿದ್ದರು. ಮುಖ್ಯಾಧಿಕಾರಿಯ ಬೂಟ್ಸಿನ ಸಪ್ಪಳ ಅವರನ್ನು ಎಚ್ಚರಗೊಳಿಸಿ ಅವರ ಚಿಂತನೆಗೆ ಭಂಗ ತರುತ್ತಿತ್ತು. ತನ್ನ ಸಮಾಧಿಸ್ಥಿತಿಯಿಂದ ಎಚ್ಚರಗೊಂಡ ಐನ್‌ಸ್ಟೈನರು ತಾವು ಹಿಡಿದಿದ್ದ ಕಾಗದ ಸೀಸದ ಕಡ್ಡಿಗಳನ್ನು ಅಡಗಿಸಿ ಆಫೀಸಿನ ದಫ್ತರುಗಳನ್ನು ತಮ್ಮ ಮುಂದೆ ಎಳೆದುಕೊಳ್ಳುತ್ತಿದ್ದರು. ಮುಖ್ಯಾಧಿಕಾರಿ ಉದ್ಯೋಗಸ್ಥರೆಲ್ಲರೂ ತಮ್ಮ ತಮ್ಮ ಕೆಲಸದಲ್ಲಿ ನಿರತರಾಗಿದ್ದಾರೆಂದು ಭಾವಿಸಿ ಮುಂದೆ ಹೋಗುತ್ತಿದ್ದನು. ಆತನು ತನ್ನ ನೌಕರರಲ್ಲಿ ತುಂಬಾ ಸಹಾನುಭೂತಿಯುಳ್ಳವನಾಗಿದ್ದರೂ ಕಚೇರಿಯ ಕೆಲಸಕಾರ್ಯಗಳಲ್ಲಿ ತುಂಬಾ ಕಟ್ಟುನಿಟ್ಟಾಗಿ ವರ್ತಿಸುತ್ತಿದ್ದನು. ಯಾವ ಉದ್ಯೋಗಿಯೂ ಕೆಲಸದ ವೇಳೆಯಲ್ಲಿ ಬೇರೆ ಕೆಲಸದಲ್ಲಿ ನಿರತನಾಗಿರಕೂಡದೆಂದು ಆತನು ಕಟ್ಟಪ್ಪಣೆಯನ್ನು ಮಾಡಿದ್ದನು. ಆದುದರಿಂದ ಐನ್‌ಸ್ಟೈನರು ವಿನೋದಕರವಾದ (ಆದರೂ ಗಂಭೀರವಾದ) ನಾಟಕವನ್ನು ತನ್ನ ಮುಖ್ಯಾಧಿಕಾರಿಯ ಎದುರು ಆಡಬೇಕಾಗಿದ್ದಿತು. ಮುಖ್ಯಾಧಿಕಾರಿಯ ಕಟ್ಟಪ್ಪಣೆಯನ್ನು ತನ್ನ ಮತ್ತು ವಿಶ್ವದ ಸೌಭಾಗ್ಯಕ್ಕೋಸ್ಕರ ಅನೇಕ ವೇಳೆ ಆತನಿಗೆ ಗೊತ್ತಿಲ್ಲದಂತೆ ಮುರಿದರು.

ಭೌತಶಾಸ್ತ್ರದಂತೆ ಸಂಗೀತದಲ್ಲೂ ಐನ್‌ಸ್ಟೈನರಿಗೆ ವಿಶೇಷ ಅಭಿರುಚಿ ಇತ್ತು. ಸಂಗೀತ ಕಲೆಯೂ, ಭೌತಶಾಸ್ತ್ರವೂ ಇವರ ಜೀವನದ ಕಣ್ಣು, ಉಸಿರುಗಳಾಗಿದ್ದವು. ಹೀಗೆ ಕಲೆ ಮತ್ತು ವಿಜ್ಞಾನಗಳೆರಡನ್ನೂ ತಮ್ಮ ಬಾಳಿನ ಹಾಸುಹೊಕ್ಕುಗಳಾಗಿ ಮಾಡಿಕೊಂಡವರಿಗೆ ಅನುಕೂಲರಾದ ಗೆಳೆಯರು ದೊರಕುವುದು ದುರ್ಲಭ. ಸಾಮಾನ್ಯ ಮಾನವರ ಆಶೆ ಆಕಾಂಕ್ಷೆಗಳು ಇಂಥ ಜನರ ಆಸಕ್ತಿ ಅಭಿರುಚಿಗಳಿಗೆ ತೀರ ಬೇರೆಯಾದ್ದರಿಂದ ಅವರ ಸಹವಾಸ, ಈ ರಸಯೋಗಿಗಳಿಗೆ ಸರಿಬೀಳುವುದಿಲ್ಲ. ಐನ್‌ಸ್ಟೈನರಿಗೂ ಇದೇ ಅನುಭವ ಉಂಟಾಯಿತು. ಕೈಹಿಡಿದ ಪತ್ನಿಯೂ ಅವರಿಗೆ ಈ ವಿಷಯದಲ್ಲಿ ಅನುಕೂಲಳಾಗಿರಲಿಲ್ಲ. ಆಕೆಯ ಮನೋವೃತ್ತಿಯೇ ಬೇರೆ, ಐನ್‌ಸ್ಟೈನರದೇ ಬೇರೆ. ತಮಗೆ ಗೋಚರವಾದ ಎಲ್ಲಾ ವಿಷಯಗಳನ್ನೂ ತಮ್ಮ ಪತ್ನಿಯೊಂದಿಗೆ ಚರ್ಚಿಸುವ ಆಶೆ ಅವರಿಗೆ; ಆಕೆಗಾದರೋ ಯಾರೊಬ್ಬರ ಜೊತೆಗೂ ಸೇರದೆ ತಾನೊಬ್ಬಳೇ ತನಗೆ ಗೋಚರವಾದ ವಿಷಯಗಳನ್ನು ಮನನ ಮಾಡಲು ಇಷ್ಟ. ಈ ಕಾರಣದಿಂದ ದಂಪತಿಗಳಿಗೆ ಪರಸ್ಪರ ಸ್ನೇಹ ಕುದುರಲಿಲ್ಲ. ಒಂಟೊಂಟಿಯಾಗಿ ವ್ಯಾಸಂಗ ಮಾಡುವದು, ಚಿಂತಿಸುವುದು—ಇಬ್ಬರಿಗೂ ಹೆಚ್ಚು ಪ್ರಿಯಕರವಾಗತೊಡಗಿದವು. ಇಷ್ಟಾದರೂ ಐನ್‌ಸ್ಟೈನರು ಆತ್ಮೀಯನಾದ ಗೆಳೆಯನೊಬ್ಬನ ಸಹವಾಸವನ್ನು ಅನೇಕ ವೇಳೆ ಅಪೇಕ್ಷಿಸುತ್ತಿದ್ದರು. ತಮ್ಮ ಸಮಸ್ಯೆಗಳೆಲ್ಲವನ್ನೂ ಬಿಚ್ಚುಮನಸ್ಸಿನಿಂದ ಚರ್ಚಿಸುವದಕ್ಕೂ, ತಾನು ಬಾರಿಸಿದ ಪಿಟೀಲು ವಾದನವನ್ನು ಕೇಳಿ ಸಂತೋಷಪಡುವುದಕ್ಕೂ ಕೆಲವು ಗೆಳೆಯರಾದರೂ ಇರಬೇಕು ಎನ್ನಿಸುತ್ತಿತ್ತು. ಐನ್‌ಸ್ಟೈನರಿಗೆ ಅಂಥ ಗೆಳೆಯರು ಎಷ್ಟು ಮಂದಿ ದೊರಕಬಲ್ಲರು? ಆದರೆ ಅವರಿಗೆ ಅಂಥ ಒಬ್ಬ ಗೆಳೆಯನಿದ್ದನು. ಆತನ ಹೆಸರು ಬೆಸೋ,

ಆತ ಒಳ್ಳೆ ಮೇಧಾವಿ ಮತ್ತು ವಿಚಾರಪರ. ಐನ್‌ಸ್ಟೈನರ ಎಲ್ಲ ಅಭಿಪ್ರಾಯಗಳನ್ನೂ ಚೆನ್ನಾಗಿ ವಿಮರ್ಶಿಸಿ ತನ್ನ ಅಭಿಪ್ರಾಯವನ್ನು ಅವರಿಗೆ ತಿಳಿಸುತ್ತಿದ್ದನು. ಹೊಸ ಹೊಸ ವಿಚಾರಗಳು ಐನ್‌ಸ್ಟೈನರ ನಾಲಿಗೆಯಿಂದ ಬಂದಾಗ ಆತ ಉತ್ಸಾಹ ತಾಳಿ "ಗೆಳೆಯ! ಎಂದಾದರೊಂದು ದಿನ ಗುಲಾಬಿ ಅರಳಬೇಕಲ್ಲವೇ?" ಎನ್ನುತ್ತಿದ್ದನು. ಬೆಸ್ಸೋನ ಪ್ರೀತಿಯ ಗುಲಾಬಿ ಅರಳಿದುದಷ್ಟೇ ಅಲ್ಲ, ದಿಗಂತದವರೆಗೂ ತನ್ನ ಕಂಪನ್ನು ಹರಡಿತು.

ಭೌತಶಾಸ್ತ್ರ ಐನ್‌ಸ್ಟೈನರಿಗೆ ಎಷ್ಟು ಪ್ರಿಯವಾಗಿತ್ತೋ ತತ್ವಶಾಸ್ತ್ರವೂ ಅವರಿಗೆ ಅಷ್ಟೇ ಪ್ರಿಯವಾಗಿತ್ತು. ವೈಜ್ಞಾನಿಕ ವಿಷಯಗಳು ನಮ್ಮ ಅರಿವಿಗೆ ಹೇಗೆ ಬರುವುದೆಂಬುದನ್ನು ಕೂಲಂಕಷವಾಗಿ ವಿಮರ್ಶಿಸಿದ್ದ ತಾತ್ವಿಕರ ಗ್ರಂಥಗಳನ್ನು ಅವರು ಆತ್ಯಾಸಕ್ತಿಯಿಂದ ಓದಿದರು. ಇದರಿಂದ ಅವರ ಜ್ಞಾನವೃದ್ಧಿಯಾಯಿತು; ವಿಜ್ಞಾನಶಾಸ್ತ್ರಗಳ ಹೃದಯ ಪರಿಚಯವಾಯಿತು. ಜ್ಞಾನಸಂಪತ್ತಷ್ಟನ್ನೇ ಅಲ್ಲದೆ ಆತ್ಮವನ್ನೂ ಬೆಳೆಸುವ ಗ್ರಂಥಗಳನ್ನೂ ಅವರು ಓದುತ್ತಿದ್ದರು. ಸಾತ್ವಿಕರಲ್ಲೆಲ್ಲಾ ಸ್ಕಾಟ್ಲೆಂಡಿನ ಡೇವಿಡ್ ಹ್ಯೂವರ್ ಮತ್ತು ಜರ್ಮನಿಯ ಇಮ್ಯಾನ್ಯುವೆಲ್ ಕ್ಯಾಂಟ್ ಐನ್‌ಸ್ಟೈನರಿಗೆ ಹೆಚ್ಚು ಮೆಚ್ಚಿನವರಾಗಿದ್ದರು. ಇವರಲ್ಲಿ ಒಬ್ಬನು ಇಂದ್ರಿಯಗಳಿಂದ ಪಡೆದ ಜ್ಞಾನ ಎಷ್ಟರಮಟ್ಟಿಗೆ ನಿಷ್ಕೃಷ್ಟವಾಗಿರುತ್ತದೆಂದೂ ಮತ್ತೊಬ್ಬನು ಹೊರ ಪ್ರಪಂಚದ ಜ್ಞಾನವನ್ನು ನಮ್ಮ ಮನಸ್ಸು ಹೇಗೆ ಸಂಪಾದಿಸುತ್ತದೆ ಎಂಬುದನ್ನೂ ಚರ್ಚಿಸಿದ್ದಾರೆ.

ಹೀಗೆ ದಿನಗಳುರುಳಿದಂತೆ ಐನ್‌ಸ್ಟೈನರ ವ್ಯಾಸಂಗವೂ, ಸಂಶೋಧನೆಗಳೂ ಸಾಗಿದ್ದುವು. ಆದರೆ ಅವರು ಚಿಂತಿಸುತ್ತಿದ್ದ ಸಮಸ್ಯೆಗಳಿಗೆ ಮಾತ್ರ ತಕ್ಕ ಉತ್ತರ ದೊರಕಲಿಲ್ಲ. ತಾನು ಎಲ್ಲ ಮೂಲಸಮಸ್ಯೆಗಳಿಗೂ ಉತ್ತರ ಕಂಡುಹಿಡಿಯುತ್ತೇನೆಂದು ಹೊರಟಿದ್ದ ಐನ್‌ಸ್ಟೈನರಿಗೆ ನಿರಾಶೆ ಕವಿಯಿತು. ತಾವು ಕಟ್ಟಿಕೊಂಡಿದ್ದ ಕನಸ್ಸೆಲ್ಲ ನುಚ್ಚುನೂರಾದಂತೆ ತೋರಿದಾಗ ಐನ್‌ಸ್ಟೈನರು ಬೆಸ್ಸೋಗೆ ಹೇಳುತ್ತಿದ್ದರು. "ಗೆಳೆಯ! ನನ್ನ ಸಂಶೋಧನೆಗಳೆಲ್ಲವೂ ವಿಫಲವಾಗಿವೆ. ನಾನು ತಪ್ಪುದಾರಿಯಲ್ಲಿ ಹೋಗುತ್ತಿದ್ದೇನೆಂದು ಮನಗಂಡಿದ್ದೇನೆ. ನನ್ನ ಕೆಲಸವನ್ನು ಇಲ್ಲಿಗೆ ನಿಲ್ಲಿಸಿ ಹಾಯಾಗುತ್ತೇನೆ" ಎಂದು. ಆದರೆ ಅನಿರೀಕ್ಷಿತವಾಗಿ ಮರುಕ್ಷಣದಲ್ಲೇ ಅವರಿಗೆ ಉತ್ಸಾಹ ಉಕ್ಕಿ ಹೃದಯ ದೌರ್ಬಲ್ಯವನ್ನು ನಿರ್ಮೂಲಮಾಡುತ್ತಿತ್ತು. ಅವರನ್ನು ಸ್ಫೂರ್ತಿಗೊಳಿಸಿ ಕಾರ್ಯೋನ್ಮುಖರನ್ನಾಗಿ ಮಾಡುತ್ತಿತ್ತು. ಯಾವುದೋ ಅಗೋಚರ ಶಕ್ತಿ. ಹೀಗೆ ಆಶೆ, ನಿರಾಶೆ, ತನ್ನ ಶಕ್ತಿಯಲ್ಲಿ ಧೃಡ ವಿಶ್ವಾಸ–ಅಪನಂಬಿಕೆ–ಇವುಗಳ ನಡುವೆ ಐನ್‌ಸ್ಟೈನರ ಮನಸ್ಸು ತೂಗುಯ್ಯಾಲೆಯಾಡುತ್ತಿದ್ದಾಗ ಕೊನೆಗೊಮ್ಮೆ ಎಲ್ಲ ಸಮಸ್ಯೆಗಳಿಗೂ ಉತ್ತರ ಹೊಳೆಯಿತು. ಇದರಿಂದುಂಟಾದ ಆನಂದದಿಂದ ಅವರು ಮೈಮರೆತರು; ಅವರ ಮನಸ್ಸು, ಉದ್ವೇಗಗೊಂಡಿತು. ಈ ರೀತಿ ಭಾವೋದ್ರೇಕದಿಂದ ಐನ್‌ಸ್ಟೈನರು ಸುಮಾರು ಎರಡು ವಾರಗಳ ವರೆಗೆ ಅಸ್ವಸ್ಥತೆಯಿಂದ ನರಳಬೇಕಾಯಿತಂತೆ.

ಈ ಅವಧಿಯಲ್ಲಿ ಐನ್‌ಸ್ಟೈನರು ಯೋಚಿಸುತ್ತಿದ್ದ ಮುಖ್ಯ ಸಮಸ್ಯೆಗೆ ಪಡೆದ ಉತ್ತರವೇ "ವಿಶೇಷ ಸಾಪೇಕ್ಷತಾವಾದ". ೧೯೦೫ರಲ್ಲಿ ಈ ಲೇಖನ ಪ್ರಕಟವಾಯಿತು,

ಮುಂದಿನ ಪುಟಗಳಲ್ಲಿ "ವಿಶೇಷ ಸಾಪೇಕ್ಷತಾವಾದ"ದ ಸ್ಥೂಲ ಪರಿಚಯವನ್ನು ಮಾಡಿಕೊಡಲಾಗಿದೆ.

ಇದೇ ಸಮಯದಲ್ಲಿ ಮೂರು ಲೇಖನಗಳು ಪ್ರಕಟವಾದವು. ಭೌತಶಾಸ್ತ್ರದ ದೃಷ್ಟಿಯಿಂದ ಇವೂ ಅತಿ ಮುಖ್ಯವಾದವುಗಳೆ. ಇವುಗಳಲ್ಲಿ ಒಂದಾದ ದ್ಯುತಿ ವಿದ್ಯುತ್ ಪರಿಣಾಮದ ಮೇಲಿನ ಲೇಖನಕ್ಕೆ ನೊಬೆಲ್ ಪಾರಿತೋಷಕ ದೊರೆಯಿತು. ಆದರೆ ಐನ್‌ಸ್ಟೈನರ ದೃಷ್ಟಿಯಿಂದ ಇವು ಪ್ರಾಸಂಗಿಕ ಲೇಖನಗಳು ಮಾತ್ರ.

# ೩ | ಭೌತಶಾಸ್ತ್ರ ವಿಶಾರದ

## ಜ್ಯೂರಿಚ್‌ನಿಂದ ಕರೆ

ಐನ್‌ಸ್ಟೈನರು ೧೯೦೫ನೇ ಸಂವತ್ಸರದಲ್ಲಿ ಪ್ರಕಟಿಸಿದ ಲೇಖನಗಳು ಅವರ ಖ್ಯಾತಿಯನ್ನು ಹತ್ತು ದಿಕ್ಕಿಗೂ ಹಬ್ಬಿಸಿದವು. ಪೇಟೆಂಟ್ ಆಫೀಸಿನ ಸಾಧಾರಣ ನೌಕರಿಯೊಂದರಲ್ಲಿ ಅದ್ಭುತ ಮೇಧಾವಿಯೊಬ್ಬ ಸಿಕ್ಕಿಕೊಂಡು ತೊಳಲುತ್ತಿದ್ದಾನೆಂದು ಅನೇಕ ಹಿರಿಯ ವಿಜ್ಞಾನಿಗಳಿಗೆ ಅರಿವಾಯಿತು. ಜ್ಯೂರಿಚ್ ವಿಶ್ವವಿದ್ಯಾನಿಲಯದ ಕೆಲವು ಅಧಿಕಾರಿಗಳು ಐನ್‌ಸ್ಟೈನರನ್ನು ತಮ್ಮ ಸಂಸ್ಥೆಯಲ್ಲಿ ಪ್ರಧಾನಾಧ್ಯಾಪಕರನ್ನಾಗಿ ನೇಮಿಸಿಕೊಂಡಲ್ಲಿ ಅವರ ಗೌರವ ಪ್ರತಿಷ್ಠೆಗಳು ಹೆಚ್ಚುವುದೆಂದು ಬಗೆದು ಅವರನ್ನು ಅಲ್ಲಿಗೆ ಬರಮಾಡಿಕೊಳ್ಳುವ ಯೋಜನೆ ಮಾಡಿದರು. ಅಂಥ ಅಧಿಕಾರಿಗಳಲ್ಲಿ ಪ್ರೊಫೆಸರ್ ಕ್ಲೈನರ್‌ರವರು ಪ್ರಮುಖರಾದವರು. ಕ್ಲೈನರವರಿಗೆ ಐನ್‌ಸ್ಟೈನರ ಸಾಮರ್ಥ್ಯವು ಅಸಾಧಾರಣವಾದುದೆಂದು ಅರಿವಾಗಿದ್ದರೂ, ಅವರ ಸಿದ್ಧಾಂತವು ಪೂರ್ಣವಾಗಿ ಅರ್ಥವಾಗಿರಲಿಲ್ಲ. ಆದರೂ ವಿದ್ಯಾಪಕ್ಷಪಾತಿಯಾದ ಅವರು ಐನ್‌ಸ್ಟೈನರನ್ನು ಜ್ಯೂರಿಚ್ ವಿಶ್ವವಿದ್ಯಾನಿಲಯದಲ್ಲಿ ಗೌರವಾಧ್ಯಾಪಕನಾಗಿ ಕೆಲಸ ಮಾಡುವಂತೆ ಆಹ್ವಾನಿಸಿದರು. ಕೆಲ ಕಾಲವಾದ ಮೇಲೆ ಸರಿಯಾದ ಸಂಭಾವನೆ ದೊರೆಯುವುದೆಂಬ ಭರವಸೆಯೂ ಐನ್‌ಸ್ಟೈನರಿಗೆ ದೊರೆಯಿತು.

ಜ್ಯೂರಿಚ್ ವಿಶ್ವವಿದ್ಯಾನಿಲಯದ ಅಂದಿನ ನಿಯಮಾವಳಿಯಂತೆ ಹೊಸದಾಗಿ ಪ್ರಾಧ್ಯಾಪಕರಾಗಿ ಸೇರುವಂಥವರು ಕೆಲವು ಕಾಲ ಗೌರವಾಧ್ಯಾಪಕರಾಗಿ ಯಾವುದಾದರೂ ಶಾಲೆಯಲ್ಲಿ ಕೆಲಸ ಮಾಡಬೇಕಾಗಿದ್ದಿತು. ಈ ಅವಧಿಯಲ್ಲಿ ಶಿಕ್ಷಕನ ಕೆಲಸವನ್ನು ನೋಡಿ ಅದರಿಂದ ವಿಶ್ವವಿದ್ಯಾನಿಲಯದ ಅಧಿಕಾರಿಗಳು ತೃಪ್ತರಾದರೆ ಮಾತ್ರ ಆತನನ್ನು ಖಾಯಂ ಕೆಲಸಕ್ಕೆ ತೆಗೆದುಕೊಳ್ಳುತ್ತಿದ್ದರು. ಗೌರವಾಧ್ಯಾಪಕನಾಗಿ ಕೆಲಸ ಮಾಡಿದಷ್ಟು ದಿನವು ಶಿಕ್ಷಕನಿಗೆ ಯಾವ ಸಂಭಾವನೆಯೂ ದೊರಕದಿದ್ದುದರಿಂದ ಆತನು ತನ್ನ ಕುಟುಂಬದ ಪೋಷಣೆಗೆ ಮತ್ತಾವುದಾದರೂ ವೃತ್ತಿಯನ್ನು ಅವಲಂಬಿಸಿ, ಬಿಡುವು ಕಾಲದಲ್ಲಿ ಮಾತ್ರ ವಿಶ್ವವಿದ್ಯಾನಿಲಯದ ಪಾಠ ಹೇಳಬಹುದಾಗಿದ್ದಿತು. ವಿಶ್ವವಿದ್ಯಾನಿಲಯದ ನಿಯಮಗಳು ಇಂಥ ವ್ಯವಸ್ಥೆಗೆ ತಕ್ಕಷ್ಟು ಅವಕಾಶ ಕೊಟ್ಟಿದ್ದವು. ಕ್ಲೈನರ್‌ರವರ ಸಲಹೆಯ ಮೇರೆಗೆ ಐನ್‌ಸ್ಟೈನರು ಬರ್ನ್ ನಗರದಲ್ಲಿದ್ದ ಜ್ಯೂರಿಚ್ ವಿಶ್ವವಿದ್ಯಾನಿಲಯದ ಅಂಗಸಂಸ್ಥೆಯೊಂದರಲ್ಲಿ ಗೌರವಾಧ್ಯಾಪಕರಾಗಿ ಕೆಲಸಕ್ಕೆ ಸೇರಿಕೊಂಡರು. ಪೇಟೆಂಟ್ ಆಫೀಸಿನಲ್ಲಿ ಬಿಡುವು ದೊರೆತಾಗ ಆ ವಿದ್ಯಾಸಂಸ್ಥೆಗೆ ಹೋಗಿ ಪಾಠ ಹೇಳುವ ಏರ್ಪಾಡನ್ನು ಮಾಡಿಕೊಂಡರು.

ಯಂತ್ರದಂತೆ ದುಡಿಯುವದಾಗಲಿ ಹೊರಗಿನ ಅಧಿಕಾರಕ್ಕೆ ಒಳಪಟ್ಟು ಅದರ ಕಟ್ಟಿನೊಳಗೇ ಕೆಲಸ ಮಾಡುವದಾಗಲಿ ಐನ್‌ಸ್ಟೈನರ ಸ್ವಭಾವವಾಗಿರಲಿಲ್ಲ. ಇದನ್ನು ಅವರ

ಬಾಲ್ಯ ಚರಿತ್ರೆಯಲ್ಲಿಯೇ ನೋಡಿದ್ದೇವೆ. ಮ್ಯೂನಿಚ್ ನಗರದ ಜಿಮ್ನಾಶಿಯಂ ಶಾಲೆಯ ಕಟ್ಟುಪಾಡನ್ನು ತಡೆಯಲಾಗದೆ ಅಲ್ಲಿಂದ ಅವರು ಓಡಿಬಂದಿದ್ದರಷ್ಟೆ! ಇಂಥ ಸ್ವತಂತ್ರ ಸ್ವಭಾವದ ಮನುಷ್ಯರಿಗೆ ಜ್ಯೂರಿಚ್ ವಿಶ್ವವಿದ್ಯಾನಿಲಯದವರ ಕಟ್ಟುಪಾಡಿಗನುಸಾರವಾಗಿ ನಡೆದುಕೊಳ್ಳುವುದು ಅತಿ ಕಷ್ಟವಾಗಿ ತೋರಿದುದರಲ್ಲಿ ಆಶ್ಚರ್ಯವೇನೂ ಕಾಣೆವು. ಐನ್‌ಸ್ಟೈನರು ತಾವು ಪಾಠ ಹೇಳುವ ರೀತಿಯಲ್ಲಿ ಯಾವ ಒಂದು ಸಂಪ್ರದಾಯಕ ಕ್ರಮವನ್ನೂ ಅನುಸರಿಸದೆ ಸ್ವತಂತ್ರ ಹಾದಿಯನ್ನು ಹಿಡಿದಿದ್ದರು. ಅವರು ಪಾಠ ಹೇಳುತ್ತಿದ್ದ ರೀತಿಗೂ ವಿಶ್ವವಿದ್ಯಾನಿಲಯದವರು ನಿರೀಕ್ಷಿಸುತ್ತಿದ್ದ ರೀತಿಗೂ ಬಹುಮಟ್ಟಿಗೆ ವ್ಯತ್ಯಾಸವಿದ್ದಿತು. ಒಮ್ಮೆ ಕ್ಲೈನರ್‌ರವರು ಐನ್‌ಸ್ಟೈನರನ್ನು ಪರೀಕ್ಷಿಸಲೋಸುಗ ಬರ್ನ್ ಪಟ್ಟಣಕ್ಕೆ ಬಂದರು. ಅವರು ಐನ್‌ಸ್ಟೈನರ ಉಪನ್ಯಾಸಗಳನ್ನು ಕೇಳಿ ಅತೃಪ್ತಿಗೊಂಡರು. ತಮ್ಮ ಅತೃಪ್ತಿಯನ್ನು ಐನ್‌ಸ್ಟೈನರಿಗೆ ವ್ಯಕ್ತಪಡಿಸಿದಾಗ ಐನ್‌ಸ್ಟೈನ್ "ನನ್ನನ್ನು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕನನ್ನಾಗಿ ನೇಮಿಸುವಂತೆ ನಾನು ಬಿನ್ನವಿಸಿಕೊಳ್ಳುವುದಿಲ್ಲ" ಎಂದು ಉತ್ತರ ಕೊಟ್ಟುಬಿಟ್ಟರು.

ಕ್ಲೈನರ್ ಬರ್ನ್ ಪಟ್ಟಣದಿಂದ ಹಿಂತಿರುಗಿದ ಮೇಲೆ ವಿಶ್ವವಿದ್ಯಾನಿಲಯಕ್ಕೆ ತಮ್ಮ ವರದಿಯನ್ನು ಸಲ್ಲಿಸಿದರು, ಜ್ಯೂರಿಚ್ ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೆ ಐನ್‌ಸ್ಟೈನರ ವಿಷಯದಲ್ಲಿ ಇಂಥ ಒಂದು ಕೆಟ್ಟ ವರದಿಯೇ ಬೇಕಾಗಿತ್ತು. ತಮ್ಮ ಪಂಗಡಕ್ಕೆ ಸೇರದ ಐನ್‌ಸ್ಟೈನ್ ವಿಶ್ವವಿದ್ಯಾನಿಲಯದಲ್ಲಿ ಹಿರಿಯ ಸ್ಥಾನವನ್ನು ಆಕ್ರಮಿಸುವುದು ಅವರಿಗಿಷ್ಟವಿರಲಿಲ್ಲ. ಅವರೆಲ್ಲರೂ 'ಸೋಷಿಯಲ್ ಡೆಮೊಕ್ರಾಟಿಕ್' ಪಕ್ಷಕ್ಕೂ ಕ್ರೈಸ್ತ ಧರ್ಮಕ್ಕೂ ಸೇರಿದ್ದರು. ಇದಾವುದಕ್ಕೂ ಸೇರದ ಐನ್‌ಸ್ಟೈನ್ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾಗ ಬಯಸುವುದು ಈ ಪಕ್ಷಾಂಧ–ಮತಾಂಧರಿಗೆ ರುಚಿಸಲಿಲ್ಲ. ಯಾವುದಾದರೊಂದು ಕಾರಣವನ್ನು ಹಿಡಿದು ಐನ್‌ಸ್ಟೈನರ ಅರ್ಜಿಯನ್ನು ತಳ್ಳಿಹಾಕಬೇಕೆಂದು ಅವರೆಲ್ಲರೂ ಕಾಯುತ್ತಿದ್ದರು. ಕ್ಲೈನರರ ಅಭಿಪ್ರಾಯ ಅವರಿಗೆ ಸರಿಯಾದ ಕಾರಣವನ್ನು ಒದಗಿಸಿತು. ಅದನ್ನೇ ಭದ್ರವಾಗಿ ಹಿಡಿದುಕೊಂಡು ಅವರು ಐನ್‌ಸ್ಟೈನರ ಬೇರೆ ಅರ್ಹತೆಗಳನ್ನು ಗಣನೆಗೆ ತೆಗೆದುಕೊಳ್ಳದೆ ಅವರ ಅರ್ಜಿಯನ್ನು ತಳ್ಳಿಹಾಕುವ ಯತ್ನ ನಡೆಸಿದರು. ತಮ್ಮ ಪಕ್ಷಕ್ಕೆ ಸೇರಿದ್ದ ಫ್ರೆಡರಿಕ್ ಆ್ಯಡ್ಲೇರ್‌ನೆಂಬವವನನ್ನು ಭೌತಶಾಸ್ತ್ರ ಪ್ರಾಧ್ಯಾಪಕನನ್ನಾಗಿ ಸೇರಿಸಿಕೊಳ್ಳುವ ಯೋಚನೆ ಮಾಡಿದರು.

ಫ್ರೆಡರಿಕ್ ಆ್ಯಡ್ಲರ್ ಜ್ಯೂರಿಚ್ ಔದ್ಯೋಗಿಕ ಶಾಲೆಯಲ್ಲಿ ಐನ್‌ಸ್ಟೈನರ ಸಹಪಾಠಿಯಾಗಿದ್ದನು. ಅತನು ಅವರ ಅದ್ಭುತ ಮೇಧಾಶಕ್ತಿಯನ್ನೂ, ಸರಳ ಸ್ವಭಾವವನ್ನೂ ಮನಗಂಡಿದ್ದನು. ಐನ್‌ಸ್ಟೈನರ ವಿಷಯದಲ್ಲಿ ಆತನಿಗೆ ಅತಿಶಯವಾದ ಗೌರವ–ಮಮತೆಗಳಿದ್ದವು. ಪ್ರಾಧ್ಯಾಪಕ ಸ್ಥಾನಕ್ಕೆ ಐನ್‌ಸ್ಟೈನರು ತನಗಿಂತ ಅನೇಕ ಪಾಲು ಉತ್ತಮ ಎಂಬುದು ಆ್ಯಡ್ಲರನಿಗೆ ಖಚಿತವಾಗಿದ್ದಿತು. ಐನ್‌ಸ್ಟೈನರಿಗೆ ಆಗುವ ಅನ್ಯಾಯವನ್ನು ಕಂಡು, ವಿದ್ಯಾಪಕ್ಷಪಾತಿಯೂ, ಪ್ರಾಮಾಣಿಕನೂ ಆದ ಆ್ಯಡ್ಲರನಿಗೆ ಸಹಿಸಲಾಗಲಿಲ್ಲ. ಐನ್‌ಸ್ಟೈನರಿಗೆ ನ್ಯಾಯ

ವಾಗಿ ದೊರೆಯಬೇಕಾಗಿದ್ದ ಕೆಲಸವು ತನಗೆ ಸಿಕ್ಕುವುದರಲ್ಲಿದೆಯೆಂದು ತಿಳಿದ ಕೂಡಲೆ ಆತನು ಅಧಿಕಾರಿಗಳಲ್ಲಿಗೆ ಹೋಗಿ "ಸರಸ್ವತೀ ಪೀಠವಾದ ವಿಶ್ವವಿದ್ಯಾನಿಲಯಕ್ಕೆ ನಿಮ್ಮ ರಾಜಕಾರಣ ವನ್ನು ತರಬೇಡಿ, ಐನ್‌ಸ್ಟೈನರ ಯೋಗ್ಯತೆ ಎಲ್ಲಿ? ನನ್ನ ಯೋಗ್ಯತೆ ಎಲ್ಲಿ? ಆವರನ್ನು ಕೆಲಸಕ್ಕೆ ತೆಗೆದುಕೊಳ್ಳುವುದರಿಂದ ವಿಶ್ವವಿದ್ಯಾನಿಲಯದ ಗೌರವ ಪ್ರತಿಷ್ಠೆಗಳು ಹೆಚ್ಚುವು ದಲ್ಲದೆ ವಿದ್ಯಾರ್ಥಿಗಳಿಗೂ ಮಹದುಪಕಾರವಾಗುತ್ತದೆ. ಆದ್ದರಿಂದ ನನಗೆ ನೀವು ತೋರಿಸಿ ರುವ ಗೌರವ ಬೇಡ" ಎಂದು ಖಡಾ ಖಂಡಿತವಾಗಿ ಹೇಳಿಬಿಟ್ಟನು. ಐನ್‌ಸ್ಟೈನರು ವಿಶ್ವವಿದ್ಯಾನಿಲಯಕ್ಕೆ ಕೆಲಸಕ್ಕೋಸ್ಕರ ಅರ್ಜಿ ಹಾಕಿದ್ದಾರೆ ಎಂಬುದು ಆ್ಯಡ್ಲರನಿಗೆ ತಿಳಿದಿದ್ದರೆ ಪ್ರಾಯಶಃ ಆತ ಐನ್‌ಸ್ಟೈನರ ಎದುರು ಅಭ್ಯರ್ಥಿಯಾಗಿ ನಿಲ್ಲುತ್ತಲೇ ಇರಲಿಲ್ಲ, ಆ್ಯಡ್ಲರನ ಮಾತಿನಿಂದ ನಾಚಿಕೆಗೊಂಡ ವಿಶ್ವವಿದ್ಯಾನಿಲಯದ ಅಧಿಕಾರಿಗಳು ನಿರ್ವಾಹವಿಲ್ಲದೆ ಐನ್‌ಸ್ಟೈನರನ್ನು ಪ್ರಾಧ್ಯಾಪಕರನಾಗಿ ನೇಮಿಸಿಕೊಂಡರು, ಅವರು ೧೯೦೯ರಲ್ಲಿ ತಮ್ಮ ಹೊಸ ಕೆಲಸಕ್ಕೆ ದಾಖಲಾದರು.

ಐನ್‌ಸ್ಟೈನರಿಗೆ ತಾವು ಬಯಸುತ್ತಿದ್ದ ಕೆಲಸವೇ ದೊರಕಿತು. ಅದು ಸಾಕಷ್ಟು ದೊಡ್ಡ ಹುದ್ದೆಯೂ ಆಗಿದ್ದಿತು, ದೊರೆತ ಹೊಸ ಅಧಿಕಾರದಿಂದ ಅವರು ಜಂಭಪಡಲಿಲ್ಲ. ಜ್ಯೂರಿಚ್ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿ ನೇಮಕಗೊಂಡ ಹಲವು ಯುವಕರು ತಮ್ಮ ಜೀವನದಲ್ಲಿ ಅತಿ ಹೆಚ್ಚಿನ ಪದವಿಯನ್ನು ಸಂಪಾದಿಸಿದೆವೆಂಬ ದುರಭಿಮಾನದಿಂದ ಮೆರೆಯುತ್ತಿದ್ದರು. ಇಂತಹ ಅಹಂಕಾರ, ದರ್ಪಗಳು ಐನ್‌ಸ್ಟೈನರ ಹತ್ತಿರ ಸುಳಿಯಲೇ ಇಲ್ಲ. ಪೇಟೆಂಟ ಆಫೀಸಿನಲ್ಲಿದ್ದಾಗ ಅವರು ಹೇಗೆ ಸರಳವಾಗಿ ವರ್ತಿಸಿದ್ದರೋ ವಿಶ್ವವಿದ್ಯಾ ನಿಲಯದಲ್ಲಿ ದೊಡ್ಡ ಪ್ರಾಧ್ಯಾಪಕರಾದ ಮೇಲೂ ಅದೇ ರೀತಿ ನಡೆದುಕೊಳ್ಳುತ್ತಿದ್ದರು. ಮೇಲಿನ ಅಧಿಕಾರಿಗಳಲ್ಲಿ ಎಷ್ಟು ವಿನಯದಿಂದ ವರ್ತಿಸುತ್ತಿದ್ದರೋ ತಮ್ಮ ಮನೆಯ ಸೇವಕ ರೊಂದಿಗೂ, ತಮ್ಮ ಸಹೋಗಿಗಳೊಡನೆಯೂ ಅಷ್ಟೇ ವಿನಯದಿಂದ ನಡೆದುಕೊಳ್ಳುತ್ತಿದ್ದರು, ತಮ್ಮ ಸೇವಕ-ಸೇವಕಿಯರಿಗೆ ವಿಶ್ವವಿದ್ಯಾನಿಲಯದ ಅತ್ಯಂತ ಉನ್ನತಾಧಿಕಾರಿಗಳಿಗೆ ತೋರಿಸುವಷ್ಟೇ ಗೌರವವನ್ನು ತೋರಿಸುತ್ತಿದ್ದರು. ದೊಡ್ಡವರೆನಿಸಿಕೊಂಡವರ ಮುಂದೆ ಅತಿ ನಮ್ರವಾಗಿಯೂ ಸಣ್ಣವರ ಮುಂದೆ ಅತಿ ಬಿಗುಮಾನದಿಂದಲೂ ನಡೆದುಕೊಳ್ಳುವುದೆಂದರೆ ಅವರಿಗೆ ಆಗುತ್ತಿರಲಿಲ್ಲ, ಬಾಹ್ಯಾಡಂಬರದ ಜೀವನ ಅವರಿಗೆ ಬೇಸರವನ್ನುಂಟು ಮಾಡು ತ್ತಿತ್ತು. ಅನೇಕ ದೊಡ್ಡ ಮನುಷ್ಯರಿಗೆ ಐನ್‌ಸ್ಟೈನರ ಈ ಸರಳ ವರ್ತನೆ ಸರಿಬೀಳಲಿಲ್ಲ. ಹೊಸ ಪ್ರಾಧ್ಯಾಪಕರು ತಮಗೆ ಸಾಕಷ್ಟು ಗೌರವ ತೋರುತ್ತಿಲ್ಲವೆಂದು ಅವರು ಐನ್‌ಸ್ಟೈನರ ವಿಷಯದಲ್ಲಿ ಅಸಂತೃಪ್ತಿಗೊಂಡರು. ಈ ಬಗೆಯ ಜನರು ತಮ್ಮ ಅಸಂತೃಪ್ತಿಯನ್ನು ಅವರಲ್ಲಿ ತೋರಿಸಿಕೊಂಡಾಗ, ಐನ್‌ಸ್ಟೈನರು ದೊಡ್ಡದಾಗಿ ನಕ್ಕುಬಿಡುತ್ತಿದ್ದರು. ಆ ನಗುವಿನಲ್ಲಿ ದೊಡ್ಡವರ ಬಿಗುಮಾನವೆಲ್ಲ ಕೊಚ್ಚಿಹೋಗುತ್ತಿತ್ತು. ಹತ್ತಿರದ ಗೆಳೆಯರಿಗೆ ಇದರಿಂದ ಸಂತೋಷವಾಗುತ್ತಿದ್ದರೂ ಜಂಭಗಾರರ ಮನಸ್ಸು ಚುಚ್ಚಿದಂತಾಗುತ್ತಿತ್ತು,

ಐನ್‌ಸ್ಟೈನರ ಈ ವರ್ತನೆಯನ್ನು ಅರ್ಥಮಾಡಿಕೊಳ್ಳಲು ಅವರ ಮನೋಧರ್ಮ ವನ್ನು ತಿಳಿಯುವುದು ಅಗತ್ಯ. ಅವರು ಎಂದೂ ವ್ಯಾವಹಾರಿಕ ಜೀವನವನ್ನು ಅತಿಯಾಗಿ

ತಲೆಗೆ ಹಚ್ಚಿಕೊಂಡಿರಲಿಲ್ಲ. ಸೃಷ್ಟಿಯ ಗಾಢವಾದ ಸಮಸ್ಯೆಗಳ ಎದುರು ಅವರಿಗೆ ವ್ಯಾವಹಾರಿಕ ಪ್ರಪಂಚವು ಅತಿ ಕ್ಷುದ್ರವಾಗಿ ಕಾಣುತ್ತಿದ್ದಿತು. ಅವುಗಳನ್ನು ಕುರಿತು ಯೋಚಿಸಲು ತಮಗೆ ಸಾಕಷ್ಟು ಸಾಮರ್ಥ್ಯವಿದೆಯೆಂದೂ, ದಿನದಿನದ ವ್ಯವಹಾರಕ್ಕೆ ಹೆಚ್ಚು ಗಮನಕೊಟ್ಟರೆ ಆ ಸಮಸ್ಯೆಗಳಿಗೆ ಉತ್ತರವನ್ನು ಕಂಡುಹಿಡಿಯುವುದು ಸಾಧ್ಯವಾಗದೆಂದೂ ಅವರಿಗೆ ಗೊತ್ತಿದ್ದಿತು. ಈ ಕಾರಣದಿಂದ ಅವರು ತಮಗೆ ಸಮಾಜ ನೀಡಬಹುದಾದ ಗೌರವ ನಿಂದೆಗಳ ವಿಷಯದಲ್ಲಿ ಅನಾಸಕ್ತರಾಗಿದ್ದರು. ತಮಗೆ ನಿಜವೆಂದು ತೋರಿದ್ದನ್ನು ಹೇಳುವುದರಲ್ಲಿ ಹಿಂಜರಿಯುವುದೇ ಅವರಿಗೆ ತಿಳಿಯದು. ಇತರರಿಗೆ ಸಿಹಿಯಾಗಿದೆಯೋ ಕಹಿಯಾಗಿದೆಯೋ ಎಂಬುದನ್ನು ಗಣಿಸದೆ ನಿಜವನ್ನು ನೇರವಾಗಿ ಹೇಳಿಬಿಡುತ್ತಿದ್ದರು. ಈ ರೀತಿಯ ಅವರ ವರ್ತನೆಯಿಂದ ನೊಂದುಕೊಂಡವರು ಹಲವರು.

ಐನ್‌ಸ್ಟೈನರನ್ನು ಅವರ ಸಹೋದ್ಯೋಗಿಗಳು ಅಪಾರ್ಥಮಾಡಿಕೊಳ್ಳಲು ಮತ್ತೊಂದು ಕಾರಣವೂ ಇದ್ದಿತು. ಜನಸಾಮಾನ್ಯರ ಕಷ್ಟ ದುಃಖಗಳಲ್ಲಿ ಅವರಿಗೆ ಸಹಾನುಭೂತಿಯಿತ್ತು. ಆದ್ದರಿಂದ ತಮ್ಮ ಸಹೋದ್ಯೋಗಿಗಳ ಕಷ್ಟ ಸುಖಗಳಲ್ಲಿ ತಾವು ಭಾಗಿಗಳಾಗುತ್ತಿದ್ದರು. ಈ ಅವಕಾಶವನ್ನು ತೆಗೆದುಕೊಂಡು ಯಾರಾದರೂ ಅವರಲ್ಲಿ ಅತಿಯಾದ ಸ್ನೇಹ ಬೆಳೆಸಲು ಪ್ರಯತ್ನಪಟ್ಟರೆ ಅವರು ಕೂಡಲೇ ಅಂಥವರಿಂದ ದೂರಾಗಿಬಿಡುತ್ತಿದ್ದರು. ಅತಿಯಾದ ಸ್ನೇಹ ವ್ಯಾಮೋಹಕ್ಕೆಡೆಗೊಡುವದರಿಂದ ಅದು ತನ್ನ ತಪಸ್ಸಿಗೆ ಭಂಗಬರುವುದೆಂದು ಐನ್‌ಸ್ಟೈನರು ತಿಳಿದಿದ್ದರು. ಅಪಾರ್ಥಮಾಡಿಕೊಂಡ ಸಹೋದ್ಯೋಗಿಗಳು ಅವರನ್ನು ಜಂಭಗಾರರೆಂದು ಜರೆಯತೊಡಗಿದರು.

ಹೊಸಪದವಿ ಹೆಸರಿಗೇನೋ ದೊಡ್ಡದಾಗಿತ್ತು. ಆದರೆ ಅದರಿಂದ ಐನ್‌ಸ್ಟೈನರಿಗೆ ದೊರೆಯುತ್ತಿದ್ದ ಸಂಪಾದನೆ ಸ್ವಲ್ಪವೇ ಆಗಿದ್ದಿತು. ಪೇಟೆಂಟ ಆಫೀಸಿನಲ್ಲಿ ದೊರೆಯುತ್ತಿದ್ದ ಸಂಬಳಕ್ಕಿಂತ ವಿಶ್ವವಿದ್ಯಾನಿಲಯದಲ್ಲಿ ಹೆಚ್ಚಿನ ಸಂಬಳ ದೊರಕುತ್ತಿರಲಿಲ್ಲ, ಈ ಅಲ್ಪವರಮಾನದಿಂದ ವಿಶ್ವವಿದ್ಯಾನಿಲಯದ ದೊಡ್ಡ ಪ್ರಾಧ್ಯಾಪಕರು ನಡೆಸಬೇಕಾದಂತಹ ಆಡಂಬರ ಜೀವನವನ್ನು ನಡೆಸಲು ಅವರಿಗೆ ಅಸಾಧ್ಯವಾಯಿತು. ಐನ್‌ಸ್ಟೈನರ ಪತ್ನಿಗೆ ಮೊದಲಿನ ಸರಳ ಜೀವನವನ್ನು ನಡೆಸುವುದು ತಮ್ಮ ಯೋಗ್ಯತೆಗೆ ತಕ್ಕುದಲ್ಲ ಎಂಬ ಭಾವನೆ ಇತ್ತು. ತಮ್ಮ ವರಮಾನವನ್ನು ಸ್ವಲ್ಪಮಟ್ಟಿಗೆ ಹೆಚ್ಚಿಸಿಕೊಳ್ಳುವ ದೃಷ್ಟಿಯಿಂದ ಆಕೆ ಕೆಲವು ವಿದ್ಯಾರ್ಥಿಗಳನ್ನು ಅತಿಥಿಗಳನ್ನಾಗಿ ಸ್ವೀಕರಿಸಿ ಅವರಿಗೆ ಊಟ ವಸತಿಗಳನ್ನಿತ್ತು ಅವರಿಂದ ಹಣ ಪಡೆಯಲು ಪ್ರಾರಂಭಿಸಿದಳು, ಐನ್‌ಸ್ಟೈನರು ತಮ್ಮ ಅಂದಿನ ಸ್ಥಿತಿಯನ್ನು ಕುರಿತು ವಿನೋದವಾಗಿ ಹೀಗೆ ಹೇಳಿದ್ದಾರೆ. "ನನ್ನ ಸಾಪೇಕ್ಷತಾವಾದದಲ್ಲಿ ಆಕಾಶದ ಪ್ರತಿಯೊಂದು ಬಿಂದುವಿನಲ್ಲೂ ಒಂದೊಂದು ಗಡಿಯಾರವಿಟ್ಟೆ, ಆದರೆ ನನ್ನ ಕೊಠಡಿಯಲ್ಲಿ ಒಂದೇ ಒಂದು ಗಡಿಯಾರವನ್ನಿಡಲೂ ಸಾಧ್ಯವಾಗಲಿಲ್ಲ."

ಜೂರಿಚ್ ನಗರವು ಆರ್ಥಿಕ ದೃಷ್ಟಿಯಿಂದ ಅಷ್ಟೇನೂ ಅನುಕೂಲವಾಗಿರದಿದ್ದರೂ ಅಲ್ಲಿಯ ಜೀವನ ಐನ್‌ಸ್ಟೈನ್ ದಂಪತಿಗೆ ಹೆಚ್ಚು ಹಿತಕರವಾಗಿತ್ತು. ಅವರಿಬ್ಬರೂ ತಮ್ಮ ವಿದ್ಯಾರ್ಥಿದೆಸೆಯನ್ನು ಅಲ್ಲಿಯೇ ಕಳೆದಿದ್ದರಾದ್ದರಿಂದ ಅದು ಅವರಿಗೆ ಪ್ರಿಯವಾಗಿತ್ತು.

## ಪ್ರಾಗ್ ವಿಶ್ವವಿದ್ಯಾನಿಲಯದಲ್ಲಿ

೧೯೧೦ನೇ ಇಸವಿಯಲ್ಲಿ ಪ್ರಾಗ್ (Prague) ವಿಶ್ವವಿದ್ಯಾನಿಲಯದಲ್ಲಿ ಭೌತಶಾಸ್ತ್ರ ಪ್ರಾಧ್ಯಾಪಕನ ಸ್ಥಾನ ಬಿಡುವಾಯಿತು. ಜೆಕೊಸ್ಲೋವೇಕಿಯ ದೇಶವೆಲ್ಲ ಅಂದು ಆಸ್ಟ್ರೀಯನರ ವಶದಲ್ಲಿತ್ತು. ಆಸ್ಟ್ರಿಯಾ ಚಕ್ರವರ್ತಿಯು ಪ್ರಾಗ್ ವಿಶ್ವವಿದ್ಯಾನಿಲಯದ ಅಧಿಪತಿಯಾಗಿದ್ದನು. ಆದರ ಅಧಿಕಾರ ಸೂತ್ರವೆಲ್ಲ ಆಂಟನ್ ಲಂಪಾ (Anton Lampa) ಎಂಬ ಪಂಡಿತನ ಕೈಯಲ್ಲಿತ್ತು. ಆತ ಉದಾರಿ, ಪಾಂಡಿತ್ಯ ಪಕ್ಷಪಾತಿ. ಭೌತಶಾಸ್ತ್ರದಲ್ಲಿ ದೊಡ್ಡ ದೊಡ್ಡ ಸಂಶೋಧನೆಗಳನ್ನು ನಡೆಸಿರುವ ವ್ಯಕ್ತಿಯೊಬ್ಬನನ್ನು ಪ್ರಾಧ್ಯಾಪಕ ಸ್ಥಾನಕ್ಕೆ ತರಬೇಕೆಂಬುದು ಆತನ ಆಸೆಯಾಗಿತ್ತು. ಈ ಉದ್ದೇಶದಿಂದ ಆತನು ಐನ್‌ಸ್ಟೈನರ ಹೆಸರನ್ನೂ ಜಾಮನ್ (Jaumaun) ಎಂಬ ಮತ್ತೊಬ್ಬ ಪಂಡಿತನ ಹೆಸರನ್ನೂ ಆಸ್ಟ್ರಿಯಾ ದೇಶದ ವಿದ್ಯಾಮಂತ್ರಿಗೆ ಸೂಚಿಸಿದನು. ಹಿರಿಯ ಪ್ರಾಧ್ಯಾಪಕನನ್ನು ಮಂತ್ರಿಮಂಡಲವೇ ನೇಮಕ ಮಾಡಬೇಕಾಗಿದ್ದರಿಂದ ಲಂಪಾ ಇಬ್ಬರ ಹೆಸರುಗಳನ್ನೂ ಮಂತ್ರಿಮಂಡಲಕ್ಕೆ ಸೂಚಿಸಬೇಕಾಯಿತು. ಹಾಗೆ ಸೂಚಿಸುವಾಗ ಆ ಅಧಿಕಾರಿಯು ಐನ್‌ಸ್ಟೈನರ ಹೆಸರನ್ನು ಮೊದಲು ಬರೆದು ಅವರು ನಡೆಸಿದ್ದ ಸಂಶೋಧನೆಗಳೆಲ್ಲವನ್ನೂ ಸೂಕ್ಷ್ಮವಾಗಿ ವಿವರಿಸಿದ್ದನು. ಆದರೆ ಮಂತ್ರಿಮಂಡಲವು ಈ ವಿಷಯದಲ್ಲಿ ಲಂಪಾನ ಶಿಫಾರಸನ್ನು ತಳ್ಳಿಹಾಕಿತು. ಮಂತ್ರಿಮಂಡಲದ ಅಭಿಪ್ರಾಯದಲ್ಲಿ ಐನ್‌ಸ್ಟೈನರು ಆಸ್ಟ್ರಿಯದ ರಾಷ್ಟ್ರಕನಲ್ಲವೆಂಬುದೇ ಒಂದು ದೊಡ್ಡ ಅನರ್ಹತೆಯಾಗಿತ್ತು. ಆ ದೇಶದ ಪ್ರಜೆಯೇ ಆದ ಜಾಮನ್‌ನನ್ನು ಪ್ರಾಧ್ಯಾಪಕಸ್ಥಾನಕ್ಕೆ ಆರಿಸಿ ಆತನು ಕೆಲಸಕ್ಕೆ ಸೇರಿಕೊಳ್ಳುವಂತೆ ಆಹ್ವಾನಿಸಿತು. ಜಾಮನ್‌ನಾದರೋ ತುಂಬಾ ಅಹಂಭಾವದವನು. ತನ್ನಷ್ಟು ಪರಿಪೂರ್ಣ ಪಾಂಡಿತ್ಯ ಪಡೆದಿರುವ ಭೌತಶಾಸ್ತ್ರಜ್ಞ ಬೇರೊಬ್ಬನಿಲ್ಲ ಎಂಬುದು ಆತನ ಭಾವನೆ. ಅವನು ಐನ್‌ಸ್ಟೈನರ ಹೆಸರನ್ನು ಮೊದಲು ಬರೆದು ಆ ಮೇಲೆ ತನ್ನ ಹೆಸರು ಬರೆದುದು ತನಗೆ ತುಂಬಾ ಅಪಮಾನವಾಯಿತೆಂದುಕೊಂಡನು. ಈ ದುರಭಿಮಾನವನ್ನು ಹೊಂದಿದ ಜಾಮನ್ ತನಗೆ ಆಹ್ವಾನ ಬಂದ ಕೂಡಲೇ ಅದನ್ನು ನಿರಾಕರಿಸಿದನು. ವಿಧಿಯಿಲ್ಲದೆ ಪ್ರಾಗ್‌ವಿಶ್ವವಿದ್ಯಾನಿಲಯದ ಅಧಿಕಾರಿಗಳು ಐನ್‌ಸ್ಟೈನರನ್ನೇ ಕರೆಯಬೇಕಾಯಿತು.

ಪ್ರಾಗ್ ವಿಶ್ವವಿದ್ಯಾನಿಲಯದ ನಿಯಮಾವಳಿಯಂತೆ, ಅಲ್ಲಿಯ ಪ್ರತಿಯೊಬ್ಬ ನೌಕರನೂ ಕ್ರೈಸ್ತ, ಯಹೂದಿ, ಇಸ್ಲಾಂ–ಮುಂತಾದ ಯಾವುದಾದರೂ ಒಂದು ಧರ್ಮಕ್ಕೆ ಸೇರಿದವನಾಗಿರಬೇಕಾಗಿದ್ದಿತು. ಐನ್‌ಸ್ಟೈನರು ಯಹೂದಿಮತವನ್ನು ತ್ಯಜಿಸಿದ ಮೇಲೆ ಮತ್ತಾವ ಧರ್ಮವನ್ನೂ ಅವಲಂಬಿಸಿರಲಿಲ್ಲ. ಎಲ್ಲ ಮತಗಳ ಬಂಧನದಿಂದಲೂ ಅವರು ವಿಮುಕ್ತರಾಗಿ ಸ್ವಾಯತ್ತಮತಿಯಾಗಿರಲು ಬಯಸಿದ್ದರು. ಆದ್ದರಿಂದ ಅವರು ಪ್ರಾಗ್‌ನಲ್ಲಿ ಕೆಲಸಕ್ಕೆ ಸೇರುವ ಮೊದಲು ಒಂದು ಹೊಸತೊಡಕನ್ನು ಎದುರಿಸಬೇಕಾಯಿತು. ತಾವು ಯಾವ ಧರ್ಮಕ್ಕೂ ಸೇರಿದವರಲ್ಲವೆಂದು ಖಚಿತವಾಗಿ ತಿಳಿಸಿ ಕೆಲಸವನ್ನು ನಿರಾಕರಿಸುವದೇ? ಯಾವುದಾದರೊಂದು ಮತಕ್ಕೆ ಸೇರಿ ಬಂದಿರುವ ಕೆಲಸವನ್ನು ಉಳಿಸಿಕೊಳ್ಳುವುದೇ ? ಅಥವಾ ತಾನು ಇನ್ನೂ ಯಹೂದಿ ಮತದಲ್ಲೇ ಇದ್ದೇನೆಂದು ಸುಳ್ಳುಹೇಳಿ ಕೂಡಲೇ ಕೆಲಸಕ್ಕೆ ಸೇರಿ

ಕೊಳ್ಳುವುದೇ? ಈ ಪ್ರಶ್ನೆಗಳು ಅವರನ್ನು ಬಾಧಿಸುತ್ತಿದ್ದವು; ಯೋಚಿಸಿ ಯೋಚಿಸಿ ಕೊನೆಗೆ ಅವರು ಮೂರನೆಯ ದಾರಿಯನ್ನು ಹಿಡಿಯಬೇಕಾಯಿತು. ಅವರ ಸ್ನೇಹಿತರೂ ಹಿತಚಿಂತಕರೂ ಇದೇ ಸೂಕ್ತವಾದ ಮಾರ್ಗವೆಂದು ಸೂಚನೆಯನ್ನು ಕೊಟ್ಟಿದ್ದರು. ಗೆಳೆಯರ ಬುದ್ಧಿವಾದದಂತೆ ಐನ್‌ಸ್ಟೈನರು ತಾವು ಯಹೂದಿ ಮತಕ್ಕೆ ಸೇರಿದವರೆಂದು ತಮ್ಮ ಅರ್ಜಿಯಲ್ಲಿ ನಮೂದಿಸಿದರು; ಕೂಡಲೇ ಕೆಲಸಕ್ಕೆ ಸೇರಿಕೊಳ್ಳುವಂತೆ ಆಹ್ವಾನ ಬಂದಿತು. ೧೯೧೧ರಲ್ಲಿ ಅವರು ತಮ್ಮ ಹೊಸ ಕೆಲಸಕ್ಕೆ ಸೇರಿಕೊಂಡರು.

ಈ ಕೆಲಸವು ಹೆಚ್ಚು ಸಂಬಳವನ್ನೇನೋ ತಂದಿತು. ಆದರೆ ಅಷ್ಟೇ ಪ್ರಮಾಣದಲ್ಲಿ ಮನಶಾಂತಿಯನ್ನು ಮಾತ್ರ ತರಲಿಲ್ಲ. ಐನ್‌ಸ್ಟೈನರ ಪತ್ನಿ ಜೂರಿಚ್‌ನಗರವನ್ನು ಬಿಟ್ಟು ಪ್ರಾಗ್‌ಗೆ ಬರಲು ಇಷ್ಟಪಡಲಿಲ್ಲ. ಆಕೆಗೆ ಜೂರಿಚ್ ಮೇಲೆ ಅಗಾಧವಾದ ಮಮತೆ. ಗಂಡ ಹೆಂಡಿರ ನಡುವೆ ವಿರಸವೂ ಬೆಳೆದಿತ್ತು. ಈ ವಿರಸ ಮತ್ತಷ್ಟು ಬೆಳೆಯುವುದಕ್ಕೆ ಅವಕಾಶ ಕೊಡಕೂಡದೆಂದು ಅವರು ಪತ್ನಿಯನ್ನು ತಮ್ಮೊಡನೆ ಪ್ರಾಗಿಗೆ ಬರುವಂತೆ ಮನವೊಲಿಸಿದರು. ಮನಸ್ಸಿಲ್ಲದ ಮನಸ್ಸಿನಿಂದ ಆಕೆ ಒಪ್ಪಿದಳು. ಆದರೆ ಅಲ್ಲಿ ಅವರ ಸಾಂಸಾರಿಕ ಜೀವನ ಮಾತ್ರ ಉತ್ತಮಗೊಳ್ಳಲಿಲ್ಲ.

## ಪ್ರಾಗ್ ನಗರದಲ್ಲಿ ಜೀವನ

ಹೊಸದಾಗಿ ನೇಮಕಗೊಂಡ ಪ್ರತಿಯೊಬ್ಬ ಪ್ರಾಧ್ಯಾಪಕನೂ ಇತರ ಪ್ರಾಧ್ಯಾಪಕರನ್ನು ಭೇಟಿಮಾಡಿ ಅವರಿಗೆ ಗೌರವ ತೋರುವುದು ಅಂದಿನ ವಾಡಿಕೆ. ಐನ್‌ಸ್ಟೈನರಿಗೆ ಈ ಔಪಚಾರಿಕ ಭೇಟಿಗಳು ಅಷ್ಟು ಪ್ರಿಯವಾಗಿರಲಿಲ್ಲ. ಅವು ಅವರ ಸ್ವಭಾವಕ್ಕೆ ಅನುಗುಣವಾಗಿರಲಿಲ್ಲ, ಸಾಮಾನ್ಯ ಜನರ ಕಷ್ಟ ಸುಖಗಳಲ್ಲಿ ಅವರಿಗೆ ಹೆಚ್ಚಿನ ಸಹಾನುಭೂತಿ ಇದ್ದರೂ ಅವರು ಜನಸಮೂಹದಿಂದ ದೂರವಿರಬೇಕೆಂದೇ ಬಯಸಿದರು. ಜೂರಿಚ್ ನಗರದಲ್ಲಿರಲಿ, ಬರ್ನನಲ್ಲಿರಲಿ, ಪ್ರಾಗ್‌ನಲ್ಲಿರಲಿ ಅವರು ತಮ್ಮ ಈ ಸ್ವಭಾವವನ್ನು ಬದಲಾಯಿಸಲಿಲ್ಲ. ಹೀಗಾಗಿ ಅವರು ಹಲವು ಸಹೋದ್ಯೋಗಿಗಳನ್ನು ಭೇಟಿ ಮಾಡಲಾಗಲಿಲ್ಲ.

ಪ್ರಾಗ್ ನಗರದ ಅನೇಕ ಭಾಗಗಳಲ್ಲಿ ಸುಂದರವಾದ ಚರ್ಚ್‌ಗಳೂ ಭವ್ಯಭವನಗಳೂ ಇದ್ದುವು. ಈ ಕಟ್ಟಡಗಳನ್ನು ನೋಡಲು ಅವರು ಆಗಾಗ ಹೋಗುತ್ತಿದ್ದರು, ಆ ಸಮಯದಲ್ಲಿ ಆ ಭಾಗದಲ್ಲಿ ಯಾವುದಾದರೂ ಸಹೋದ್ಯೋಗಿಗಳ ಮನೆ ಇದ್ದಲ್ಲಿ ಐನ್‌ಸ್ಟೈನರು ಅವರ ಮನೆಗೆ ಹೋಗಿ ಕುಶಲ ಸಂಭಾಷಣೆ ನಡೆಸಿ ಬರುತ್ತಿದ್ದರು. ಗೆಳೆಯರನ್ನು ನೋಡುವ ಉದ್ದೇಶದಿಂದಲೇ ಅವರು ಯಾರ ಮನೆಗೂ ಹೋದವರಲ್ಲ. ನಗರದ ಯಾವ ಭಾಗಗಳಲ್ಲಿ ಅವರಿಗೆ ಆಸಕ್ತಿ ಹುಟ್ಟಲಿಲ್ಲವೋ ಅಂಥ ಕಡೆ ವಾಸಿಸುತ್ತಿದ್ದ ಸಹೋದ್ಯೋಗಿಗಳ ಮನೆಗೆ ಅವರು ಎಂದೂ ಹೋಗಲಿಲ್ಲ. ಐನ್‌ಸ್ಟೈನರ ಸ್ವಭಾವವನ್ನರಿಯದ ಸಹೋದ್ಯೋಗಿಗಳು ಅವರನ್ನು ಇದಕ್ಕೋಸ್ಕರ ನಿಂದಿಸತೊಡಗಿದರು.

ಒಣಜಂಭದಿಂದ ಕೂಡಿದ ದೊಡ್ಡ ಮನುಷ್ಯರಿಗೆ ಐನ್‌ಸ್ಟೈನರ ಮೇಲೆ ಕೋಪವುಂಟಾಯಿತು; ಅವರ ವರ್ತನೆಯನ್ನು ಸಮಯ ಬಿದ್ದಾಗಲೆಲ್ಲ ಖಂಡಿಸತೊಡಗಿದರು. ಆದರೆ

ಐನ್‌ಸ್ಟೈನರ ಸಮೀಪ ಸಂಪರ್ಕ ಪಡೆದವರು ಅವರಲ್ಲಿ ಅಗಾಧವಾದ ಗೌರವವನ್ನು ತೋರಿಸಿದರು. ಅವರಿಗೆ ಐನ್‌ಸ್ಟೈನರ ಪಾಂಡಿತ್ಯ, ಸರಳ ಸ್ವಭಾವ, ಕರುಣೆ, ಪ್ರೀತಿ ಇವು ಮೆಚ್ಚಿಕೆಯಾಗಿದ್ದುವು.

ಪ್ರಾಗ್ ನಗರದಲ್ಲಿ ಜಾರ್ಜ್‌ಪಿಕ್, (George Pick) ಮತ್ತು ಬ್ರಾಡ್ (Brod) ಅಂದಿನ ಪ್ರಥಮ ಶ್ರೇಣಿಯ ಸಾಹಿತಿಗಳು, ಮಾರಿಸ್ ವಿಂಟರ್ ನಿಟ್ (Moris Winternitz) ಹಿರಿಯ ಸಂಸ್ಕೃತವಿದ್ವಾಂಸ; ಹ್ಯೂಗೋ ಬರ್ಗ್‌ಮನ್ (Hugo Bergman) ಯೆಹೂದಿ ಯರ ಮುಂದಾಳು, ಇವರೆಲ್ಲ ಐನ್‌ಸ್ಟೈನರಿಗೆ ಹತ್ತಿರದ ಗೆಳೆಯರಾಗಿದ್ದರು. ಮಹಾ ಪುರುಷನಲ್ಲಿರಬೇಕಾದ ಸದ್ಗುಣಗಳೆಲ್ಲ ಐನ್‌ಸ್ಟೈನರಲ್ಲಿ ಸಮ ಪ್ರಮಾಣದಲ್ಲಿ ಬೆರೆತಿರುವು ದನ್ನು ಈ ಗೆಳೆಯರು ಕಂಡುಕೊಂಡರು. ಐನ್‌ಸ್ಟೈನರನ್ನು ಸರಿಯಾಗಿ ಅರ್ಥಮಾಡಿಕೊಂಡ ಈ ಸಹೃದಯರು ಅವರನ್ನು ಆರಾಧಿಸತೊಡಗಿದರು. ಬ್ರಾಡ್‌ನಾದರೋ ಐನ್‌ಸ್ಟೈನರನ್ನು ಜ್ಞಾನಯೋಗಿಯಾದ ಕೆಪ್ಲರನಿಗೆ ಹೋಲಿಸಿ ಒಂದು ಉತ್ತಮ ಕಾದಂಬರಿಯನ್ನು ಬರೆದನು. ಅವರ ವ್ಯಕ್ತಿತ್ವ ಹೇಗೆ ಒಂದು ಮಹಾಕಾದಂಬರಿಗೋ, ಮಹಾಕಾವ್ಯಕ್ಕೋ ವಸ್ತುವಾಗ ಬಲ್ಲದೆಂಬುದನ್ನು ತೋರಿಸಿಕೊಟ್ಟನು.

ದುರದೃಷ್ಟವೋ, ವಿಧಿಯ ಆಟವೋ ಏನೋ, ಮೇಲೆ ತಿಳಿಸಿದ ಜನರೆಲ್ಲರೂ ಐನ್‌ಸ್ಟೈನರ ಹುಟ್ಟುಮತವಾದ ಯೆಹೂದಿ ಸಂಪ್ರದಾಯಕ್ಕೆ ಸೇರಿದವರಾಗಿದ್ದರು. 'ಮಾನವ ಜನಾಂಗವೆಲ್ಲ ಒಂದು' ಎಂದು ನಂಬಿದ್ದ ಅವರಿಗೆ ಬೇರೆ ಬೇರೆ ಸಂಪ್ರದಾಯಕ್ಕೆ ಸೇರಿದವರೂ ಬೇರೆ ಬೇರೆ ದೇಶಗಳಿಗೆ ಸೇರಿದವರೂ ಗೆಳೆಯರಾಗಿದ್ದಿದ್ದರೆ ಚೆನ್ನಾಗಿರುತ್ತಿತ್ತು. ಆದರೆ ಮಧ್ಯ ಯುರೋಪಿನ ಅಂದಿನ ಸ್ಥಿತಿ ಈ ತರಹ ಗೆಳೆತನಕ್ಕೆ ಅವಕಾಶ ಕೊಡುತ್ತಿರಲಿಲ್ಲ. ಅಲ್ಲಿ ಯಹೂದಿಗಳು ಯಾರಿಗೂ ಬೇಡವಾಗಿದ್ದರು. ಅವರಲ್ಲಿ ಎಂಥ ವಿಭೂತಿ ಪುರುಷನೇ ಇರಲಿ, ಅವನು ಎಷ್ಟೇ ಸ್ನೇಹಭಾವದಿಂದ ಉಳಿದವರಲ್ಲಿಗೆ ಹೋಗಲಿ, ಇತರರು ಅವನನ್ನು ತಮ್ಮವನಂತೆ ಕಾಣುತ್ತಿರಲಿಲ್ಲ. ಪರಿಸ್ಥಿತಿ ಹೀಗಿರುವಲ್ಲಿ, ತಾನಾಗಿ ಯಾರ ಹತ್ತಿರವೂ ಹೋಗದ ಐನ್‌ಸ್ಟೈನರಿಗೆ ಯಾವ ಆತ್ಮೀಯ ಕ್ರೈಸ್ತ ಗೆಳೆಯನೂ ದೊರಕದಿದ್ದುದು ಸಹಜವೇ. ಜರ್ಮ ನರೂ ಪ್ರಾಗ್ ನಗರವನ್ನು ಆಳುತ್ತಿದ್ದ ಆಸ್ಟ್ರಿಯನ್ನರೂ ಒಂದೇ ಬುಡಕಟ್ಟಿಗೆ ಸೇರಿದವರು. ಅವರ ಸಂಸ್ಕೃತಿ, ಭಾಷೆ, ಧರ್ಮ ಇವುಗಳೆಲ್ಲ ಒಂದೇ ಆಗಿದ್ದುವು. ಜರ್ಮನರು ಆಸ್ಟ್ರಿಯಾ ಮತ್ತು ಅದಕ್ಕೆ ಸೇರಿದ ಇತರ ದೇಶಗಳಲ್ಲೂ ನೆಲೆಸಿದ್ದರು. ಎರಡು ರಾಷ್ಟ್ರಗಳವರಿಗೂ ಪರಸ್ಪರ ವಿಶ್ವಾಸ, ತಾವೆಲ್ಲರೂ ಒಂದೇ ಎಂಬ ಭಾವನೆ. ಜರ್ಮನ್ ಸಾಹಿತ್ಯ ಸಂಸ್ಕೃತಿಗಳಲ್ಲಿ ಎರಡು ದೇಶಗಳವರಿಗೂ ಹೆಚ್ಚಿನ ಅಭಿಮಾನ. ಆದ್ದರಿಂದ ಪ್ರಾಗ್ ನಗರದ ಅಧಿಕಾರಿ ವರ್ಗದವರು ಜರ್ಮನ್ ಸಂಸ್ಕೃತಿಯನ್ನೇ ಪ್ರೋತ್ಸಾಹಿಸುತ್ತಿದ್ದರು. ನಗರದ ಪ್ರಜೆಗಳಾದರೋ ಸೆಕ್ ಬುಡಕಟ್ಟಿಗೆ ಸೇರಿದವರು, ಅವರ ಸಂಸ್ಕೃತಿ, ಭಾಷೆಗಳು ಜರ್ಮನ್ ಸಂಸ್ಕೃತಿ, ಭಾಷೆಗಳಿಗೆ ತೀರ ಭಿನ್ನ. ಈ ಕಾರಣದಿಂದ ಸೆಕ್ಕರು ತಮ್ಮ ಆಳರಸರನ್ನು ದ್ವೇಷಿಸುತ್ತಿದ್ದರು. ಈ ದ್ವೇಷದಿಂದ ಕುಪಿತರಾದ ಜರ್ಮನ್ ಅಧಿಕಾರಿಗಳು ಸೆಕ್ಕರನ್ನು ಮತ್ತಷ್ಟು ತಿರಸ್ಕಾರದಿಂದ

ಕಾಣುತ್ತಿದ್ದರು. ಸೆಕ್ಕರು ಪ್ರತೀಕಾರವಾಗಿ ಜರ್ಮನ್ ಪ್ರಭುತ್ವವನ್ನು ಮತ್ತಷ್ಟು ದ್ವೇಷಿಸ ಲಾರಂಭಿಸಿದರು. ಬೀದಿಯಲ್ಲಿ ಹೋಗುತ್ತಿದ್ದ ಜರ್ಮನನನ್ನು ಸೆಕ್ಕನು ನಿಷ್ಕಾರಣವಾಗಿ ಹೀಯಾ ಳಿಸುತ್ತಿದ್ದನು; ಹಾಗೆಯೇ ತನಗೆ ಪರಿಚಯವೇ ಇಲ್ಲದ ಸೆಕ್ಕನನ್ನೂ ಜರ್ಮನನು ನೋಯಿ ಸುತ್ತಿದ್ದನು. ಇಂಥ ಪರಿಸ್ಥಿತಿಯಲ್ಲಿ ಮೊದಲನೇ ಮಹಾಯುದ್ಧದ ಹೊಗೆಯಾಡಲಾರಂಭಿಸಿತು. ಯುದ್ಧಕ್ಕೆ ಮೂಲ ಕಾರಣ ಜರ್ಮನಿಯ ಮತ್ತು ಇಂಗ್ಲೆಂಡಿನ ರಾಜ್ಯದಾಹ. ತಮ ತಮಗೆ ಸಿಕ್ಕಿದಷ್ಟನ್ನು ದೋಚಿಕೊಳ್ಳುವ ಉದ್ದೇಶದಿಂದ ಉಂಟಾಗಿದ್ದ ಜರ್ಮನಿ-ಇಂಗ್ಲೆಂಡ ಜಗಳದಲ್ಲಿ ಸೆಕ್ಕರು ಯಾವ ಆಸಕ್ತಿಯನ್ನೂ ವಹಿಸಲಿಲ್ಲ. ಯುದ್ಧದಲ್ಲಿ ಭಾಗಿಗಳಾಗಿ ಅವರು ಯಾವ ಪುರುಷಾರ್ಥವನ್ನೂ ಸಾಧಿಸಿಕೊಳ್ಳಬೇಕಾಗಿರಲಿಲ್ಲ. ಬದಲಾಗಿ ಅದರಲ್ಲಿ ಭಾಗವಹಿಸಿದರೆ ತಮಗೆ ಅತಿ ಕಷ್ಟ-ನಷ್ಟಗಳೊದಗುವುದೆಂದು ಅವರಿಗೆ ತಿಳಿದಿದ್ದಿತು. ಸೆಕೆಸ್ಲೋವೀಕಿಯವನ್ನು ಕಬಳಿ ಸಿದ್ದ ಆಸ್ಟ್ರಿಯನ್‌ರಾದರೋ ತಮ್ಮ ಆಡಳಿತದ ಅಧಿಕಾರವನ್ನು ಉಪಯೋಗಿಸಿ ಆ ರಾಷ್ಟ್ರ ವನ್ನು ತಮ್ಮ ಕಡೆ ಸೇರಿಸಿಕೊಳ್ಳಬೇಕೆಂದು ಹವಣಿಸುತ್ತಿದ್ದರು. ಹೀಗೆ ನಿಷ್ಕಾರಣವಾಗಿ ತಮಗೆ ಬೇಡದ ಯುದ್ಧದಲ್ಲಿ ತಮ್ಮನ್ನು ಸಿಕ್ಕಿಸುವುದನ್ನು ಕಂಡು ಸೆಕ್ಕರು ಜರ್ಮನರಲ್ಲಿ ಮತ್ತಷ್ಟು ಅಸಮಾಧಾನಗೊಂಡರು. ಪ್ರಾಗ್ ನಗರದ ಪ್ರತಿಯೊಬ್ಬ ಜರ್ಮನನೂ ತಮ್ಮ ಮೇಲೆ ಸಂಶಯದೃಷ್ಟಿ ಇಟ್ಟಿರುವ ಗೂಢಚಾರನೆಂದು ಅವರು ತಿಳಿದಿದ್ದರು. ಈ ರೀತಿಯಲ್ಲಿ ಪ್ರಾಗ್ ಪಟ್ಟಣದಲ್ಲಿನ ನಾಗರಿಕ ಜೀವನ ಎರಡು ಗುಂಪುಗಳಾಗಿ ಒಡೆದು ಹೋಗಿತ್ತು.

ಸಾಮಾಜಿಕ ಜೀವನದಲ್ಲಿ ಕಂಡುಬರುತ್ತಿದ್ದ ಈ ಒಡಕು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಲ್ಲೂ ತೋರಿಬರುತ್ತಿತ್ತು. ವಿಶ್ವವಿದ್ಯಾನಿಲಯದಲ್ಲಿ ಜರ್ಮನ್ ಶಾಖೆ ಮತ್ತು ಸೆಕ್ ಶಾಖೆಗಳೆಂದು ಎರಡು ವಿಭಾಗಗಳಿದ್ದುವು. ಒಂದೊಂದು ಶಾಖೆಗೂ ಬೇರೆ ಬೇರೆ ಅಧಿಕಾರಿಗಳಿದ್ದರು. ಒಂದು ಕಡೆ ಕೆಲಸ ಮಾಡುತ್ತಿದ್ದ ಪ್ರಾಧ್ಯಾಪಕರು ಮತ್ತೊಂದರಲ್ಲಿ ಕೆಲಸ ಮಾಡುತ್ತಿದ್ದ ತಮ್ಮ ಸಹೋದ್ಯೋಗಿಗಳ ಬಳಿಯಲ್ಲಿ ಕೂಡ ಸುಳಿಯುತ್ತಿರಲಿಲ್ಲ. ಜರ್ಮನ್ ಶಾಖೆಯಲ್ಲಿ ಕೆಲಸ ಮಾಡುತ್ತಿದ್ದವರಲ್ಲಿ ಬಹು ಜನರು ಜರ್ಮನರೇ. ಸೆಕ್ ವಿಭಾಗದಲ್ಲಿ ಉದ್ಯೋಗದಲ್ಲಿದ್ದವರೆಲ್ಲಾ ಸೆಕ್ಕರೇ. ಈ ವ್ಯವಸ್ಥೆ ಜರ್ಮನ್ ಮತ್ತು ಸೆಕ್ ಪ್ರಾಧ್ಯಾಪಕರುಗಳಲ್ಲಿ ಮತ್ತಷ್ಟು ಭೇದವನ್ನುಂಟುಮಾಡಿತ್ತು. ಐನ್‌ಸ್ಟೈನರು ನೇಮಕ ವಾದದ್ದು ಜರ್ಮನ್ ಶಾಲೆಯಲ್ಲಿ ಎಲ್ಲ ಪ್ರಾಧ್ಯಾಪಕರಲ್ಲೂ ಸಾಮರಸ್ಯವನ್ನುಂಟುಮಾಡ ಬೇಕೆಂಬ ಉದ್ದೇಶದಿಂದ ಅವರು ಸೆಕ್ ವಿಭಾಗದ ಪ್ರಾಧ್ಯಾಪಕರಲ್ಲೂ ಜರ್ಮನ್ ಪ್ರಾಧ್ಯಾ ಪಕರಲ್ಲೂ ಮಿಳಿತವಾಗಲು ಪ್ರಯತ್ನಪಟ್ಟರು. ಆದರೆ ಈ ಎರಡು ಗುಂಪಿನವರ ಪರಸ್ಪರ ಸಂದೇಹ ಅಸೂಯೆಗಳಿಂದ ಐನ್‌ಸ್ಟೈನರ ಯತ್ನ ಫಲಕಾರಿಯಾಗಲಿಲ್ಲ.

ಪ್ರಾಗ್ ನಗರದ ಜನರಲ್ಲಿ ಪಂಗಡಗಳುಂಟಾಗಿ ಹೇಗೆ ಜನಜೀವನ ಸೇವಿಸುವಷ್ಟು ತಾಳ್ಮೆಯು ಬಹುಜನಕ್ಕಿರಲಿಲ್ಲ. ಬುದ್ಧಿಯನ್ನು ಕೆಡಿಸಿಕೊಂಡ ಅವರ ಸಾಮಾಜಿಕ ಜೀವನವು ಕೆಟ್ಟು ಹೋಗಿದ್ದಿತು. ಸೆಕ್ಕರ ಬಗ್ಗೆ ಇದ್ದ ದ್ವೇಷ ಕೂಡ ಜರ್ಮನರೆಲ್ಲರನ್ನು ಒಂದುಮಾಡಲಿಲ್ಲ. ಜರ್ಮನ್ ಕ್ರೈಸ್ತರಿಗೆ ಜರ್ಮನ್ ಯಹೂದಿಗಳನ್ನು ಕಂಡರೆ ಆಗುತ್ತಿರಲಿಲ್ಲ. ಕ್ರೈಸ್ತರು ತಾವು

ಪ್ರಭುಕುಲಕ್ಕೆ ಸೇರಿದವರೆಂದೂ, ಯುಹೂದಿಗಳು ಹೀನಕುಲದವರೆಂದೂ ಭಾವಿಸಿದ್ದರು. ನಾಜಿ ತತ್ವ ಆಗತಾನೆ ಸುಡೆಟನ್ ಜರ್ಮನ್ ಮನಸ್ಸಿನಲ್ಲಿ ವಿಷಬೀಜವನ್ನು ಬಿತ್ತಿದ್ದಿತು. ಇದರ ಪರಿಣಾಮವಾಗಿ ಯುಹೂದಿಗಳು ಬಹು ನಿಂದೆಗೆ ಒಳಗಾಗಿದ್ದರು. ಒಂದು ಕಡೆ ಸೆಕ್ಕರು ಅವರನ್ನು ಜರ್ಮನ್ ಸಾಮ್ರಾಜ್ಯಶಾಹಿಯ ಪ್ರತಿನಿಧಿಗಳೆಂದು ಹೀನಾಯಿಸುತ್ತಿದ್ದರು. ಮತ್ತೊಂದು ಕಡೆ ಜರ್ಮನ್ ಕ್ರೈಸ್ತರು ಅವರನ್ನು ಅನಾರ್ಯರೆಂದು ತಿರಸ್ಕರಿಸುತ್ತಿದ್ದರು. ಇದೆಲ್ಲವನ್ನೂ ನೋಡಿ ಯುಹೂದಿ ತರುಣರು ಉದ್ರೇಕಗೊಂಡರು. ಇಂಥ ಕೆಲವು ತರುಣರು ಸೇರಿಕೊಂಡು ತಮ್ಮದೇ ಒಂದು ಸಂಸ್ಥೆಯನ್ನು ಸ್ಥಾಪಿಸಿಕೊಂಡರು. ಯುಹೂದಿಗಳಿಗೆ ಆತ್ಮಗೌರವವನ್ನು ತಂದು ಕೊಡುವುದೂ, ಯುಹೂದಿ ಸಾಹಿತ್ಯ, ಕಲೆ ಮತ್ತು ಸಂಸ್ಕೃತಿಗಳನ್ನು ಪುನರುಜ್ಜೀವನಗೊಳಿಸಿ ಅವನ್ನು ಪ್ರಚಾರಕ್ಕೆ ತರುವುದೂ ಸಂಸ್ಥೆಯ ಮುಖ್ಯ ಉದ್ದೇಶಗಳಾಗಿದ್ದವು. ಐನ್‌ಸ್ಟೈನರ ಆಪ್ತ ಸ್ನೇಹಿತರಲ್ಲೊಬ್ಬನಾದ ಬರ್ಗ್‌ಮನ್ ಆ ಸಂಸ್ಥೆಯ ನಾಯಕನಾಗಿದ್ದನು. ಬರ್ಗ್‌ಮನ್ ಐನ್‌ಸ್ಟೈನರನ್ನು ಭೇಟಿಮಾಡಿದಾಗಲೆಲ್ಲಾ ತನ್ನ ಜನರ ಕಷ್ಟಕಾರ್ಪಣ್ಯಗಳನ್ನು ವಿವರಿಸುತ್ತಿದ್ದನು. ಐನ್‌ಸ್ಟೈನರು ತಮ್ಮ ಸೇವಕರಿಂದಲೂ ಯುಹೂದಿ ಜನರಿಗಿರುವ ತೊಂದರೆಗಳನ್ನು ಆಗಾಗ ಕೇಳುತ್ತಿದ್ದರು. ಮಧ್ಯಯುರೋಪಿನಲ್ಲಿ ಯುಹೂದಿಗಳು ಎಂಥ ಅಪಮಾನ ನಿಂದೆಗಳಿಗೊಳಗಾಗಿದ್ದಾರೆ ಎಂಬುದು ಅವರಿಗೆ ಮನದಟ್ಟಾಯಿತು. ಇದರಿಂದ ಐನ್‌ಸ್ಟೈನರಿಗೆ ಅತಿಯಾದ ಯಾತನೆ ಏನೋ ಉಂಟಾಯಿತು; ಆದರೆ ತಮ್ಮ ಜನಾಂಗಕ್ಕೆ ಒದಗಿರುವ ಸಂಕಟವನ್ನು ಪರಿಹರಿಸಲು ಅವರು ತಕ್ಷಣ ಕಾರ್ಯರಂಗಕ್ಕೆ ಇಳಿಯಲಿಲ್ಲ. ತಮ್ಮ ಜನಾಂಗಕ್ಕೆ ಒದಗಿರುವ ದುಃಸ್ಥಿತಿ ಮಾನವನ ಮೌಢ್ಯದ ಫಲಿತಾಂಶವೆಂದೂ, ಆದ್ದರಿಂದ ಯುಹೂದಿಗಳು ಅನುಭವಿಸುತ್ತಿರುವ ಕಷ್ಟನಷ್ಟಗಳು ಒಂದು ಅನಿಷ್ಟಕಾಯಿಲೆಯ ಚಿಹ್ನೆಗಳೇ ಹೊರತು ಕಾಯಿಲೆಯೇ ಅದಲ್ಲವೆಂದೂ, ತಮ್ಮಿಂದ ಸಾಧ್ಯವಾದರೆ ಕಾಯಿಲೆಯನ್ನು ಮೂಲೋತ್ಪಾಟನೆ ಮಾಡಬೇಕಲ್ಲದೆ ಅದರ ಚಿಹ್ನೆಯನ್ನು ಸರಿಪಡಿಸಲೆಳೆಸುವುದು ವೃಥಾ ಶ್ರಮವೆಂದೂ ಅವರು ಬಗೆದರು. ತನ್ನ ಜನಾಂಗದ ಕ್ಷೇಮ ಒಂದನ್ನೇ ಅಲ್ಲದೆ ಇಡೀ ವಿಶ್ವದ ಹಿತವನ್ನೇ ಬಯಸುವ ವ್ಯಕ್ತಿ ಈ ರೀತಿಯಲ್ಲದೆ ಮತ್ತಾವ ಬಗೆಯಲ್ಲಿ ಯೋಚಿಸಿಯಾರು? ಯುಹೂದಿಗಳ ದುಃಸ್ಥಿತಿಗೆ ಕಾರಣವಾದ ಮಾನವನ ಮೌಢ್ಯವೇ ಆಫ್ರಿಕದಲ್ಲಿನ ನಿಗ್ರೋಗಳ ಸ್ಥಿತಿಗೂ ಟಿಬೆಟಿನಲ್ಲಿಯ ದೇಶೀಯರ ದೌರ್ಭಾಗ್ಯಕ್ಕೂ ಕಾರಣವಾಗಿದೆ. ಈ ಮೌಢ್ಯ ತೊಲಗಿದಲ್ಲಿ ಮಧ್ಯಯುರೋಪಿನಲ್ಲಿ ಯುಹೂದಿಗಳ ಸ್ಥಿತಿಯಷ್ಟೇ ಅಲ್ಲದೆ ಪ್ರಪಂಚದಲ್ಲಿನ ಪ್ರತಿಯೊಂದು ಭಾಗದ ದಲಿತ ಜನಾಂಗದ ಸ್ಥಿತಿಯೂ ಉತ್ತಮಗೊಳ್ಳುತ್ತದೆ. ಐನ್‌ಸ್ಟೈನರಂಥ ಜ್ಞಾನಯೋಗಿಗಳು ಇದಕ್ಕೆ ಕೈಹಾಕದಿದ್ದರೆ ಮತ್ತಾರು ಈ ಪ್ರಯತ್ನವನ್ನು ಮಾಡಬಲ್ಲರು?

ಐನ್‌ಸ್ಟೈನರು ತಮ್ಮ ಜನಾಂಗದ ತೊಂದರೆಗಳನ್ನು ಕುರಿತು ಚಿಂತಿಸುವಾಗ ಇಡೀ ಮಾನವಕೋಟಿಯನ್ನು ಕುರಿತು ಯೋಚಿಸುತ್ತಿದ್ದುದು ಸಹಜವಾಗಿದ್ದಂತೆಯೇ, ವಿಶ್ವದಲ್ಲಿ ನಡೆಯುವ ಭೌತಿಕ ಘಟನೆಗಳ ಸಾಮರಸ್ಯವನ್ನೂ ಕುರಿತು ಯೋಚಿಸುತ್ತಿದ್ದರು. ಅದು ಅವರ ಸ್ವಭಾವವಾಗಿತ್ತು. 'ವಿಶ್ವದಲ್ಲಿನ ಭೌತಿಕ ಘಟನೆಗಳೆಲ್ಲಕ್ಕೂ ಸಾಮರಸ್ಯವಿದ್ದರೆ, ಅದೇ ಸಾಮರಸ್ಯವನ್ನು ಇಡೀ ಮಾನವ ಕೋಟಿಯಲ್ಲೂ ತಮ್ಮ ಕಣ್ಣ ಮುಂದಿನ ಸಮಾಜದಲ್ಲೂ

ನಿರೀಕ್ಷಿಸಬಹುದು, ಅಪೇಕ್ಷಿಸಬಹುದು. ಆದ್ದರಿಂದ ತಮ್ಮ ಮೊದಲ ಪ್ರಯತ್ನ ವಿಶ್ವದ ವ್ಯಾಪಾರವನ್ನು ಅರ್ಥಮಾಡಿಕೊಳ್ಳುವುದು ಎಂಬುದು ಅವರ ವಿಚಾರಸರಣಿಯಾಗಿತ್ತು. ಅವರು ತಮ್ಮ ಇಡೀ ಜೀವನವನ್ನು ಈ ಸಾಮರಸ್ಯವನ್ನು ಅರಿಯುವುದಕ್ಕಾಗಿ ಮುಡುಪಾಗಿಟ್ಟರು.

ಪ್ರಾಗ್ ನಗರದ ಗಣ್ಯ ಸಮಾಜದಲ್ಲಿ ಹೇಗೆ ಐನ್‌ಸ್ಟೈನರಿಗೆ ಹೆಚ್ಚಿನ ಪುರಸ್ಕಾರ ದೊರೆಯಲಿಲ್ಲವೊ, ಹಾಗೆಯೇ ವಿದ್ಯಾರ್ಥಿ ಸಮೂಹದಲ್ಲೂ ಅವರಿಗೆ ತಕ್ಕುದಾದ ಮನ್ನಣೆ ದೊರಕಲಿಲ್ಲ. ಇದಕ್ಕೆ ಕಾರಣ ಅವರು ಉಪಾಧ್ಯಾಯ ವೃತ್ತಿಯನ್ನು ನೋಡುತ್ತಿದ್ದ ದೃಷ್ಟಿ. ಎಲ್ಲರಂತೆ ಐನ್‌ಸ್ಟೈನರಿಗೆ ಉಪಾಧ್ಯಾಯನ ಕೆಲಸ ಹಣಗಳಿಸಿಕೊಡುವ ಒಂದು ವೃತ್ತಿಯಾಗಿರಲಿಲ್ಲ. ಅವರ ಅಭಿಪ್ರಾಯದಲ್ಲಿ ಸಾಹಿತಿಯಂತೆ, ಸಂಗೀತಗಾರನಂತೆ ಉಪಾಧ್ಯಾಯ ಒಬ್ಬ ಕಲಾವಿದ. ಎಲ್ಲ ಕಲೆಗಳಂತೆ ಬೋಧನೆಯ ಗುರಿಯೂ ಆನಂದ. ಬೋಧನೆಯಿಂದ ಗುರು-ಶಿಷ್ಯರಿಬ್ಬರಿಗೂ ತೃಪ್ತಿ ಆನಂದಗಳು ದೊರಕಬೇಕು. ಸಾಹಿತಿಗೂ ಅವನು ಬರೆದ ಕಾವ್ಯಗಳನ್ನು ಓದಿದ ರಸಿಕನಿಗೂ ದೊರೆಯುವಂಥ ಆನಂದ ಬೋಧಕನಿಗೂ ವಿದ್ಯಾರ್ಥಿಗೂ ಬೋಧನೆಯಿಂದ ದೊರಕಬೇಕು, ಅಂಥ ಆನಂದವನ್ನು ಕೊಡಲಾರದ ಬೋಧನೆ ವ್ಯರ್ಥ; ಇವು ಐನ್‌ಸ್ಟೈನರ ಭಾವನೆಗಳಾಗಿದ್ದವು. ಆದ್ದರಿಂದ ಅವರು ತಮಗೆ ಕೇವಲ ಆನಂದವನ್ನುಂಟುಮಾಡುವ ಭಾಗಗಳನ್ನು ಮಾತ್ರ ವಿದ್ಯಾರ್ಥಿಗಳಿಗೆ ಹೇಳುತ್ತಿದ್ದರು. ಹಾಗೆ ಹೇಳುವಾಗ ಅವರಿಗೆ ಸ್ಫೂರ್ತಿಯುಂಟಾಗುತ್ತಿತ್ತು. ಅದೇ ಸ್ಫೂರ್ತಿಯನ್ನು ವಿದ್ಯಾರ್ಥಿಗಳಿಗೂ ತುಂಬುತ್ತಿದ್ದರು. ಆದರೆ ಈ ಬೋಧನ ಕ್ರಮವು ಪರೀಕ್ಷೆಯಲ್ಲಿ ಜಯಗಳಿಸುವುದನ್ನು ಮಾತ್ರ ಗುರಿಯಾಗಿಟ್ಟುಕೊಂಡಿದ್ದ ವಿದ್ಯಾರ್ಥಿಗಳಿಗೆ ಹಿಡಿಸುತ್ತಿರಲಿಲ್ಲ. ಅವರಿಗೆ ಬೇಕಾಗಿದ್ದುದು ತರ್ಕಬದ್ಧವಾದ ಭೌತಶಾಸ್ತ್ರ; ಅವರು ತಮ್ಮ ಗುರುಗಳಿಂದ ಅಪೇಕ್ಷಿಸುತ್ತಿದ್ದುದು ನಿಯಮಿತವಾಗಿರುವ ಭೌತಶಾಸ್ತ್ರದ ಭಾಗಗಳನ್ನು ಕ್ರಮವಾಗಿ ಜೋಡಿಸಿ ಹೇಳುವ ಪಾಠಕ್ರಮ, ಸ್ಫೂರ್ತಿಕೊಡುವಂಥ ಭಾಗಗಳನ್ನು ಮಾತ್ರ ಪಾಠಹೇಳುವ ಸ್ವಭಾವದವರಾದ ಐನ್‌ಸ್ಟೈನರಿಗೆ ವಿಶ್ವವಿದ್ಯಾನಿಲಯದವರು ರಚಿಸಿದ್ದ ಪಠ್ಯ ವಿವರಗಳಿಗೆ ಕಟ್ಟುಬೀಳುವುದು ಸಾಧ್ಯವಿರಲಿಲ್ಲ. ಅನೇಕ ಸಂದರ್ಭಗಳಲ್ಲಿ ನೀರಸವಾದ ಭಾಗಗಳನ್ನು ಬಿಟ್ಟುಬಿಡುತ್ತಿದ್ದರು. ಅವು ಪರೀಕ್ಷೆಯ ದೃಷ್ಟಿಯಿಂದ ಮುಖ್ಯವಿರಲಿ, ಇಲ್ಲದಿರಲಿ ಅವರಿಗೆ ಲಕ್ಷ್ಯವಿರಲಿಲ್ಲ. ವಿದ್ಯಾರ್ಥಿಗಳಿಗೆ ಈ ಕ್ರಮ ಸರಿಬೀಳಲಿಲ್ಲ. ಬೋಧಕನಿಗೆ ಸ್ಫೂರ್ತಿಯುಂಟಾಗಿ ಆನಂದವೇ ತನ್ನ ಬೋಧನೆಯ ಗುರಿಯಾದಾಗ ಮಾತ್ರ ಉತ್ಕೃಷ್ಟ ಬೋಧನೆ ಹೊರಹೊಮ್ಮುವುದೆಂದೂ ಹೊರಗಿನ ಬಲಾತ್ಕಾರಕ್ಕಾಗಿ ಸೃಷ್ಟಿಯಾದ ಬೋಧನೆ ಗುದ್ದಿ ಮಾಡಿದ ಹಣ್ಣಿನಂತ ನೀರಸವಾದುದೆಂದೂ ಆ ವಿದ್ಯಾರ್ಥಿಗಳಿಗೆ ಗೋಚರವಾಗಲಿಲ್ಲ. ಈ ಕಾರಣದಿಂದ ಐನ್‌ಸ್ಟೈನರು ಅಧ್ಯಾಪಕರಾಗಿ ಹೆಚ್ಚು ಖ್ಯಾತಿಗಳಿಸಲು ಸಾಧ್ಯವಾಗಲಿಲ್ಲ.

೧೯೧೧ರಲ್ಲಿ ಐನ್‌ಸ್ಟೈನರು ಸಮತೆಯ ತತ್ವ (Principle of equivalence) ಎಂಬ ಬಹು ಮುಖ್ಯವಾದ ಮತ್ತೊಂದು ಸಿದ್ಧಾಂತವನ್ನು ಪ್ರಕಟಿಸಿದರು. ಈ ಪ್ರಕಟನೆಯಿಂದ

ಐನ್‌ಸ್ಟೈನರ ಖ್ಯಾತಿ ಹೊರದೇಶಗಳಲ್ಲಿ ಹರಡಿತು. ಅವರು ಪ್ರಪಂಚದ ಅತ್ಯುತ್ತಮ ಭೌತಶಾಸ್ತ್ರಜ್ಞರೆಂದು ಪರಿಗಣಿಸಲ್ಪಟ್ಟರು.

## ಜೂರಿಚ್ ಔದ್ಯೋಗಿಕ ಶಾಲೆಯಲ್ಲಿ ನೇಮಕ

ದಿನೇ ದಿನೇ ಕೀರ್ತಿ ಶಿಖರವನ್ನೇರುತ್ತಿದ್ದ ತನ್ನ ಕಂದನನ್ನು ತಾಯಿ ಮರೆಯಲಿಲ್ಲ. ಐನ್‌ಸ್ಟೈನರು ಓದಿದ್ದ ಜೂರಿಚ್ ಔದ್ಯೋಗಿಕ ಶಾಲೆಯ ಅಧಿಕಾರಿಗಳಿಗೆ ತಮ್ಮ ಸಂಸ್ಥೆಯ ಹಳೆಯ ವಿದ್ಯಾರ್ಥಿಯೊಬ್ಬನು ವಿಶ್ವವಿಖ್ಯಾತನಾದುದನ್ನು ಕಂಡು ಹೆಮ್ಮೆಯುಂಟಾಯಿತು. ತನ್ನ ಮಾತೃ ಸಂಸ್ಥೆಗೆ ಕೀರ್ತಿ ತಂದ ಐನ್‌ಸ್ಟೈನರನ್ನು ಸನ್ಮಾನಿಸಬೇಕೆಂದು ಔದ್ಯೋಗಿಕ ಶಾಲೆಯವರು ಯೋಚಿಸಿದರು. ಇದರ ಫಲವಾಗಿ ಐನ್‌ಸ್ಟೈನರು ಅಲ್ಲಿ ಭೌತಶಾಸ್ತ್ರ ಪ್ರಾಧ್ಯಾಪಕರಾಗಿ ನೇಮಕವಾದರು. ಔದ್ಯೋಗಿಕ ಸಂಸ್ಥೆಯು ಜೂರಿಚ್ ವಿಶ್ವವಿದ್ಯಾನಿಲಯ ಕ್ಕಿಂತ ಹೆಚ್ಚು ಹೆಸರುಗಳಿಸಿದ್ದರೂ, ಅದು ತಮ್ಮ ಮಾತೃಸಂಸ್ಥೆಯಾಗಿದ್ದರೂ ಅಲ್ಲಿಗೆ ಹೋಗಲು ಐನ್‌ಸ್ಟೈನರಿಗೆ ಮನಸ್ಸಿರಲಿಲ್ಲ. ಪ್ರಾಗ್‌ನಗರದ ವಾತಾವರಣ ಅವರಿಗೆ ಹೆಚ್ಚು ಹಿತಕರವಾಗಿತ್ತು. ಅಲ್ಲಿಯ ವಿಶ್ವವಿದ್ಯಾನಿಲಯದಲ್ಲಿ ಸಂಶೋಧನೆಗೆ ಹೆಚ್ಚು ಸೌಲಭ್ಯ ಗಳಿದ್ದುವು. ಆದರೆ ಅವರ ಪತ್ನಿಗೆ ಮಾತ್ರ ಪ್ರಾಗ್‌ಗಿಂತಲೂ ಜೂರಿಚ್ ಪಟ್ಟಣವೇ ಹೆಚ್ಚು ಪ್ರಿಯವಾಗಿತ್ತು. ತನ್ನ ಹಳೆಯ ಶಾಲೆಯಾದ ಔದ್ಯೋಗಿಕ ಶಾಲೆಯ ಮೇಲೂ ಹೆಚ್ಚು ಆದರವಿತ್ತು. ಆದ್ದರಿಂದ ಆಕೆಯು ಜೂರಿಚ್ ನಗರಕ್ಕೆ ಹೋಗಲು ಬಂದಿರುವ ಅವಕಾಶವನ್ನು ಕಳೆದುಕೊಳ್ಳಲು ಇಷ್ಟಪಡಲಿಲ್ಲ. ತನ್ನ ಪತಿಯನ್ನು ಬಹು ವಿಧದಲ್ಲಿ ಒಲೈಸಿ ಪ್ರಾಗ್ ನಗರವನ್ನು ಬಿಡುವಂತೆ ಮಾಡಿದಳು. ಐನ್‌ಸ್ಟೈನರ ಸಂಸಾರವು ೧೯೧೨ ರಲ್ಲಿ ಪ್ರಾಗ್ ನಗರವನ್ನು ಬಿಟ್ಟಿತು. ಅವರು ಔದ್ಯೋಗಿಕ ಶಾಲೆಯ ಕೆಲಸವನ್ನು ಒಪ್ಪಿ ಕೊಂಡು ಅದನ್ನು ಗೌರವಿಸಿದರು.

ಐನ್‌ಸ್ಟೈನರು ಅಷ್ಟು ಬೇಗ ಪ್ರಾಗ್ ನಗರವನ್ನು ಬಿಟ್ಟಿದ್ದು ಅನೇಕರಿಗೆ ಸಂಶಯ ವನ್ನುಂಟುಮಾಡಿತು. ಕೆಲವರು ಪ್ರಾಗ್ ವಿಶ್ವವಿದ್ಯಾನಿಲಯ ಅಧ್ಯಾಪಕರ ಕಿರುಕುಳವೇ ಐನ್‌ಸ್ಟೈನರು ಆ ಸಂಸ್ಥೆಯನ್ನು ಬಿಡಲು ಕಾರಣವೆಂದು ಭಾವಿಸಿದರು. ಮತ್ತೆ ಕೆಲವರು ಯೆಹೂದಿಗಳಾದ ಐನ್‌ಸ್ಟೈನರನ್ನು ಸಂಸ್ಥೆಯ ಅಧಿಕಾರಿಗಳೂ ನೌಕರರೂ ತುಚ್ಛವಾಗಿ ಕಾಣುತ್ತಿದ್ದುದರಿಂದ ಅವರು ಸಂಸ್ಥೆಯನ್ನೇ ಬಿಡಬೇಕಾಯಿತೆಂದು ಆಡಿಕೊಂಡರು. ಅನಾ ವಶ್ಯಕವಾಗಿ ತಮ್ಮ ಸ್ನೇಹಿತರ ಆರೋಪಣೆಗೆ ಗುರಿಯಾಗಿರುವುದನ್ನು ಕಂಡು ಐನ್‌ಸ್ಟೈನರಿಗೆ ವ್ಯಥೆಯಾಯಿತು. ಬುಡವಿಲ್ಲದ ಆರೋಪಣೆಗಳನ್ನು ನಿಲ್ಲಿಸಬೇಕೆಂಬ ಉದ್ದೇಶದಿಂದ ಅವರು ಕೂಡಲೆ ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೆ ಒಂದು ಬಹಿರಂಗ ಪತ್ರವನ್ನು ಬರೆದರು. ಅದರಲ್ಲಿ ತಾವು ಪ್ರಾಗ್ ನಗರವನ್ನು ಬಿಡಬೇಕಾದ ಸಂದರ್ಭವನ್ನು ವಿವರಿಸಿದ್ದರು. ಇದ ರಿಂದ ಜನರ ಮನಸ್ಸಿನಲ್ಲಿದ್ದ ಸಂಶಯಗಳು ತೊಲಗಿದುವು. ವಿಶ್ವವಿದ್ಯಾನಿಲಯದ ಅಧಿಕಾರಿ ಗಳ ಮನಸ್ಸು ಸಮಾಧಾನವಾಯಿತು.

ಜೂರಿಚ್ ನಗರದಲ್ಲಿ ಐನ್‌ಸ್ಟೈನರು ನಿಂತಿದ್ದು ಕೇವಲ ಹದಿನೆಂಟು ತಿಂಗಳಕಾಲ. ಈ ಅಲ್ಪಾವಧಿಯಲ್ಲೇ ಅವರು ತಮ್ಮ ಮಾತೃಸಂಸ್ಥೆಯ ಗೌರವವನ್ನು ಬಹುಮಟ್ಟಿಗೆ ಹೆಚ್ಚಿಸಿದರು. ಅವರು ಜೂರಿಚ್‌ಗೆ ಹೋದ ಹೊಸದರಲ್ಲಿ ವಿಯನ್ನಾ ಪಟ್ಟಣದಲ್ಲಿ ಒಂದು ವಿಜ್ಞಾನ ಪರಿಷತ್ತು ನಡೆಯಿತು. ಇದರಲ್ಲಿ ಭಾಗವಹಿಸಲು ಐನ್‌ಸ್ಟೈನರಿಗೆ ಆಹ್ವಾನ ಹೋಯಿತು. ಜರ್ಮನಿಯ ಪ್ರಖ್ಯಾತ ವಿಜ್ಞಾನಿಗಳೆಲ್ಲಾ ಈ ಪರಿಷತ್ತಿನಲ್ಲಿ ಭಾಗವಹಿಸುವವರಾಗಿದ್ದರು. ಪಂಡಿತ ಜಗತ್ತಿಗೆ ತಮ್ಮ ಸಿದ್ಧಾಂತಗಳೆಲ್ಲವನ್ನೂ ವಿವರಿಸಬಹುದೆಂಬ ಉದ್ದೇಶದಿಂದ ಐನ್‌ಸ್ಟೈನರು ಪರಿಷತ್ತಿಗೆ ಹೋಗಲು ನಿಶ್ಚೈಸಿದರು. ಅವರ ಸಿದ್ಧಾಂತವನ್ನು ಅವರ ಬಾಯಿಂದಲೇ ಕೇಳಿ ಅರ್ಥಮಾಡಿಕೊಳ್ಳಲು ವಿಜ್ಞಾನಿಗಳು ತವಕಗೊಂಡಿದ್ದರು. ಆದ್ದರಿಂದ ಐನ್‌ಸ್ಟೈನರು ಭಾಷಣಮಾಡಿದ ಗೋಷ್ಠಿಯಲ್ಲಿ ಜನ ಕಿಕ್ಕಿರಿದು ನೆರೆದಿದ್ದರು. ಐನ್‌ಸ್ಟೈನರು ತಮ್ಮ ಸಿದ್ಧಾಂತವನ್ನು ಆದಷ್ಟು ಸರಳವಾಗಿ ರಸವತ್ತಾಗಿ ಗೋಷ್ಠಿಗೆ ವಿವರಿಸಿದರು. ಅಲ್ಲಿ ಸೇರಿದ್ದ ಪಂಡಿತರಿಗೆ ಅವರ ವಿಷಯದಲ್ಲಿ ಅಸಾಧಾರಣವಾದ ಗೌರವ ಉಂಟಾಯಿತು. ವಿಜ್ಞಾನ ಪರಿಷತ್ತಿನಲ್ಲೆಲ್ಲ ಅವರದೆ ಮಾತಾಯಿತು. ಜೂರಿಚ್ ಔದ್ಯೋಗಿಕ ಶಾಲೆಗೆ ಆದರ ಪ್ರಾಧ್ಯಾಪಕರು ಪಡೆದ ಜಯವನ್ನು ಕಂಡು ಹೆಮ್ಮೆಯುಂಟಾಯಿತು. ಹೀಗೆ ಐನ್‌ಸ್ಟೈನರು ತಮ್ಮ ಮಾತೃ ಸಂಸ್ಥೆಯ ಋಣವನ್ನು ಉತ್ತಮ ರೀತಿಯಲ್ಲಿ ತೀರಿಸಿದರು.

ಜೂರಿಚ್ ಔದ್ಯೋಗಿಕ ಶಾಲೆಯ ಪ್ರಾಧ್ಯಾಪಕರಾಗಿದ್ದಾಗ ಐನ್‌ಸ್ಟೈನರು ಭಾಗವಹಿಸಿದ ಮತ್ತೊಂದು ಸಮ್ಮೇಳನವೆಂದರೆ 'ಸಾಲ್ವೇ ವಿಜ್ಞಾನ ಪರಿಷತ್ತು'. ಈ ಸಮ್ಮೇಳನವನ್ನು ಸಾಲ್ವೆ ಎಂಬ ಮಹನೀಯನು ಏರ್ಪಡಿಸಿದ್ದುದರಿಂದ ಇದಕ್ಕೆ ಆ ಹೆಸರು ಬಂದಿತು. ಸಾಲ್ವೆ ಎಂಬುವನು ಬೆಲ್ಜಿಯಂ ದೇಶದ ಅತ್ಯಂತ ಧನಿಕ ಕೈಗಾರಿಕೋದ್ಯಮಿ. ಆತನಿಗೆ ವಿಜ್ಞಾನಶಾಸ್ತ್ರಗಳಲ್ಲಿ ಬಹು ಹೆಚ್ಚಿನ ಆಸಕ್ತಿ. ಆಗಾಗ್ಗೆ ವಿಜ್ಞಾನಿಗಳ ಸಮ್ಮೇಳನಗಳನ್ನು ಕರೆದು ಅಲ್ಲಿ ತನ್ನ ಅಭಿಪ್ರಾಯಗಳನ್ನು ಅವರೊಂದಿಗೆ ವಿನಿಮಯ ಮಾಡಿಕೊಳ್ಳುತ್ತಿದ್ದನು. ಯುರೋಪಿನ ಮುಖ್ಯ ವೈಜ್ಞಾನಿಕರೆಲ್ಲರೂ ಸಾಮಾನ್ಯವಾಗಿ ಸಾಲ್ವೆ ಮಹಾಶಯನು ಏರ್ಪಡಿಸುತ್ತಿದ್ದ ಸಮ್ಮೇಳನಗಳಲ್ಲಿ ಭಾಗವಹಿಸುತ್ತಿದ್ದರು. ಸಾಲ್ವೆಯು ಸಮ್ಮೇಳನದ ಎಲ್ಲ ಖರ್ಚನ್ನೂ ತಾನೆ ವಹಿಸುತ್ತಿದ್ದನು. ತಾನು ಏರ್ಪಡಿಸುವ ಸಮ್ಮೇಳನಗಳಿಗೆಲ್ಲಾ ಐನ್‌ಸ್ಟೈನರಿಗೆ ಆತನು ತಪ್ಪದೆ ಆಹ್ವಾನವನ್ನು ಕಳಿಸುತ್ತಿದ್ದನು. ಐನ್‌ಸ್ಟೈನರು ಈ ಸಮ್ಮೇಳನಗಳಿಗೆ ಹೋಗಿ ಅಲ್ಲಿ ತಮ್ಮ ನೂತನ ಸಂಶೋಧನೆಗಳನ್ನು ವಿವರಿಸುತ್ತಿದ್ದರು. ಸಮತೆಯ ತತ್ವವನ್ನು ಇಂಥ ಸಮ್ಮೇಳನ ಒಂದರಲ್ಲಿ ವಿವರಿಸಿದಾಗ ಸಭಿಕರು ಐನ್‌ಸ್ಟೈನರ ಪ್ರತಿಭೆಯನ್ನು ಕಂಡು ಅವಾಕ್ಕಾದರು. ಐನ್‌ಸ್ಟೈನರ ಕೀರ್ತಿ ಮತ್ತಷ್ಟು ಬೆಳಗತೊಡಗಿತು.

### ಜರ್ಮನಿಯಿಂದ ಕರೆ

ಯುರೋಪಿನಲ್ಲಿ ಆಗತಾನೇ ಜರ್ಮನಿ ಪ್ರಬಲ ರಾಷ್ಟ್ರವಾಗಿ ಬೆಳೆಯಲಾರಂಭಿಸಿತ್ತು. ಎರಡನೇ ವಿಲ್‌ಹೆಲ್ಮ್ ಆಗ ಜರ್ಮನಿಯ ಕೈಸರ್ ಆಗಿದ್ದನು. ಆವನ ನೇತೃತ್ವದಲ್ಲಿ ಜರ್ಮನಿಯು

ಸೈನ್ಯಶಕ್ತಿಯೂ, ಕೈಗಾರಿಕೆಗಳೂ ವಿಪುಲವಾಗಿ ಬೆಳೆದುವು. ಮಧ್ಯಯುರೋಪಿನ ಉಳಿದೆಲ್ಲ ದೇಶಗಳಿಗಿಂತ ಜರ್ಮನಿ ಈ ಎರಡು ವಿಷಯಗಳಲ್ಲಿ ಮುಂದುವರಿದಿತ್ತು. ಅಷ್ಟೇ ಅಲ್ಲ ಪ್ರಪಂಚದ ಅತ್ಯಂತ ಪರಾಕ್ರಮಶಾಲಿ ದೇಶವಾಗಿದ್ದಿತು. ಆದರೆ ಮೂಲಭೂತ ವೈಜ್ಞಾನಿಕ ಸಂಶೋಧನೆಗಳಲ್ಲಿ ಜರ್ಮನಿ ಅಷ್ಟು ಪ್ರಗತಿಯನ್ನು ಪಡೆದಿರಲಿಲ್ಲ. ಎಲ್ಲ ಕ್ಷೇತ್ರಗಳಲ್ಲಿಯೂ ಜರ್ಮನಿಯನ್ನು ಅತ್ಯಂತ ಶ್ರೇಷ್ಠ ರಾಷ್ಟ್ರವನ್ನಾಗಿ ಮಾಡಲು ಪ್ರಯತ್ನ ಮಾಡುತ್ತಿದ್ದ ಕೈಸರನು ಈ ಕೊರತೆಯನ್ನು ನೀಗಿಸಲು ನಿರ್ಧರಿಸಿದನು. ಜರ್ಮನಿಯು ವೈಜ್ಞಾನಿಕ ವಿಷಯಗಳಲ್ಲಿ ಹೆಚ್ಚು ಪ್ರಗತಿಯನ್ನು ಪಡೆದರೆ ಸಾಂಸ್ಕೃತಿಕ ದೃಷ್ಟಿಯಿಂದಲೂ, ನೂತನ ಶಸ್ತ್ರಾಸ್ತ್ರಗಳನ್ನು ತಯಾರಿಸುವುದರಲ್ಲೂ ಹಿರಿಯ ಸ್ಥಾನವನ್ನು ಗಳಿಸುವುದೆಂದು ಆತನ ಅಭಿಮತವಾಗಿತ್ತು. ಈ ಕಾರಣಗಳಿಂದ ಆವನು 'ಕೈಸರ್ ವಿಲ್‌ಹೆಲ್ಮ್ ಸಂಶೋಧನಾಲಯ' ಎಂಬ ಒಂದು ಸಂಶೋಧನಾಲಯವನ್ನು ಸ್ಥಾಪಿಸಿದನು. ದೇಶದ ಹಣವಂತರೂ ಪ್ರಮುಖ ವ್ಯಾಪಾರಿಗಳೂ, ಕಾರ್ಖಾನೆಗಳ ಮಾಲೀಕರೂ ಈ ಸಂಸ್ಥೆಗೆ ಧಾರಾಳವಾಗಿ ಧನಸಹಾಯ ಮಾಡುತ್ತಿದ್ದರು. ಸಂಸ್ಥೆಗೆ ಅಡಾಲ್ಫ್ ಹಾರ್‌ನಾಕ್ (Adulf Harnack) ಎಂಬ ಪ್ರಖ್ಯಾತ ದಾರ್ಶನಿಕನು ಅಧ್ಯಕ್ಷನಾಗಿದ್ದನು.

ಸಂಸ್ಥೆಯ ವಿವಿಧ ಶಾಖೆಗಳಿಗೆ ಅತ್ಯಂತ ದಕ್ಷರಾದ ಪಂಡಿತರನ್ನು ಆರಿಸಬೇಕೆಂಬುದು ಅಧಿಕಾರಿವರ್ಗದ ಪ್ರಬಲವಾದ ಇಚ್ಛೆ. ಆದ್ದರಿಂದ ಭೌತಶಾಸ್ತ್ರ ಶಾಖೆಗೆ ಮುಖ್ಯಸ್ಥರನ್ನು ಆರಿಸುವ ಸಮಯ ಬಂದಾಗ ಅಧಿಕಾರಿಗಳಿಗೆ ಐನ್‌ಸ್ಟೈನರ ಕಡೆಗೆ ಗಮನಹೋಯಿತು. ಭೌತಶಾಸ್ತ್ರ ಶಾಖೆಗೆ ಮ್ಯಾಕ್ಸ್ ಪ್ಲಾಂಕ್ (Max Plank) ಮತ್ತು ವಾಲ್ಟರ್ ನರ್ನ್‌ಸ್ಟ್ (Walter Narnst) ಎಂಬವರು ಆಧಾರಸ್ತಂಭಗಳಂತಿದ್ದರು. ಇವರಿಬ್ಬರೂ ಅಂದಿನ ಕಾಲಕ್ಕೆ ಪ್ರಪಂಚದಲ್ಲೇ ವಿಖ್ಯಾತರಾಗಿದ್ದ ಭೌತಶಾಸ್ತ್ರಜ್ಞರಾಗಿದ್ದು ಜರ್ಮನಿಯ ಹೆಮ್ಮೆಯಾಗಿದ್ದರು. ಐನ್‌ಸ್ಟೈನರಿಗೆ ಈ ಮಹಾಶಯರಿಬ್ಬರೂ ಆತ್ಮೀಯರಾಗಿದ್ದರು; ಐನ್‌ಸ್ಟೈನರ ಪಾಂಡಿತ್ಯ ಶಕ್ತಿಗಳು ಇವರಿಬ್ಬರಿಗೂ ಗೊತ್ತಿದ್ದುವು. ಆದ್ದರಿಂದ ಐನ್‌ಸ್ಟೈನರನ್ನೇ ಸಂಸ್ಥೆಯ ಭೌತ ಶಾಸ್ತ್ರ ಶಾಖೆಯ ಮುಖ್ಯಾಧಿಕಾರಿಯನ್ನಾಗಿ ಮಾಡಬೇಕೆಂದು ಇವರು ಅಧಿಕಾರಿ ವರ್ಗಕ್ಕೆ ಸೂಚಿಸಿದರು. ಅಧಿಕಾರಿ ವರ್ಗವು ಈ ಸಲಹೆಯನ್ನು ಒಪ್ಪಿತು. ಸಂಸ್ಥೆಗೆ ಸೇರುವಂತೆ ಪ್ಲಾಂಕ್ ಮತ್ತು ನರ್ನ್‌ಸ್ಟ್‌ರ ಮೂಲಕ ಐನ್‌ಸ್ಟೈನರಿಗೆ ಆಹ್ವಾನವು ಹೋಯಿತು.

ಜರ್ಮನಿ ದೇಶದ ಸೈನಿಕ ವಾತಾವರಣವು ಸರಿಬೀಳದೆ ಬಾಲ್ಯದಲ್ಲೇ ಅಲ್ಲಿಂದ ಓಡಿ ಬಂದಿದ್ದ ಐನ್‌ಸ್ಟೈನರಿಗೆ ಮತ್ತೊಮ್ಮೆ ಆ ದೇಶದಲ್ಲಿ ಕಾಲಿಡಲು ಮನಸ್ಸಿರಲಿಲ್ಲ. ಆದರೆ ಅಲ್ಲಿ ಸಂಶೋಧನೆಗೆ ದೊರೆಯುತ್ತಿದ್ದ ಅನುಕೂಲಗಳು ಮತ್ತೆಲ್ಲಿಯೂ ದೊರೆಯದಿದ್ದುದರಿಂದ ಅದನ್ನು ಕೂಡಲೇ ನಿರಾಕರಿಸಲೂ ಮನಸ್ಸಾಗಲಿಲ್ಲ. ಮ್ಯಾಕ್ಸ್ ಪ್ಲಾಂಕ್‌ರಂಥ ಘನಪಂಡಿತರ ಅಪ್ಪಟ ಸ್ನೇಹವೂ ಅವರನ್ನು ಅಲ್ಲಿಗೆ ಆಕರ್ಷಿಸಿತು. ಜೊತೆಗೆ ಐನ್‌ಸ್ಟೈನರ ಬಂಧು ಬಳಗದವರೆಲ್ಲ ಜರ್ಮನಿಯಲ್ಲೇ ವಾಸಿಸುತ್ತಿದ್ದರು. ಈ ಅನುಕೂಲಗಳನ್ನು ಉಪಯೋಗಿಸಿ ಕೊಂಡು ತಮ್ಮ ಧ್ಯೇಯವನ್ನು ಸಾಧಿಸುವ ಉತ್ಸಾಹದಲ್ಲಿ ಸಾಮ್ರಾಜ್ಯಶಾಹಿ ಸರ್ಕಾರದ

ನೌಕರನಾಗಿ ಸೇರಿಕೊಂಡು ಆ ದುಷ್ಟಶಕ್ತಿಗೆ ಮತ್ತಷ್ಟು ಬೆಂಬಲಕೊಡುವುದೆ? ಈ ಪ್ರಶ್ನೆ ಐನ್‌ಸ್ಟೈನರ ಮನಸ್ಸನ್ನು ಬಾಧಿಸತೊಡಗಿತು. ಅವರು ಅನೇಕ ದಿನಗಳವರೆಗೆ ಯೋಚಿಸಿದರು. ಕೊನೆಗೆ ಜರ್ಮನಿಗೆ ಹೋದರೆ ದೊರೆಯುವ ಅನುಕೂಲಗಳೇ ಹೆಚ್ಚೆಂದು ಅವರಿಗೆ ತೋಚಿತು. ಜರ್ಮನಿಗೆ ಹೋಗಲು ನಿರ್ಧರಿಸಿದರು. ಈ ನಿರ್ಧಾರದಂತೆ ಅವರು ೧೯೧೩ರಲ್ಲಿ ಜರ್ಮನಿಗೆ ಹೋಗಿ ಹೊಸ ಅಧಿಕಾರವನ್ನು ಸ್ವೀಕರಿಸಿದರು.

ಅಂದು ಜರ್ಮನಿಯಲ್ಲಿದ್ದ ಪದ್ಧತಿಯಂತೆ ಐನ್‌ಸ್ಟೈನರು ವಿಲ್‌ಹೆಲ್ಮ್ ಸಂಶೋಧನಾಲಯದ ಕೆಲಸದ ಜೊತೆಗೆ ನಾಲ್ಕಾರು ಗೌರವಸ್ಥಾನಗಳನ್ನು ವಹಿಸಬೇಕಾಗಿದ್ದಿತು. ಇಂಥವುಗಳಲ್ಲಿ ಬಹು ಮುಖ್ಯವಾದವು ಬರ್ಲಿನ್ ವಿಶ್ವವಿದ್ಯಾನಿಲಯದ ಗೌರವಾಧ್ಯಾಪಕರ ಸ್ಥಾನ ಮತ್ತು ಪ್ರಷ್ಯದ ವಿಜ್ಞಾನ ಅಕಾಡಮಿಯ ಸದಸ್ಯತ್ವ. ಐನ್‌ಸ್ಟೈನರು ಜರ್ಮನಿಯಲ್ಲಿ ಕೆಲಸಕ್ಕೆ ಸೇರುವ ಮೊದಲೇ ಈ ಎರಡು ಸಂಸ್ಥೆಗಳಿಗೂ ಸದಸ್ಯರಾಗಬೇಕೆಂದು ಜರ್ಮನ ಸರ್ಕಾರಕ್ಕೂ ಐನ್‌ಸ್ಟೈನರಿಗೂ ಒಪ್ಪಂದವಾಗಿತ್ತು. ಅದರಂತೆ ಅವರು ತಮಗೆ ಗೊತ್ತು ಮಾಡಲ್ಪಟ್ಟ ಎಲ್ಲ ಅಧಿಕಾರಗಳನ್ನೂ ವಹಿಸಿಕೊಂಡರು. ಆ ಕಾಲದಲ್ಲಿ ಜರ್ಮನಿಯ ಪ್ರತಿಯೊಬ್ಬ ವಿದ್ವಾಂಸನೂ ಈ ಸ್ಥಾನಗಳನ್ನು ಗಳಿಸುವುದೇ ತನ್ನ ಜೀವನದ ಧ್ಯೇಯವೆಂದು ಭಾವಿಸಿದ್ದನು. ಹೀಗೆ ಅನೇಕರಿಗೆ ಪ್ರಯತ್ನಪಟ್ಟರೂ ದೊರೆಯದಿದ್ದ ಗೌರವವು ಐನ್‌ಸ್ಟೈನರಿಗೆ ಆಯಾಚಿತವಾಗಿ ದೊರೆಯಿತು. ಅಕಾಡಮಿಯ ಸದಸ್ಯರಾದುದರಿಂದ ಅವರಿಗೆ ಅನೇಕ ವಿದ್ಯಾ ಮನ್ನಣೆಗಳೂ ಬರ್ಲಿನ್ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾದ್ದರಿಂದ ಅನೇಕ ಪಂಡಿತೋತ್ತಮರ ಸಹಾಯವೂ ದೊರಕಿದುವು.

ಬರ್ಲಿನ್ ವಿಶ್ವವಿದ್ಯಾನಿಲಯದಲ್ಲಿ ಐನ್‌ಸ್ಟೈನರು ಯಾವ ಕಟ್ಟುಪಾಡಿಗೂ ಒಳಗಾಗಿರಲಿಲ್ಲ. ಅವರಿಗೆ ಅಲ್ಲಿ ಸಂಪೂರ್ಣ ಸ್ವಾತಂತ್ರ್ಯವಿತ್ತು. ಅಲ್ಲಿ ಅವರು ಇಷ್ಟಬಂದಾಗ ಪಾಠ ಹೇಳಬಹುದಾಗಿತ್ತು. ವಿಶ್ವವಿದ್ಯಾನಿಲಯದ ಆಡಳಿತವಾಗಲೀ ಅದು ನಡೆಸುತ್ತಿದ್ದ ಪರೀಕ್ಷೆಗಳಾಗಲೀ ಅದು ಮಾಡಬಹುದಾದ ನೇಮಕಗಳ ವಿಷಯವೇ ಆಗಲೀ ಅವರಿಗೆ ಸಂಬಂಧಪಟ್ಟಿರಲಿಲ್ಲ, ಪರೀಕ್ಷೆ, ಪಠ್ಯವಿವರ ಮೊದಲಾದ ವಿಷಯಗಳ ಸಂಪರ್ಕವೇ ಐನ್‌ಸ್ಟೈನರಿಗೆ ಬೇಕಾಗಿರಲಿಲ್ಲ. ಸಂಶೋಧನೆಯನ್ನು ಮುಂದುವರಿಸುವುದಕ್ಕೆ ಬೇಕಾದ ಇಂಥ ಸ್ವಾತಂತ್ರ್ಯ ದೊರಕುವ ಸಂಭವವಿಲ್ಲದಿದ್ದಲ್ಲಿ ಅವರು ತಮ್ಮ ಹೊಸ ನೌಕರಿಯನ್ನು ಒಪ್ಪಿಕೊಳ್ಳುತ್ತಲೇ ಇರಲಿಲ್ಲ.

ಪ್ರಷ್ಯದ ವಿಜ್ಞಾನ ಅಕಾಡಮಿಯಲ್ಲಿ ಎಪ್ಪತ್ತು ಮಂದಿ ಮುಖ್ಯ ಸದಸ್ಯರೂ ಇನ್ನೂರು ಮಂದಿ ಸಾಧಾರಣ ಸದಸ್ಯರೂ ಇದ್ದರು. ಭೌತಶಾಸ್ತ್ರ, ಗಣಿತಶಾಸ್ತ್ರ, ತತ್ತ್ವಶಾಸ್ತ್ರ ಮತ್ತು ಇತಿಹಾಸ–ಇವುಗಳಲ್ಲಿ ಸಂಶೋಧನೆ ನಡೆಸುವುದೇ ಈ ಸಂಸ್ಥೆಯ ಮುಖ್ಯ ಉದ್ದೇಶವಾಗಿತ್ತು. ಐನ್‌ಸ್ಟೈನರು ಸಂಸ್ಥೆಯ ಮುಖ್ಯ ಸದಸ್ಯರಲ್ಲೊಬ್ಬರಾದರು.

ಐನ್‌ಸ್ಟೈನರು ಜೂರಿಚ್ ನಗರವನ್ನು ಬಿಟ್ಟು ಜರ್ಮನಿಗೆ ಬರುವ ಸಮಯದಲ್ಲಿ ಅವರ ದಾಂಪತ್ಯಜೀವನ ಅಷ್ಟು ಹಿತಕರವಾಗಿರಲಿಲ್ಲ. ಸಂಸಾರ ಒಡೆಯುವಷ್ಟು ವಿರಸ

ಬೆಳೆದಿತ್ತು. ಜೂರಿಚ್ ನಗರವನ್ನು ಬಿಡುವ ನಿರ್ಧಾರ ಈ ವಿರಸವನ್ನು ಮತ್ತಷ್ಟು ಹೆಚ್ಚಿಸಿತು. ಅವರ ಪತ್ನಿಗೆ ಜೂರಿಚ್ ಪಟ್ಟಣದ ಮೇಲಿದ್ದ ವ್ಯಾಮೋಹವೂ ಈ ವಿರಸವೂ ಅನಿಷ್ಟ ರೂಪವನ್ನು ತಾಳಿದವು. ಆಕೆ ಪತಿಯೊಡನೆ ಬರ್ಲಿನ್‌ಗೆ ಹೋಗಲು ನಿರಾಕರಿಸಿದಳು. ಐನ್‌ಸ್ಟೈನರ ಸಾಂಸಾರಿಕ ಜೀವನ ತಾತ್ಕಾಲಿಕವಾಗಿ ಕೊನೆಗೊಂಡಿತು. ಬರ್ಲಿನ್ನಿಗೆ ಹೋಗುವು ದರಿಂದ ತನ್ನ ಧ್ಯೇಯ ಸಾಧನೆಗೆ ಅನುಕೂಲವಾಗುವುದೆಂದು ಮನಸ್ಸಿಗೆ ಸಮಾಧಾನ ತಂದು ಕೊಂಡು ಐನ್‌ಸ್ಟೈನರು ಜೂರಿಚ್ ಪಟ್ಟಣವನ್ನು ಬಿಟ್ಟುಹೋದರು.

ಹಲವು ಮೇಧಾವಿಗಳಿಗೆ ವರ್ಷಗಟ್ಟಲೆ ಪ್ರಯತ್ನಪಟ್ಟರೂ ದೊರೆಯದಿದ್ದ ಅಕಾ ಡಮಿಯ ಸದಸ್ಯತ್ವ ಐನ್‌ಸ್ಟೈನರಿಗೆ ದೊರಕಿದಾಗ ಅವರಿಗೆ ಕೇವಲ ಮೂವತ್ತನಾಲ್ಕು ವರ್ಷ. ಇಂಥ ಸಣ್ಣ ವಯಸ್ಸಿನಲ್ಲಿ ಅಷ್ಟು ದೊಡ್ಡ ಪಟ್ಟ ದೊರಕಿದರೆ ಮನುಷ್ಯನು ಸಾಮಾನ್ಯವಾಗಿ ಮದಿಸುತ್ತಾನೆ. ಆದರೆ ಹೊಸ ನೌಕರಿಯಿಂದ ಬಂದ ಕೀರ್ತಿ-ಪ್ರತಿಷ್ಠೆ ಗಳಾವುವೂ ಐನ್‌ಸ್ಟೈನರ ಸ್ವಭಾವವನ್ನು ಕೆಡಿಸಲಿಲ್ಲ. ಅವರು ಬರ್ನ್, ಪ್ರಾಗ್ ಮತ್ತು ಜೂರಿಚ್ ನಗರಗಳಲ್ಲಿ ಹೇಗೆ ಸರಳ ಜೀವಿಗಳಾಗಿದ್ದರೋ, ಹಾಗೆಯೇ ಬರ್ಲಿನ್‌ನಲ್ಲೂ ಇದ್ದರು. ಎಲ್ಲರಲ್ಲಿಯೂ ವಿಶ್ವಾಸದಿಂದ ನಡೆಯುವ ಸೌಜನ್ಯ, ಸ್ಥಾನಮಾನಕ್ಕೆ ಪ್ರಾಧಾನ್ಯತೆ ಕೊಡದೆ ವ್ಯಕ್ತಿತ್ವಕ್ಕೆ ಗೌರವ ಕೊಡುವ ಮಾನವಪ್ರೇಮ, ಬಾಹ್ಯಾಡಂಬರ ತಿರಸ್ಕಾರ, ಪ್ರಾಪಂಚಿಕ ಜೀವನದಲ್ಲಿ ಒಂದು ವಿಧವಾದ ಅನಾಸಕ್ತಿ—ಈ ಗುಣಗಳು ಐನ್‌ಸ್ಟೈನರಲ್ಲಿ ರಕ್ತ ಗತವಾಗಿದ್ದವು. ಅವರ ಪ್ರತಿಯೊಂದು ಚರ್ಯೆಯಲ್ಲಿಯೂ ಈ ಗುಣಗಳು ಪ್ರಕಟವಾಗು ತ್ತಿದ್ದುವು. ವಿಶ್ವವಿದ್ಯಾನಿಲಯದ ಆಡಳಿತದ ವಿಚಾರವಾಗಿ ಮಾತು ಬಂದಾಗ, ಅವರು ತಮ್ಮ ಸಹೋದ್ಯೋಗಿಗಳಿಂದ ದೂರವಾಗಿಬಿಡುತ್ತಿದ್ದರು. ಆಡಳಿತಕ್ಕೆ ಸಂಬಂಧಪಟ್ಟ ಯಾವ ಸಭೆ ಸಮಿತಿಗಳಲ್ಲೂ ಅವರು ಭಾಗವಹಿಸುತ್ತಿರಲಿಲ್ಲ. ಭೌತಶಾಸ್ತ್ರಕ್ಕೆ ಸಂಬಂಧಪಟ್ಟ ವಿದ್ವತ್ ಸಭೆಗಳಲ್ಲಿ ಮಾತ್ರ ಅವರು ಪಾತ್ರವಹಿಸುತ್ತಿದ್ದರು. ಅಲ್ಲಿನ ಚರ್ಚೆಗಳಲ್ಲಿ ಭಾಗವಹಿಸಿ ಸಭೆಗೆ ಒಂದು ಕಳೆಯನ್ನು ಕೊಡುತ್ತಿದ್ದರು. ೧೯೧೩ರಿಂದ ೧೯೩೩ರ ವರೆಗೆ ಬರ್ಲಿನ್ ವಿಶ್ವವಿದ್ಯಾ ನಿಲಯದ ಭೌತಶಾಸ್ತ್ರದ ಶಾಖೆಯಲ್ಲಿ ನಡೆಯುತ್ತಿದ್ದ ಸಾಪ್ತಾಹಿಕ ಸಭೆಗಳಲ್ಲಿ ಭಾಗವಹಿಸು ತ್ತಿದ್ದವರೇ ಪುಣ್ಯವಂತರು! ಆ ಸಭೆಗಳಿಗೆ ಪ್ಲಾಂಕ್, ನರ್ನ್‌ಸ್ಟ್ ಮುಂತಾದವರೂ ಬರು ತ್ತಿದ್ದರು. ಒಂದು ವಾರದಲ್ಲಿ ನಡೆದ ಹೊಸ ಸಂಶೋಧನೆಗಳೆಲ್ಲವೂ ಈ ಸಭೆಗಳಲ್ಲಿ ಚರ್ಚೆ ಯಾಗುತ್ತಿದ್ದುವು. ಐನ್‌ಸ್ಟೈನರು ಮುಖ್ಯ ಸಂಶೋಧನೆಗಳೆಲ್ಲವನ್ನೂ ಆಮೂಲಾಗ್ರವಾಗಿ ಪರಿಶೀಲಿಸಿ ತಮ್ಮ ಅಭಿಪ್ರಾಯವನ್ನು ಕೊಡುತ್ತಿದ್ದರು. ಅಂಥ ಸಂದರ್ಭಗಳಲ್ಲಿ ಅವರು ಮಾಡುತ್ತಿದ್ದ ಭಾಷಣಗಳು ಅತ್ಯಂತ ಸ್ಫೂರ್ತಿದಾಯಕವಾಗಿಯೂ, ವಿಚಾರಪೂರ್ಣವಾಗಿಯೂ ಇರುತ್ತಿದ್ದುವು. ೧೯೩೩ರ ಅನಂತರ, ಐನ್‌ಸ್ಟೈನರು ಜರ್ಮನಿಯನ್ನು ಬಿಟ್ಟುಹೋದಮೇಲೆ, ಆ ಸಭೆಗಳು ಶ್ರೀರಾಮನಿಲ್ಲದ ಅಯೋಧ್ಯೆಯಂತೆ ಕಾಂತಿಹೀನವಾದವು.

ಐನ್‌ಸ್ಟೈನರ ಸ್ವಭಾವಕ್ಕೂ ಅವರ ಸಹೋದ್ಯೋಗಿಗಳ ಸ್ವಭಾವಕ್ಕೂ ಅಜಗಜಾಂ ತರವಿತ್ತು. ಕೀರ್ತಿಗಾಗಿಯೋ, ಪದವಿಗಾಗಿಯೋ, ಧನಲಾಭಕ್ಕಾಗಿಯೋ ಸಂಶೋಧನ ನಡೆ

ಸುತ್ತಿದ್ದವರು ಉಳಿದ ವಿದ್ವಾಂಸರು. ಐನ್‌ಸ್ಟೈನರು ಕೀರ್ತಿಕಾಂಚನಗಳ ಬಲೆಗೆ ಒಳಗಾಗ ದಿದ್ದವರು. ಆದ್ದರಿಂದ ಅವರು ಮನಸ್ಸಿಗೆ ಅತ್ಯಂತ ಪ್ರಿಯವಾಗಿದ್ದ, ಧ್ಯೇಯಕ್ಕೆ ಅನುಗುಣ ವಾಗಿದ್ದ ಸಮಸ್ಯೆಗಳಲ್ಲಿ ಮಾತ್ರ ಆಸಕ್ತಿ ವಹಿಸುತ್ತಿದ್ದರು. ಉಳಿದ ವಿದ್ವಾಂಸರಂತೆ ಸಂಶೋ ಧನೆಗಳ ಸಂಖ್ಯೆಗಳನ್ನು ಹೆಚ್ಚಿಸಿಕೊಂಡು ಅತಿಶಯವಾದ ಕೀರ್ತಿ ಪಡೆಯಬೇಕೆಂಬ ಉದ್ದೇಶ ಅವರಿಗಿರಲಿಲ್ಲ. ಐನ್‌ಸ್ಟೈನರು ಭೌತಶಾಸ್ತ್ರದ ದೃಷ್ಟಿಯಿಂದ ಮುಖ್ಯವಲ್ಲದ ಪ್ರಶ್ನೆಗಳನ್ನು ಕುರಿತು ಯೋಚಿಸುತ್ತಿರಲಿಲ್ಲ. ಬಹುಮುಖ್ಯವಾದ ಮೂಲಭೂತ ಪ್ರಶ್ನೆಗಳನ್ನು ಮಾತ್ರ ಕುರಿತು ಅವರು ಯೋಚಿಸುತ್ತಿದ್ದರು. ಹೀಗೆಯೇ ತಮ್ಮ ವಿದ್ಯಾರ್ಥಿಗಳೂ ನಾಲ್ಕಾರು ಉತ್ತಮ ತರಹದ ಸಂಶೋಧನೆಗಳನ್ನು ನಡೆಸಿದರೆ ಸಾಕು ಎಂದು ಅವರು ಅಭಿಪ್ರಾಯ ಪಡುತ್ತಿದ್ದರು. ವಿದ್ಯಾರ್ಥಿ ಸಂಶೋಧಕರಾದರೋ, ಇತರ ವಿದ್ವಾಂಸರಂತೆ, ಅನೇಕ ಸಂಶೋಧನೆಗಳನ್ನು ಮಾಡಬೇಕೆಂಬ ಉದ್ದೇಶವುಳ್ಳವರಾಗಿರುತ್ತಿದ್ದರು. ಐನ್‌ಸ್ಟೈನರು ಆರಿಸಿಕೊಳ್ಳುತ್ತಿದ್ದ ವಿಷಯಗಳು ಬಹು ಕ್ಲಿಷ್ಟವಾಗಿರುತ್ತಿದ್ದುದರಿಂದ ಸಂಶೋಧನೆಯಲ್ಲಿ ತಮಗೆ ಜಯದೊರೆಯಲಾರದೆಂಬ ಭಯವೂ ಅನೇಕ ವಿದ್ಯಾರ್ಥಿ ಸಂಶೋಧಕರಿಗಿತ್ತು. ಈ ಕಾರಣದಿಂದ ಅವರು ಐನ್‌ಸ್ಟೈನರಲ್ಲಿಗೆ ಹೋಗಿ ಶಿಕ್ಷಣ ಪಡೆಯಲು ಹಿಂಜರಿಯು ತ್ತಿದ್ದರು. ಹೆಚ್ಚು ಸತ್ವವುಳ್ಳ ಕೆಲವರು ಮಾತ್ರ ಅವರಲ್ಲಿಗೆ ಬರುತ್ತಿದ್ದರು,

ಐನ್‌ಸ್ಟೈನರು ತಮ್ಮ ವಿದ್ಯಾರ್ಥಿಗಳಿಗೆ ನೆರವಾಗುತ್ತಿದ್ದ ರೀತಿಯೂ ಅಸಾಮಾನ್ಯ. ಇತರ ವಿದ್ವಾಂಸರು ತಮ್ಮ ಅಭಿಪ್ರಾಯಗಳನ್ನೇ ವಿದ್ಯಾರ್ಥಿಗಳ ತಲೆಯಲ್ಲಿ ತುರುಕಿ, ಅವ ರಿಂದ ಸ್ವಲ್ಪ ಪ್ರತಿಫಲವನ್ನು ಅಪೇಕ್ಷಿಸುತ್ತಿದ್ದರೆ, ಐನ್‌ಸ್ಟೈನರು ಅತಿ ಸಮೀಪದ ಸ್ನೇಹಿತ ನೊಬ್ಬನಂತೆ ತಮ್ಮ ವಿದ್ಯಾರ್ಥಿಗಳಿಗೆ ಸಲಹೆಗಳನ್ನು ಕೊಡುತ್ತಿದ್ದರು. ಅವರ ವಿದ್ಯಾರ್ಥಿ ಗಳು ಯಾವ ಸಮಯದಲ್ಲಾದರೂ ತಮ್ಮ ಗುರುಗಳನ್ನು ಕಾಣಬಹುದಾಗಿತ್ತು. ತಾವು ಎಷ್ಟೇ ಕಠಿಣ ಸಮಸ್ಯೆಯನ್ನು ಕುರಿತು ಯೋಚಿಸುತ್ತಿದ್ದರೂ, ವಿದ್ಯಾರ್ಥಿಗಳು ತಮ್ಮಲ್ಲಿಗೆ ಬಂದರೆ ತಾಳ್ಮೆಯಿಂದ ಸಲಹೆ ಕೊಡುತ್ತಿದ್ದರು. ವಿದ್ಯಾರ್ಥಿಗಳಷ್ಟೇ ಅಲ್ಲ, ಸಾಮಾನ್ಯ ಜನರೂ ಭೌತಶಾಸ್ತ್ರಕ್ಕೆ ಸಂಬಂಧಪಟ್ಟ ಸಂದೇಹಗಳನ್ನು ಅವರಿಂದ ನಿವಾರಿಸಿಕೊಳ್ಳಬಹು ದಾಗಿತ್ತು. ಎಲ್ಲರಿಗೂ ಅವರ ಸಹಾಯ ಸಲಹೆಗಳು ಸುಲಭವಾಗಿ ದೊರಕುತ್ತಿದ್ದವು. ಜನರು ತಮ್ಮ ಕೆಲಸದ ಮಧ್ಯೆ ಬಂದುದರಿಂದ ಆ ಕೆಲಸ ಅಷ್ಟರಲ್ಲೇ ತುಂಡಾಯಿತೆಂದು ಅವರು ಎಂದೂ ಗೊಣಗಾಡಿದವರಲ್ಲ. ಐನ್‌ಸ್ಟೈನರ ಸ್ವಭಾವವನ್ನು ಅವರ ಜೀವನ ಚರಿತ್ರಕಾರ ನಾದ ಫಿಲಿಫ್ ಫ್ರಾಂಕ ಹೀಗೆ ವರ್ಣಿಸಿದ್ದಾನೆ. "ಅವರ ವಿಚಾರವಾಹಿನಿ ಮಹಾನದಿಯಂತೆ ಸದಾ ಸಮೃದ್ಧಿಯಾಗಿ ಹರಿಯುತ್ತಿತ್ತು. ಅವರ ದೀರ್ಘಾಲೋಚನೆಯನ್ನು ಭಂಗಮಾಡ ಬಹುದಾದ ಯಾವ ಸಂಭಾಷಣೆಯೇ ಆಗಲಿ, ಮಹಾನದಿಗೆ ಎಸೆದ ಸಣ್ಣ ಕಲ್ಲಿನಂತೆ, ವಿಚಾರ ವಾಹಿನಿಯ ಪಾತ್ರವನ್ನು ಬದಲಾಯಿಸಲು ಅಸಮರ್ಥವಾಗುತ್ತಿತ್ತು."

1) ಮೊದಲನೆಯ ಮಹಾಯುದ್ಧದ ಕಾಲದಲ್ಲಿ ಐನ್‌ಸ್ಟೈನರು
ತಮ್ಮ ಅಸಂತೃಪ್ತಿಯನ್ನು ಹೇಗೆ ವ್ಯಕ್ತಪಡಿಸಿದರು

# ೪ ಸತ್ಯಾಗ್ರಹಿ

## ಯುದ್ಧ ಪ್ರಯತ್ನಗಳಲ್ಲಿ ಐನ್‌ಸ್ಟೈನರ ಅಸಹಕಾರ

ಐನ್‌ಸ್ಟೈನರು ಜರ್ಮನಿಯಲ್ಲಿ ನೆಲಸಿದ ಕೆಲವು ದಿನಗಳಲ್ಲೇ ಮೊದಲನೆ ಮಹಾಯುದ್ಧ ಪ್ರಾರಂಭವಾಯಿತು. ಆ ಕೂಡಲೆ ಯುದ್ಧಪ್ರಿಯರಾದ ಜರ್ಮನ್ ಜನಾಂಗಕ್ಕೆ ಉತ್ಸಾಹ ಉಕ್ಕಿತು. ಜರ್ಮನ್ ಪತ್ರಿಕೆಗಳೂ, ವಾರ್ತಾಸಂಸ್ಥೆಗಳೂ ಪ್ರತಿದಿನ ವಿಜಯದ ಸುದ್ದಿಗಳನ್ನು ಘೋಷಿಸುತ್ತಿದ್ದುವು. ತಮಗೇ ವಿಜಯ ದೊರಯುವುದೆಂದು ಜರ್ಮನರು ತಿಳಿದುಕೊಂಡರು. ಹೀಗೆ ಉತ್ಸಾಹಪೂರಿತರಾದ ಜನ ಬರ್ಲಿನ್ ನಗರದ ಬೀದಿಗಳಲ್ಲಿಯೂ, ಚೌಕಗಳಲ್ಲಿಯೂ, ಗುಂಪುಸೇರಿ ಶತ್ರುವಿಗೊದಗಿದ ವಿಪತ್ತನ್ನು ಹೇಳಿಕೊಂಡು ಸಂತೋಷಪಡುತ್ತಿದ್ದರು. ಪ್ರಪಂಚದ ಭೂಪಟವನ್ನು ನೋಡಿಕೊಂಡು ಯುದ್ಧ ಮುಗಿದ ಮೇಲೆ ತಮಗೇ ಸೇರಬಹುದಾದ ಪ್ರದೇಶಗಳನ್ನು ಸಂತೋಷದಿಂದ ಗುರುತುಮಾಡಿಕೊಳ್ಳುತ್ತಿದ್ದರು. ತಮ್ಮ ಜನಾಂಗವೇ ಜಗತ್ತಿನಲ್ಲೆಲ್ಲ ಶ್ರೇಷ್ಠವಾದದ್ದೆಂದು ಪ್ರಾಮಾಣಿಕವಾಗಿ ನಂಬಿದ್ದವರು ಆ ಜನ. ಅವರು ಮುಂದೆ ಬರುವ ದುರ್ದಿನಗಳನ್ನು ಕಾಣದೆ ಮೊದಮೊದಲು ಪಡೆದ ಜಯದಿಂದ ಮತ್ತರಾಗಿದ್ದರು. ಈ ಮನೋಭಾವನೆ ಏನೂ ತಿಳಿಯದ ಹಳ್ಳಿಗಾಡಿನವರಲ್ಲಿ ಮತ್ತು ಕಾರ್ಮಿಕರಲ್ಲಷ್ಟೇ ಅಲ್ಲದೆ ಮೇಧಾವಿಗಳೆನಿಸಿಕೊಂಡ ರಾಜಕಾರಣಿಗಳಲ್ಲೂ, ವೈಜ್ಞಾನಿಕರಲ್ಲೂ, ಪಂಡಿತೋತ್ತಮರಲ್ಲೂ ಕಂಡುಬರುತ್ತಿತ್ತು. ಶಾಂತಿಪ್ರಿಯರಾದ ಐನ್‌ಸ್ಟೈನರಿಗೆ ತಾವಿದ್ದ ಸನ್ನಿವೇಶವನ್ನು ಕಂಡು ಅಸಹ್ಯವಾಯಿತು. ತಮ್ಮ ಸಹೋದ್ಯೋಗಿಗಳು ಜ್ಞಾನಿಗಳಾಗಿದ್ದರೂ ಪಶುಗಳಂತೆ ವರ್ತಿಸುತ್ತಿದ್ದುದನ್ನು ಕಂಡು ಅವರಿಗೆ ಅಸಂತೃಪ್ತಿಯಾಯಿತು. ಅನೇಕ ಸಂದರ್ಭಗಳಲ್ಲಿ ಅವರು ತಮ್ಮ ಅತೃಪ್ತಿಯನ್ನು ಸಹೋದ್ಯೋಗಿಗಳಲ್ಲಿ ವ್ಯಕ್ತಪಡಿಸುತ್ತಿದ್ದರು. ಐನ್‌ಸ್ಟೈನರಿಗೆ ಯುದ್ಧ ರುಚಿಸದೆಂದೂ, ಅವರಿಂದ ಯುದ್ಧ ಪ್ರಯತ್ನಗಳಿಗೆ ಯಾವ ಸಹಾಯವೂ ದೊರೆಯದೆಂದೂ ಅವರ ಗೆಳೆಯರಿಗೆ ಗೊತ್ತಾಯಿತು. ಜರ್ಮನ್ ಸರ್ಕಾರಕ್ಕೂ ಈ ವಿಷಯ ತಿಳಿಯಿತು. ಆದರೆ ಅವರಾರೂ ಐನ್‌ಸ್ಟೈನರ ಅನಾದರವನ್ನು ಅಷ್ಟಾಗಿ ತೀಕ್ಷ್ಣದೃಷ್ಟಿಯಿಂದ ನೋಡಲಿಲ್ಲ. ಐನ್‌ಸ್ಟೈನರು ಸ್ವಿಸ್ ದೇಶದ ಪೌರರಾದ್ದರಿಂದ, ಅವರು ಯುದ್ಧಕ್ಕೆ ಸಹಾಯ ಮಾಡಬೇಕಾಗಿಲ್ಲವೆಂದು ಜರ್ಮನ್ ಸರ್ಕಾರವೂ ಪ್ರಜೆಗಳೂ ಭಾವಿಸಿದ್ದರು. ಈ ಕಾರಣದಿಂದ ಪ್ರಾರಂಭದಲ್ಲಿ ಐನ್‌ಸ್ಟೈನರಿಗೆ ಯಾವ ಬಾಧೆಯೂ ಉಂಟಾಗಲಿಲ್ಲ.

ಈ ಮಧ್ಯೆ ತಾಟಸ್ಥ್ಯದಿಂದಿದ್ದ ಬೆಲ್ಜಿಯಂ ದೇಶದ ಮೇಲೆ ಜರ್ಮನ್ ಸೇನೆಗಳು ಧಾಳಿ ನಡೆಸಿದುವು. ಜರ್ಮನ್ ಸೈನಿಕರು ಬೆಲ್ಜಿಯಂ ದೇಶವನ್ನು ಸಂಪೂರ್ಣವಾಗಿ ಆಕ್ರಮಿಸಿ, ಅಲ್ಲಿಯ ಜನರಿಗೆ ಸಹಿಸಲಸಾಧ್ಯವಾದ ಕಿರುಕುಳಗಳನ್ನು ಕೊಡಲಾರಂಭಿಸಿದರು. ಈ ವಿಷಯ

ಬಹಿರಂಗವಾದ ಮೇಲೆ ಜರ್ಮನಿಯ ಕಡೆ ಒಲವಿದ್ದ ಕೆಲವು ಪರದೇಶೀಯರು ತಮ್ಮ ಧೋರಣೆಯನ್ನು ಬದಲಾಯಿಸಿಕೊಂಡರು. ಜರ್ಮನ್ ಸರ್ಕಾರ ಅನೇಕ ಹಿತೈಷಿಗಳನ್ನು ಕಳೆದುಕೊಂಡಿತು. ಜರ್ಮನ್ ಜನಾಂಗದ ವಿಷಯದಲ್ಲಿ ಅಭಿಮಾನವಿದ್ದ ಪರದೇಶೀಯರು ಕ್ಯಾಂಟ್, ಹೆಗೆಲ್, ಗಯಟೆ, ಷೋಪನ್‌ಹೌರ್ ಮುಂತಾದ ಜರ್ಮನ್ ಜ್ಞಾನಿಗಳ ಗ್ರಂಥಗಳನ್ನೋದಿ ಅವುಗಳಿಂದ ಸ್ಫೂರ್ತಿಪಡೆದಿದ್ದವರು. ಅನೇಕ ಮಹಾಪುರುಷರ ಮಾತೃದೇಶವಾಗಿದ್ದು, ಪ್ರಪಂಚದ ಸಂಸ್ಕೃತಿಯ ಬೆಳವಣಿಗೆಗೆ ಕಾರಣವಾದ ಜರ್ಮನಿ ದೇಶವೆಂದರೆ ಈ ಪಂಡಿತರಿಗೆ ಗೌರವ. ಅದರ ಸಂಸ್ಕೃತಿಯೆಂದರೆ ಅಭಿಮಾನ. ಅನೇಕ ಮಹಾಪುರುಷರಿಗೆ ಜನ್ಮವಿತ್ತ ಜರ್ಮನಿಯೇ ನಿಷ್ಕಾರಣವಾಗಿ ಇತರ ದೇಶದವರನ್ನು ಕೋಟಲೆ ಪಡಿಸುತ್ತಿದೆ ಎಂಬುದು ಪರಸ್ಪರ ವಿರೋಧಾಭಾಸವೆಂದು ಅಪರಿಗನ್ನಿಸಿತು. ಸೈನ್ಯದಲ್ಲಿರುವ ಮತ್ತು ಅವರನ್ನು ಪ್ರೋತ್ಸಾಹಿಸುತ್ತಿರುವ ಜರ್ಮನರಿಗೆ ತಮ್ಮ ದೇಶದ ಹಿರಿಯ ಸಂಸ್ಕೃತಿಯ ಅರಿವೇ ಇಲ್ಲವೆಂದೂ, ಆ ಸಂಸ್ಕೃತಿಯನ್ನು ಮರೆತಿದ್ದರಿಂದ ಜರ್ಮನರು ಅಧೋಗತಿಗಿಳಿದಿರುವರೆಂದೂ ಈ ಅಭಿಮಾನಿಗಳು ಹೇಳತೊಡಗಿದರು. ಜರ್ಮನರಿಗಾದರೋ ಈ ವಾದ ಬಹು ವಿಚಿತ್ರವಾಗಿ ಕಂಡಿತು. ಯುದ್ಧಪ್ರೇಮವು ಜರ್ಮನ್ ಸಂಸ್ಕೃತಿಯ ಒಂದು ಮುಖ; ಕಲೆ ಸಾಹಿತ್ಯ ಮತ್ತು ತತ್ವಶಾಸ್ತ್ರಗಳು ಅದೇ ಸಂಸ್ಕೃತಿಯ ಮತ್ತೊಂದು ಮುಖ ಎಂದು ಅವರು ಪ್ರತಿವಾದ ಹೂಡಲಾರಂಭಿಸಿದರು. "ಜರ್ಮನ್ ಸಂಸ್ಕೃತಿಯನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲಾರದ ಹೊರಗಿನವರಿಗೆ ಜರ್ಮನ್ ಜನಾಂಗದ ಯುದ್ಧಪ್ರೇಮ ಅದರ ಸಂಸ್ಕೃತಿಗೆ ವಿರೋಧವಾಗಿ ಕಾಣುತ್ತದೆ!" ಎಂದು ಜರ್ಮನ್ ವಿದ್ವಾಂಸರು ಹೇಳತೊಡಗಿದರು. ಇಂಥ ವಿದ್ವಾಂಸರಲ್ಲಿ ಜರ್ಮನಿಯ ಪ್ರಮುಖ ತತ್ವಶಾಸ್ತ್ರಜ್ಞರೂ, ಸಾಹಿತಿಗಳೂ, ವೈಜ್ಞಾನಿಕರೂ ಸೇರಿದ್ದರು. ತಮ್ಮ ಅಭಿಪ್ರಾಯವನ್ನು ಜನಪ್ರಿಯವನ್ನಾಗಿ ಮಾಡಲ ಅವರು ಒಂದು ಘೋಷಣೆಯನ್ನು ಹೊರಡಿಸಿದರು. 'ಜರ್ಮನರ ಯುದ್ಧಪ್ರೇಮವು ಅವರ ಸಂಸ್ಕೃತಿಯ ತಿರುಳು' ಎಂಬುದೇ ಘೋಷಣೆಯ ಮುಖ್ಯ ಸಾರಾಂಶವಾಗಿತ್ತು. ಅದಕ್ಕೆ ೯೩ ಮಂದಿ ಸಹಿ ಹಾಕಿದ್ದರು. ಹೀಗೆ ಎಲ್ಲಾ ಪ್ರಮುಖರ ಹೆಸರಿನಲ್ಲಿ ಹೊರಟಿದ್ದ ಘೋಷಣೆಗೆ ಐನ್‌ಸ್ಟೈನರನ್ನು ರುಜು ಹಾಕುವಂತೆ ಅವರ ಸ್ನೇಹಿತರು ಪ್ರೇರೇಪಿಸಿದರು. ಯುದ್ಧವಿರೋಧಿ ಐನ್‌ಸ್ಟೈನರು ಆ ಘೋಷಣೆಗೆ ರುಜು ಹಾಕಲು ನಿರಾಕರಿಸಿದರು. ಈ ನಿರಾಕರಣೆಯಿಂದ ಜರ್ಮನ್ ಪ್ರಜೆಗಳಿಗೆ ಕೋಪ ಬಂತು. ಜರ್ಮನ್ ಸ್ನೇಹಿತರು ಅದರಿಂದ ದೂರವಾದರು. ಕೆಲ ಜನರು ಅವರನ್ನು 'ದೇಶದ್ರೋಹಿ' ಎಂದು ಕರೆದರು. ಒಟ್ಟಿನಲ್ಲಿ ಇಡೀ ರಾಷ್ಟ್ರವೇ ಅವರನ್ನು ತೆಗಳಲು ಪ್ರಾರಂಭಿಸಿತು. ತಮ್ಮ ನಿರ್ಧಾರ ಸರಿಯಾದದ್ದೆಂದು ತಿಳಿದಿದ್ದ ಐನ್‌ಸ್ಟೈನರು ಇಂಥ ಖಂಡನೆಗಳಿಂದ ಧೈರ್ಯಗೆಡಲಿಲ್ಲ.

ಐನ್‌ಸ್ಟೈನರು ಯುದ್ಧಸನ್ನಾಹಗಳಿಗೆ ಬೆಂಬಲ ಕೊಡದೆ ಜನರ ಅಸಂತೃಪ್ತಿಗೆ ಒಳಗಾಗಿದ್ದ ಕಾಲದಲ್ಲಿ ಅವರ ಆತ್ಮೀಯರಾದ ಗೆಳೆಯರೆಲ್ಲ ಯುದ್ಧಕ್ಕೆ ತಮ್ಮ ಸೇವೆ ಸಲ್ಲಿಸಿ ವಿಶೇಷ ಖ್ಯಾತಿಯನ್ನೂ, ಜನಮನ್ನಣೆಯನ್ನೂ ಪಡೆಯುತ್ತಿದ್ದರು, ಐನ್‌ಸ್ಟೈನರು ಪತ್ನಿಗೆ

ಬಂದು ನೆಲೆಸಲು ಕಾರಣರಾಗಿದ್ದ ನರ್ನ್‌ಸ್ಟ್ ಮಹಾಶಯನು ವಿಷವಾಯುಗಳನ್ನು ತಯಾರಿ ಸುವುದರಲ್ಲಿ ನಿರತನಾಗಿದ್ದನು. ಹೇಬರ್ (Haber) ಎಂಬ ಮತ್ತೊಬ್ಬ ಗೆಳೆಯನು ಸಿಡಿಮದ್ದುಗಳ ತಯಾರಿಕೆಗೆ ಮುಖ್ಯವಾಗಿ ಬೇಕಾದ ಅಮೋನಿಯ ಎಂಬ ಅನಿಲವನ್ನು ಹೊಸ ರೀತಿಯಲ್ಲಿ ತಯಾರು ಮಾಡಲು ತನ್ನ ಶಕ್ತಿಯನ್ನೆಲ್ಲ ವಿನಿಯೋಗಿಸುತ್ತಿದ್ದನು. ತಾಟಸ್ಥ್ಯ ನೀತಿಯನ್ನನುಸರಿಸಿದ್ದ ಐನ್‌ಸ್ಟೈನರು ಈ ಗೆಳೆಯರ ಕೋಪಕ್ಕೆ ಒಳಗಾದರು. ಹೀಗೆ ಅತಿ ಸಮೀಪದ ಗೆಳೆಯರೂ ಅವರಿಗೆ ಇಲ್ಲವಾದರು.

ತನ್ನ ಆತ್ಮ ಒಪ್ಪುವ ರೀತಿಯಲ್ಲಿ ನಡೆದುಕೊಳ್ಳುವ ಮಹನೀಯರನ್ನು ಅವರ ಜೀವಿತಕಾಲದಲ್ಲಿಯೇ ಗೌರವಿಸುವವರು ಬಹು ಕಡಿಮೆ; ತೆಗಳುವವರು ಹೆಚ್ಚು. ಗೆಳೆಯರು ಕಡಿಮೆ; ವೈರಿಗಳು ಹೆಚ್ಚು. ಆದರ್ಶವನ್ನು ಸಾಧಿಸುತ್ತೇವೆಂದು ಅವರನ್ನು ಹಿಂಬಾಲಿಸಿದ ಹಲಕೆಲವರು ಸ್ವಲ್ಪ ದೂರ ಅವರೊಂದಿಗೆ ನಡೆದು ಸೋತು ಹಿಂದುಳಿಯುತ್ತಾರೆ. ಸಹಾಯಕ ರಾಗುತ್ತೇವೆಂದು ಜೊತೆಗೆ ಬಂದ ಗೆಳೆಯರು ಕೈಬಿಡುತ್ತಾರೆ. ಕೊನೆಗೆ ಆದರ್ಶವಾದಿ ಏಕಾಕಿಯಾಗಿ ಉಳಿಯುತ್ತಾನೆ. ತಾನೊಬ್ಬನೇ ಕಡಿದಾದ ಬೆಟ್ಟವನ್ನು ಹತ್ತಿ ಗುರಿಯನ್ನು ಮುಟ್ಟಬೇಕಾಗುತ್ತದೆ. ಈ ನಿಯಮಕ್ಕೆ ಐನ್‌ಸ್ಟೈನರ ಜೀವನವೂ ಒಂದು ನಿದರ್ಶನ.

## ಬರ್ಲಿನ್ ನಗರದ ವಾತಾವರಣ

ಜರ್ಮನ್ ಮತ್ತು ಇಂಗ್ಲಿಷ್ ಜನರ ನಡುವೆ ಬೆಳೆದು ಬಂದಿದ್ದ ದ್ವೇಷ ಕೇವಲ ಸಾಮಾನ್ಯ ಜನರನ್ನಲ್ಲದೆ ಪಂಡಿತರ ಮನೋರಂಗವನ್ನೂ ಆಕ್ರಮಿಸಿಕೊಂಡಿತ್ತು. ಯುದ್ಧ ಭೂಮಿಯಲ್ಲಿ ಮಾತ್ರ ತನ್ನ ನಿರಂಕುಶ ಪ್ರಭುತ್ವವನ್ನು ಚಲಾಯಿಸಬೇಕಾಗಿದ್ದ ದ್ವೇಷ ತಿರಸ್ಕಾರಗಳು ಪಂಡಿತೋತ್ತಮರನ್ನೂ ಹಿರಿಯ ವೈಜ್ಞಾನಿಕರನ್ನೂ ತಮ್ಮ ಕಿಂಕರಿಗಳನ್ನಾಗಿ ಮಾಡಿಕೊಂಡಿದ್ದವು. ಈ ದೇಶಗಳ ಹಿರಿಯ ವೈಜ್ಞಾನಿಕರೆಲ್ಲರೂ ಜರ್ಮನ್ ವಿಜ್ಞಾನವೇ ಬೇರೆ, ಉಳಿದ ಯುರೋಪಿಯನ್ ರಾಷ್ಟ್ರಗಳ ವಿಜ್ಞಾನವೇ ಬೇರೆ ಎಂಬ ಭಾವನೆಯನ್ನು ತಮ್ಮ ತಮ್ಮ ಜನಾಂಗಗಳಲ್ಲಿ ಬೆಳಸಲಾರಂಭಿಸಿದ್ದರು. ವಿಜ್ಞಾನದ ಸತ್ಯಸ್ವರೂಪವನ್ನು ನೋಡಲಾಗದ ಈ ಕುರುಡರಿಗೆ ಎಲ್ಲ ವೈಜ್ಞಾನಿಕ ಸಂಶೋಧನೆಗಳೂ ಎಲ್ಲ ಜನಾಂಗಗಳ ಸಾಮೂಹಿಕ ಪ್ರಯತ್ನದ ಫಲ ಎಂಬುದು ಗೋಚರಿಸಲಿಲ್ಲ. ದ್ವೇಷದಿಂದ ಹುಚ್ಚರಾಗಿದ್ದ ಜರ್ಮನ್ ವೈಜ್ಞಾನಿಕರಿಗೆ ಇಂಗ್ಲಿಷ್–ವಿಜ್ಞಾನ ಕೇವಲ ಇಂದ್ರಿಯಗಳಿಂದ ಪಡೆದ ಆಳ ವಿಲ್ಲದ ಜ್ಞಾನವೆಂದು ತೋರಿತು. ಹಾಗೆಯೇ ಇಂಗ್ಲಿಷ್ ವೈಜ್ಞಾನಿಕರಿಗೆ ಜರ್ಮನ್ ವಿಜ್ಞಾನ ಅನುಭವಕ್ಕೆ ದೂರವಾದ ಭಾವೋನ್ಮಾದವಾಗಿತ್ತು.

ಈ ಹುಚ್ಚು ಯಾವ ಮಟ್ಟವನ್ನು ಮುಟ್ಟಿತೆಂದರೆ, ಜರ್ಮನ್ ಶಾಲೆಗಳಲ್ಲಿ ಇಂಗ್ಲಿಷ್ ವೈಜ್ಞಾನಿಕರ ಹೆಸರುಗಳನ್ನಾಗಲಿ ಅವರು ಸಾಧಿಸಿರುವ ಶೋಧನೆಗಳನ್ನಾಗಲಿ ಹೇಳುವುದು ಮಹಾಪರಾಧವಾಯಿತು. ಹಾಗೆಯೇ ಇಂಗ್ಲಿಷ್ ಶಾಲೆಗಳಲ್ಲಿಯೂ ನಡೆಯಿತು. ಇಂಥ ವಿಷ ತುಂಬಿದ ವಾತಾವರಣದಲ್ಲಿ ಮುಖವನ್ನು ಸ್ವಲ್ಪ ಬೇರೆ ಕಡೆಗೆ ತಿರುಗಿಸಿ ಸ್ವಚ್ಛವಾದ

ಗಾಳಿಯನ್ನು ಸೇವಿಸುವಷ್ಟು ತಾಳ್ಮೆಯು ಬಹು ಜನಕ್ಕಿರಲಿಕ್ಕಿಲ್ಲ. ಬುದ್ಧಿಯನ್ನು ಕೆಡಿಸಿಕೊಂಡ ಹೆಂಡ ಕುಡುಕರಂತೆ ಎಲ್ಲರೂ ಹುಚ್ಚಾಗಿದ್ದರು. ತಲೆ ಕೆದರಿಕೊಂಡು ನೋಡಲು ಹುಚ್ಚರಂತೆ ಕಾಣುತ್ತಿದ್ದ ಐನ್‌ಸ್ಟೈನರು ಮಾತ್ರ ಸರಿಯಾದ ದಾರಿ ತೋರಬಲ್ಲವರಾಗಿದ್ದರು.

## ಎರಡನೆಯ ಮದುವೆ

ಶಾಂತಿಪ್ರಿಯರಾದ ಐನ್‌ಸ್ಟೈನರಿಗೆ ಈ ವಾತಾವರಣವು ತುಂಬ ನಿರುತ್ಸಾಹವನ್ನುಂಟುಮಾಡಿತು. ಬಾಳಗೆಳತಿಯಾದ ಮಿಲೇವರ ವರ್ತನೆ ಅವರ ಮೃದು ಮನಸ್ಸನ್ನು ಮತ್ತಷ್ಟು ಕದಡಿತು. ಅವರ ಮನಸ್ಸು ಒಂದು ಜ್ವಾಲಾಮುಖಿಯಾಯಿತು. ಇಂಥ ಅಸಂತೋಷಗಳ ನಡುವೆ ಅವರ ಮನಸ್ಸಿಗೆ ಸಮಾಧಾನ ತಂದುಕೊಡುವ ಎರಡು ಸಂಗತಿಗಳು ನಡೆದವು. ಅವುಗಳಲ್ಲಿ ಮೊದಲನೆಯದು ಅವರ ದ್ವಿತೀಯ ವಿವಾಹ; ಎರಡನೆಯದು ಅವರ ಸಾಮಾನ್ಯ ಸಾಪೇಕ್ಷವಾದ ವಿಶ್ವಮನ್ನಣೆ ಪಡೆದದ್ದು. ಮನಸ್ಸಿಗೆ ಶಾಂತಿ ತಂದುಕೊಟ್ಟಿದ್ದರಲ್ಲಿ ಎರಡನೆಯದು ಮೊದಲನೆಯದಕ್ಕಿಂತ ಮುಖ್ಯವಾದದ್ದಾಗಿತ್ತು.

ಕ್ರೈಸ್ತ ಮತಕ್ಕೆ ಸೇರಿದ್ದ ಮಿಲೇವರನ್ನು ಮದುವೆಯಾದ ಮೇಲೆ ಐನ್‌ಸ್ಟೈನರು ಯಹೂದಿಗಳ ಬಹಿಷ್ಕಾರಕ್ಕೆ ಗುರಿಯಾದ್ದರು. ಅಧಿಕಾರ ಐಶ್ವರ್ಯಗಳನ್ನು ತರುವ ಕುಲಕಸುಬಾದ ವ್ಯಾಪಾರವನ್ನು ಐನ್‌ಸ್ಟೈನರು ತೊರೆದು 'ಪ್ರಯೋಜನಕ್ಕೆ ಬಾರದ' ವಿಜ್ಞಾನ ಸಂಶೋಧನೆಯನ್ನು ಹಿಡಿದಿದ್ದುದು ಯಹೂದಿಗಳ ಅವಹೇಳನಕ್ಕೆ ಮತ್ತಷ್ಟು ಅವಕಾಶವನ್ನುಂಟುಮಾಡಿಕೊಟ್ಟಿತ್ತು. ಆ ಜನಗಳು ಐನ್‌ಸ್ಟೈನರೊಡನೆ ವ್ಯವಹಾರ ನಡೆಸುವುದು ತಮ್ಮ ಕುಲಕ್ಕೆ ಅವಮಾನಕರವೆಂದು ಭಾವಿಸಿದ್ದರು. ಆದರೆ ಐನ್‌ಸ್ಟೈನರು ಬರ್ಲಿನ್ ವಿಶ್ವವಿದ್ಯಾನಿಲಯದಲ್ಲಿ ದೊಡ್ಡ ಪದವಿ ಪಡೆದೊಡನೆಯೇ ಯಹೂದಿಗಳಲ್ಲಿ ವಿಚಿತ್ರವಾದ ಬದಲಾವಣೆಯುಂಟಾಯಿತು. ಒಮ್ಮಿಂದೊಮ್ಮೆಗೆ ಐನ್‌ಸ್ಟೈನರು ಅವರಿಗೆ ತಮ್ಮವರಾಗಿಬಿಟ್ಟರು. ಬರ್ಲಿನ್ ಯಹೂದಿಗಳು ಅವಕಾಶ ದೊರೆತಾಗಲೆಲ್ಲ ಐನ್‌ಸ್ಟೈನರನ್ನು ತಮ್ಮ ಮನೆಗಳಿಗೆ ಕರೆದೊಯ್ದು ಉಪಚಾರ ಮಾಡುತ್ತಿದ್ದರು. ನಿಷ್ಕಪಟ ಐನ್‌ಸ್ಟೈನರು ತಮ್ಮ ಬಂಧುಗಳಲ್ಲಿ ಉಂಟಾದ ಈ ಬದಲಾವಣೆಯನ್ನು ಕಂಡು ಆಶ್ಚರ್ಯಪಟ್ಟರು. ಅವರು ಹಿಂದಿನ ಕಟು ಪ್ರಸಂಗಗಳೊಂದನ್ನೂ ಗಣನೆಗೆ ತೆಗೆದುಕೊಳ್ಳದೆ ಬಂಧುಗಳೊಂದಿಗೆ ಪ್ರೀತಿಯಿಂದಲೇ ನಡೆದುಕೊಳ್ಳುತ್ತಿದ್ದರು. ಸ್ವಲ್ಪ ಪ್ರೀತಿ ತೋರಿಸಿದರೂ ಹಿಂದಿನ ಕಹಿಯನ್ನೆಲ್ಲ ಮರೆಯುವ ಮಕ್ಕಳಂತೆ ಐನ್‌ಸ್ಟೈನರು ತಿಳಿ ಮನಸ್ಸಿನವರಾಗಿದ್ದರು.

ಹೀಗೆ ಐನ್‌ಸ್ಟೈನರನ್ನು ಗೌರವಿಸುತ್ತಿದ್ದ ನೆಂಟರಿಷ್ಟರಲ್ಲಿ ಅವರ ಸೋದರಮಾವ ಬಬ್ಬರಾಗಿದ್ದರು. ಅವರ ಮನೆಯವರೂ ಐನ್‌ಸ್ಟೈನರನ್ನು ಅತಿ ಮಮತೆಯಿಂದ ಕಾಣುತ್ತಿದ್ದರು. ಅವರಲ್ಲಿ ಐನ್‌ಸ್ಟೈನರಿಗೆ ಅತಿ ಪ್ರೀತಿಯವರೆಂದರೆ ಅವರ ಸೋದರಮಾವನ ಮಗಳಾದ ಎಲ್ಸಾ (Elsa). ಆಕೆಯು ಐನ್‌ಸ್ಟೈನರಿಗೆ ಬಾಲ್ಯ ಸ್ನೇಹಿತೆಯಾಗಿದ್ದಳು.

ಮಕ್ಕಳಾಗಿದ್ದಾಗ ಇಬ್ಬರೂ ಒಟ್ಟಿಗೆ ಆಡುತ್ತಿದ್ದರು; ಒಟ್ಟಿಗೆ ಊಟ ಮಾಡುತ್ತಿದ್ದರು. ಒಬ್ಬರನ್ನೊಬ್ಬರು ಪ್ರೀತಿಯಿಂದ ಕಾಣುತ್ತಿದ್ದರು. ಐನ್‌ಸ್ಟೈನರ ಸಂಸಾರವು ಜರ್ಮನಿಯನ್ನು ಬಿಟ್ಟಮೇಲೆ ಇವರಿಬ್ಬರ ಸಂಪರ್ಕ ತಪ್ಪಿಹೋಗಿತ್ತು. ಈ ಮಧ್ಯೆ ಇಬ್ಬರೂ ಸಂಸಾರಿಗಳಾದರೂ ಐನ್‌ಸ್ಟೈನರ ದಾಂಪತ್ಯ ಜೀವನ ಹೇಗೆ ಅಸಂತೋಷದಲ್ಲಿ ಮುಕ್ತಾಯವಾಗಿತ್ತೋ ಹಾಗೆಯೇ ಎಲ್ಸಾರದೂ ದುಃಖಮಯವಾಗಿತ್ತು. ಮದುವೆಯಾದ ಕೆಲವೇ ವರ್ಷಗಳ ನಂತರ ಆಕೆ ತನ್ನ ಪತಿಯನ್ನು ಕಳೆದುಕೊಂಡಿದ್ದಳು. ವಿಧವೆಯಾದ ನಂತರ ಹಣದ ಮುಗ್ಗಟ್ಟಿನಿಂದ ಸ್ವತಂತ್ರ ಜೀವನ ನಡೆಸಲು ಸಾಧ್ಯವಿಲ್ಲದೆ, ತಮ್ಮ ಇಬ್ಬರು ಮಕ್ಕಳೊಂದಿಗೆ ತಂದೆಯ ಮನೆಯಲ್ಲಿ ನೆಲೆಸಿದ್ದಳು. ಅವಳು ಮಿಲೇವಾದಂತೆ ಮೇಧಾವಿಯಾಗಿರಲಿಲ್ಲ; ಆದರೆ ತನ್ನ ಸಹನೆ, ಸರಳತೆ, ಪ್ರೀತಿಗಳಿಂದ ಮನೆಗೆ ಒಂದು ಕಳೆಕೊಡುವ ಗೃಹಲಕ್ಷ್ಮಿಯಾಗಿದ್ದಳು. ಬರ್ಲಿನ್ ವಿಶ್ವವಿದ್ಯಾನಿಲಯದ ವಿಷಪೂರಿತವಾದ ವಾತಾವರಣದಿಂದ ಕೊಂಚ ಕಾಲವಾದರೂ ಪಾರಾಗುವ ಉದ್ದೇಶದಿಂದ ಐನ್‌ಸ್ಟೈನರು ತಮ್ಮ ಸೋದರ ಮಾವನ ಮನೆಗೆ ಆಗಾಗ್ಗೆ ಹೋಗುತ್ತಿದ್ದರು. ಈ ಸಂದರ್ಭಗಳಲ್ಲಿ ಎಲ್ಸಾರ ಸ್ನೇಹಮಯವಾದ ಮಾತುಗಳು ನೊಂದ ಅವರ ಆತ್ಮಕ್ಕೆ ಶಾಂತಿಯನ್ನು ತರುತ್ತಿದ್ದವು. ಕಾಲಕ್ರಮೇಣ ಈ ಸ್ನೇಹ ಪ್ರೇಮಕ್ಕೆ ತಿರುಗಿತು; ಪ್ರೇಮವು ವಿವಾಹದಲ್ಲಿ ಸಾರ್ಥಕ್ಯವನ್ನು ಪಡೆದುಕೊಂಡಿತು. ಎಲ್ಸಾ ತನ್ನ ಕಲ್ಯಾಣ ಗುಣಗಳಿಂದ ತನ್ನ ಜೀವನವನ್ನು ಧನ್ಯವನ್ನಾಗಿ ಮಾಡಿಕೊಂಡಳು. ಕೈಹಿಡಿದ ಪತಿಯ ಜೀವನವನ್ನೂ ಧನ್ಯಗೊಳಿಸಿದಳು. ಆಕೆ ಬದುಕಿರುವವರೆಗೂ ಐನ್‌ಸ್ಟೈನರನ್ನು ಸೇವಕಿಯಂತೆ ಸೇವಿಸಿದಳು; ಮಾತೆಯಂತೆ ಪಾಲಿಸಿದಳು. ಐನ್‌ಸ್ಟೈನರ ಸತ್ಯಶೋಧನೆಗೆ ಎಲ್ಸಾರಿಂದ ಆದ ಸಹಾಯ ಅಷ್ಟಿಷ್ಟಲ್ಲ. ಕೊನೆಯತನಕ ಆಕೆ ಐನ್‌ಸ್ಟೈನರ ಕಾರ್ಯದರ್ಶಿನಿಯಾಗಿದ್ದಳು,

## ವಿಶ್ವ ಖ್ಯಾತಿ

ಈ ಮಧ್ಯೆ ಐನ್‌ಸ್ಟೈನರ ಸಾಮಾನ್ಯ ಸಾಪೇಕ್ಷವಾದವನ್ನು ಪರೀಕ್ಷಿಸಲು ಅನುಕೂಲವಾದ ಸಂದರ್ಭ ಒದಗಿತು. ಸಾಮಾನ್ಯ ಸಾಪೇಕ್ಷವಾದದ ಸತ್ಯಾಸತ್ಯತೆಗಳನ್ನು ನಿರ್ಧಾರಪಡಿಸಲು ಸಂಪೂರ್ಣ ಸೂರ್ಯಗ್ರಹಣದ ಸಮಯದಲ್ಲಿ ಆಕಾಶದ ಕೆಲವು ಭಾಗಗಳಲ್ಲಿ ಫೋಟೋಗಳನ್ನು ತೆಗೆದುಕೊಳ್ಳಬೇಕಾಗಿದ್ದಿತು. ಪ್ರಖ್ಯಾತ ಇಂಗ್ಲಿಷ್ ವಿಜ್ಞಾನಿ ಎಡಿಂಗ್‌ಟನ್ನರು ಫೋಟೋಗಳನ್ನು ಪಡೆಯಲು ಪಟ್ಟ ಶ್ರಮವನ್ನೂ ಆಮೇಲೆ ರಾಯಲ್ ಸೊಸೈಟಿಯವರು ಎಡಿಂಗ್‌ಟನ್‌ರವರ ವರದಿಯನ್ನು ಅನುಮೋದಿಸಿದ್ದನ್ನೂ ಹಿಂದಿನ ಪುಟಗಳಲ್ಲಿ ನೋಡಿದ್ದೇವೆ. ಹೀಗೆ ಐನ್‌ಸ್ಟೈನರ ಹೊಸ ಸಿದ್ಧಾಂತಕ್ಕೆ ಅಧಿಕಾರ ಮುದ್ರೆ ದೊರೆಯಿತು.

ರಾಯಲ್ ಸೊಸೈಟಿಯವರು ಸಾಪೇಕ್ಷ ಸಿದ್ಧಾಂತಕ್ಕೆ ತಮ್ಮ ಮನ್ನಣೆಯನ್ನಿತ್ತ ಸುದ್ದಿ ಕಾಳ್ಗಿಚ್ಚಿನಂತೆ ಪ್ರಪಂಚದ ಮೂಲೆಮೂಲೆಗೂ ಹಬ್ಬಿತು. ವರ್ತಮಾನ ಪತ್ರಿಕೆಗಳು ಈ ಸಮಾಚಾರವನ್ನು ದಪ್ಪ ದಪ್ಪ ಅಕ್ಷರಗಳಲ್ಲಿ ಮುದ್ರಿಸಿದುವು. ಕೆಲವು ಪತ್ರಿಕೆಗಳು ಐನ್‌ಸ್ಟೈನರನ್ನು ಇಪ್ಪತ್ತನೆಯ ಶತಮಾನದ ಕಾಪರ್ನಿಕಸ್ ಎಂದು ಘೋಷಿಸಿದವು ಮತ್ತೆ ಕೆಲವು

ಅವರನ್ನು ಪುರಾತನ ಭಾವನೆಗಳನ್ನು ತಲೆಕೆಳಗು ಮಾಡಿದ ಕ್ರಾಂತಿ ಪುರುಷನೆಂದು ಹೊಗಳಿದುವು. ಕೆಲವು ದಿವಸಗಳ ಹಿಂದೆ ಕೇವಲ ಜರ್ಮನರಿಗೆ ಮತ್ತು ಹೊರ ದೇಶದ ಹಲಕೆಲವು ವಿಜ್ಞಾನಿಗಳಿಗೆ ಮಾತ್ರ ಪರಿಚಿತವಾಗಿದ್ದ ಐನ್‌ಸ್ಟೈನರ ಹೆಸರು ಮನೆಮಾತಾಗಿ ಹೋಯಿತು, ಅವರ ಖ್ಯಾತಿ ಎಲ್ಲ ದೇಶಗಳಿಗೂ, ಎಲ್ಲ ಮೂಲೆಗಳಿಗೂ ಹರಡಿತು. ಈ ಪರಿಸ್ಥಿತಿಯು ಯುದ್ಧದಲ್ಲಿ ಸೋತು ಕಂಗಾಲಾಗಿದ್ದ ಜರ್ಮನರಲ್ಲಿ ನವಚೈತನ್ಯವನ್ನುಂಟುಮಾಡಿತು. ತಮ್ಮ ದೇಶದ ವೈಜ್ಞಾನಿಕನೊಬ್ಬನು ಪ್ರಪಂಚಕ್ಕೇ ದೊಡ್ಡವನಾದಂದು ಜರ್ಮನರಿಗೆ ಅಪರಿಮಿತವಾದ ಉತ್ಸಾಹವನ್ನುಂಟುಮಾಡಿತು. ಯುದ್ಧದಲ್ಲುಂಟಾದ ಪರಾಜಯದಿಂದ ತಲೆತಗ್ಗಿಸಿ ನಿರ್ವೀರ್ಯರಾಗಿದ್ದವರು ತಲೆ ಎತ್ತಿ ನಿಲ್ಲುವಂತಾಯಿತು. ಜಗತ್ತಿನ ಪ್ರಗತಿಗೆ ತಾವೂ ಸಾಕಷ್ಟು ಸಹಾಯಮಾಡಬಲ್ಲೆವು. ವಿವಿಧ ಜನಾಂಗಗಳ ಮಧ್ಯೆ ತಲೆ ಎತ್ತಿ ಬಾಳಬಲ್ಲೆವು ಎಂಬ ಹೊಸ ಹುರುಪು ಆ ದಲಿತ ಜನಾಂಗಕ್ಕೆ ಉಂಟಾಯಿತು. ಅದರಲ್ಲೂ ಎಲ್ಲರ ತಿರಸ್ಕಾರಕ್ಕೂ ಗುರಿಯಾಗಿದ್ದ ಜರ್ಮನ್ ಯಹೂದಿಗಳ ಆನಂದಕ್ಕೆ ಪಾರವೇ ಇರಲಿಲ್ಲ. ನ್ಯೂಟನ್, ಕೋಪರ್ನಿಕಸ್ ಮುಂತಾದ ಮೇಧಾವಿಗಳನ್ನು ಮೀರಿಸಿದ ಮಹಾಪುರುಷನೊಬ್ಬನು ತಮ್ಮ ಜನಾಂಗದಲ್ಲಿ ಉದಯಿಸಿದ್ದಾನೆ ಎಂಬ ಅರಿವು ಅವರಿಗುಂಟಾಯಿತು. ಆತ್ಮಗೌರವವನ್ನು ಕಳೆದುಕೊಂಡಿದ್ದ ಆ ಯಹೂದಿಗಳಿಗೆ ತಾವು 'ಇತರರಿಗಿಂತ ಕೀಳು' ಎಂಬ ಮಾನಸಿಕ ರೋಗ ಹಿಡಿದಿತ್ತು. ಆದ್ದರಿಂದ ಅವರಿಗೆ ಸ್ವಾಭಿಮಾನಕ್ಕಿಂತ ಒಳ್ಳೆಯ ಮದ್ದಿರಲಿಲ್ಲ. ಐನ್‌ಸ್ಟೈನರು ಸುಖ್ಯಾತರಾದದ್ದು ಯಹೂದಿಗಳಲ್ಲಿ ಈ ಭಾವನೆ ಬೆಳೆಯಲು ಅನುಕೂಲ ಮಾಡಿಕೊಟ್ಟಿತು.

ಐನ್‌ಸ್ಟೈನರಿಗೆ ದೊರಕಿದ ಖ್ಯಾತಿಗೌರವಗಳು ಹೀಗೆ ಜರ್ಮನರ ಮೇಲೆ ಸತ್ಪರಿಣಾಮವನ್ನುಂಟುಮಾಡಿದ್ದರೆ, ಇಂಗ್ಲೆಂಡ್, ಅಮೇರಿಕಾ ದೇಶಗಳ ಕೆಲವರ ಮೇಲೆ ಮತ್ತೊಂದು ವಿಧವಾದ ಪರಿಣಾಮವನ್ನುಂಟು ಮಾಡಿತು. ಹಾಲಹಲ ಉದಿಸಿದ್ದು ಅಮೃತ ಮಂಥನದ ಸಮಯದಲ್ಲಿ ತಾನೆ? ಅಮೇರಿಕಾ ಮತ್ತು ಬ್ರಿಟನ್ನಿನ ಕೆಲ ಪತ್ರಿಕೆಗಳಿಗೆ ಜರ್ಮನಿಯನ್ನೂ ಮತ್ತು ಅದರ ಸಂಸ್ಕೃತಿಯನ್ನೂ—ಅದು ಒಳ್ಳೆಯದಿರಲಿ, ಕೆಟ್ಟದಿರಲಿ—ತೆಗಳುವದೇ ಧ್ಯೇಯವಾಗಿತ್ತು. ಈ ಪತ್ರಿಕೆಗಳು ಐನ್‌ಸ್ಟೈನರ ನೂತನ ಸಿದ್ಧಾಂತವನ್ನು ತೆಗಳತೊಡಗಿದವು. ರಾಯಲ್ ಸೊಸೈಟಿಯಂಥ ವಿದ್ವತ್ಸಂಸ್ಥೆ ಸತ್ಯವಾದದ್ದು ಎಂದು ಒಪ್ಪಿದ್ದರಿಂದ ಭೌತಶಾಸ್ತ್ರದ ಆಧಾರದ ಮೇಲೆ 'ಸಾಪೇಕ್ಷ ಸಿದ್ಧಾಂತವು ಸುಳ್ಳು' ಎಂದು ತೋರಿಸಿಕೊಡಲು ಆ ಪತ್ರಿಕೆಗಳಿಗೆ ಸಾಧ್ಯವಿರಲಿಲ್ಲ. ಆದ್ದರಿಂದ ಆ ಪತ್ರಿಕೆಗಳು ಐನ್‌ಸ್ಟೈನರ ಸಿದ್ಧಾಂತವನ್ನು ತೆಗಳಲು ಮತ್ತೊಂದು ವಕ್ರದಾರಿಯನ್ನು ಹಿಡಿದುವು. ತತ್ವಶಾಸ್ತ್ರ ಮತ್ತು ರಾಜ್ಯಶಾಸ್ತ್ರಗಳ ದೃಷ್ಟಿಯಿಂದ ಸಾಪೇಕ್ಷಸಿದ್ಧಾಂತವು ಒಪ್ಪತಕ್ಕದ್ದಲ್ಲ ಎಂದು ಅವು ಪ್ರಚಾರ ಮಾಡತೊಡಗಿದವು. ಕಾಲಕ್ರಮೇಣ ಬ್ರಿಟನ್ ಮತ್ತು ಅಮೇರಿಕದ ಪತ್ರಿಕೆಗಳ ಜೊತೆಗೆ ಕೆಲವು ರಷ್ಯನ್ ಪತ್ರಿಕೆಗಳೂ ಸೇರಿಕೊಂಡವು. ಈ ರಷ್ಯನ್ ಪತ್ರಿಕೆಗಳು ತಮ್ಮ ಬಾಲ್ಷೆವಿಕ್ ಸಿದ್ಧಾಂತದ ಪ್ರಕಾರ ಸಾಪೇಕ್ಷವಾದವು ಪೊಳ್ಳುವಾದವಾಗುತ್ತದೆ ಎಂದು ಅಪಪ್ರಚಾರ ಮಾಡುತ್ತಿದ್ದವು, ಸಾಪೇಕ್ಷವಾದವು ಕೇವಲ ಭೌತಶಾಸ್ತ್ರಕ್ಕೆ ಸಂಬಂಧಪಟ್ಟದ್ದೇ ಹೊರತು

ಆದರ ಸತ್ಯಾಸತ್ಯತೆಯನ್ನು ಉಳಿದ ಶಾಸ್ತ್ರಗಳ ಬೆಳಕಿನಲ್ಲಿ ಪರೀಕ್ಷಿಸುವುದು ಶಸ್ತ್ರಚಿಕಿತ್ಸೆಯಲ್ಲಿ ಸೀಸದಕಡ್ಡಿಯನ್ನು ಆಯುಧವಾಗಿ ಬಳಸುವ ಪ್ರಯತ್ನದಂತೆ ಅರ್ಥಹೀನವಾದದ್ದು ಎಂಬ ಅಂಶವನ್ನು ಐನ್‌ಸ್ಟೈನ್ ವಿರೋಧಿಗಳು ಗಣನೆಗೆ ತಂದುಕೊಳ್ಳಲಿಲ್ಲ. ತೆಗಳುವುದೇ ಅವರ ಉದ್ದೇಶವಾಗಿದ್ದ ಕಾರಣ ಅವರಿಗೆ ಯಾವ ತರ್ಕವೂ ಹಿಡಿಸುತ್ತಿರಲಿಲ್ಲ. ಇಂಥ ಅಪಪ್ರಚಾರಗಳ ಪರಿಣಾಮ ಮತ್ತೇನೇ ಇರಲಿ, ಐನ್‌ಸ್ಟೈನರ ಹೆಸರು ಮತ್ತಷ್ಟು ಪ್ರಚಾರವಾಗಲು ಸಹಾಯಕವಾಯಿತು. ಅಂತು ಖಂಡನೆಗಾಗಿಯೋ, ಮಂಡನೆಗಾಗಿಯೋ, ಐನ್‌ಸ್ಟೈನರ ಸಿದ್ಧಾಂತವೂ ಅವರ ಹೆಸರೂ ಪ್ರಪಂಚದ ಎಲ್ಲ ಪತ್ರಿಕೆಗಳಲ್ಲಿಯೂ ಪ್ರಕಟವಾಗುತ್ತಿದ್ದುವು. ಅವರ ಹೆಸರು ಎಲ್ಲೆಲ್ಲೂ ಕೇಳಿಬರುತ್ತಿತ್ತು.

ಯುದ್ಧ ಸಮಯದಲ್ಲಿ ಶೈಶವಾವಸ್ಥೆಯಲ್ಲಿದ್ದ ಕೆಲವು ಸಮಸ್ಯೆಗಳು ಯುದ್ಧ ಮುಗಿದ ಮೇಲೆ ಭೀಕರ ರೂಪವನ್ನು ತಾಳಿದವು. ಯುದ್ಧಕಾಲದಲ್ಲಿಯೇ ಯುರೋಪು ಹಸಿವು ಅನಾರೋಗ್ಯಗಳಿಂದ ಬಳಲಿ ಬೆಂಡಾಗಿದ್ದಿತು. ಅಲ್ಲಿನ ಜನತೆಯ ನೈತಿಕ ಮಟ್ಟ ಅಧೋಗತಿಗಿಳಿದಿದ್ದಿತು; ಜನಗಳು ಪಶುಗಳಂತೆ ವರ್ತಿಸುತ್ತಿದ್ದರು. ಸಾಮಾನ್ಯ ಜನ ದಿಕ್ಕುಗೆಟ್ಟು ಮುಂದೇನು ಮಾಡಬೇಕೆಂಬುದನ್ನು ತಿಳಿಯದಾದರು. ಅವರ ಭವಿಷ್ಯತ್ತು ಅಂಧಃಕಾರಮಯವಾಗಿತ್ತು. ಐನ್‌ಸ್ಟೈನರ ಹೆಸರು ದಶದಿಕ್ಕುಗಳಲ್ಲಿಯೂ ಮೊಳಗಿದ್ದು ಜನ ಹೀಗೆ ಕಂಗಾಲಾಗಿದ್ದ ಸಮಯದಲ್ಲಿ, ಈ ನಿರ್ಭಾಗ್ಯರ ದೃಷ್ಟಿಯಲ್ಲಿ ಐನ್‌ಸ್ಟೈನರು ಕೇವಲ ಭೌತಶಾಸ್ತ್ರ ಸಂಶೋಧಕರಾಗಿರಲಿಲ್ಲ, ಅವರು ಸರ್ವಕಷ್ಟಗಳನ್ನೂ ಪರಿಹರಿಸಬಲ್ಲ ಪವಾಡಪುರುಷರಾಗಿದ್ದರು. ಯಾವ ಪ್ರಯೋಗವನ್ನೂ ನಡೆಸದೆ, ಕೇವಲ ನಾಲ್ಕಾರು ಪುಟಗಳಷ್ಟು ಕಾಗದ ಮತ್ತು ಅರ್ಧಸವೆದ ಸೀಸದ ಕಡ್ಡಿಯ ಸಹಾಯದಿಂದ ವಿಶ್ವದ ಗುಟ್ಟನ್ನು ತಿಳಿಸಲು ಶಕ್ತರಾದ ಐನ್‌ಸ್ಟೈನರನ್ನು ಜನರು ಅತಿಮಾನವನೆಂದು ಬಗೆದದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಆದರೆ ಯಾವ ಆಧಾರದ ಮೇಲೆ ಜನ ಅವರನ್ನು ಎಲ್ಲ ಸಂಕಟಗಳನ್ನೂ ನಿವಾರಿಸಬಲ್ಲ ಮಂತ್ರವಾದಿ ಎಂದು ತಿಳಿದರೋ ಅದು ಅರ್ಥವಾಗದ ಒಗಟು. ದೊಡ್ಡ ದೊಡ್ಡ ಕಾರ್ಖಾನೆಗಳ ಮಾಲೀಕರಿಂದ ಮೊದಲ್ಗೊಂಡು, ನಟ-ನಟಿಯರು, ಸೊಗಸುಗಾತಿಯರು, ವಿದ್ಯಾರ್ಥಿಗಳು ಮತ್ತು ಕೂಲಿಕಾರರವರೆಗಿನ ಎಲ್ಲ ವರ್ಗದ ಜನಗಳೂ ಐನ್‌ಸ್ಟೈನರನ್ನು ಸಲಹೆ ಕೇಳಲಾರಂಭಿಸಿದರು. ಹೀಗೆ ಐನ್‌ಸ್ಟೈನರ ವೃತ್ತಿಗೆ ಸಂಬಂಧಪಡದ ಜನರು ಅವರನ್ನು ಕಾಡುತ್ತಿದ್ದ ಸಮಯದಲ್ಲಿ ಅವರ ಅನುಯಾಯಿಗಳಾದ ಕೆಲವು ಶಾಂತಿಪ್ರಿಯರೂ, ರಾಜಕೀಯ ಮುಖಂಡರೂ ಸಲಹೆ ಕೊಡುವಂತೆ ಅವರನ್ನು ಪ್ರಾರ್ಥಿಸುತ್ತಿದ್ದರು. ಭೌತಶಾಸ್ತ್ರಜ್ಞರಿಂದ ಬರುತ್ತಿದ್ದ ಪತ್ರಗಳಿಗಂತೂ ಮಿತಿಯೇ ಇರಲಿಲ್ಲ. ಭೌತಶಾಸ್ತ್ರ ವಲಯದಲ್ಲಿ ಅಲ್ಪ ಸ್ವಲ್ಪ ಖ್ಯಾತಿಯನ್ನು ಪಡೆದಿದ್ದವರೂ ಸಹ ಐನ್‌ಸ್ಟೈನರ ಉತ್ತರಕ್ಕಾಗಿಯೋ, ಭೇಟಿಗಾಗಿಯೋ ಕಾಯುತ್ತಿದ್ದರು. ತಮ್ಮ ಸಂಶೋಧನೆಗಳಿಗೆ ಐನ್‌ಸ್ಟೈನರ ಸಮರ್ಥನೆ ದೊರಕಿದರೆ ತಾವು ಧನ್ಯರಾದಂತೆ ಆ ಜನ ಭಾವಿಸಿದ್ದರು. ಅಂತೂ ಎಲ್ಲ ವರ್ಗದ ಜನಗಳೂ ಐನ್‌ಸ್ಟೈನರ ಅಭಿಪ್ರಾಯಗಳನ್ನು ಕುತೂಹಲ, ಆಸಕ್ತಿ ಮತ್ತು ಗೌರವಗಳಿಂದ ಕೇಳುತ್ತಿದ್ದರು. ಒಮ್ಮೆಂದೆ

ಮ್ಮೆಗೆ ತಾವು ಸಾರ್ವಜನಿಕರಲ್ಲಿ ಪ್ರಮುಖರಾದದ್ದು ಐನ್‌ಸ್ಟೈನರಿಗೆ ಆಶ್ಚರ್ಯವನ್ನುಂಟು ಮಾಡಿತು. ಕೇವಲ ವೈಜ್ಞಾನಿಕ ತಪಸ್ಸಿನಲ್ಲಿ ತೊಡಗಬೇಕೆಂದುಕೊಂಡಿದ್ದ ಐನ್‌ಸ್ಟೈನರಿಗೆ ಇಂಥ ಮನ್ನಣೆಯಿಂದ ಸಂತೋಷವೇನೂ ಉಂಟಾಗಲಿಲ್ಲ.

ತಾನಾಗಿಯೇ ಐನ್‌ಸ್ಟೈನರ ಕೊರಳಿಗೆ ಬಿದ್ದ ಮುಂದಾಳುತನದ ಪಟ್ಟ ಅವರ ತಲೆಯಮೇಲೆ ಸಾಕಷ್ಟು ಜವಾಬ್ದಾರಿಯನ್ನು ಹೊರಿಸಿತು. ಅವರ ಬುದ್ಧಿವಾದವನ್ನು ಕಾಯುತ್ತಿದ್ದ ಜನಕ್ಕೆ ಅವರು ತಮ್ಮ ಕರ್ತವ್ಯವನ್ನು ಸಲ್ಲಿಸಬೇಕಾಯಿತು. ಜನ ಕೇಳುತ್ತಿದ್ದ ಪ್ರಶ್ನೆಗಳು ತಮಗೆ ಸಂಬಂಧಪಟ್ಟಿಲ್ಲವೆಂದು ಹೇಳಿ ಸುಮ್ಮನಾಗುವುದು ಸರಿಯಲ್ಲವೆಂದು ಐನ್‌ಸ್ಟೈನರು ಭಾವಿಸಿದರು. ಕ್ರೌರ್ಯ, ಹಿಂಸೆಗಳ ಫಲವಾಗಿ ಪ್ರಪಂಚಕ್ಕೆ ಪ್ರಪಂಚವೇ ಕಷ್ಟದಲ್ಲಿ ತೊಳಲಾಡುತ್ತಿರುವಾಗ, ಸರಿಯಾದ ದಾರಿ ತೋರಿಸಬೇಕೆಂದು ಅನೇಕ ಜನ ತಮ್ಮನ್ನು ಪ್ರಾರ್ಥಿಸುತ್ತಿರುವಾಗ, ತಾನು ವಿಶ್ವವಿದ್ಯಾನಿಲಯದಲ್ಲಿ ಕುಳಿತು ಗಣಿತ–ಗುಣಿತಗಳಲ್ಲಿಯೇ ಆಯುಸ್ಸನ್ನು ಸವೆಸುವದು ಧರ್ಮವಲ್ಲವೆಂದು ಅವರು ತಿಳಿದರು. ಕಷ್ಟದಲ್ಲಿರುವ ಜನಕ್ಕೆ ತನ್ನಿಂದ ಸಾಧ್ಯವಾದಷ್ಟು ಸೇವೆ ಸಲ್ಲಿಸದೆ ಹೋದರೆ ಕರ್ತವ್ಯಭ್ರಷ್ಟನಾಗುತ್ತೇನೆಂದು ಐನ್‌ಸ್ಟೈನರು ಬಗೆದರು. ಇಂಥ ಭಾವನೆಗಳು ಅವರನ್ನು ಸಾರ್ವಜನಿಕ ಕ್ಷೇತ್ರದಲ್ಲಿ ಕಾಲಿಡುವಂತೆ ಮಾಡಿದುವು. ಹೀಗೆ ಸಾರ್ವಜನಿಕ ಸೇವೆಗೆ ಅವರು ಸಿದ್ಧವಾದ ಮೇಲೆ, ಎಲ್ಲ ಬಗೆಯ ಅನ್ಯಾಯಗಳನ್ನೂ ಪ್ರತಿಭಟಿಸಲಾರಂಭಿಸಿದರು. ಅನ್ಯಾಯದೊಡನೆ ಅಸಹಕಾರ ಮಾಡಿ ಅದನ್ನು ನಿಃಶಕ್ತಗೊಳಿಸುವುದಕ್ಕಿಂತ ಅದರೊಡನೆ ಹೋರಾಡಿ ಅದನ್ನು ನೆಲಸಮ ಮಾಡುವುದು ಉತ್ತಮ ಮಾರ್ಗವೆಂದು ಈ ವೇಳೆಗೆ ಐನ್‌ಸ್ಟೈನರಿಗೆ ಅನ್ನಿಸಿತು. ಯುದ್ಧಕ್ಕೆ ಮೊದಲು ಅವರು ಹಿಡಿದಿದ್ದುದು ಮೊದಲನೆಯ ಮಾರ್ಗವನ್ನು. ಯುದ್ಧ ಮುಗಿದ ಮೇಲೆ ಎರಡನೆಯ ಮಾರ್ಗವನ್ನು ಹಿಡಿಯುವಂತೆ ಸಂದರ್ಭಗಳು ಅವರನ್ನು ಬಲಾತ್ಕರಿಸಿದುವು.

## ಜಯೋನಿಸ್ಟ್ ಚಳುವಳಿಗೆ ಐನ್‌ಸ್ಟೈನರ ಬೆಂಬಲ

ಸಾರ್ವಜನಿಕ ರಂಗವನ್ನು ಪ್ರವೇಶಿಸಿದ ಮೇಲೆ, ಐನ್‌ಸ್ಟೈನರು ಪ್ರತಿಭಟಿಸಿದ ಅನ್ಯಾಯಗಳಲ್ಲಿ ಬಹು ಮುಖ್ಯವಾದದ್ದು ಯುರೋಪಿಯನ್ನರಿಂದ ಯುಹೂದಿಗಳಿಗುಂಟಾಗುತ್ತಿದ್ದ ತಿರಸ್ಕಾರ. ಪ್ರಾಗ್ ನಗರದಲ್ಲಿರುವಾಗಲೇ ಐನ್‌ಸ್ಟೈನರಿಗೆ ಮಧ್ಯ ಯುರೋಪಿನಲ್ಲಿ ಯುಹೂದಿಗಳು ಎಂಥ ಅವಹೇಳನಕ್ಕೆ ಗುರಿಯಾಗಿದ್ದರೆಂಬುದು ವ್ಯಕ್ತವಾಗಿತ್ತು. ಆದರೆ ಆಗ ಅವರು ಈ ಸಮಸ್ಯೆಗೆ ಅಷ್ಟಾಗಿ ಮನಸ್ಸು ಕೊಡಲಿಲ್ಲ. ವಿಶ್ವಪ್ರಜೆಯಾದ ತಾವು ಕೇವಲ ಒಂದು ಜನಾಂಗದ ಯೋಗಕ್ಷೇಮಕ್ಕೆ ಹೊಡೆದಾಡುವುದು ಸರಿಯಲ್ಲವೆಂದು ಆಗ ಐನ್‌ಸ್ಟೈನರು ತಿಳಿದಿದ್ದರು. ಬರಬರುತ್ತಾ ಐನ್‌ಸ್ಟೈನರಿಗೆ ಈ ಭಾವನೆಯಲ್ಲಿ ಅಷ್ಟು ತಿರುಳಿಲ್ಲವೆನಿಸಿತು. ಇಡೀ ವಿಶ್ವದ ಕಲ್ಯಾಣಕ್ಕೆ ದುಡಿಯುವುದು ಒಳಿತಾದರೂ, ಅಂದಿನ ಅನ್ಯಾಯಗಳನ್ನು ನೋಡಿಕೊಂಡು ಸುಮ್ಮನಿರುವುದು ಸಾಧ್ಯವಿಲ್ಲವೆಂದು ಅವರಿಗೆ ತೋರಿತು. ಆದ್ದರಿಂದ ತಮ್ಮ ಜನಾಂಗಕ್ಕೆ ಆಗಿರುವ ಅನ್ಯಾಯವನ್ನು ಪ್ರತಿಭಟಿಸುವುದು ತಮ್ಮ ಕರ್ತವ್ಯವೆಂದು

ತಿಳಿದರು, ಈ ನಿರ್ಧಾರದ ಫಲವೇ ಅವರಿಂದ ಸಯೋನಿಸ್ಟ್ ಚಳುವಳಿಗೆ ದೊರೆತ ಬೆಂಬಲ.

ಸಯೋನಿಸ್ಟ್ ಚಳವಳಿಯ ಮುಖ್ಯ ಉದ್ದೇಶ ಪ್ಯಾಲೆಸ್ಟೈನನ್ನು ಯಹೂದಿಯರ ರಾಷ್ಟ್ರವನ್ನಾಗಿ ಮಾಡುವುದು. ಯಹೂದಿಗಳಿಗೆ ಒಂದು ಪ್ರತ್ಯೇಕ ರಾಷ್ಟ್ರವನ್ನು ದೊರಕಿಸಿ ಕೊಟ್ಟರೆ ಅವರು ಒಳಗಾಗಿರುವ ಅಪಹಾಸ್ಯ ನಿಂದೆಗಳಿಂದ ಪಾರಾಗುವರೆಂದು ಸಯೋನಿಸ್ಟ್ ಮುಖಂಡರು ಹೇಳುತ್ತಿದ್ದರು. ಯುರೋಪಿನಲ್ಲಿ ಎಲ್ಲ ರಾಷ್ಟ್ರಗಳಲ್ಲೂ ಯಹೂದಿಗಳು ಅಲ್ಪ ಸಂಖ್ಯಾತರಾಗಿದ್ದುದರಿಂದ ಅವರು ಉಳಿದವರ ಅವಹೇಳನಕ್ಕೆ ಗುರಿಯಾಗಿದ್ದಾರೆಂದು ಅನೇಕ ವಿಚಾರಶೀಲರು ಭಾವಿಸಿದ್ದರು. ಆದ್ದರಿಂದ ಸಯೋನಿಸ್ಟ್ ಮುಖಂಡರು ಹೇಳುತ್ತಿದ್ದ ಮಾತು ಸತ್ಯವಾದುದೆಂದು ಆ ವಿಚಾರಶೀಲರು ನಂಬಿದ್ದರು. ಬಹು ಹಿಂದೆ ಯಹೂದಿಗಳ ನೆಲೆಯಾಗಿದ್ದ ಪ್ಯಾಲೆಸ್ಟೈನ್ ದೇಶವು ಸಾಂಸ್ಕೃತಿಕ ಮತ್ತು ಭೌಗೋಲಿಕ ದೃಷ್ಟಿಯಿಂದ ಯಹೂದಿ ರಾಷ್ಟ್ರವಾಗಲು ಯೋಗ್ಯವಾದುದೆಂದು ಸಯೋನಿಸ್ಟರು ಹೇಳುತ್ತಿದ್ದರು. ತಮ್ಮ ಸಂಸ್ಕೃತಿಯಲ್ಲೂ ಮತ್ತು ಧರ್ಮದಲ್ಲೂ ಅಭಿಮಾನವಿದ್ದ ಯಹೂದಿಗಳಿಗೆ ಈ ಮಾತುಗಳು ಹಿಡಿಸಿದ್ದುವು. ಆದ್ದರಿಂದ ಎಲ್ಲ ಯಹೂದಿಗಳೂ ಪ್ಯಾಲೆಸ್ಟೈನ್ ತಮ್ಮ ನಾಡಾಗುವ ದಿನಗಳನ್ನು ಎದುರುನೋಡುತ್ತಿದ್ದರು. ಅಂದಿನ ಮಧ್ಯ ಯುರೋಪಿನ ಸ್ಥಿತಿಯು ನಿಷ್ಪಕ್ಷಪಾತಿಗಳೆಲ್ಲರೂ ಯಹೂದಿಗಳ ಆಕಾಂಕ್ಷೆಯನ್ನು ಸಹಾನುಭೂತಿಯಿಂದ ನೋಡುವಂತೆ ಮಾಡಿತ್ತು.

ಜರ್ಮನಿಯಲ್ಲಿ ಯಹೂದಿಗಳ ಸ್ಥಿತಿ ಯುದ್ಧಕ್ಕೆ ಮೊದಲೇ ಕೆಟ್ಟಿತ್ತು. ಯುದ್ಧ ಮುಗಿದ ಮೇಲಂತೂ ಅವರ ಸ್ಥಿತಿ ಮತ್ತಷ್ಟು ಶೋಚನೀಯವಾಯಿತು. ಯಹೂದಿಗಳ ದೇಶದ್ರೋಹದಿಂದ ತಮಗೆ ಸೋಲಾಯಿತೆಂದು ಜರ್ಮನರು ಭಾವಿಸಿದ್ದರು. ಆದ್ದರಿಂದ ಅವರ ದೃಷ್ಟಿಯಲ್ಲಿ ಎಲ್ಲ ಯಹೂದಿಗಳೂ 'ದೇಶದ್ರೋಹಿ'ಗಳಾದರು. ಅವರು ಒಂದು ರೀತಿಯ ಅಸ್ಪೃಶ್ಯರಾದರು. ಯುದ್ಧಕಾಲದಲ್ಲಿನ ಎಲ್ಲ ಆಗುಹೋಗುಗಳನ್ನು ತಿಳಿದ ವಿದ್ಯಾವಂತರು ಕೂಡ ಯಹೂದಿಗಳನ್ನು ನಿರಪರಾಧಿಗಳೆಂದು ಹೇಳುತ್ತಿರಲಿಲ್ಲ. ಬದಲು ಎಲ್ಲವನ್ನೂ ತಿಳಿದ ಈ ಜನರು ದ್ವೇಷದ ಬೆಂಕಿಗೆ ತುಪ್ಪ ಹಾಕುತ್ತಾ ಬಂದರು. ಈ ದುಷ್ಟ ಭಾವನೆ ಜರ್ಮನಿಯ ಎಲ್ಲೆಯನ್ನೂ ಮೀರಿ ಹರಿಯಲಾರಂಭಿಸಿತು. ಮಧ್ಯ ಯುರೋಪಿನ ಇಡೀ ಕ್ರೈಸ್ತ ಜನಾಂಗ ಯಹೂದಿಗಳನ್ನು ಪಶುಗಳಂತೆ ಕಾಣತೊಡಗಿದರು. ಇದರ ಪರಿಣಾಮವಾಗಿ ಯಹೂದಿಗಳಿಗೆ ಸಾರ್ವಜನಿಕ ಸಂಸ್ಥೆಗಳಲ್ಲಿ ಪ್ರವೇಶವಿರಲಿಲ್ಲ. ಮೇಧಾವಿಗಳಾದ ಯಹೂದಿ ತರುಣರಿಗೆ ವಿಶ್ವವಿದ್ಯಾನಿಲಯಗಳಲ್ಲಿ ಸ್ಥಳ ದೊರಕುತ್ತಿದ್ದುದು ದುರ್ಲಭವಾಗಿತ್ತು. ಯೋಗ್ಯತೆಯಿದ್ದ ಯಹೂದಿಗಳಿಗೆ ಸರ್ಕಾರಗಳಿಂದ ಯಾವ ಪ್ರೋತ್ಸಾಹವೂ ದೊರಕುತ್ತಿರಲಿಲ್ಲ. ವಿಶ್ವವಿದ್ಯಾನಿಲಯಗಳಲ್ಲಿ ಕಷ್ಟಪಟ್ಟು ಸ್ಥಳ ದೊರಕಿಸಿಕೊಂಡವರ ಸ್ಥಿತಿಯಾದರೂ ಸಮರ್ಪಕವಾಗಿರಲಿಲ್ಲ. ಕ್ರೈಸ್ತ ವಿದ್ಯಾರ್ಥಿಗಳು ಅವರಿಗೆ ಬಹಿಷ್ಕಾರ ಹಾಕುತ್ತಿದ್ದರು. ಹೀಗೆ ಯಹೂದಿ ತರುಣರು ಆತ್ಮಗೌರವವನ್ನು ಮಾರಿಕೊಂಡು ವಿದ್ಯೆಯನ್ನು ಸಂಪಾದಿಸಬೇಕಾಗಿತ್ತು. ಇಲ್ಲವೇ ವಿದ್ಯೆಯನ್ನು ಅಷ್ಟಕ್ಕೆ ನಿಲ್ಲಿಸಬೇಕಾಗಿದ್ದಿತು. ಪರಿಸ್ಥಿತಿ

ಹೀಗಿದ್ದುದರಿಂದ ಅನೇಕ ಯಹೂದಿ ತರುಣರು ತಮ್ಮ ವಿದ್ಯೆಯನ್ನು ಅರ್ಧದಲ್ಲೇ ಮೊಟಕು ಮಾಡಿಕೊಳ್ಳುತ್ತಿದ್ದರು. ವಿದ್ಯಾಪಕ್ಷಪಾತಿಗಳಾದ ಐನ್‌ಸ್ಟೈನರು ಈ ತರುಣರ ಪಾಡನ್ನೂ, ಉಳಿದ ಯಹೂದಿಗಳ ಸ್ಥಿತಿಯನ್ನೂ ಕಂಡು ದುಃಖಪಟ್ಟರು. ಅವರು ಸಯೋನಿಸ್ಟ್ ಚಳುವಳಿಗೆ ಬೆಂಬಲ ಕೊಡಲು ಈ ಪರಿಸ್ಥಿತಿ ಬಹು ಮುಖ್ಯ ಕಾರಣ.

ಮ್ಯಾಂಚೆಸ್ಟರ್ ವಿಶ್ವವಿದ್ಯಾನಿಲಯದಲ್ಲಿ ರಸಾಯನ ಶಾಸ್ತ್ರ ವಿಶಾರದನಾಗಿದ್ದ ವೀಸ್‌ಮನ್ ಮಹಾಶಯನು ಸಯೋನಿಸ್ಟ್ ಚಳುವಳಿಯ ಮುಖ್ಯನಾಯಕನಾಗಿದ್ದನು. ಆತನಿಗೆ ಬ್ರಿಟಿಷ್ ಸರಕಾರದ ಬೆಂಬಲವಿತ್ತು. ಯುದ್ಧದಲ್ಲಿ ತಮಗೆ ಜಯ ದೊರೆಯುವಂತೆ ಯಹೂದಿಗಳು ಸಹಕರಿಸಿದರೆ ಪ್ಯಾಲೆಸ್ಟೈನನ್ನು ಅವರಿಗೆ ಕೊಡುವುದಾಗಿ ಬ್ರಿಟಿಷ್ ಸರಕಾರದವರು ಘೋಷಿಸಿದ್ದರು. ತಾವು ಕೊಟ್ಟ ಮಾತನ್ನು ಉಳಿಸಿಕೊಳ್ಳುವ ಉದ್ದೇಶದಿಂದ ಬ್ರಿಟಿಷರು ವೀಸ್‌ಮನ್ನರಿಗೆ ಸಹಾಯಮಾಡುತ್ತಿದ್ದರು. ಬ್ರಿಟಿಷರ ಬೆಂಬಲದಿಂದ ನಡೆಯುತ್ತಿದ್ದ ಈ ಚಳುವಳಿಯನ್ನು ಮೊದಮೊದಲು ಐನ್‌ಸ್ಟೈನರು ಸಂಶಯ ದೃಷ್ಟಿಯಿಂದ ನೋಡುತ್ತಿದ್ದರು. ಪ್ರಾಯಶಃ ಅವರಿಗೆ ಸಯೋನಿಸಂ ಬ್ರಿಟಿಷ ಸಾಮ್ರಾಜ್ಯಶಾಹಿಯ ಒಂದು ಪ್ರತೀಕವಾಗಿ ಕಂಡಿರಬೇಕು. ಆದರೆ ಮಧ್ಯ ಯುರೋಪಿನ ಅಂದಿನ ಸ್ಥಿತಿಗತಿಗಳು ಐನ್‌ಸ್ಟೈನರು ತಮ್ಮ ಅಭಿಪ್ರಾಯವನ್ನು ಬದಲಾಯಿಸುವಂತೆ ಮಾಡಿದವು. ಸಯೋನಿಸ್ಟ್ ಚಳುವಳಿಗೆ ಬೆಂಬಲಿಗರಾಗಿ ನಿಲ್ಲದಿದ್ದರೆ, ಯಹೂದಿಗಳ ವಿನಾಶಕ್ಕೆ ದಾರಿ ಮಾಡಿಕೊಟ್ಟಂತಾಗುತ್ತದೆಂದು ಅವರಿಗೆ ಅನ್ನಿಸಿತು. ಅವರು ಅನೇಕ ದಿನಗಳವರೆಗೆ ಯೋಚಿಸಿ, ವೀಸ್‌ಮನ್ನರಿಗೆ ಒಂದು ಕಾಗದ ಬರೆದರು; ಆದರಲ್ಲಿ ಐನ್‌ಸ್ಟೈನರು ತಾವು ಸಯೋನಿಸಂಗಾಗಿ ಹೊಡೆದಾಡುವುದಾಗಿ ಸ್ಪಷ್ಟಪಡಿಸಿದ್ದರು. ಅವರು ಈ ಕಾಗದ ಬರೆದದ್ದು ೧೯೨೧ರಲ್ಲಿ; ಅಷ್ಟರಲ್ಲಿ ಚಳುವಳಿ ಪ್ರಾರಂಭವಾಗಿ ೨–೩ ವರ್ಷಗಳು ಸಂದಿದ್ದುವು. ಎರಡು ವರ್ಷಗಳ ದೀರ್ಘಾಲೋಚನೆಯ ತರುವಾಯ ಐನ್‌ಸ್ಟೈನರು ಈ ನಿರ್ಧಾರಕ್ಕೆ ಬಂದರು.

ಯಾವ ಐನ್‌ಸ್ಟೈನರು ಪ್ರ್ಯಾಗ್ ನಗರದಲ್ಲಿದ್ದಾಗ ಯಹೂದಿಗಳ ಚಳುವಳಿಯಿಂದ ದೂರವಿದ್ದರೋ ಅದೇ ಐನ್‌ಸ್ಟೈನರು ಕೆಲವು ವರ್ಷಗಳ ನಂತರ ಸಯೋನಿಸ್ಟ್ ಚಳುವಳಿಗೆ ಬೆಂಬಲ ಕೊಟ್ಟಿದ್ದಕ್ಕೆ ಸ್ವಲ್ಪ ವಿವರಣೆ ಆವಶ್ಯಕ. ಅವರ ವರ್ತನೆಯಲ್ಲಿನ ಈ ಬದಲಾವಣೆಗೆ ಮುಖ್ಯ ಕಾರಣ ಅಂದಿನ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳೇ ಹೊರತು ಅವರ ಮನೋಧರ್ಮವಲ್ಲ. ಮಹಾಯುದ್ಧಕ್ಕೆ ಮುಂಚೆ ಅವರು ಸಾರ್ವಜನಿಕ ಜೀವನದಿಂದ ವಿಮುಖರಾಗಿದ್ದರಷ್ಟೆ; ಆ ಸಮಯದಲ್ಲಿ ಅವರು ಪ್ರಪಂಚದಲ್ಲಿ ನಡೆಯುತ್ತಿದ್ದ ಅನ್ಯಾಯಗಳನ್ನು ಕಂಡು ಮರುಗುತ್ತಿದ್ದರೇ ಹೊರತು ಬಹಿರಂಗವಾಗಿ ಅದನ್ನು ಪ್ರತಿಭಟಿಸುತ್ತಿರಲಿಲ್ಲ. ವೈಜ್ಞಾನಿಕನಾದವನು ಸಾರ್ವಜನಿಕ ರಂಗವನ್ನು ಪ್ರವೇಶಿಸಿದರೆ ತನ್ನ ಧ್ಯೇಯವನ್ನು ಸಾಧಿಸಲಾರನೆಂಬುದು ಅವರ ಅಭಿಪ್ರಾಯವಾಗಿತ್ತು. ಆದರೆ ಮಹಾಯುದ್ಧದ ಕಾಲದಲ್ಲೂ ಮತ್ತು ತದನಂತರದಲ್ಲೂ ಜನರು ಅನುಭವಿಸಿದ ಕಷ್ಟಪರಂಪರೆಗಳು ಐನ್‌ಸ್ಟೈನರು ತಮ್ಮ ಧೋರಣೆಯನ್ನು ಬದಲಾಯಿಸುವಂತೆ ಮಾಡಿದ್ದುವು. ಯುದ್ಧಾನಂತರದ ಪರಿಸ್ಥಿತಿ ಅವರನ್ನು

ಸಾರ್ವಜನಿಕ ರಂಗಕ್ಕೆ ಎಳೆಯಿತು. ಜನಗಳಿಗೆ ಆಗುತ್ತಿದ್ದ ಅನ್ಯಾಯವನ್ನು ಕಂಡು ಅವರ ಮನಸ್ಸು ಕುದಿಯಿತು. ಅವರ ಈ ಅನುಕಂಪವು ಅವಕಾಶ ಸಿಕ್ಕಿದಾಗಲೆಲ್ಲಾ ಪ್ರಕಟವಾಗುತ್ತಿತ್ತು. ಸಯೋನಿಸ್ಟ್ ಚಳುವಳಿ ಅಂಥ ಒಂದು ಅವಕಾಶ. ಆದ್ದರಿಂದ ಮೊದ ಮೊದಲು ಅವರು ಸಯೋನಿಸ್ಟ್ ಚಳವಳಿಯಿಂದ ದೂರವಿದ್ದುದಕ್ಕೂ ಕ್ರಮೇಣ ಅದಕ್ಕೆ ಬೆಂಬಲ ಕೊಟ್ಟುದಕ್ಕೂ ಪರಸ್ಪರ ವಿರೋಧವೇನೂ ಇರಲಿಲ್ಲ.

ಐನ್‌ಸ್ಟೈನರು ಸಯೋನಿಸ್ಟ್ ಚಳುವಳಿಗೆ ಬೆಂಬಲ ಕೊಟ್ಟುದನ್ನು ಮತ್ತೊಂದು ದೃಷ್ಟಿಯಿಂದ ಕೆಲವರು ಟೀಕಿಸುತ್ತಿದ್ದರು. ಅದೇನೆಂದರೆ, ವಿಶ್ವಪ್ರಜಾಧರ್ಮವನ್ನು ಬೋಧಿಸುವ ಅವರಂಥವರು ಸಯೋನಿಸಂನಂತಹ ಸಂಕುಚಿತವಾದ ರಾಷ್ಟ್ರೀಯ ಚಳುವಳಿಗೆ ಬೆಂಬಲ ಕೊಟ್ಟಿದ್ದು ತಕ್ಕುದ್ದಲ್ಲ ಎಂಬುದು. ಸಯೋನಿಸಂ ಯಹೂದಿರಾಷ್ಟ್ರ ನಿರ್ಮಾಣಕ್ಕಾಗಿ ಯಹೂದಿಗಳು ನಡಿಸಿದ ಚಳುವಳಿ ಎಂಬುದು ನಿಜ. ಐನ್‌ಸ್ಟೈನರು ಯಹೂದಿಗಳಾಗಿದ್ದರೆಂಬುದೂ ಸತ್ಯ. ಆದ್ದರಿಂದ ಯಹೂದಿಗಳಾದ ಐನ್‌ಸ್ಟೈನರು ತಮ್ಮ ವಿಶ್ವಧರ್ಮವನ್ನು ಮರೆತಂತೆ ಭಾಸವಾಗುತ್ತಿದ್ದಿರಬಹುದು. ಆದರೆ ಐನ್‌ಸ್ಟೈನರು ಯಹೂದಿಗಳಿಗೆ ಬೆಂಬಲ ಕೊಟ್ಟಿದ್ದು ಸಂಕುಚಿತ ಮನೋಭಾವದಿಂದಲ್ಲ. ಅವರ ಉದ್ದೇಶ ಅನ್ಯಾಯವಾಗಿ ತೊಂದರೆಗೆ ಒಳಗಾಗಿರುವ ಜನಾಂಗವೊಂದಕ್ಕೆ ನ್ಯಾಯದೊರಕಿಸಿ ಕೊಡಬೇಕೆಂಬುದಾಗಿದ್ದಿತೇ ವಿನಹ ಉಳಿದ ಜನಾಂಗಗಳ ಮೇಲೆ ತಮ್ಮ ಜನಾಂಗ ಅಧಿಕಾರ ನಡಸಲೆಂದಲ್ಲ. ಪ್ರಪಂಚದ ಯಾವ ಮೂಲೆಯಲ್ಲಿ ಅನ್ಯಾಯ ನಡೆಯಲಿ, ಅದನ್ನು ಐನ್‌ಸ್ಟೈನರು ನಿರ್ಭೀತಿಯಿಂದ ಖಂಡಿಸುತ್ತಿದ್ದರು. ಅಮೇರಿಕದಲ್ಲಿ ನೀಗ್ರೋಗಳಿಗಾಗುತ್ತಿದ್ದ ಅನ್ಯಾಯವೂ, ಇಟಲಿ ದೇಶದ ಫ್ಯಾಸಿಸ್ಟ ಸರಕಾರದ ದಬ್ಬಾಳಿಕೆಯೂ ಐನ್‌ಸ್ಟೈನರ ಖಂಡನೆಗೆ ಒಳಗಾಗಿದ್ದವು. ಹೀಗೆ ಒಂದು ಜನಾಂಗಕ್ಕೆ ಒದಗಿದ್ದ ಆಪತ್ತನ್ನು ಪರಿಹರಿಸಲು ಐನ್‌ಸ್ಟೈನರು ಸಯೋನಿಸವರಿಗೆ ಬೆಂಬಲ ಕೊಟ್ಟರೇ ಹೊರತು ಆ ಚಳುವಳಿ ತಮ್ಮ ಮತಬಾಂಧವರಿಗೆ ಸಂಬಂಧಪಟ್ಟಿದ್ದೆಂಬ ಸಂಕುಚಿತ ದೃಷ್ಟಿಯಿಂದಲ್ಲ. ತಮ್ಮ ದೇಶದವರ ಉದ್ಧಾರಕ್ಕಾಗಿ ಹೋರಾಡಿದ ಗಾಂಧೀಜಿಯವರನ್ನು ವಿಶ್ವಪ್ರಜೆಯಲ್ಲವೆಂದು ಹೇಳಲಾದೀತೇ? ಈ ಸಂದರ್ಭದಲ್ಲಿ ಡಾ। ರಾಧಾಕೃಷ್ಣನ್ ಅವರು ಗಾಂಧೀಜಿಯವರ ವಿಷಯವಾಗಿ ನುಡಿದಿರುವ ಮಾತುಗಳನ್ನು ಐನ್‌ಸ್ಟೈನರಿಗೂ ಅನ್ವಯಿಸಬಹುದು. ಗಾಂಧೀಜಿಯವರು ತಮ್ಮ ದೇಶದವರ ಉದ್ಧಾರಕ್ಕಾಗಿ ದುಡಿಯುತ್ತಾ ಹೇಗೆ ಇಡೀ ವಿಶ್ವವನ್ನೇ ಉದ್ಧಾರಮಾಡುತ್ತಿದ್ದರೆಂಬುದನ್ನು ಡಾ। ರಾಧಾಕೃಷ್ಣನ್ ಹೀಗೆ ಹೇಳಿದ್ದಾರೆ, "ಅವರು ಇಡೀ ಮಾನವ ಜನಾಂಗದ ಸೇವಕರಾಗಿದ್ದಾಗ್ಯೂ, ಭಾರತವನ್ನು ತಮ್ಮ ಕಾರ್ಯರಂಗವನ್ನಾಗಿ ಮಾಡಿಕೊಂಡು, ಅದನ್ನು ಸೇವಿಸುವುದರ ಮೂಲಕ ಇಡೀ ಮಾನವಕೋಟಿಯನ್ನು ಸೇವಿಸುತ್ತಿದ್ದಾರೆ...ಗಾಂಧೀಜಿಯವರು ಭಾರತದ ಸ್ವಾತಂತ್ರ್ಯಕ್ಕೆ ಹೋರಾಡುವಾಗ ಅವರಲ್ಲಿ ಯಾವ ಸಂಕುಚಿತ ಭಾವನೆಯೂ ಇರಲಿಲ್ಲ."

ಸಯೋನಿಸ್ಟ್ ಚಳುವಳಿಗೆ ಬೆಂಬಲಕೊಟ್ಟಾಗ ಐನ್‌ಸ್ಟೈನರು ಆಡಿದ ಮಾತುಗಳು ಮೇಲಿನ ಅಭಿಪ್ರಾಯವನ್ನು ಸಮರ್ಥಿಸುತ್ತವೆ. ಆ ಮಾತುಗಳು ತೀರಾ ಸಂಕುಚಿತ

ದೃಷ್ಟಿಯುಳ್ಳ ಸ್ವಾರ್ಥಪರರಿಂದ ಬರಲಾರವು. ಜಿಯೋನಿಸ್ಟ್ ಚಳುವಳಿ ಆರಂಭವಾದಂದಿನಿಂದ ಅದು ಯಹೂದಿಗಳ ಮತಾಂಧತೆಯನ್ನೂ, ಸಂಕುಚಿತ ರಾಷ್ಟ್ರೀಯತೆಯನ್ನೂ ಬೆಳೆಸಬಹು ದೆಂದು ಐನ್‌ಸ್ಟೈನರು ಭೀತರಾಗಿದ್ದರು. ಇದರಿಂದ ಯಹೂದಿಗಳಿಗೂ ಅರಬ್ಬರಿಗೂ ಘರ್ಷಣೆಯುಂಟಾಗಬಹುದೆಂದು ಅವರು ಊಹಿಸಿದ್ದರು. ಇದಕ್ಕೆ ತಮ್ಮ ಅನುಯಾಯಿಗಳು ಅವಕಾಶ ಕೊಡಕೂಡದೆಂದು ಅವರು ಮೊದಲಿನಿಂದ ಒತ್ತಿ ಒತ್ತಿ ಹೇಳುತ್ತಿದ್ದರು. ಅರಬ್ಬ ರಿಗೂ, ಯಹೂದಿಗಳಿಗೂ ಒದಗಬಹುದಾದ ಘರ್ಷಣೆಯನ್ನು ತಪ್ಪಿಸಲು ಅವರು ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿದ್ದರು. ಯಹೂದಿಗಳು ತಾವು ಒಂದು ಧಾರ್ಮಿಕ ಪಂಗಡದವ ರೆಂದು ತಿಳಿದುಕೊಳ್ಳದೆ, ವಿಜ್ಞಾನಿಗಳ ಸಂಘ, ಕಲೆಗಾರರ ಸಂಘ, ಸಾಹಿತಿಗಳ ಸಂಘಗಳಂತೆ ಸಂಸ್ಕೃತಿಯ ಬೆಳವಣಿಗೆಗಾಗಿ ದುಡಿಯುವ ಸತ್ಯನಿಷ್ಠರ ಗುಂಪಾದರೆ ಮಾತ್ರ ಜಿಯೋನಿಸಂ ತನ್ನ ಗುರಿಯನ್ನು ಸಾಧಿಸಬಲ್ಲದೆಂದೂ, ಇಲ್ಲದಿದ್ದರೆ ಅದು ವಿಪತ್ಕಾರಿಯಾಗಿ ಪರಿಣಮಿಸುವ ದೆಂದೂ, ತಾವು ಅಂಥ ಚಳುವಳಿಗೆ ಬೆಂಬಲ ಕೊಡಲು ಸಿದ್ಧರಿಲ್ಲವೆಂದೂ ಐನ್‌ಸ್ಟೈನರು ಎಚ್ಚರಕೊಟ್ಟಿದ್ದರು. ಈ ಸಂದರ್ಭದಲ್ಲಿ ಅವರು ಆಡುತ್ತಿದ್ದ ಮಾತುಗಳು ಗಮನಾರ್ಹ ವಾಗಿವೆ.

"ಯಹೂದಿ ಧರ್ಮವು ಗೊಡ್ಡು ಆಚಾರಗಳನ್ನೊಳಗೊಂಡ ಒಂದು ಮಂತವಲ್ಲ... ನಿಷ್ಕಾಮ ಜ್ಞಾನಸಾಧನೆ, ನ್ಯಾಯಸ್ಥಾಪನೆಯಲ್ಲಿ ಒಂದು ತೀವ್ರತರವಾದ ಆಸಕ್ತಿ, ವ್ಯಕ್ತಿ ಸ್ವಾತಂತ್ರ್ಯದಲ್ಲಿ ವಿಶ್ವಾಸ—ಇವು ಯಹೂದಿ ಸಂಪ್ರದಾಯದ ಗುಣವಿಶೇಷಗಳು."

"ಯಹೂದಿ ಜಾತಿಯು ರಾಜಕೀಯ ಪಂಥವಲ್ಲ, ರಾಜಕೀಯ ಪಂಥವಾಗ ಕೂಡದು. ಆಗ ಮಾತ್ರ ಅದು ಹೆಚ್ಚು ಹೆಚ್ಚು ಶಕ್ತಿಯುತವಾಗಿ ಬಾಳಬಲ್ಲುದು ಮತ್ತು ತನ್ನ ಇರುವಿಕೆಯನ್ನು ಸಮರ್ಥಿಸಿಕೊಳ್ಳಬಲ್ಲದು".

"ಜಿಯೋನಿಸ್ಟ್ ಚಳವಳಿಯ ಮುಖಂಡರ ಧ್ಯೇಯ. ಸಮಾಜ-ಸಂಸ್ಕೃತಿಗಳನ್ನು ಉತ್ತಮಗೊಳಿಸುವದಾಗಿದೆ. ರಾಜಕೀಯ ಅವರ ಲಕ್ಷ್ಯದಲ್ಲಿಲ್ಲ".

"ನಮ್ಮ ಮತ್ತು ಅರಬ್ಬೀಯರ ಸಂಬಂಧಗಳ ಕಡೆಗೆ ನಾವು ಹೆಚ್ಚು ಗಮನ ಕೊಡಬೇಕಾಗಿದೆ. ಅವುಗಳನ್ನು ಎಚ್ಚರಿಕೆಯಿಂದ ಬೆಳೆಸಿಕೊಳ್ಳುವುದು ಅಗತ್ಯ. ಹಿಂಸಾಕೃತ್ಯ ಗಳನ್ನು ಪ್ರಚೋದಿಸುವಷ್ಟು ಅಪಾಯಕರವಾಗಿ ಅವುಗಳು ಬೆಳೆಯುವುದನ್ನು ನಾವು ಮುಂದೆ ತಪ್ಪಿಸಲು ಸಾಧ್ಯವಾಗುತ್ತದೆ. ಈ ಗುರಿಯನ್ನು ನಾವು ಸುಲಭವಾಗಿ ಮುಟ್ಟಬಹುದು. ಯಾಕೆಂದರೆ ನಮ್ಮ ರಚನಾತ್ಮಕ ಕಾರ್ಯವು ಇಂದಿನ ವರೆಗೆ ನಡೆದಂತೆ ಮುಂದೆಯೂ ಅರಬ್ಬರ ಶ್ರೇಯಸ್ಸನ್ನೂ ಕಾಪಾಡುವಂತಿರಬೇಕು.

"ಅನೇಕ ಸಾತ್ವಿಕ ಯಹೂದಿಗಳು ನೀಚತರವಾದ ವಿಡಂಬನಕ್ಕೊಳಗಾಗಿರುವುದನ್ನು ನೋಡಿ ನನ್ನ ಹೃದಯ ವಿದ್ರಾವಕವಾಯಿತು. ಶಾಲೆಗಳು, ಪತ್ರಿಕೆಗಳು ಮತ್ತು ಬಹುಸಂಖ್ಯಾ ತರಿಗೆ ಸೇರಿದ ಇತರ ಅನೇಕಾನೇಕ ಶಕ್ತಿಗಳು ಉತ್ತಮೋತ್ತಮ ಸೋದರ ಯಹೂದಿಗಳ ವಿಶ್ವಾಸವನ್ನೂ ಹೇಗೆ ಶಿಥಿಲಗೊಳಿಸಿವೆಯೆಂಬುದನ್ನು ನೋಡಿದೆ. ನೋಡಿ ಇದನ್ನು ಹಾಗೆಯೇ

ಮುಂದುವರಿಯುವುದಕ್ಕೆ ಅವಕಾಶ ಕೊಡಬಾರದೆಂದು ಭಾವಿಸಿದೆ. ಅನಂತರ ಪ್ರಪಂಚದ ಎಲ್ಲ ಯಹೂದಿಗಳಿಗೂ ಪ್ರಿಯವಾದ ಎಲ್ಲರಿಗೂ ಸಾಮಾನ್ಯವಾದ ಉದ್ಯಮ ಮಾತ್ರ ಈ ಜನತೆಯನ್ನು ತನಗಂಟಿರುವ ಬೇನೆಯಿಂದ ಪಾರುಮಾಡಬಲ್ಲದು ಎಂಬುದನ್ನು ಮನಗಂಡೆ.

“ಆದ್ದರಿಂದ ಪ್ಯಾಲೆಸ್ಟೈನನ್ನು ಉತ್ತಮಗೊಳಿಸುವ ಚಳುವಳಿಗೆ ಬೆಂಬಲ ಕೊಡುವುದೆಂದರೆ ಪ್ಯಾಲೆಸ್ಟೈನಿನಲ್ಲಿ ದಯಾಪೂರಿತವೂ ಯೋಗ್ಯವೂ ಆದ ನೀತಿಗೆ ಒತ್ತಾಸೆ ಕೊಟ್ಟಂತೆ.”

## ಫ್ಯಾಸಿಸ್ಟ್ ಸರಕಾರ ಮತ್ತು ಅಮೇರಿಕನ್ನರ ವರ್ಣೀಯ ಮನೋಭಾವನೆಗಳ ಖಂಡನೆ

ಇಟಲಿ ದೇಶದಲ್ಲಿ ಮುಸೋಲಿನಿಯು ಸರ್ವಾಧಿಕಾರಕ್ಕೆ ಬಂದ ಮೇಲೆ ಅಲ್ಲಿನ ಪ್ರಜೆಗಳು ಅನುಭವಿಸುತ್ತಿದ್ದ ವ್ಯಕ್ತಿ ಸ್ವಾತಂತ್ರ್ಯಕ್ಕೆ ಕೊಡಲಿಪೆಟ್ಟು ಬಿತ್ತು. ಫ್ಯಾಸಿಸ್ಟ್ ಸರಕಾರವು ತಮಗಾಗದ ಕೆಲವು ವೈಜ್ಞಾನಿಕರನ್ನು ಪೀಡಿಸಲಾರಂಭಿಸಿತು. ಆ ವೈಜ್ಞಾನಿಕರು ತಾವು ನಡೆಸಿದ ಸಂಶೋಧನೆಗಳನ್ನು ಪ್ರಕಟಿಸುವುದಕ್ಕೂ, ರಾಜಕೀಯ–ಸಾಮಾಜಿಕ ಸಮಸ್ಯೆಗಳ ಮೇಲೆ ತಮ್ಮ ಅಭಿಪ್ರಾಯಗಳನ್ನು ಬಹಿರಂಗವಾಗಿ ತಿಳಿಸುವುದಕ್ಕೂ ಇಟಲಿ ಸರಕಾರ ಅಡ್ಡಿಯನ್ನುಂಟುಮಾಡಿತು. ಐನ್‌ಸ್ಟೈನರು ಈ ಸರಕಾರದ ರೀತಿ–ನೀತಿಗಳನ್ನು ಖಂಡಿಸಿ ಅದರ ಮಂತ್ರಿಯೊಬ್ಬನಿಗೆ ಕಾಗದ ಬರೆದರು. ಆ ಕಾಗದದ ಕೊನೆಯ ವಾಕ್ಯಗಳು ಹೀಗಿದ್ದುವು: “ದಿನ ದಿನದ ರಾಜಕೀಯದಿಂದ ದೂರವಾಗಿರುವ ವೈಜ್ಞಾನಿಕ ಸತ್ಯಾನ್ವೇಷಣೆಯು ಪವಿತ್ರವಾದದ್ದೆಂದು ಪ್ರತಿಯೊಂದು ಸರಕಾರವೂ ಪರಿಗಣಿಸಬೇಕು; ಇಂಥ ಅನ್ವೇಷಣೆಯಲ್ಲಿ ನಿರತರಾದ ಸತ್ಯನಿಷ್ಠರು ಶಾಂತಿಯಿಂದಿರುವಂತೆ ನೋಡಿಕೊಳ್ಳುವುದು ಎಲ್ಲರ ಹಿತದೃಷ್ಟಿಯಿಂದ ಒಳ್ಳೆಯದು. ಇದು ಇಟಲಿ ರಾಷ್ಟ್ರದ ಹಿತದೃಷ್ಟಿಯಿಂದಲೂ ಮತ್ತು ಪ್ರಪಂಚದಲ್ಲಿ ಅದಕ್ಕಿರಬೇಕಾದ ಪ್ರತಿಷ್ಠೆಯ ದೃಷ್ಟಿಯಿಂದಲೂ ನಿಃಸಂದೇಹವಾಗಿ ಒಳ್ಳೆಯದು.”

ಐನ್‌ಸ್ಟೈನರು ಇಟಲಿಯ ಸರಕಾರದ ವಿಷಯವಾಗಿ ಎಂಥ ನಿಷ್ಠುರವಾದ ಮಾತುಗಳನ್ನಾಡಿರುವರೋ, ಅಷ್ಟೇ ನಿಷ್ಠುರವಾದ ಮಾತುಗಳಲ್ಲಿ ಅಮೇರಿಕನ್ನರನ್ನೂ ಖಂಡಿಸಿದ್ದಾರೆ. ಐನ್‌ಸ್ಟೈನರು ಜರ್ಮನಿಯನ್ನು ಬಿಟ್ಟ ಮೇಲೆ ಅವರಿಗೆ ಆಶ್ರಯವನ್ನಿತ್ತ ದೇಶ ಅಮೇರಿಕ. ಇಂಥ ದೇಶದ ಮೇಲೆ ಅಭಿಮಾನ ಗೌರವಗಳಿರಬೇಕಾದುದೇನೋ ವಾಸ್ತವವಾದುದು. ಆದರೆ ಈ ಅಭಿಮಾನ ಗೌರವಗಳು ಅಲ್ಲಿ ನಡೆಯುವ ಅನ್ಯಾಯಗಳ ವಿಷಯದಲ್ಲಿ ಐನ್‌ಸ್ಟೈನರನ್ನು ಕುರುಡು ಮಾಡಲಿಲ್ಲ. ಅಮೇರಿಕದ ಕೆಲವು ಪ್ರಾಂತ್ಯಗಳಲ್ಲಿ ನೀಗ್ರೋಗಳು ಎಂಥ ಅವಹೇಳನಕ್ಕೆ ಗುರಿಯಾಗಿದ್ದರೆಂಬುದು ಪ್ರತಿಯೊಬ್ಬರಿಗೂ ತಿಳಿದ ವಿಷಯ. ಈ ಪರಿಸ್ಥಿತಿಯನ್ನು ಕುರಿತು ಐನ್‌ಸ್ಟೈನರು “ಅಮೇರಿಕನ್ನರು ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ತೋರುವ ಗೌರವ ಮತ್ತು ಎಲ್ಲರನ್ನೂ ಒಂದೇ ಸಮನಾಗಿ ಕಾಣುವ ದೃಷ್ಟಿ ಶ್ವೇತವರ್ಣೀಯರಿಗೆ ಮಾತ್ರ ಅನ್ವಯಿಸುತ್ತದೆ. ಶ್ವೇತವರ್ಣೀಯರಲ್ಲಿ ಕೂಡ ಒಂದು ಗುಂಪಿನ ವಿಷಯದಲ್ಲಿ ಅನೇಕ ದುರಭಿಪ್ರಾಯಗಳಿವೆ. ಯಹೂದಿಯಾದ ನನಗೆ ಇದು ಚೆನ್ನಾಗಿ ಅರಿವಾಗಿದೆ. ಆದರೆ ಶ್ವೇತವರ್ಣೀಯರು ತಮ್ಮ ಸೋದರ

ಜನಾಂಗವಾದ ಕೃಷ್ಣವರ್ಣೀಯರಲ್ಲಿ, ಅದರಲ್ಲೂ ನೀಗ್ರೋಗಳ ವಿಷಯದಲ್ಲಿ ನಡೆದು ಕೊಳ್ಳುವ ರೀತಿಯನ್ನು ಹೋಲಿಸಿದರೆ ಇದು ಅಲ್ಪವಾದುದು... ಇಂಥ ವಿಚಾರಗಳನ್ನು ಕುರಿತು ಪ್ರಾಮಾಣಿಕವಾಗಿ ಚಿಂತಿಸುವ ಪ್ರತಿಯೊಬ್ಬನೂ ನೀಗ್ರೋಗಳ ವಿಷಯದಲ್ಲಿ ನಮ ಗಿರುವ ಸಾಂಪ್ರದಾಯಿಕ ಭಾವನೆಗಳು ಎಷ್ಟು ಅಸಾಧುವೂ ಅನರ್ಥಕಾರಿಯೂ ಆಗಿವೆ ಎಂಬುದನ್ನು ಕೂಡಲೇ ಮನಗಾಣುತ್ತಾನೆ ಎಂದು ನಾನು ನಂಬುತ್ತೇನೆ" ಎಂದಿದ್ದಾರೆ.

ಮೇಲಿನ ಎರಡು ಉದಾಹರಣೆಗಳು ಐನ್‌ಸ್ಟೈನರ ವಿಶ್ವಪ್ರೇಮವನ್ನು ತೋರಿಸು ತ್ತವೆ; ಅನ್ಯಾಯವು ಪ್ರಪಂಚದ ಯಾವ ಭಾಗದಲ್ಲೇ ನಡೆಯಲಿ ಅದನ್ನು ನಿರ್ಭಯವಾಗಿ ಖಂಡಿಸುತ್ತಿದ್ದ ಸತ್ಯವಾದಿಗಳೆಂದು ವ್ಯಕ್ತಪಡಿಸುತ್ತವೆ. ತಮ್ಮ ಮತಬಾಂಧವರಾದ ಯಹೂದಿಗಳ ಕಷ್ಟಕಾರ್ಪಣ್ಯಗಳಲ್ಲಿ ಎಂಥ ಅನುಕಂಪವನ್ನು ತೋರಿಸಿದರೋ, ಅಷ್ಟೇ ಅನುಕಂಪವನ್ನು ಇಟಲಿ ದೇಶದ ತಮ್ಮ ಸೋದರ ವಿಜ್ಞಾನಿಗಳ ವಿಷಯದಲ್ಲಿಯೂ, ಅಮೇರಿಕಾದ ನೀಗ್ರೋಗಳ ವಿಷಯದಲ್ಲಿಯೂ ಅವರು ತೋರಿಸಿದ್ದಾರೆ.

**ಪ್ರಾಪಂಚಿಕ ಐಶ್ವರ್ಯದಲ್ಲಿ ಐನ್‌ಸ್ಟೈನರ ಅನಾಸಕ್ತಿ**

ಒಂದು ಜನಾಂಗ ಮತ್ತೊಂದು ಸೋದರ ಜನಾಂಗವನ್ನು ದಾಸ್ಯದಲ್ಲಿಟ್ಟುಕೊಂಡು ಅವರಿಗೆ ನ್ಯಾಯವಾಗಿ ಲಭಿಸಬೇಕಾಗಿದ್ದ ಹಕ್ಕುಬಾಧ್ಯತೆಗಳನ್ನು ಕಸಿದುಕೊಂಡಿರುವ ಪರಿಸ್ಥಿತಿ ಹೇಗೆ ಐನ್‌ಸ್ಟೈನರ ಮನಸ್ಸನ್ನು ಕಲಕಿತ್ತೋ ಹಾಗೆಯೇ ಕೇವಲ ಕೆಲವರ ಸೌಖ್ಯಕ್ಕೋಸ್ಕರ ಅನೇಕರು ದುಡಿಯುವ ಪದ್ಧತಿಯೂ ಕೂಡ ಐನ್‌ಸ್ಟೈನರ ಮನಸ್ಸಿಗೆ ನೋವನ್ನುಂಟು ಮಾಡಿತ್ತು. ಐನ್‌ಸ್ಟೈನರ ಅಭಿಪ್ರಾಯದಲ್ಲಿ ವ್ಯಕ್ತಿವಿಕಾಸಕ್ಕೆ ಅಡ್ಡಿಬರುವ ದೊಡ್ಡ ಕಂಟಕ ವೆಂದರೆ ಬಡತನ. ಬಡತನದಿಂದ ನರಳುತ್ತಿರುವ ಒಂದು ಜನಾಂಗವೇ ಆಗಲೀ ಒಂದು ವ್ಯಕ್ತಿಯೇ ಆಗಲೀ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ. ಎಲ್ಲಿಯವರೆಗೆ ಮನುಷ್ಯ ತನ್ನ ವೈಯಕ್ತಿಕ ಸುಖಕ್ಕೇ ಹೆಚ್ಚು ಗಮನ ಕೊಡುತ್ತಾನೋ ಅಲ್ಲಿಯವರೆಗೆ ಅವನು ಬೇರೊಬ್ಬರ ಶೋಷಣೆ ಮಾಡುವುದರಲ್ಲೇ ಉದ್ಯುಕ್ತನಾಗಿರುತ್ತಾನೆ. ಮನುಷ್ಯನ ಸ್ವಾರ್ಥ ಬೆಳೆದಂತೆ, ಒಟ್ಟು ಸಮಾಜದ ಬಡತನವೂ, ಅಲ್ಪಸಂಖ್ಯಾತರ ಐಶ್ವರ್ಯವೂ ಬೆಳೆಯುತ್ತದೆ. ಈ ಪರಿಸ್ಥಿತಿ ಬಡವ ಬಲ್ಲಿದವರಿಬ್ಬರಿಗೂ ಹಾನಿಕರ. ಆರ್ಥಿಕ ಅಸಮತೆ ಇಬ್ಬರನ್ನೂ ಪಶು ಸ್ಥಿತಿಗೆ ಇಳಿಸಿ ಇಡೀ ಜನಾಂಗವನ್ನೇ ವಿಪತ್ತಿಗೊಳಪಡಿಸುತ್ತದೆ. ಜ್ಞಾನಿಗಳಾದ ಕೆಲವ ರಾದರೂ ಇದನ್ನು ಅರಿಯಬೇಕು. ಅಂಥವರು ತಾವು ಭೋಗಿಸುವ ಪ್ರತಿಯೊಂದು ಸೌಲಭ್ಯವೂ ಅಷ್ಟೇ ಪ್ರಮಾಣದಲ್ಲಿ ಅನೇಕರನ್ನು ಕಷ್ಟಕ್ಕೀಡುಮಾಡುತ್ತದೆ ಎಂಬುದನ್ನು ತಿಳಿಯಬೇಕು. ಒಂದು ಸಾವಿರ ಬಡಜನರು ತಮ್ಮ ಶ್ರಮದಿಂದಲೇ ಗಳಿಸಿದ ಮತ್ತು ಅವರಿಗೆ ಅತ್ಯಮೂಲ್ಯವಾದ ಒಂದೊಂದು ರೂಪಾಯಿಯನ್ನು ಕಸಿದುಕೊಳ್ಳುವುದರಿಂದ ಮಾತ್ರ ಒಬ್ಬ ಸಾವಿರ ರೂಪಾಯಿನ ಸಾಹುಕಾರನಾಗಬಲ್ಲ. ಈ ಸಾಹುಕಾರ ಅನುಭವಿಸುವ ಪ್ರತಿಯೊಂದು ಭೋಗವಸ್ತುವೂ ಆ ಒಂದು ಸಾವಿರ ಜನರ ಶ್ರಮದ ಮತ್ತು ಆ ಬಡಪಾಯಿಗಳ ಶೋಷ ಣೆಯ ಫಲ. ಸೂಕ್ಷ್ಮಮನಸ್ಸಿನ ಪ್ರತಿಯೊಬ್ಬನಿಗೂ ಈ ಸತ್ಯ ಅರಿವಾಗದೆ ಇರದು

ಆದ್ದರಿಂದ ಬೇರೊಬ್ಬರಿಗೆ ತೊಂದರೆಕೊಡದೆ ತನ್ನ ಜೀವನವನ್ನು ನಡೆಸಬೇಕೆಂಬ ಆಸೆಯುಳ್ಳವನು ಆದಷ್ಟು ಭೋಗವನ್ನು ತ್ಯಾಗಮಾಡಬೇಕು. ಅಸಂಗ್ರಹ ಬುದ್ಧಿಯನ್ನು ಬೆಳೆಸಿಕೊಳ್ಳಬೇಕು. ಐನ್‌ಸ್ಟೈನರ ಈ ಭಾವನೆಗಳು ಮುಂದಿನ ಮಾತುಗಳಲ್ಲಿ ಹೀಗೆ ಅಡಕವಾಗಿವೆ:—

"ಮಾನವ ಜನಾಂಗವನ್ನು ಮುಂದೆ ತರುವ ಪ್ರಯತ್ನದಲ್ಲಿ ಹಣವು ಯಾವ ವಿಧದಲ್ಲಿಯೂ ಸಹಾಯಮಾಡಲಾರದೆಂದು ನನಗೆ ಅಚಲವಾದ ವಿಶ್ವಾಸವಿದೆ. ಅತ್ಯಂತ ಪ್ರಾಮಾಣಿಕನಾದ ಸಮಾಜಸೇವಕನ ಕೈಯಲ್ಲಿದ್ದರೂ ಹಣದಿಂದ ಯಾವ ಉಪಯೋಗವೂ ಆಗದು. ಕಳಂಕರಹಿತ ಜೀವನವನ್ನು ನಡೆಸಿದ ಮಹಾಪುರುಷರ ಉದಾಹರಣೆ ಮಾತ್ರ ಉದಾತ್ತವಾದ ಭಾವನೆಗಳನ್ನು ಮೂಡಿಸಬಲ್ಲದು; ಶ್ರೇಷ್ಠವಾದ ಕಾರ್ಯವನ್ನು ಮಾಡಿಸಬಲ್ಲದು. ಹಣವು ಸ್ವಾರ್ಥಪರರಿಗೆ ಮಾತ್ರ ಸಂತೋಷವನ್ನುಂಟುಮಾಡುತ್ತದೆ; ಆದರ ಮಾಲೀಕನು ಅದನ್ನು ದುರುಪಯೋಗಪಡಿಸಿಕೊಳ್ಳುವಂತೆ ಸದಾ ಅವನನ್ನು ಪ್ರಚೋದಿಸುತ್ತದೆ.

"ಜೀಸಸ್, ಮೋಸಸ್ ಅಥವಾ ಗಾಂಧಿ—ಇವರುಗಳಿಗೆ ಅಮೇರಿಕದ ಕೋಟ್ಯಾಧೀಶ್ವರ ಕಾರ್ನಗಿಯಂತೆ ದುಡ್ಡಿನ ಬೆಂಬಲವಿತ್ತೆಂದು ಊಹಿಸಲು ಸಾಧ್ಯವೇ?" ಎಂದಿದ್ದಾರೆ ಐನ್‌ಸ್ಟೈನ್.

ಈ ಭಾವನೆಗಳು ಬೆಳೆಯುತ್ತಾ ಹೋದಂತೆ, ತಮ್ಮ ನೆರೆಹೊರೆಯವರಿಗೆ ಲಭಿಸದ ಸೌಲಭ್ಯಗಳನ್ನು ತಾವು ಮಾತ್ರ ಅನುಭವಿಸುವದು ತೀರಾ ಅನ್ಯಾಯವೆಂದು ಐನ್‌ಸ್ಟೈನರಿಗೆ ಅನಿಸಿತು. ದೂರಪ್ರಾಚ್ಯಕ್ಕೆ ಪ್ರವಾಸ ಹೋಗಿದ್ದ ಕಾಲದಲ್ಲಿ ಅವರು ನೋಡಿದ ಬಡತನ ಅವರ ಈ ಭಾವನೆಗೆ ಮತ್ತಿಷ್ಟು ಪುಷ್ಟಿಕೊಟ್ಟಿತು. ಸರಳ ಜೀವನ ಅವರಿಗೆ ಹೆಚ್ಚು ಹೆಚ್ಚು ಪ್ರಿಯವಾಗತೊಡಗಿತು. ತಾವು ಅನುಭವಿಸುತ್ತಿದ್ದ ಅನುಕೂಲಗಳನ್ನು ತ್ಯಾಜ್ಯಮಾಡಿದಷ್ಟೂ ಅವರ ಮನಸ್ಸಿಗೆ ಹೆಚ್ಚು ಶಾಂತಿ ದೊರಕಿತು. ಐನ್‌ಸ್ಟೈನರ ಈ ತ್ಯಾಗ ಮನೋಭಾವ ಯಾವ ಹಂತವನ್ನು ಮುಟ್ಟಿತೆಂದರೆ, ರೈಲಿನಲ್ಲಿ ಉತ್ತಮ ತರಗತಿಗಳಲ್ಲಿ ಪ್ರಯಾಣ ಮಾಡುವ ಅಭ್ಯಾಸವೂ, ಕ್ಷೌರಕ್ಕೂ, ಸ್ನಾನಕ್ಕೂ ಬೇರೆ ಬೇರೆ ಸಾಬೂನುಗಳನ್ನು ಉಪಯೋಗಿಸುವ ರೂಢಿಯೂ ಅವರಿಗೆ ತ್ಯಾಜ್ಯವಾದುವು.

ಸಮಾಜಕ್ಕೆ ತಕ್ಕ ಸೇವೆ ಸಲ್ಲಿಸದೆ ಅದು ಒದಗಿಸಿಕೊಡುವ ಅನುಕೂಲಗಳನ್ನು ಉಪಯೋಗಿಸಿಕೊಳ್ಳುವುದು ಮಹಾಪಾಪವೆಂದು ಐನ್‌ಸ್ಟೈನರು ಹೇಳುತ್ತಿದ್ದರು. ಮನುಷ್ಯನ ಪ್ರಾಣಾಧಾರಗಳಾಗಿರುವ ಅನ್ನ ಬಟ್ಟೆಗಳು ಸಮಾಜದ ಶ್ರಮದಿಂದ ಉತ್ಪತ್ತಿಯಾಗುತ್ತವೆ. ಇವುಗಳನ್ನು ಪಡೆದುಕೊಂಡು ತನ್ನ ಜೀವನವನ್ನು ಸಾಗಿಸುತ್ತಿರುವ ಮನುಷ್ಯ ಪ್ರತಿಫಲವಾಗಿ ಸಮಾಜಕ್ಕೆ ತಕ್ಕ ಸೇವೆ ಸಲ್ಲಿಸದೆ ಹೋದರೆ ಅವನು ಸಮಾಜಕ್ಕೆ ಹೊರೆಯಾಗುತ್ತಾನೆ. ಆದ್ದರಿಂದ ಶರೀರಶ್ರಮವಿಲ್ಲದ ವೃತ್ತಿಗಳನ್ನು ಹಿಡಿದಿರುವಂಥವರು ತುಂಬಾ ಎಚ್ಚರಿಕೆಯಿಂದ ನಡೆದುಕೊಳ್ಳಬೇಕು. ಅಂಥ ಜನರಿಂದ ಒಟ್ಟು ಸಮಾಜಕ್ಕೆ ಎಷ್ಟು ಸೇವೆ ಸಲ್ಲುತ್ತದೆಂಬುದು ಸಂದೇಹಾಸ್ಪದ. ಈ ಜನರು ಯುಕ್ತಾಯುಕ್ತ ವಿವೇಚನೆ ಇಲ್ಲದೆ ತಮಗೆ ದೊರಕಿದ ಎಲ್ಲ ಭೋಗಗಳನ್ನೂ ಅನುಭೋಗಿಸುತ್ತಾ ಬಂದರೆ ಅವರು ಸಮಾಜಕ್ಕೆ ಆಧಾರ ಸ್ತಂಭ

ಗಳಾಗುವ ಬದಲು ದ್ರೋಹಿಗಳಾಗುತ್ತಾರೆ. ಈ ಮಾತು ಎಲ್ಲರಿಗಿಂತ ಹೆಚ್ಚಾಗಿ ವೈಜ್ಞಾನಿಕರಿಗೆ ಅನ್ವಯಿಸುತ್ತದೆ. ವಿಜ್ಞಾನಿ ತಾನು ನಡೆಸುವ ಪ್ರಯೋಗಗಳಲ್ಲಿ ಜಯಶೀಲನಾಗಬಹುದು. ಇಲ್ಲವೇ ಸಂಪೂರ್ಣವಾಗಿ ವಿಫಲನಾಗಬಹುದು. ಜಯಶೀಲನಾದರೂ, ಅವನು ಕಂಡುಹಿಡಿದ ಸಂಶೋಧನೆಗಳು ಸಮಾಜಕ್ಕೆ ಉಪಯೋಗವಾಗದೆ ಹೋಗಬಹುದು. ಈ ಸಂದರ್ಭಗಳಲ್ಲಿ ಅವನ ಶ್ರಮವೆಲ್ಲವೂ ಸಮಾಜದ ದೃಷ್ಟಿಯಿಂದ ನಿಷ್ಫಲವಾಗುತ್ತದೆ. ಮತ್ತು ಅವನ ಇರುವಿಕೆಗಾಗಿ ಸಮಾಜವು ಪಟ್ಟಿರುವ ಶ್ರಮ ವೃಥಾ ನಷ್ಟವಾಗುತ್ತದೆ. ಆದ್ದರಿಂದ ಸಂಶೋಧನೆಗಳಲ್ಲಿ ತೊಡಗುವ ವಿಜ್ಞಾನಿ ಚಮ್ಮಾರನಾಗಿ ತನ್ನ ಜೀವಿಕೆಯನ್ನು ಗಳಿಸಿಕೊಂಡು ಉಳಿದ ಕಾಲವನ್ನು ಸಂಶೋಧನೆಗೆ ಉಪಯೋಗಿಸಿಕೊಳ್ಳುವುದು ಉತ್ತಮ. ಹಾಗಲ್ಲದೆ ತನ್ನ ಮತ್ತು ತನ್ನ ಕುಟುಂಬದ ಪೋಷಣೆಗೆ ಸರ್ಕಾರದಿಂದಾಗಲೀ, ಸಾರ್ವಜನಿಕ ಸಂಸ್ಥೆಗಳಿಂದಾಗಲೀ ಸಹಾಯವನ್ನು ನಿರೀಕ್ಷಿಸುವುದು ಅಧರ್ಮ."

ಇಂಥ ಉದಾತ್ತ ಭಾವನೆಗಳನ್ನು ಹೊಂದಿದ್ದ ಐನ್‌ಸ್ಟೈನರು ತಮಗೆ ದೊರಕಿದ ನೋಬಲ್ ಪಾರಿತೋಷಕದಲ್ಲಿ ಒಂದು ಭಾಗವನ್ನು ದಾನ ಮಾಡಿದುದು ಆಶ್ಚರ್ಯವೇನಲ್ಲ.

ಮಾನವ ತನ್ನ ಬಂಧುಗಳ ಶೋಷಣೆಯಿಂದ ಬದುಕುವುದಕ್ಕೆ ಅವಕಾಶ ಮಾಡಿಕೊಡುವ ಸಮಾಜಪದ್ಧತಿಗೆ ಐನ್‌ಸ್ಟೈನರ ಒಪ್ಪಿಗೆ ಇರಲಿಲ್ಲ. ಅವರು ಪ್ರತಿಪಾದಿಸುತ್ತಿದ್ದುದು ಒಂದು ರೀತಿಯ ಸಮಾಜವಾದವೇ ಆದರೂ ಅದು ರಷ್ಯನ್ ಮಾದರಿಯ ಕಮ್ಯೂನಿಸಮ್‌ಗೂ ಉಳಿದ ರಾಜಕೀಯ ಮುಖಂಡರು ವಾದಿಸುವ ಸಮಾಜವಾದಕ್ಕೂ ತೀರಾ ಭಿನ್ನವಾಗಿತ್ತು. ರಷ್ಯನ್ ಪದ್ಧತಿಯಲ್ಲಿ ಹಿಂಸೆ ಅಡಗಿದೆ. ಹಿಂಸೆಯನ್ನು ಸಾಧನವನ್ನಾಗಿ ಉಪಯೋಗಿಸಿಕೊಂಡು ರಚಿತವಾಗುವ ಸಮಾಜ ವ್ಯವಸ್ಥೆಯಲ್ಲಿ ಪರಪೀಡನೆ ತಪ್ಪಲಾರದು. ಮೇಲಾಗಿ ರಷ್ಯನ್ ಪದ್ಧತಿಯಲ್ಲಿ ಕೈಗಾರಿಕೆಗಳೆಲ್ಲವೂ ರಾಷ್ಟ್ರೀಕರಣವಾಗುತ್ತವೆ. ಇದರಿಂದ ಈ ತರಹೆಯ ರಾಷ್ಟ್ರವು ಉಳಿದ ರಾಷ್ಟ್ರಗಳಿಗಿಂತ ಹೆಚ್ಚಿನ ಅಧಿಕಾರವನ್ನು ಹೊಂದಿರುತ್ತದೆ. ರಾಷ್ಟ್ರದ ಆಡಳಿತ ಸೂತ್ರವನ್ನು ಹಿಡಿದಿರುವ ಸರ್ಕಾರವು ಅತಿ ಬಲಯುತವಾಗುತ್ತದೆ. ಇಂಥ ಸರ್ಕಾರ ಯಾವಾಗಲೂ ಅಪಾಯಕಾರಿಯೇ. ಅಪರಿಮಿತವಾದ ಅಧಿಕಾರವನ್ನು ಹೊಂದಿರುವ ಸರ್ಕಾರ ತನ್ನ ಸ್ವಾರ್ಥಕ್ಕೆ ಅಧಿಕಾರವನ್ನು ಉಪಯೋಗಪಡಿಸಿಕೊಳ್ಳದೆಂಬ ಭರವಸೆ ಏನೂ ಇಲ್ಲ. ಪ್ರತಿಯಾಗಿ ತನ್ನಲ್ಲಿ ಕೇಂದ್ರೀಕೃತವಾಗಿರುವ ಅಧಿಕಾರವನ್ನು ಉಪಯೋಗಿಸಲು ಸಮಯ ಕಾಯುತ್ತಲೇ ಇರುತ್ತದೆ. ಈ ದೃಷ್ಟಿಯಿಂದ ಎಲ್ಲ ಅಧಿಕಾರ ಶಕ್ತಿಗಳೂ ಕೇವಲ ನಾಲ್ಕಾರು ಜನರಲ್ಲಿ ಕೇಂದ್ರೀಕೃತವಾಗಿರುವ ರಾಷ್ಟ್ರವ್ಯವಸ್ಥೆಯಲ್ಲಿ, ಅಲ್ಲಿಯ ಪೌರನಿಗೆ ಕ್ಷೇಮವಿರುವುದಿಲ್ಲ. ರಷ್ಯನ್ ಮಾದರಿಯ ಕಮ್ಯೂನಿಸಂ ಈ ದೋಷಕ್ಕೆ ಒಳಗಾದಿದ್ದರೆ, ಉಳಿದವರು ಪ್ರತಿಪಾದಿಸುವಂಥ ಸಮಾಜ ವ್ಯವಸ್ಥೆಗಳು ಇದೇ ತರಹೆಯ ಲೋಪಗಳಿಂದ ದೂರವಾಗಿಲ್ಲ. ಈ ಗುಂಪಿನವರೂ ಕೈಗಾರಿಕೆಗಳು ರಾಷ್ಟ್ರೀಕರಣವಾಗಬೇಕೆಂಬ ತತ್ವವನ್ನು ಒಪ್ಪುತ್ತಾರೆ. ಆದ್ದರಿಂದ ಈ ವವಸ್ಥೆಗಳಲ್ಲೂ ಪ್ರಜೆಗಳ ಮೇಲೆ ಸರಕಾರಕ್ಕೆ ಹೆಚ್ಚಿನ ಹಿಡಿತವಿರುತ್ತದೆ. ಫಲಿತಾಂಶವಾಗಿ ಪೌರನ ವ್ಯಕ್ತಿಸ್ವಾತಂತ್ರ್ಯ ತಕ್ಕಮಟ್ಟಿಗೆ ಕುಂಠಿತ

ವಾಗುತ್ತದೆ. ಒಳ್ಳೆಯ ಸಮಾಜದಲ್ಲಿ ವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆಯುಂಟಾಗಬಾರದು; ಪರ ಪೀಡನೆಗೆ ಅವಕಾಶವಿರಬಾರದು. ಕೈಗಾರಿಕೆಗಳು ಖಾಸಗೀ ಜನರ ವಶದಲ್ಲಿದ್ದು, ಅಲ್ಲಿ ದುಡಿಯುವವರು ಪಡೆಯುವ ಮಜೂರಿಯನ್ನು ಕೆಲನಿಯಮಗಳಿಗೆ ಒಳಪಡಿಸುವುದರಿಂದ ಇಂದು ನಡೆಯುತ್ತಿರುವ ಬಡವರ ಶೋಷಣೆಯನ್ನು ತಪ್ಪಿಸಬಹುದು. ಈ ಅಭಿಪ್ರಾಯ ಗಳನ್ನು ಸಮರ್ಥಿಸುತ್ತಾ ಐನ್‌ಸ್ಟೈನರು ೧೯೪೯ರಲ್ಲಿ ಹೀಗೆ ಬರೆದರು.

"ಅಂಥ (ತಾವು ಪ್ರತಿಪಾದಿಸುವಂಥ) ಆರ್ಥಿಕ ವ್ಯವಸ್ಥೆಯಲ್ಲಿ ಉತ್ಪನ್ನ ಸಾಧನ ಗಳು ಸಮಾಜದ ವಶದಲ್ಲಿರುತ್ತವೆ; ಅವು ಒಂದು ನಿಯೋಜಿತ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳಲ್ಪಡುತ್ತವೆ. ನಿಯೋಜಿತ ಆರ್ಥಿಕ ವ್ಯವಸ್ಥೆ ಸಮಾಜಕ್ಕೆ ಉಪಯುಕ್ತವಾಗು ವಂತೆ ತಯಾರಿಕೆಯನ್ನು ಅಳವಡಿಸಿಕೊಳ್ಳುತ್ತದೆ. ಮತ್ತು ದುಡಿಮೆಯನ್ನು ಸಮಾಜದಲ್ಲಿ ರುವ ಪ್ರತಿಯೊಬ್ಬ ಆರೋಗ್ಯವಂತನಾದ ಪ್ರಜೆಗೂ ಸಮನಾಗಿ ಹಂಚುತ್ತದೆ. ಪ್ರತಿಯೊಬ್ಬ ಪುರುಷನಿಗೂ, ಸ್ತ್ರೀಗೂ, ಮಗುವಿಗೂ ಜೀವನವನ್ನು ದೊರಕಿಸಿಕೊಳ್ಳುವ ಭರವಸೆ ಇರುತ್ತದೆ.

"ಆದರೆ, ನಿಯೋಜಿತ ಆರ್ಥಿಕ ವ್ಯವಸ್ಥೆಯು ಇನ್ನೂ ಸಮಾಜವಾದವಾಗಿ ಪರಿಣ ಮಿಸಿಲ್ಲ ಎನ್ನುವುದನ್ನು ನೆನಪಿನಲ್ಲಿಡಬೇಕು. ನಿಯೋಜಿತ ಆರ್ಥಿಕ ವ್ಯವಸ್ಥೆಯು ವ್ಯಕ್ತಿ ಯನ್ನು ಗುಲಾಮಗಿರಿಯಲ್ಲಿಟ್ಟುಕೊಳ್ಳಬೇಕಾಗಬಹುದು. ಸಮಾಜವಾದವು ತನ್ನ ಗುರಿ ಯನ್ನು ಮುಟ್ಟುವ ಮೊದಲು ಅತಿ ಕಠಿಣವಾದ ಕೆಲವು ರಾಜಕೀಯ, ಸಾಮಾಜಿಕ ಸಮಸ್ಯೆ ಗಳನ್ನು ಬಗೆಹರಿಸಿಕೊಳ್ಳಬೇಕಾಗುತ್ತದೆ. ರಾಜಕೀಯ, ಆರ್ಥಿಕ ಅಧಿಕಾರಗಳೆರಡೂ ತನ್ನಲ್ಲಿ ಕೇಂದ್ರೀಕೃತವಾಗುವುದರಿಂದ ಬಲಯುತವಾಗುವ ಸರಕಾರ ಸರ್ವಾಧಿಕಾರಿಯಾಗುವುದನ್ನೂ, ದುರಹಂಕಾರಿಯಾಗುವುದನ್ನೂ ತಪ್ಪಿಸುವುದು ಹೇಗೆ? ವೈಯಕ್ತಿಕ ಹಕ್ಕುಗಳನ್ನು ಹೇಗೆ ರಕ್ಷಿಸಬಹುದು? ಪ್ರಜಾಪ್ರಭುತ್ವವನ್ನು ಮತ್ತಷ್ಟು ಶಕ್ತಿಯುತವನ್ನಾಗಿ ಮಾಡಿ ಅದನ್ನು ಕೇಂದ್ರೀಕೃತವಾದ ಸರ್ಕಾರದ ಶಕ್ತಿಗೆ ಸಮನಾಗಿ ಮಾಡುವುದಾದರೂ ಹೇಗೆ? ಇವು ಬೃಹತ್ಸಮಸ್ಯೆಗಳು."

## ಶಾಂತಿವಾದಿಗಳಿಗೆ ಕೊಟ್ಟ ಬೆಂಬಲ

ಐನ್‌ಸ್ಟೈನರ ಸಹಕಾರ ಮತ್ತು ಬೆಂಬಲಗಳನ್ನು ಪಡೆದ ಮತ್ತೊಂದು ಚಳುವಳಿ ಎಂದರೆ ಶಾಂತಿವಾದಿಗಳದು. ಅವರಿಗೆ ಬಾಲ್ಯದಿಂದಲೂ ಮಿಲಿಟರಿ ಶಿಸ್ತು ಎಂದರೆ ಒಂದು ವಿಧವಾದ ಬೇಸರಿಕೆ ಇತ್ತೆಂಬುದನ್ನು ಹಿಂದೆಯೇ ನೋಡಿದ್ದೇವೆ. ಜನ್ಮದಿಂದ ಬಂದ ಈ ಶಾಂತಿಪ್ರೇಮ ವಯಸ್ಸಿನೊಂದಿಗೆ ಬೆಳೆಯಿತು. ಪರಪೀಡನೆ, ಕ್ರೌರ್ಯ ಮತ್ತು ಸಾಮೂಹಿಕ ಕೊಲೆ—ಮುಂತಾದ ನೀಚಕೃತ್ಯಗಳು ಹೇಗೆ ಸಮರದ ಹೆಸರಿನಲ್ಲಿ ನಡೆಯುತ್ತವೆ ಎಂಬುದು ಐನ್‌ಸ್ಟೈನರಿಗೆ ಮೊದಲನೆಯ ಮಹಾಯುದ್ಧದಿಂದ ಮನವರಿಕೆಯಾಯಿತು. ಐನ್‌ಸ್ಟೈನರು ಈ ಯುದ್ಧಕ್ಕೆ ಮುಂಚೆ ಅಂಥ ನರಮೇಧವನ್ನು ನೋಡಿರಲಿಲ್ಲ, ಮನುಷ್ಯನ ಮೇಲೆ

ನಡೆಯುವ ದೌರ್ಜನ್ಯವನ್ನು ತಮ್ಮಿಂದಾದಮಟ್ಟಿಗೆ ತಪ್ಪಿಸುವುದು ತಮ್ಮ ಕರ್ತವ್ಯವೆಂದು ಬಗೆದರು. ಸಾಮೂಹಿಕ ದೌರ್ಜನ್ಯ ನಡೆಯಲು ಅವಕಾಶ ಕೊಡುವ ಯುದ್ಧಗಳು ತಪ್ಪಿದಲ್ಲಿ ಮಾನವಜನಾಂಗ ಕ್ಷೇಮದಿಂದ ಇರಬಲ್ಲುದು. ಮಾನವಜನಾಂಗದಲ್ಲಿ ಆಸಕ್ತಿಯುಳ್ಳ ಪ್ರತಿಯೊಬ್ಬನೂ ಆಗಿಂದಾಗ್ಯೆ ನಡೆಯುವ ಯುದ್ಧಗಳು ಸಂಭವಿಸದಂತೆ ಪ್ರಯತ್ನಪಡಬೇಕು" ಎಂಬುದು ಇವರ ಅಭಿಪ್ರಾಯವಾಗಿತ್ತು.

ಈ ಮಧ್ಯೆ ಎಲ್ಲ ಬಗೆಯ ಯುದ್ಧಪ್ರಯತ್ನಗಳನ್ನು ವಿರೋಧಿಸುವ ಗುಂಪೊಂದು ಯುರೋಪಿನಲ್ಲಿ ಹುಟ್ಟಿಕೊಂಡಿತು. ಈ ಶಾಂತಿವಾದಿಗಳ ಗುಂಪಿನಲ್ಲಿ ಪ್ರಖ್ಯಾತ ಪಂಡಿತರೂ, ಹಿರಿಯ ವೈಜ್ಞಾನಿಕರೂ ಇದ್ದರು. ಒಂದು ಉದಾತ್ತ ಧ್ಯೇಯಕ್ಕಾಗಿ ಶ್ರಮಿಸುತ್ತಿದ್ದ ಶಾಂತಿವಾದಿಗಳಿಗೆ ಐನ್‌ಸ್ಟೈನರ ಹೃತ್ಪೂರ್ವಕ ಪ್ರೋತ್ಸಾಹ ದೊರಕಿತು. ಯುರೋಪಿನ ಬೇರೆ ಬೇರೆ ದೇಶಗಳಲ್ಲಿ ನಡೆಯುತ್ತಿದ್ದ ಶಾಂತಿ ಚಳುವಳಿಯ ಮುಖಂಡರಿಗೆ ಐನ್‌ಸ್ಟೈನರು ಪತ್ರಗಳನ್ನು ಬರೆದು, ಅವರು ಯಾವ ರೀತಿ ಈ ಚಳುವಳಿಯನ್ನು ಬಲಗೊಳಿಸಬೇಕೆಂಬುದನ್ನು ಸೂಚಿಸುತ್ತಿದ್ದರು. ಐನ್‌ಸ್ಟೈನರ ಪ್ರೋತ್ಸಾಹದಿಂದ ಅನೇಕ ಸಂಘಗಳು ಸ್ಫೂರ್ತಿಗೊಂಡವು. ಅವು ತಮ್ಮ ಪ್ರಭಾವವನ್ನು ಜನಸಾಮಾನ್ಯರ ಮೇಲೆ ಬೀರಿ ಯುದ್ಧದಿಂದಾಗುವ ಅನಾಹುತಗಳನ್ನು ಜನರು ಅರಿಯುವಂತೆ ಮಾಡಿದುವು. ಹೀಗೆ ಪರೋಕ್ಷವಾಗಿ ಶಾಂತಿ ಚಳುವಳಿಗೆ ಬೆಂಬಲಕೊಡುತ್ತಿದ್ದುದಲ್ಲದೆ, ಐನ್‌ಸ್ಟೈನರು ತಾವೂ ನೇರವಾಗಿ ಪ್ರಚಾರ ಮಾಡುತ್ತಿದ್ದರು. ಅನೇಕ ಪತ್ರಿಕೆಗಳಿಗೆ ಲೇಖನಗಳನ್ನು ಬರೆದು ವಿದ್ಯಾವಂತರು ಶಾಂತಿ ಚಳುವಳಿಗೆ ಬೆಂಬಲ ಕೊಡಬೇಕೆಂದು ಆರಿಕೆ ಮಾಡಿಕೊಂಡರು. ವೇದಿಕೆಗಳ ಮೇಲೆ ನಿಂತು ಭಾಷಣ ಮಾಡಿ ವೈಜ್ಞಾನಿಕರು ಸಮರ ಪ್ರಯತ್ನಗಳಲ್ಲಿ ಭಾಗವಹಿಸಕೂಡದೆಂದು ಬಿನ್ನವಿಸಿಕೊಂಡರು. ಸರಕಾರಗಳು ಜಾರಿಗೆ ತರುವ 'ನಿರ್ಬಂಧ ಸೈನಿಕ ಸೇವೆಯ ಕಾನೂನ'ನ್ನು ಜನಸಾಮಾನ್ಯರು ಪ್ರತಿಭಟಿಸಬೇಕೆಂದು ಕೇಳಿಕೊಂಡರು. "ಯುದ್ಧ ನಡೆಯುವುದು ಕೇವಲ ಕೆಲವರ ಸ್ವಾರ್ಥಕ್ಕಾಗಿ. ತಮ್ಮ ಸ್ವಾರ್ಥದಲ್ಲೇ ಆಸಕ್ತಿಯುಳ್ಳ ಈ ಜನರು ಯುವಕರನ್ನು ದುರ್ಮಾರ್ಗಕ್ಕೆ ಎಳೆಯುತ್ತಾರೆ. ದೇಶ ಪ್ರೇಮದ ಹೆಸರಿನಲ್ಲಿ ಎಂಥ ದುಷ್ಕೃತ್ಯವನ್ನು ಬೇಕಾದರೂ ಮಾಡಬಹುದೆಂದು ಯುವಕ ಜನಾಂಗಕ್ಕೆ ಬೋಧಿಸುತ್ತಾರೆ. ಇವರ ಪ್ರಚಾರಕ್ಕೆ ಮರುಳಾದ ಯುವಕರು ತಮ್ಮ ವ್ಯಕ್ತಿತ್ವವನ್ನು ಹಾಳುಮಾಡಿಕೊಳ್ಳುವುದಲ್ಲದೆ, ಇಡೀ ಜನಾಂಗದ ವಿನಾಶಕ್ಕೆ ಕಾರಣರಾಗುತ್ತಾರೆ. ಅಂಥ ಯುವಕರ ವ್ಯಕ್ತಿತ್ವ ಅರಳದೇ ಹಾಗೆಯೇ ಬಾಡಿ ಹೋಗುತ್ತದೆ. ಯುವಕ ಜನಾಂಗವನ್ನು ಹಾಳುಮಾಡಿಕೊಂಡ ಯಾವ ಸಮಾಜವೂ ಮುಂದೆ ಬರಲಾರದು. ಆದ್ದರಿಂದ ಹರೆಯದವರು ತಪ್ಪುದಾರಿಗೆ ಬೀಳದಂತೆ ನೋಡಿಕೊಳ್ಳಬೇಕಾದದ್ದು ಶಾಂತಿವಾದಿಗಳ ಪ್ರಥಮ ಕರ್ತವ್ಯ. ಹಿರಿಯ ವೈಜ್ಞಾನಿಕ, ಸಾಂಸ್ಕೃತಿಕ ಮುಖಂಡರೂ ಈ ಅನಾಹುತವನ್ನು ತಪ್ಪಿಸಬಲ್ಲರು. ಅವರು ಸಮರದಿಂದೊದಗುವ ಆಪತ್ತುಗಳನ್ನು ವಿವರಿಸಿದರೆ ಯುವಕರು ತಪ್ಪು ಹಾದಿ ಹಿಡಿಯಲಾರರು. ಮಾನವ ಕಲ್ಯಾಣವನ್ನು ಹಾರೈಸುವ ಪ್ರತಿಯೊಬ್ಬ ಶ್ರೇಷ್ಠ ಪುರುಷನೂ ಈ ಸತ್ಕಾರ್ಯದಲ್ಲಿ ಭಾಗಿಯಾಗಬೇಕು" ಎಂದು ಐನ್‌ಸ್ಟೈನರು ಪದೇ ಪದೇ

ಹೇಳುತ್ತಿದ್ದರು. ಆಧುನಿಕ ಮನಃಶಾಸ್ತ್ರದ ತಂದೆ ಎನಿಸಿಕೊಂಡಿರುವ ಸಿಗ್ಮಂಡ್ ಫ್ರಾಯಿಡ್‌ಗೆ (Sigmund Freud) ಬರೆದ ಕಾಗದ ಒಂದರಲ್ಲಿ ಐನ್‌ಸ್ಟೈನರು ಹೀಗೆ ಹೇಳಿದ್ದಾರೆ :

"ರಾಜಕೀಯ ಮುಖಂಡರುಗಳೇ ಆಗಲಿ, ಸರ್ಕಾರಗಳೇ ಆಗಲಿ ಅಧಿಕಾರಕ್ಕೆ ಬಂದಿರುವುದು ಹಿಂಸೆಯ ಮೂಲಕ ಅಥವಾ ಸಾರ್ವತ್ರಿಕ ಚುನಾವಣೆಗಳ ಮೂಲಕ. ಇಂಥ ಸರಕಾರಗಳು ಮತ್ತು ಮುಖಂಡರು ತಮ್ಮ ದೇಶದ ಬೌದ್ಧಿಕ ಮತ್ತು ನೈತಿಕ ಸಂಪ್ರದಾಯಗಳ ನಿಜವಾದ ಪ್ರತಿನಿಧಿಗಳೆಂದು ಹೇಳಲಾಗದು. ಈಗ ಬೌದ್ಧಿಕ ವಲಯದಲ್ಲಿ ಹೆಸರಾಂತ ಮಹನೀಯರು ದೇಶದ ಬೆಳವಣಿಗೆಯ ವಿಷಯದಲ್ಲಿ ಯಾವ ವಿಧವಾದ ನೇರವಾದ ಪ್ರಭಾವವನ್ನು ಬೀರಲೂ ಸಾಧ್ಯವಾಗಿಲ್ಲ. ಈ ಜನರು ಒಟ್ಟುಗೂಡಿ ಪ್ರಪಂಚದ ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ಕಂಡುಹಿಡಿಯುವುದಕ್ಕೆ ಅವರಲ್ಲಿನ ಅನೈಕಮತ್ಯ ಅಡ್ಡಿ ಬಂದಿದೆ. ಅವರ ಸಾಧನೆಗಳೂ ಸಿದ್ಧಿಗಳೂ ಅವರ ಪರಿಶುದ್ಧತೆಯನ್ನೂ, ಶಕ್ತಿಯನ್ನೂ ವ್ಯಕ್ತಪಡಿಸಿವೆ. ಇಂಥ ಜನಗಳನ್ನು ಒಟ್ಟುಗೂಡಿಸುವುದರಿಂದ ಇಂದಿನ ಪರಿಸ್ಥಿತಿಯನ್ನು ಉತ್ತಮಪಡಿಸಬಹುದೆಂದು ನಿಮಗೆ ತೋರುವುದಿಲ್ಲವೇ? ಈ ತರಹೆಯ ಅಂತಾರಾಷ್ಟ್ರೀಯ ಸಂಘವೊಂದು ತನ್ನ ಧ್ಯೇಯ-ಧೋರಣೆಗಳನ್ನು ವೃತ್ತಪತ್ರಿಕೆಗಳಲ್ಲಿ ಪ್ರಕಟಿಸುವುದರ ಮೂಲಕ ರಾಜಕೀಯ ವಲಯದಲ್ಲಿ ತಕ್ಕ ಪ್ರಭಾವ ಬೀರಬಲ್ಲದು; ನೈತಿಕ ಶಕ್ತಿಯನ್ನು ಗಳಿಸಿಕೊಳ್ಳಬಲ್ಲದು. ಇದರಿಂದ ರಾಜಕೀಯ ಸಮಸ್ಯೆಗಳು ಇತ್ಯರ್ಥವಾಗುವ ಸಮಯದಲ್ಲಿ ಸಂಘದ ಅಭಿಪ್ರಾಯ ಗಣನೆಗೆ ಬರುತ್ತವೆ. ಅದರ ಸದಸ್ಯರು ಆಗಾಗ ಸಭೆ ಸೇರಿ, ತಮ್ಮ ತಮ್ಮ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳುವುದರಿಂದಲೂ, ಪ್ರಣಾಳಿಕೆಗೆ ರುಜುಮಾಡುವ ಸದಸ್ಯರು ಅದರ ಧ್ಯೇಯಕ್ಕೆ ತಕ್ಕಂತೆ ನಡೆದುಕೊಳ್ಳುವ ಸಂಪ್ರದಾಯವನ್ನು ಬೆಳೆಸಿಕೊಳ್ಳುವುದರಿಂದಲೂ, ಸಂಸ್ಥೆಯು ಹೆಚ್ಚು ಪ್ರಭಾವವನ್ನು ಪಡೆಯಬಲ್ಲುದು. ಮಾನವನ ದೌರ್ಬಲ್ಯದಿಂದ ಅನೇಕ ಪಂಡಿತ ಪರಿಷತ್ತುಗಳು ಲಯವಾಗಿವೆ; ಈ ಸಂಸ್ಥೆಯೂ ಅಂಥ ದೌರ್ಬಲ್ಯಗಳಿಗೆ ಬಲಿಯಾಗಿ ತನ್ನನ್ನೇ ತಾನು ನಾಶಮಾಡಿಕೊಳ್ಳಬಹುದೆಂಬ ಶಂಕೆ ಏನೋ ಇದ್ದೇ ಇದೆ. ಇಷ್ಟೆಲ್ಲ ಪ್ರತಿಕೂಲಗಳಿದ್ದರೂ ಕೂಡ ಸಂಘ ಸ್ಥಾಪನೆಯ ವಿಷಯದಲ್ಲಿ ನಾವು ಪ್ರಯತ್ನಪಡುವುದು ವಿಹಿತವಲ್ಲವೆ ? ಪ್ರಯತ್ನಪಡುವುದು ನಮ್ಮ ಆದ್ಯಕರ್ತವ್ಯವೆಂದು ನಾನು ಬಗೆಯುತ್ತೇನೆ."

ಯುರೋಪಿನ ಮಾಸಪತ್ರಿಕೆಯೊಂದಕ್ಕೆ ೧೯೨೯ರಲ್ಲಿ ಈ ರೀತಿ ಬರೆದರು: "ಪ್ರತ್ಯಕ್ಷವಾಗಿಯಾಗಲೀ, ಪರೋಕ್ಷವಾಗಿಯಾಗಲೀ ನಾನು ಸಮರ ಸೇವೆಯನ್ನು ಮಾಡುವುದಿಲ್ಲ. ಅಂಥ ಸೂಚನೆ ಬಂದಲ್ಲಿ ಹಿಂಜರಿಯದೆ ತಿರಸ್ಕರಿಸುತ್ತೇನೆ. ಅಷ್ಟೆ ಅಲ್ಲದೆ, ನನ್ನ ಸ್ನೇಹಿತರೆಲ್ಲರೂ ನನ್ನಂತೆಯೇ ಸಮರ ಸೇವೆಯನ್ನು—ಸಮರಕ್ಕೆ ಕಾರಣ ಯಾವುದೇ ಇರಲಿ—ವಿರೋಧಿಸುವಂತೆ ಪ್ರೇರೇಪಿಸುತ್ತೇನೆ."

ಐನ್‌ಸ್ಟೈನರು ತಮ್ಮ ಭಾವನೆಗಳನ್ನು ಎಲ್ಲ ವರ್ಗದ ಜನರಲ್ಲಿಯೂ ಹರಡಲು ಪ್ರಯತ್ನಪಟ್ಟರು. ವಿದ್ಯಾರ್ಥಿ ಸಂಘಗಳಿಗೆ ಹೋಗಿ ಅವರೆಲ್ಲರೂ ಯುದ್ಧ ಮನೋಭಾವನೆಯನ್ನು ವಿರೋಧಿಸುವಂತೆ ಪ್ರೇರೇಪಿಸಿದರು. ಮಹಿಳಾ ಸಮಾಜಗಳಲ್ಲಿ ಭಾಷಣ ಮಾಡಿ

ಯುದ್ಧದ ಅನಾಹುತಗಳನ್ನು ಅವರಿಗೆ ವಿವರಿಸಿದರು. ಹೀಗೆ ಅವರು ಎಲ್ಲ ತರಹೆಯ ಜನರಲ್ಲಿ ಪ್ರಚಾರ ಕಾರ್ಯ ನಡೆಸಿದರೂ, ಅವರ ಮುಖ್ಯ ಗಮನ ವೈಜ್ಞಾನಿಕರ ಕಡೆಗಿದ್ದಿತು. ಅವರು ವೈಜ್ಞಾನಿಕರಿಗೆ ಹೆಚ್ಚು ಪ್ರಾಮುಖ್ಯತೆ ಕೊಡಲು ಎರಡು ಕಾರಣಗಳಿದ್ದುವು. ಮೊದಲನೆಯದಾಗಿ ವೈಜ್ಞಾನಿಕರ ಸಹಕಾರವಿಲ್ಲದೆ ಆಧುನಿಕ ರೀತಿಯಲ್ಲಿ ಯುದ್ಧ ನಡೆಸಲು ರಾಜಕೀಯ ಪಟುಗಳಿಗೆ ಸಾಧ್ಯವಿಲ್ಲ ಎಂಬುದು. ಎರಡನೆಯದಾಗಿ ವೈಜ್ಞಾನಿಕ ತತ್ವಗಳು ಎಲ್ಲ ದೇಶಗಳವರಿಗೂ ಒಂದೇ ಆಗಿವೆ ಎನ್ನುವುದು. ಅಂದರೆ ಇತಿಹಾಸ, ಅರ್ಥಶಾಸ್ತ್ರ ರಾಜ್ಯಶಾಸ್ತ್ರ ಮೊದಲಾದವುಗಳಂತೆ, ವಿಜ್ಞಾನಶಾಸ್ತ್ರವು ಅಮೇರಿಕಾ ದೇಶಕ್ಕೆ ಬೇರೆ, ರಷ್ಯಾ ದೇಶಕ್ಕೆ ಬೇರೆ ಆಗಲಾರದು. ಇದರಿಂದ ಉಳಿದ ಪಂಡಿತರುಗಳಿಗಿಂತ ವೈಜ್ಞಾನಿಕರಲ್ಲಿ ಅಂತಾರಾಷ್ಟ್ರೀಯ ಭಾವನೆ ಚೆನ್ನಾಗಿ ಬೆಳೆಯಲು ಸಾಧ್ಯವಿರುತ್ತದೆ. ಇಂಥ ಭಾವನೆ ಬೆಳೆದರೆ ವೈಜ್ಞಾನಿಕನು ಯುದ್ಧ ಸನ್ನಾಹದಲ್ಲಿ ಸಹಕರಿಸಲು ನಿರಾಕರಿಸುತ್ತಾನೆ. ಈ ಎರಡು ಕಾರಣಗಳಿಂದ ಬೇರೆಯವರಿಗಿಂತ ಅವನು ಯುದ್ಧನಿರೋಧಕ ಕಾರ್ಯವನ್ನು ಯಶಸ್ವಿಯಾಗಿ ಮಾಡಬಲ್ಲನು, ಎಂದು ಐನ್‌ಸ್ಟೈನರು ಭಾವಿಸಿದ್ದರು.

ಎಲ್ಲ ದೇಶದ ವೈಜ್ಞಾನಿಕರೂ ಒಂದೆಡೆ ಸೇರಿ ತಮ್ಮ ಅಂತಾರಾಷ್ಟ್ರೀಯ ಸಂಘ ಒಂದನ್ನು ಸ್ಥಾಪಿಸಿಕೊಂಡು ಪ್ರಪಂಚದ ಶಾಂತಿಗೆ ಅಸ್ತಿಭಾರ ಹಾಕಬೇಕೆಂದು ಹೇಳಿರುವುದಲ್ಲದೆ ಮತ್ತೆರಡು ಸಲಹೆಗಳನ್ನು ಐನ್‌ಸ್ಟೈನರು ಕೊಟ್ಟಿದ್ದಾರೆ. ಅವುಗಳಲ್ಲಿ ಮೊದಲನೆಯದು ಪ್ರತಿಯೊಂದು ದೇಶವೂ ನಿಃಶಸ್ತ್ರೀಕರಣಕ್ಕೆ ಒಪ್ಪಬೇಕೆಂಬುದು; ಎರಡನೆಯದು ರಾಷ್ಟ್ರೀಯ ಸರ್ಕಾರಗಳು ಹೋಗಿ ವಿಶ್ವಸರ್ಕಾರ ರಚಿತವಾಗಬೇಕೆಂಬುದು. ವಿಶ್ವಸರ್ಕಾರಕ್ಕೆ ಬದ್ಧರಾಗಿ ಎಲ್ಲ ಜನರೂ ನಡೆಯುವುದರಿಂದ ರಾಷ್ಟ್ರ-ರಾಷ್ಟ್ರಗಳಿಗಾಗುವ ಯುದ್ಧ ತಪ್ಪುತ್ತದೆಂದು ಐನ್‌ಸ್ಟೈನರು ಪ್ರಚಾರ ಮಾಡಿದರು. ನಿಃಶಸ್ತ್ರೀಕರಣವನ್ನೂ ವಿಶ್ವಸರ್ಕಾರವನ್ನೂ ಪ್ರತಿಪಾದಿಸುವಾಗ ಅವರು ಅನೇಕರ ಕ್ರೋಧಕ್ಕೆ ಒಳಗಾಗಬೇಕಾಯಿತು. ಆದರೆ ಆ ಕೋಪವು ಇವರ ಯತ್ನದ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡಲಿಲ್ಲ.

ಪ್ರಥಮ ಮಹಾಯುದ್ಧಾನಂತರ ಲೀಗ್ ಆಫ್ ನೇಷನ್ಸ್ ಸಂಸ್ಥೆ ಮೊದಮೊದಲು ನಿಃಶಸ್ತ್ರೀಕರಣಕ್ಕಾಗಿ ಪ್ರಯತ್ನಪಟ್ಟಿತು. ಲೀಗ್ ಸಂಸ್ಥೆಯ ಈ ಯತ್ನಕ್ಕೆ ಪ್ರಪಂಚದ ಎಲ್ಲ ಭಾಗಗಳ ಜ್ಞಾನಿಗಳಿಂದಲೂ ಬೆಂಬಲ ದೊರೆಯಿತು. ತಮಗೆ ಅಪ್ರಿಯವಾಗಿದ್ದ ಚಳುವಳಿಯಲ್ಲಿ ತೊಡಗಿದ್ದುದರಿಂದ ಐನ್‌ಸ್ಟೈನರು ಲೀಗ್ ಸಂಸ್ಥೆಯ ಚಟುವಟಿಕೆಗಳಲ್ಲಿ ಮುಂದಾಳುತನವನ್ನು ವಹಿಸಿದರು. ಸಂಸ್ಥೆಯ ಆಶ್ರಯದಲ್ಲಿ ಪ್ರತಿವರ್ಷವೂ ನಡೆಯುತ್ತಿದ್ದ ನಿಃಶಸ್ತ್ರೀಕರಣ ಸಮ್ಮೇಳನದಲ್ಲಿ ಐನ್‌ಸ್ಟೈನರು ಪ್ರಮುಖ ಪಾತ್ರವನ್ನು ವಹಿಸುತ್ತಿದ್ದರು. ೧೯೩೨ರಲ್ಲಿ ನಡೆದ ಸಮ್ಮೇಳನದಲ್ಲಿ ಈ ಮಾತುಗಳನ್ನು ಹೇಳಿದರು:

"ಎಲ್ಲ ದೇಶಗಳ ಜವಾಬ್ದಾರಿಯುತ ಮುಖಂಡರೂ ಯುದ್ಧ ನಡೆಯಕೂಡದೆಂಬ ಇಚ್ಛೆಯುಳ್ಳವರಾಗಿದ್ದಾರೆಂಬುವಲ್ಲಿ ನನಗೆ ಪೂರ್ಣ ನಂಬಿಕೆ ಇದೆ. ಇದನ್ನು ಕಾರ್ಯಾಚರಣೆಗೆ ತರಲು ಜನಗಳಲ್ಲಿರುವ ಕೆಲವು ಕೆಟ್ಟ ಸಂಪ್ರದಾಯಗಳು ಅಡ್ಡಿಯಾಗಿವೆ. ದೇಶದ

ಸಾರ್ವಜನಿಕ ಶಿಕ್ಷಣಶಾಲೆಗಳು ಈ ಕೆಟ್ಟ ಸಂಪ್ರದಾಯಗಳನ್ನು ಬೆಳೆಸುತ್ತವೆ. ಇವು ವಂಶಾನುಗತವಾಗಿ ಬಂದ ದುಷ್ಟ ರೋಗಗಳಂತೆ. ಸೈನಿಕ ಶಕ್ತಿಯನ್ನೂ ಅಲ್ಲಿಯ ಶಿಸ್ತನ್ನೂ ಹೊಗಳಿ ಅವು ಅತಿ ಮಹತ್ವವಾದವುಗಳೆಂಬ ಭ್ರಾಂತಿಯನ್ನುಂಟುಮಾಡುತ್ತವೆ. ಕಾರ್ಖಾನೆಗಳ ಒಡೆಯರುಗಳ ಮತ್ತು ಉನ್ನತ ಸೈನ್ಯಾಧಿಕಾರಿಗಳ ಹಿಡಿತದಲ್ಲಿರುವ ವೃತ್ತಪತ್ರಿಕೆಗಳು ತಮ್ಮ ಶಕ್ತಿಮೀರಿ ಈ ವಿಷಯದಲ್ಲಿ ಪ್ರಚಾರ ಮಾಡುತ್ತವೆ; ಆದ್ದರಿಂದ ನಿಃಶಸ್ತ್ರೀಕರಣವಾದ ಹೊರತು ಸ್ಥಿರಶಾಂತಿ ನೆಲಸಲಾರದು. ಶಸ್ತ್ರಾಸ್ತ್ರಗಳ ತಯಾರಿಕೆ ಇದೇ ಪ್ರಮಾಣದಲ್ಲಿ ಮುಂದುವರಿದರೆ, ಅನಾಹುತಗಳು ಅನಿವಾರ್ಯವಾಗಿ ಸಂಭವಿಸುತ್ತವೆ.

ಪ್ರಪಂಚದಲ್ಲಿ ಶಾಂತಿಯನ್ನು ಸ್ಥಾಪಿಸುವ ಸಲುವಾಗಿ ಅವತರಿಸಿದ "ಲೀಗ್ ಆಫ್ ನೇಷನ್ಸ್" ಸಂಸ್ಥೆ ತನ್ನ ಆದರ್ಶ ಸಾಧನೆಗಾಗಿ ಶ್ರಮಿಸುತ್ತಿತ್ತು. ಈ ಕಾರಣದಿಂದ ಪ್ರಪಂಚದ ಎಲ್ಲ ವಿಜ್ಞಾನಿಗಳ ಸಹಕಾರವನ್ನು ಪಡೆಯಲು ಬಯಸಿತು. ತನ್ನ ಉದ್ದೇಶ ಸಾಧನೆಗೋಸ್ಕರ "ಕಮಿಷನ್ ಫಾರ್ ಇಂಟಲೆಕ್ಚುಯಲ್ ಕೋ ಆಪರೇಷನ್" ಎಂಬ ಪರಿಷತ್ತನ್ನು ಲೀಗ್ ಸಂಸ್ಥೆ ಸ್ಥಾಪಿಸಿತು. ಐನ್‌ಸ್ಟೈನರು ಈ ಸಂಸ್ಥೆಯ ಸ್ಥಾಪನೆಯನ್ನು ಸ್ವಾಗತಿಸಿದರು. ಆದರೆ ಸಂಸ್ಥೆಯು ತನ್ನ ಧ್ಯೇಯವನ್ನು ಯಾವ ರೀತಿಯಲ್ಲಿ ಸಾಧಿಸುವುದೆಂಬುದರ ಬಗ್ಗೆ ಸಾಕಷ್ಟು ವಿವರಣೆ ಇಲ್ಲದ್ದರಿಂದ ಅದು ಜಯಪ್ರದವಾಗಿ ಕೆಲಸ ಮಾಡಬಲ್ಲುದೇ ಎಂಬ ಸಂದೇಹ ಅವರಿಗಿದ್ದಿತು. ಆದರೂ ಸಂಸ್ಥೆಯ ಧ್ಯೇಯ ಹಿರಿದಾದ್ದರಿಂದ ಅದರಿಂದ ಸ್ವಲ್ಪವಾದರೂ ಉಪಯೋಗವಾಗಬಹುದೆಂಬ ಆಸೆಯಿಂದ ಐನ್‌ಸ್ಟೈನರು ಅದರ ಸದಸ್ಯರಾದರು. ಒಂದು ವರ್ಷದೊಳಗಾಗಿ ಮಾತ್ರ ಸಂಸ್ಥೆಯಾದ ಲೀಗಿನ ದೌರ್ಬಲ್ಯ ಪ್ರಕಟವಾಯಿತು. ಗ್ರೀಸ್ ಮತ್ತು ಇಟಲಿ ದೇಶಗಳಿಗೆ ವಿವಾದ ಹುಟ್ಟಿಕೊಂಡಾಗ, ಲೀಗ್ ಸಂಸ್ಥೆಯು ನ್ಯಾಯವನ್ನು ಬಿಟ್ಟು ಇಟಲಿಯ ಕಡೆ ವಾಲಿತು. ಇಟಲಿ ಆ ಸಮಯದಲ್ಲಿ ಅತ್ಯಂತ ಪ್ರಬಲ ರಾಷ್ಟ್ರಗಳಲ್ಲೊಂದಾಗಿದ್ದುದರಿಂದ ಲೀಗ್ ಸಂಸ್ಥೆಯು ಅದನ್ನು ವಿರೋಧಿಸಲಿಲ್ಲ. ಲೀಗಿನ ಈ ಧೋರಣೆಯೂ, ಇನ್ನೂ ಇತರ ಕಾರುಬಾರುಗಳೂ ಐನ್‌ಸ್ಟೈನರಿಗೆ ಬೇಸರವನ್ನುಂಟುಮಾಡಿದವು. ಲೀಗಿನಿಂದ ದೂರವಾಗುವುದು ವಿಹಿತವೆಂದು ಅವರಿಗೆ ಅನ್ನಿಸಿತು. ಕಾಲಕ್ರಮದಲ್ಲಿ ಅದಕ್ಕೆ ರಾಜೀನಾಮೆ ಪತ್ರವನ್ನು ಸಲ್ಲಿಸಿದರು. ಆ ಪತ್ರದಲ್ಲಿ ತಾವು ರಾಜೀನಾಮೆ ಕೊಡಲು "ಸೈನಿಕ ಶಿಸ್ತಿಗೆ ವಿರುದ್ಧವಾಗಿ ಮತ್ತು ಅಂತಾರಾಷ್ಟ್ರೀಯ ಶಾಂತಿಗಾಗಿ ತಮ್ಮ ಸರ್ವಸ್ವವನ್ನೂ ಬದಿಗೊತ್ತಿ ಹೋರಾಡಿದ ಸಂಸ್ಥೆಗಳಿಗೂ ವ್ಯಕ್ತಿಗಳಿಗೂ ಕಮಿಷನ್ ಯಾವ ಸಹಾಯವನ್ನೂ ನೀಡದಿರುವುದೇ" ಕಾರಣವೆಂದು ಸ್ಪಷ್ಟಪಡಿಸಿದರು.

ಲೀಗ್ ಸಂಸ್ಥೆಯು ಮುಂದೆ ಅನುಸರಿಸಿದ ರೀತಿ-ನೀತಿಗಳಿಂದ ಪ್ರಪಂಚಕ್ಕೆ ಅಂಥ ಸಂಸ್ಥೆಗಳಿಂದ ಯಾವ ಪ್ರಯೋಜನವೂ ಆಗದೆಂದು ಎಲ್ಲರಿಗೂ ವಿದಿತವಾಯಿತು. ಪ್ರಪಂಚದ ಶಾಂತಿಯನ್ನು ಕಾಪಾಡಲು ಒಂದು ಅಂತಾರಾಷ್ಟ್ರೀಯ ಸಂಸ್ಥೆಯಿಂದ ಸಾಧ್ಯವಾಗುವುದಾದರೆ ಅದು ವಿಶ್ವಸರಕಾರದಿಂದ ಮಾತ್ರ ಸಾಧ್ಯ. ಐನ್‌ಸ್ಟೈನರು ಪ್ರತಿಪಾದಿಸುತ್ತಿದ್ದುದು ಇಂಥ ಒಂದು ಸರಕಾರವನ್ನು. ಅವರ ಅಭಿಪ್ರಾಯದಲ್ಲಿ— ವಿಶ್ವಸರಕಾರಕ್ಕೆ ಕೆಲವು ಮಿತವಾದ

ಅಧಿಕಾರಗಳಿದ್ದು ಅದರ ಕಾರ್ಯಾಚರಣೆ ಕೆಲವು ಕಟ್ಟುಪಾಡುಗಳಿಗೆ ಒಳಪಟ್ಟಿರಬೇಕು. ಯಾವುದಾದರೂ ಒಂದು ದೇಶ ಅಂತಾರಾಷ್ಟ್ರೀಯ ನಿಯಮಗಳಿಗೆ ವಿರೋಧವಾಗಿ ಪುಂಡಾಟ ನಡೆಸಿದರೆ, ಅಂತಾರಾಷ್ಟ್ರೀಯ ಸೈನ್ಯ ಅಂಥ ಪ್ರಯತ್ನವನ್ನು ದಮನಮಾಡಬೇಕು. ತಪ್ಪು ಮಾಡಿದ ರಾಷ್ಟ್ರಕ್ಕೆ ಶಿಕ್ಷೆ ವಿಧಿಸಲು ಅಂತಾರಾಷ್ಟ್ರೀಯ ನ್ಯಾಯಸ್ಥಾನವು ಕೊಟ್ಟ ತೀರ್ಪನ್ನು ಜಾರಿಗೆ ತರಲು ವಿಶ್ವಸರಕಾರಕ್ಕೆ ಅಧಿಕಾರವಿರಬೇಕು. ಪ್ರಾರಂಭದಲ್ಲಿ ಈ ವಿಶ್ವಸರಕಾರ ಪ್ರಬಲ ರಾಷ್ಟ್ರಗಳಾದ ರಷ್ಯಾ, ಅಮೇರಿಕಾ ಮತ್ತು ಬ್ರಿಟನ್‌ಗಳನ್ನೊಳಗೊಂಡಿದ್ದರೆ ಸಾಕು. ಆದರೆ ಉಳಿದ ರಾಷ್ಟ್ರಗಳು ಸೇರುವುದಕ್ಕೆ ಸದಾ ಅವಕಾಶವಿರಬೇಕು. ಪ್ರಪಂಚದ ಎಲ್ಲ ರಾಷ್ಟ್ರೀಯ ಸರಕಾರಗಳೂ, ತಮಗೆ ತಿಳಿದಿರುವ ಅಣುಶಕ್ತಿಗೆ ಸಂಬಂಧಪಟ್ಟ ರಹಸ್ಯವನ್ನು ಈ ವಿಶ್ವಸರಕಾರಕ್ಕೆ ಕಡ್ಡಾಯವಾಗಿ ತಿಳಿಸಬೇಕು. ಮತ್ತು ಅಣುಶಕ್ತಿಯ ಉತ್ಪಾದನೆಗೆ ಸಂಬಂಧಪಟ್ಟ ಅಧಿಕಾರವೆಲ್ಲವೂ ಈ ಸರಕಾರಕ್ಕೆ ಮೀಸಲಾಗಿರಬೇಕು.

೧೯೪೭ನೇ ಸಾಲಿನಲ್ಲಿ ಈ ಅಂಶಗಳನ್ನು ತಿಳಿಸಿ ಐನ್‌ಸ್ಟೈನರು ಪ್ರಪಂಚ ಸಂಸ್ಥೆಯ ಜನರಲ್ ಅಸೆಂಬ್ಲಿಗೆ ಒಂದು ಪತ್ರವನ್ನು ಬರೆದರು. ಆ ಸಭೆಯಲ್ಲಿ ಭಾಗವಹಿಸಿದ್ದ ಪ್ರತಿಯೊಂದು ಸರಕಾರದ ಪ್ರತಿನಿಧಿಗೂ ಐನ್‌ಸ್ಟೈನರ ಮನವಿಪತ್ರ ಹೋಯಿತು. ಆದರೆ ತಮ್ಮ ದೇಶದ ಸ್ವಾಮ್ಯತೆಯನ್ನೇ ಕಾಪಾಡಿಕೊಳ್ಳಲು ಆಸಕ್ತರಾಗಿದ್ದ ಪ್ರಪಂಚ ಸಂಸ್ಥೆಯ ಸದಸ್ಯರಿಗೆ ಐನ್‌ಸ್ಟೈನರ ವಿಶ್ವಸರಕಾರದ ಭಾವನೆ ರುಚಿಸಲಿಲ್ಲ. ಅನೇಕ ಸದಸ್ಯರು ಐನ್‌ಸ್ಟೈನರ ಅಭಿಪ್ರಾಯವು ಕಾರ್ಯಾಚರಣೆಗೆ ತರಲು ಸಾಧ್ಯವಾಗದೆಂದೂ, ಅವರ ಸೂಚನೆಗಳಲ್ಲಿ ತಿರುಳಿಲ್ಲವೆಂದೂ ಟೀಕಿಸಿದರು. ಮತ್ತೆ ಕೆಲವರು ಬಂಡವಾಳಶಾಹಿಯನ್ನು ಅದರಿಂದ ವಿಮುಕ್ತವಾಗಿರುವ ರಾಷ್ಟ್ರಗಳ ಮೇಲೆ ಹೊರಿಸಲು ನಡೆದಿರುವ ಉಪಾಯವೆಂದು ಐನ್‌ಸ್ಟೈನರ ಸೂಚನೆಯನ್ನು ನಿರಾಕರಿಸಿದರು. ದ್ವೇಷ, ಮಾತ್ಸರ್ಯ, ಕುಟಿಲತನ ಮತ್ತು ಅಸೂಯೆಗಳಿಂದ ಅಧೋಗತಿಗಿಳಿದಿದ್ದವರು ಐನ್‌ಸ್ಟೈನರ ವಿಚಾರಶೀಲತೆಯನ್ನು ಮೆಚ್ಚುವಷ್ಟು ಉದಾರಿಗಳಾಗಿರಲಿಲ್ಲ. ಅದನ್ನು ಸಾವಧಾನವಾಗಿ ಪರಿಶೀಲಿಸುವಷ್ಟು ಶೀಲವೂ, ತಾಳ್ಮೆಯೂ ಅವರಿಗೆ ಇರಲಿಲ್ಲ. ಇಂಥ ಪರಿಸ್ಥಿತಿಯಲ್ಲಿ ತಮ್ಮ ಮಾತುಗಳು ಅರಣ್ಯರೋದನವಾಗುತ್ತದೆಂಬುದು ಐನ್‌ಸ್ಟೈನರಿಗೆ ಗೊತ್ತಿತ್ತು. ಆದರೆ ಸತ್ಯನಿಷ್ಠರಾದ ಅವರು ತಮಗೆ ಸರಿಯೆಂದು ಕಂಡು ಬಂದ ಅಭಿಪ್ರಾಯಗಳನ್ನು ಪ್ರಚಾರ ಮಾಡುವುದು ತಮ್ಮ ಧರ್ಮವೆಂದು ತಿಳಿದಿದ್ದರು.

ಈಗ ಪ್ರಪಂಚ ಸಂಸ್ಥೆಗೆ ಬಂದಿರುವ ದುರವಸ್ಥೆಯನ್ನೂ, ಪ್ರಬಲ ರಾಷ್ಟ್ರಗಳ ತಿಕ್ಕಾಟವನ್ನೂ, ಟಿಬೆಟ್, ವಿಯಟ್‌ನಾಮ್ ಮುಂತಾದ ರಾಷ್ಟ್ರಗಳ ವಿಷಯಗಳಲ್ಲಿ ಅದು ಅವಲಂಬಿಸುತ್ತಿರುವ ನೀತಿಯನ್ನೂ, ತನಗೆ ವಹಿಸಲ್ಪಟ್ಟ ಒಂದು ವಿವಾದವನ್ನಾದರೂ ಬಗೆಹರಿಸಲು ಪ್ರಪಂಚ ಸಂಸ್ಥೆ ಅಸಮರ್ಥವಾಗಿರುವುದನ್ನೂ ಗಮನಿಸಿದರೆ, ಐನ್‌ಸ್ಟೈನರ ಸೂಚನೆಗಳು ಎಷ್ಟು ಸತ್ವ ಉಳ್ಳದ್ದಾಗಿದ್ದವು ಎಂಬುದು ವ್ಯಕ್ತವಾಗುತ್ತದೆ. ಈಗಿರುವ ವಿಶ್ವಸಂಸ್ಥೆಯು ವಿಶ್ವಸರಕಾರವಾಗಿ ಮಾರ್ಪಟ್ಟು ತನ್ನ ಸದಸ್ಯರುಗಳೆಲ್ಲರನ್ನೂ ಒಂದೇ ಭಾವನೆಯಿಂದ ಕೂಡ ಹೊರತು ಪ್ರಪಂಚಕ್ಕೆ ಈಗೊದಗಿರುವ ವಿಪತ್ತು ತಪ್ಪಲಾರದೆಂಬುದು

1) ವಿಶ್ವಶಾಂತಿ ಸ್ಥಾಪನೆಯ ವಿಷಯದಲ್ಲಿ ಐನ್‌ಸ್ಟೈನರ ಅಭಿಪ್ರಾಯವೇನು?



ಎಲ್ಲರಿಗೂ ಗೊತ್ತಾಗಿದೆ. ಇಂಥ ಸರಕಾರವು ಒಂದು ವಿಶ್ವಪಾರ್ಲಿಮೆಂಟಿಗೆ ಜವಾಬ್ದಾರಿಯಾಗಿದ್ದರೆ, ಅದು ಏಕಪಕ್ಷೀಯವಾಗಿ ಯಾವ ತೀರ್ಮಾನವನ್ನೂ ಮಾಡಲಾರದು. ಈ ಪಾರ್ಲಿಮೆಂಟಿಗೆ ಸದಸ್ಯರುಗಳನ್ನು ಪ್ರಜೆಗಳೇ ನೇರವಾಗಿ ಚುನಾಯಿಸುವುದರಿಂದ ಒಂದು ದೇಶದಿಂದ ಆರಿಸಿ ಬರುವ ಪ್ರತಿನಿಧಿಗಳು ಆ ದೇಶದ ಸರಕಾರಕ್ಕೆ ಅಧೀನರಾಗಿರುವುದಿಲ್ಲ. ಆದ್ದರಿಂದ ಐನ್‌ಸ್ಟೈನರ ಸೂಚನೆಗಳನ್ನು ಭಾಗ್ಯವಶಾತ್ ಎಲ್ಲ ಸರಕಾರಗಳೂ ಒಪ್ಪಿಕೊಂಡಲ್ಲಿ, ಇಡೀ ಮಾನವಕೋಟಿಯೇ ಈಗಿನ ವಿಪತ್ತಿನಿಂದ ಪಾರಾಗುತ್ತದೆ. ಸತ್ಯಕ್ಕೆ ಕುರುಡಾಗಿರುವ ಇಂದಿನ ಸರಕಾರಗಳು ಇಂಥ ಒಂದು ಸತ್ಕಾರ್ಯದಲ್ಲಿ ಭಾಗಿಯಾಗುತ್ತವೆಂದು ನಂಬುವುದಾದರೂ ಹೇಗೆ ?

ಅಂತಾರಾಷ್ಟ್ರೀಯ ವ್ಯವಹಾರಗಳಲ್ಲಿ ಹಿಂಸಾಮಾರ್ಗವನ್ನು ಬಿಟ್ಟು ಮಾನವೀಯ ದೃಷ್ಟಿಯನ್ನು ಪ್ರತಿಪಾದಿಸುತ್ತಿದ್ದ ಐನ್‌ಸ್ಟೈನರು ಗಾಂಧೀ ಮಾರ್ಗದಲ್ಲಿ ಒಂದು ಹೊಸ ಬೆಳಕನ್ನು ಕಂಡರು. ಗಾಂಧಿಯವರ ಎಪ್ಪತ್ತನೆಯ ವರ್ಧಂತಿಯ ಅಭಿನಂದನ ಗ್ರಂಥಕ್ಕೆ ಐನ್‌ಸ್ಟೈನರು ಹೀಗೆ ಬರೆದಿದ್ದಾರೆ: "ರಾಜಕೀಯ ಇತಿಹಾಸದಲ್ಲೇ ಗಾಂಧೀಜಿ ಅದ್ವಿತೀಯರು, ದಲಿತ ಜನಾಂಗವೊಂದರ ದಾಸ್ಯವಿಮೋಚನೆಗಾಗಿ ಹಿಂದೆಂದೂ ಕಾಣದ ಹೊಸ ಮಾನವೀಯ ಕಾರ್ಯತಂತ್ರವನ್ನೇ ರೂಪಿಸಿ, ಅಸಾಧಾರಣ ಶ್ರದ್ಧೆ ಶಕ್ತಿಗಳಿಂದ ಅದನ್ನು ಪ್ರಯೋಗ ಮಾಡಿದ್ದಾರೆ. ಜಗತ್ತಿನ ವಿಚಾರವಂತರ ಮೇಲೆ ಅವರು ಬೀರಿದ ನೈತಿಕ ಪ್ರಭಾವ, ಇಂದಿನ ಹಿಂಸಾಮಯ ಜಗತ್ತಿನ ಮಲಿನ ದೃಷ್ಟಿಗೆ ಕಾಣಲಾಗದಿದ್ದರೂ ಭವಿಷ್ಯದಲ್ಲಿ ಪರಿಣಾಮಕಾರಿಯಾದೀತು. ಏಕೆಂದರೆ ತಮ್ಮ ಜೀವನದ ಮೇಲ್ಪಂಕ್ತಿಯಿಂದಲೂ, ಬೋಧಕಪ್ರಭಾವದಿಂದಲೂ ಇಡೀ ಜನಾಂಗದ ನೈತಿಕ ಶಕ್ತಿಯನ್ನು ಪ್ರಚೋದಿಸಿ, ಸಂಘಟಿಸುವ ರಾಜನೀತಿಜ್ಞನ ಕಾರ್ಯ ಮಾತ್ರ ಚಿರವಾಗಿ ನಿಲ್ಲಬಲ್ಲುದು. ಮುಂದಿನ ತಲೆಮಾರುಗಳಿಗೆ ದಿವ್ಯಜ್ಯೋತಿಯಾಗಬಲ್ಲ ಗಾಂಧಿಯವರಂಥ ಮಹಾತೇಜಸ್ವಿ ಅದೃಷ್ಟವಶಾತ್ ನಮ್ಮ ಸಮಕಾಲೀನರಾಗಿ ಜೀವಿಸಿರುವುದರಿಂದಲೇ ನಾವು ಧನ್ಯರು"

೧೯೪೪ರಲ್ಲಿ ಗಾಂಧಿಯವರ ಎಪ್ಪತ್ತೈದನೆಯ ಜನ್ಮದಿನೋತ್ಸವದಲ್ಲಿ ಐನ್‌ಸ್ಟೈನರು ಮತ್ತೆ "ಗಾಂಧೀಜಿ ಬಾಹ್ಯಾಧಿಕಾರದ ಆಸರೆ ಇಲ್ಲದ ಜನನಾಯಕ. ತಂತ್ರಚಾತುರ್ಯಕ್ಕಾಗಲೀ, ಶಸ್ತ್ರಪ್ರಾವೀಣ್ಯತೆಗಾಗಲೀ, ಮಾರುಹೋಗದೆ ಕೇವಲ ವ್ಯಕ್ತಿತ್ವದ ಸರ್ವಸಮ್ಮತ ಪ್ರಭಾವದಿಂದಲೇ ಯಶಸ್ವಿಯಾದ ರಾಜಕಾರಣಿ. ಪಾಶವೀಶಕ್ತಿಯನ್ನು ತಿರಸ್ಕರಿಸಿ ನಿಂತ ವಿಜಯಿಯಾದ ಮಹಾಯೋಧ ಯಾವುದಕ್ಕೂ ಮಣಿಯದ ನಿಷ್ಠೆಯಿಂದ ತನ್ನ ಸರ್ವಶಕ್ತಿಯನ್ನೂ ಜನತೆಯ ಏಳ್ಗೆಗಾಗಿ, ಲೋಕಕಲ್ಯಾಣಕ್ಕಾಗಿ ವಿನಿಯೋಗಿಸಿದ ಜ್ಞಾನ-ದೈನ್ಯಗಳ ಮೂರ್ತಿ. ಯೂರೋಪಿನ ರಾಕ್ಷಸೀಶಕ್ತಿಯನ್ನೆಲ್ಲ ಸರಳ ಮಾನವನ ಅಜೇಯ ಅಭಿಮಾನದಿಂದ ಎದುರಿಸಿ ಜಯಶಾಲಿಯಾಗಿ ನಿಂತ ಮಾನವಶ್ರೇಷ್ಠ. ಶತಮಾನಗಳು ಕಳೆದಂತೆ ಇಂಥ ಮಾನವ ಭೂಮಿಯ ಮೇಲೆ ಜೀವಿಸಿದ್ದನೆಂಬುದನ್ನೇ ಮುಂದಿನ ಜನಕೋಟಿ ನಂಬಲಾರರು" ಎಂದು ಬರೆದರು ಸತ್ಯಾಗ್ರಹದ ಜನಕರೆಂದೆನಿಸಿಕೊಂಡಿರುವ ಮಹಾತ್ಮರನ್ನು ಸತ್ಯನಿಷ್ಠ ಐನ್‌ಸ್ಟೈನರು ಗೌರವಿಸಿದ್ದು ಹೀಗೆ,

ಮಹಾತ್ಮ ಗಾಂಧಿಯವರ ಬಗ್ಗೆ ಆಲ್ಬರ್ಟ್ ಐನ್‌ಸ್ಟೈನರ ಅಭಿಪ್ರಾಯವೇನು?

# ೫ | ಶಾಂತಿದೂತ

## ಐನ್‌ಸ್ಟೈನ್ ಮತ್ತು ಲೆನಾರ್ಡ್

ಮೊದಲನೆಯ ಮಹಾಯುದ್ಧವು ನಿಂತಮೇಲೆ ಜರ್ಮನಿಯ ಸ್ಥಿತಿ ಹದಗೆಟ್ಟು ಹೋಯಿತು. ಆದರೆ ಆರ್ಥಿಕ ಸ್ಥಿತಿ ಕೆಟ್ಟುಹೋದಂತೆ ಸಾಮಾಜಿಕ ವಾತಾವರಣವೂ ಕಲುಷಿತವಾಯಿತು. ಆ ದೇಶದ ಒಂದು ಗುಂಪಿನ ಜನರು ಯಹೂದಿಗಳನ್ನು ದ್ವೇಷಿಸುವುದನ್ನೇ ತಮ್ಮ ಕಸುಬನ್ನಾಗಿ ಇಟ್ಟುಕೊಂಡಿದ್ದರು. ಇಂಥವರೂ ಮತ್ತು ಕೆಲವು ಯುದ್ಧಪ್ರಿಯರೂ ಐನ್‌ಸ್ಟೈನರ ಏಳಿಗೆಯನ್ನು ಕಂಡು ಕರುಬಿದರು. ಹೇಗಾದರೂ ಮಾಡಿ ಐನ್‌ಸ್ಟೈನರ ತೇಜೋಭಂಗಮಾಡಬೇಕೆಂದು ಈ ಜನರು ಸಂಧಾನ ಮಾಡುತ್ತಿದ್ದರು. ಮದ್ದುಗುಂಡುಗಳನ್ನು ತಯಾರಿಸುತ್ತಿದ್ದು ಯುದ್ಧ ಕಾಲದಲ್ಲಿ ಅಪಾರವಾಗಿ ಹಣಗಳಿಸುತ್ತಿದ್ದ ಕೆಲವರು ಅವರಿಗೆ ಬೆಂಬಲವಾಗಿ ನಿಂತರು. ಐನ್‌ಸ್ಟೈನರು ಶಾಂತಿವಾದಿಗಳಾದ್ದರಿಂದ ಅವರ ಪ್ರಭಾವ ಹೆಚ್ಚಾದರೆ ತಮ್ಮ ಕೈಗಾರಿಕೆಗೆ ಧಕ್ಕೆ ಬರುತ್ತದೆಂದು ಈ ತಯಾರಿಕೆಗಾರರು ಭಾವಿಸಿದ್ದರು. ಆದ್ದರಿಂದ ಐನ್‌ಸ್ಟೈನರನ್ನು ವಿರೋಧಿಸುವ ಪಕ್ಷಕ್ಕೆ ಬೆಂಬಲ ಕೊಟ್ಟಷ್ಟೂ ತಮಗೆ ಲಾಭ ಉಂಟೆಂದು ಈ ಗುಂಪಿನವರು ತಿಳಿದಿದ್ದರು. ಈ ಎರಡು ವಿಧದ ಜನಗಳ ಜೊತೆಗೆ ಐನ್‌ಸ್ಟೈನರ ಖ್ಯಾತಿಯನ್ನು ನೋಡಿ ಸಹಿಸದ ಕೆಲವು ವಿಜ್ಞಾನಿಗಳೂ, ತತ್ತ್ವಶಾಸ್ತ್ರಜ್ಞರೂ, ರಾಜಕೀಯ ಧುರೀಣರೂ ಸೇರಿಕೊಂಡರು. ಹೀಗೆ ಐನ್‌ಸ್ಟೈನರ ವಿರುದ್ಧ ಒಂದು ದೊಡ್ಡ ಗುಂಪು ಜರ್ಮನಿಯಲ್ಲಿ ಬೆಳೆಯಹತ್ತಿತು.

ಲೆನಾರ್ಡ್ ಎಂಬ ವಿಖ್ಯಾತ ಭೌತಶಾಸ್ತ್ರಜ್ಞನು ಈ ಗುಂಪಿಗೆ ನಾಯಕನಾದನು. ಕೆಲ ದಿನಗಳಾದ ಮೇಲೆ ಈತನು ಮದ್ದುಗುಂಡು ತಯಾರಿಕೆಗಾರರಿಂದ ಹಣದ ಸಹಾಯವನ್ನು ದೊರಕಿಸಿಕೊಂಡನು. ಲೆನಾರ್ಡನ ಸತತ ಶ್ರಮದಿಂದ ಈ ಪಕ್ಷ ಸುವ್ಯವಸ್ಥಿತವಾಯಿತು. ಹೀಗೆ ಪಕ್ಷವು ಬಲಿತಮೇಲೆ ಅದು ತನಗೆ ದೊರಕಿದ ದುಡ್ಡಿನ ಸಹಾಯದಿಂದ ಕೆಲವು ವೃತ್ತಾಂತ ಪತ್ರಿಕೆಗಳನ್ನು ತನ್ನ ಬಲೆಗೆ ಸಿಕ್ಕಿಸಿಕೊಂಡಿತು. ಈ ಪಕ್ಷದವರು ಇಂಥ ಪತ್ರಿಕೆಗಳ ಮೂಲಕ ಐನ್‌ಸ್ಟೈನರ ವ್ಯಕ್ತಿತ್ವವನ್ನು ಅಲ್ಲಗಳೆಯುತ್ತಿದ್ದರು. ತಮ್ಮ ಸ್ನೇಹಿತರಿಂದ ಲೇಖನ ಬರೆಯಿಸಿ ಐನ್‌ಸ್ಟೈನರ ಸಿದ್ಧಾಂತಗಳನ್ನು ಖಂಡಿಸುತ್ತಿದ್ದರು. ಆಗಾಗ್ಗೆ ಬಹಿರಂಗ ಸಭೆಗಳನ್ನು ಏರ್ಪಡಿಸಿ ಅವುಗಳಲ್ಲಿ ಐನ್‌ಸ್ಟೈನರನ್ನೂ ಅವರ ಸಿದ್ಧಾಂತವನ್ನೂ ಹೊಲಸು ಭಾಷೆಯಲ್ಲಿ ತೆಗಳುತ್ತಿದ್ದರು. ಐನ್‌ಸ್ಟೈನರು ದೇಶದ್ರೋಹಿಗಳೆಂದೂ ಆದ್ದರಿಂದಲೇ ಜರ್ಮನರ ಶತ್ರುಗಳಾದ ಇಂಗ್ಲೀಷಿನವರು ಅವರ ಸಿದ್ಧಾಂತವನ್ನು ಪರೀಕ್ಷಿಸುವುದಕ್ಕೆ ಲಕ್ಷಾಂತರ ಪೌಂಡು ಹಣವನ್ನು ಖರ್ಚು ಮಾಡಿದರೆಂದೂ ಇಂಗ್ಲಿಷ್ ಶಾಸ್ತ್ರಜ್ಞರ ಪಿತೂರಿಯಿಂದ ಐನ್‌ಸ್ಟೈನರ

ಸಿದ್ಧಾಂತವು ಮಾನ್ಯವಾಗಿದೆ ಎಂದೂ ಲೆನಾರ್ಡನ ಪಕ್ಷ ಅಪಪ್ರಚಾರ ಮಾಡಲಾರಂಭಿಸಿತು; ಹಿಂದುಮುಂದು ಯೋಚಿಸದ ಕೆಲವು ಜನಗಳು ಈ ಮಾತನ್ನು ನಂಬಿದರು. ಅಪಪ್ರಚಾರ ಹೆಚ್ಚಾದಂತೆ ಇಂಥ ಮೂಢರ ಸಂಖ್ಯೆಯೂ ಬೆಳೆಯುತ್ತಾ ಹೋಯಿತು.

ಲೆನಾರ್ಡನ ಪಕ್ಷಕ್ಕೆ ಎದುರು ಪಕ್ಷವು ಹುಟ್ಟದೆ ಹೋಗಲಿಲ್ಲ. ಐನ್‌ಸ್ಟೈನರ ಹಿತೈಷಿಗಳು ತಮ್ಮ ಗೆಳೆಯನಿಗಾಗುತ್ತಿದ್ದ ಗೇಲಿ ನೋಡಿ ಸಹಿಸದಾದರು. ಅವರೆಲ್ಲರೂ ಸಂಘಟಿತರಾಗಿ ಐನ್‌ಸ್ಟೈನರ ಮೇಲೆ ನಡೆಯುತ್ತಿದ್ದ ಅಪಪ್ರಚಾರವನ್ನು ನಿಲ್ಲಿಸಲು ಯತ್ನಿಸಿದರು. ಈ ಗೆಳೆಯರ ಯತ್ನದಿಂದ ಐನ್‌ಸ್ಟೈನರ ಶಿಷ್ಯರ ಗುಂಪೂ ಬೆಳೆಯಿತು. ಹೀಗೆ ಇಡೀ ಜರ್ಮನಿ ದೇಶದ ಪ್ರಜಾಕೋಟಿಯು ಎರಡು ಗುಂಪಾಗಿ ಒಡೆಯಿತು.

ಈ ಪರಿಸ್ಥಿತಿಯನ್ನು ಕಂಡು ಐನ್‌ಸ್ಟೈನರಿಗೆ ಬಹು ದುಃಖವಾಯಿತು. ಯಾರ ಗೋಜಿಗೂ ಹೋಗದ ತಾವು ಪರೋಕ್ಷವಾಗಿಯಾದರೂ ಸಾರ್ವಜನಿಕ ಜೀವನದಲ್ಲಿ ಒಡಕನ್ನುಂಟುಮಾಡಬೇಕಾಯಿತಲ್ಲಾ ಎಂದು ನೊಂದುಕೊಂಡರು; ಸದಾ ಶಾಂತಿಯನ್ನು ಬಯಸುತ್ತಿದ್ದ ಅವರು ಸಾರ್ವಜನಿಕ ರಂಗದಲ್ಲಿ ಒಬ್ಬ ಚರ್ಚಾಸ್ಪದ ವ್ಯಕ್ತಿಯಾಗಲು ಇಷ್ಟಪಡಲಿಲ್ಲ. ಆದರೆ ಅಂದಿನ ವಿಷಪೂರಿತ ವಾತಾವರಣ ಅವರಿಗೆ ನೆಮ್ಮದಿಯಿಂದಿರಲು ಅವಕಾಶ ಕೊಡಲಿಲ್ಲ. ಜರ್ಮನಿಯಿಂದ ಹೊರಗೆ ಹೋದರೆ ತಮಗೆ ಶಾಂತಿ ದೊರೆಯುವುದೇನೋ ಎಂದು ಐನ್‌ಸ್ಟೈನರು ಆಶಿಸಿದರು. ಅವಕಾಶ ದೊರೆತೊಡನೆ ಆ ದೇಶದಿಂದ ಕೆಲ ದಿನಗಳ ಮಟ್ಟಿಗಾದರೂ ಹೊರಗಿರಬೇಕೆಂದು ನಿಶ್ಚಯಿಸಿದರು. ತಮ್ಮಿಂದ ಮತ್ತಷ್ಟು ಅಶಾಂತಿಗೆ ಕಾರಣವಾಗಬಹುದೆಂದು ಅವರು ಸಾರ್ವಜನಿಕ ಸಭೆಗಳಿಗೆ ಹೋಗುವುದನ್ನು ನಿಲ್ಲಿಸಿದರು. ಆದಕ್ಕೆ ಮೊದಲೂ ಅವರು ಭಾಗವಹಿಸುತ್ತಿದ್ದುದು ತಮ್ಮ ವಿರುದ್ಧ ಪಕ್ಷದವರು ಏರ್ಪಡಿಸಿದ ಸಭೆಗಳಲ್ಲಿ. ತಮ್ಮ ವಿರುದ್ಧ ಟೀಕೆಗಳನ್ನು ಕೇಳುವುದರಿಂದ ತಮ್ಮ ವ್ಯಕ್ತಿತ್ವವನ್ನು ಸರಿಪಡಿಸಿಕೊಳ್ಳಬಹುದೆಂದೂ, ತಮ್ಮ ಸಿದ್ಧಾಂತದಲ್ಲಿದ್ದ ಲೋಪದೋಷಗಳನ್ನು ತಿದ್ದಿಕೊಳ್ಳಬಹುದೆಂದೂ, ಐನ್‌ಸ್ಟೈನರು ಅಂಥ ಸಭೆಗಳಲ್ಲಿ ಭಾಗವಹಿಸುತ್ತಿದ್ದರು. ಆದರೆ ಅಲ್ಲಿ ಆಗುತ್ತಿದ್ದ ಟೀಕೆಗಳು ಮಾತ್ಸರ್ಯದಿಂದ ಬರುತ್ತಿದ್ದಂಥವೆಂದು ಮನವರಿಕೆಯಾಯಿತು. ತಾವು ಅಂಥ ಸಭೆಗಳಲ್ಲಿ ಭಾಗವಹಿಸುವದರಿಂದ ವಿರೋಧಿಗಳ ಕೋಪ ಮತ್ತಷ್ಟು ಪ್ರಜ್ವಲವಾಗುವದೆಂದೂ ಖಚಿತವಾಯಿತು. ಆ ಮೇಲೆ ಐನ್‌ಸ್ಟೈನರು ಸಭೆಗಳಿಗೆ ಹೋಗುವುದನ್ನು ನಿಲ್ಲಿಸಿದರು.

## ಹಾಲೆಂಡ್ ಯಾತ್ರೆ

ಐನ್‌ಸ್ಟೈನರು ಜರ್ಮನಿ ದೇಶದಿಂದ ಹೊರಗಿರಬೇಕೆಂಬ ಆಸೆ ಈಡೇರಲು ಬಹು ದಿನಗಳು ಬೇಕಾಗಿಲ್ಲ. ಯುರೋಪಿನ ದೇಶಗಳು ಒಂದಾದಮೇಲೊಂದು ಅವರನ್ನು ಆಹ್ವಾನಿಸತೊಡಗಿದವು. ಇವುಗಳಲ್ಲಿ ಮೊದಲನೆಯದು ಹಾಲೆಂಡ್.

ಉಳಿದ ದೇಶದವರಂತೆ ಡಚ್ಚರೂ ತಮ್ಮ ವರ್ತಮಾನಪತ್ರಿಕೆಗಳಲ್ಲಿ ಐನ್‌ಸ್ಟೈನರ ವಿಷಯವಾಗಿ ನಡೆಯುತ್ತಿದ್ದ ಖಂಡನ ಮಂಡನಗಳನ್ನು ಓದುತ್ತಿದ್ದರು. ಇಷ್ಟು ವಾದ ವಿವಾದಗಳಿಗೆ ಕಾರಣನಾಗಿರುವ ವ್ಯಕ್ತಿಯನ್ನು ನೋಡಲು ಜನರು ಕುತೂಹಲಗೊಂಡಿದ್ದರು. ಅವರ ಸಿದ್ಧಾಂತವನ್ನು ಅವರ ಬಾಯಿಂದಲೇ ಕೇಳಿದರೆ ಆಮೇಲೆ ಒಂದುದಿನ ನಿರ್ದಿಷ್ಟವಾದ ಅಭಿಪ್ರಾಯಕ್ಕೆ ಬರಲು ಸಾಧ್ಯವಾಗುವುದೆಂದು ಕೆಲವು ಶಾಸ್ತ್ರಜ್ಞರೂ, ಮೇಧಾವಿಗಳೂ ತಿಳಿದಿದ್ದರು. ಜನರ ಇಚ್ಛೆಯನ್ನು ಲೈಡನ್ (Leiden) ವಿಶ್ವವಿದ್ಯಾನಿಲಯದವರು ಅರಿತು ಕೊಂಡರು. 'ಅವರ ಆಸೆಯನ್ನು ಪೂರೈಸಲೋಸುಗ ವಿಶ್ವವಿದ್ಯಾನಿಲಯದ ಅಧಿಕಾರಿಗಳು ಐನ್‌ಸ್ಟೈನರನ್ನು ಹಾಲೆಂಡಿಗೆ ಆಹ್ವಾನಿಸಿದರು. ಅವರು ಈ ಕರೆಯನ್ನು ಮನ್ನಿಸಿ ಹಾಲೆಂಡಿಗೆ ಹೋದರು. ಅವರು ಅಲ್ಲಿಗೆ ಹೋದ ಮೇಲೆ ಲೈಡನ್ ವಿಶ್ವವಿದ್ಯಾನಿಲಯದವರು ಅವರನ್ನು ಗೌರವ ಪ್ರಾಧ್ಯಾಪಕರನ್ನಾಗಿ ನೇಮಿಸಿಕೊಂಡರು. ಇದರಿಂದ ಅಲ್ಲಿಯ ಉನ್ನತ ತರಗತಿಯ ವಿದ್ಯಾರ್ಥಿಗಳಿಗೆ ಐನ್‌ಸ್ಟೈನರಿಂದ ಪಾಠ ಹೇಳಿಸಿಕೊಳ್ಳುವ ಸುಯೋಗ ದೊರೆಯಿತು.

ಐನ್‌ಸ್ಟೈನರು ಲೈಡನ್ ವಿಶ್ವವಿದ್ಯಾನಿಲಯದ ಪದವಿಯನ್ನು ಒಪ್ಪಿಕೊಂಡಿದ್ದು ಜರ್ಮನಿಯಲ್ಲಿ ಅನೇಕ ತೆರನಾದ ಟೀಕೆಗಳಿಗೆ ಅವಕಾಶ ಕೊಟ್ಟಿತು. ಐನ್‌ಸ್ಟೈನರು ಹಾಲೆಂಡಿನಲ್ಲಿಯೇ ನೆಲೆಸುವರೆಂದು ಹಲವರು ಅಂದುಕೊಂಡರು. ಮತ್ತೆ ಕೆಲವರು ತಮ್ಮ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳಲು ಐನ್‌ಸ್ಟೈನರು ಹಾಲೆಂಡಿಗೆ ಹೋಗಿರುವರೆಂದು ಟೀಕಿಸಿದರು. ಅವರ ವಿಚಾರಪೂರಿತ ಭಾಷಣಗಳಿಂದ ಜರ್ಮನಿಯ ಕೀರ್ತಿ ಹಬ್ಬುತ್ತದೆ. ಆದ್ದರಿಂದ ಅವರ ಯಾತ್ರೆಯಿಂದ ಜರ್ಮನಿಗೆ ಉಪಕಾರವೇ ಹೊರತು ಎಂದಿಗೂ ಅಪಕಾರವಾಗಲಾರದು ಎಂಬುದು ಐನ್‌ಸ್ಟೈನರ ಹಿತಚಿಂತಕರಿಗೆ ಅರಿವಾಗಿತ್ತು.

ಲೈಡನ್ ವಿಶ್ವವಿದ್ಯಾನಿಲಯಕ್ಕೂ ಐನ್‌ಸ್ಟೈನರಿಗೂ ಆಗಿದ್ದ ಒಪ್ಪಂದದಂತೆ, ಅವರು ವರ್ಷದ ಕೆಲವು ವಾರಗಳಲ್ಲಿ ವಿಶ್ವವಿದ್ಯಾನಿಲಯದ ಉನ್ನತ ತರಗತಿಗಳಿಗೆ ಮಾತ್ರ ಪಾಠ ಹೇಳಬೇಕಾಗಿದ್ದಿತು. ಉಳಿದಾಗ ಅವರಿಗೆ ಬಿಡುವಿರುತ್ತಿತ್ತು. ಈ ಸಂದರ್ಭವನ್ನು ಉಪಯೋಗಿಸಿಕೊಂಡು ವಿಶ್ವವಿದ್ಯಾನಿಲಯವೂ, ಕೆಲವು ಸಾಂಸ್ಕೃತಿಕ ಸಂಘಗಳೂ ಐನ್‌ಸ್ಟೈನರ ಉಪನ್ಯಾಸಗಳನ್ನು ಏರ್ಪಡಿಸುತ್ತಿದ್ದವು. ಹೀಗೆ ಐನ್‌ಸ್ಟೈನರು ಕೊಟ್ಟ ಉಪನ್ಯಾಸಗಳಲ್ಲಿ ಅತಿ ಮುಖ್ಯವಾದುದು ಅವರು ಲೈಡನ್ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಮುಂದೆ ಓದಿದ "ಈಥರ್ ಮತ್ತು ಸಾಪೇಕ್ಷವಾದ" ಎಂಬುದು. ಐನ್‌ಸ್ಟೈನರು ಈ ಭಾಷಣದಲ್ಲಿ "ಗ್ರಹಗಳು, ನಕ್ಷತ್ರಗಳು, ಧೂಮಕೇತುಗಳು ಒಂದು ನಿರ್ದಿಷ್ಟವಾದ ಗತಿಯಲ್ಲಿ ಚಲಿಸಲು ಆಕಾಶವು ವಕ್ರವಾಗಿರುವುದೇ ಕಾರಣ. ಬೆಳಕು ಪ್ರಸರಿಸಲು ಸಹಾಯಕವಾಗುವುದೂ ಆಕಾಶದ ವಕ್ರತೆಯೇ. ಹಿಂದಿನ ಸಿದ್ಧಾಂತಗಳ ಪ್ರಕಾರ ಬೆಳಕು ಪ್ರಸರಿಸಲು ಕಾರಣ ಈಥರ್ ಎಂಬ ಮಧ್ಯವರ್ತಿ. ಆದ್ದರಿಂದ 'ಈಥರ್' ಎಂಬ ಮಾತನ್ನು 'ವಕ್ರವಾಗಿರುವ ಆಕಾಶ' ಎನ್ನುವ ಅರ್ಥದಲ್ಲಿ ಉಪಯೋಗಿಸಬಹುದು. ಆ ಶಬ್ದವನ್ನು ಹೊಸ ಅರ್ಥದಲ್ಲಿ ಉಪಯೋಗಿಸಿದರೆ ನಮ್ಮ ವ್ಯಾವಹಾರಿಕ ಶಬ್ದಕೋಶದಿಂದ ಆ ಮಾತನ್ನು ತೆಗೆದು ಹಾಕಬೇಕಾಗಿಲ್ಲ. ಹಾಗಲ್ಲದೆ

ಹಿಂದಿನ ಅರ್ಥದಲ್ಲೇ ಅದನ್ನು ಬಳಸುವುದಾದರೆ ತಪ್ಪು ಮಾಡಿದಂತಾಗುತ್ತದೆ. ಏಕೆಂದರೆ ಬೆಳಕು ಪ್ರಸಾರವಾಗಲು ಯಾವ ಮಧ್ಯವರ್ತಿಯೂ ಬೇಕಿಲ್ಲ; ಮತ್ತು ಈಥರ್ ಎಂಬ ವಸ್ತು ವಿಶ್ವದಲ್ಲಿಲ್ಲ" ಎಂದು ಹೇಳಿದರು. ಐನ್‌ಸ್ಟೈನರು ಈಥರ್ ಪದವನ್ನು ಉಪಯೋಗಿಸಿದ್ದು ಅವರ ವಿರೋಧಿಗಳಿಗೆ ಅಪಪ್ರಚಾರ ಮಾಡಲು ಅನುಕೂಲವಾಯಿತು. "ಐನ್‌ಸ್ಟೈನರು ಹಿಂದೆ ಈಥರ್‌ನ ಇರುವಿಕೆಯನ್ನು ಖಂಡಿಸಿದ್ದರು; ಈಗಲಾದರೋ ಈಥರ್‌ನ ಇರುವಿಕೆಯನ್ನು ಸಮರ್ಥಿಸುತ್ತಿದ್ದಾರೆ. ಒಂದೊಂದು ಸಾರೆ ಒಂದೊಂದು ತೆರನಾಗಿ ಮಾತನಾಡುತ್ತಿದ್ದಾರೆ. ಅವರಿಗೆ ಒಂದು ವಿಧವಾದ ಹುಚ್ಚು ಹಿಡಿದಿದೆ" ಎಂದು ಅವರು ಅವಹೇಳನ ಮಾಡತೊಡಗಿದರು. ಈ ಕುಹಕಿಗಳು ಹಿಂದೆ ಆ ಪದವು ಯಾವ ಅರ್ಥದಲ್ಲಿ ಉಪಯೋಗವಾಗುತ್ತಿತ್ತು ಮತ್ತು ಐನ್‌ಸ್ಟೈನರು ಯಾವ ವಿಶೇಷಾರ್ಥದಲ್ಲಿ ಆ ಮಾತನ್ನು ಉಪಯೋಗಿಸಿದರು ಎಂಬುದನ್ನು ಉದ್ದೇಶಪೂರ್ವಕವಾಗಿ ಮರೆಮಾಚಿದರು.

ಐನಸ್ಟೈನರು ಹಾಲೆಂಡಿನಲ್ಲಿದ್ದಾಗ ಜರ್ಮನಿಯಲ್ಲಿ ರಿಪಬ್ಲಿಕ್ ಸರಕಾರ ಸ್ಥಾಪಿತವಾಯಿತು. ಸಾಮ್ರಾಜ್ಯಶಾಹೀ ಕೈಸರನ ಆಡಳಿತ ಮಣ್ಣುಗೂಡಿತು. ರಿಪಬ್ಲಿಕ್ ರಾಜ್ಯವು ಉದಾತ್ತ ಧ್ಯೇಯಗಳ ಮೇಲೆ ರಚಿತವಾಗಿದ್ದಿತು. ಸರಕಾರವು ಪ್ರಗತಿಪರವಾದ ಭಾವನೆಗಳನ್ನು ಹೊಂದಿದ್ದಿತು. ಈ ಸರಕಾರವು ತನ್ನ ಪ್ರಜೆಗಳ ವಿಶ್ವಾಸವನ್ನು ಗಳಿಸಿಕೊಳ್ಳಲು ತುಂಬ ಪ್ರಯಾಸಪಟ್ಟಿತು. ಈ ಉದ್ದೇಶದಿಂದ ಐನ್‌ಸ್ಟೈನರ ಆಶೀರ್ವಾದ ಪಡೆಯಲು ಆ ಸರಕಾರವು ಪ್ರಯತ್ನಿಸಿತು. ರಿಪಬ್ಲಿಕ್ ಸರಕಾರದ ವಿದ್ಯಾಮಂತ್ರಿಯು ಐನ್‌ಸ್ಟೈನರನ್ನು ಜರ್ಮನಿಗೆ ಬೇಗನೆ ಹಿಂತಿರುಗಿ ತಮಗೆ ಬೆಂಬಲ ಕೊಡಬೇಕೆಂದು ಪ್ರಾರ್ಥಿಸಿಕೊಂಡಿದ್ದನು. ಅವರಿಗೆ ಎಲ್ಲ ವಿಧದ ಅನುಕೂಲಗಳನ್ನೂ ಒದಗಿಸುವದಾಗಿ ಆ ಮಂತ್ರಿಯು ಆಶ್ವಾಸನ ಕೊಟ್ಟಿದ್ದನು. ಐನ್‌ಸ್ಟೈನರು ಎಲ್ಲಿ ಹಾಲೆಂಡಿನಲ್ಲಿ ನೆಲೆಸಿಬಿಡುವರೊ ಎಂದು ಅವನು ಗಾಬರಿಗೊಂಡಿದ್ದನು. ಆದ್ದರಿಂದ ಅವರನ್ನು ಹಿಂದಕ್ಕೆ ಪಡೆದುಕೊಳ್ಳಲು ಅಷ್ಟು ತವಕ ತೋರುತ್ತಿದ್ದನು. ಐನ್‌ಸ್ಟೈನರಾದರೋ ಜರ್ಮನಿಯನ್ನು ಹಂಗಾಮಿಯಾಗಿ ತೊರೆದಿದ್ದರೇ ವಿನಹ, ಬೇರೆ ದೇಶದಲ್ಲಿ ನೆಲೆಸುವ ಉದ್ದೇಶ ಅವರಿಗಿರಲಿಲ್ಲ. ಯಾಕೆಂದರೆ ವೈಜ್ಞಾನಿಕ ಸಂಶೋಧನೆಗೆ ಬರ್ಲಿನ್‌ಗಿಂತ ಅನುಕೂಲವಾದ ಪಟ್ಟಣ ಬೇರೆ ಯಾವುದೂ ಇರಲಿಲ್ಲ. ಅವರು ಹೊಸ ಸರಕಾರದ ಪ್ರಾರ್ಥನೆಯನ್ನು ಮನ್ನಿಸಿ ಜರ್ಮನಿಗೆ ಹಿಂತಿರುಗಿದರು. ರಿಪಬ್ಲಿಕ್ ರಾಜ್ಯಕ್ಕೆ ಸಂಪೂರ್ಣ ಬೆಂಬಲಕೊಡುವುದಾಗಿ ಅವರು ಭರವಸೆಯಿತ್ತರು. ಸ್ವಲ್ಪ ದಿನಗಳಾದ ಮೇಲೆ ಅವರು ಜರ್ಮನಿ ದೇಶದ ಪೌರರಾದರು. ಕೈಸರ್ ಅಧಿಕಾರದಲ್ಲಿದ್ದಷ್ಟು ದಿನವೂ ಜರ್ಮನಿಯ ಪೌರರಾಗಿರಲು ಒಪ್ಪದೆ, ರಿಪಬ್ಲಿಕ್ ಜರ್ಮನಿಯ ರಾಷ್ಟ್ರಕರಾಗಲು ಐನ್‌ಸ್ಟೈನ್ ಒಪ್ಪಿದುದು ಎಲ್ಲ ಪ್ರಗತಿಪರರ ಮನಸ್ಸನ್ನು ಸಂತೋಷಪಡಿಸಿತು.

**ಜೆಕೊಸ್ಲೋವೇಕಿಯಾ ಪ್ರವಾಸ**

ಐನ್‌ಸ್ಟೈನರು ಜರ್ಮನಿಗೆ ಹಿಂತಿರುಗಿದ ಕೆಲ ದಿನಗಳ ಮೇಲೆ, ಅವರಿಗೆ ಜೆಕೊಸ್ಲೋವೇಕಿಯಾದಿಂದ ಆಹ್ವಾನ ಬಂತು. ಮಹಾಯುದ್ಧಕ್ಕೆ ಮುಂಚೆ ಜೆಕೊಸ್ಲೋವೇಕಿಯಾವು

ಜರ್ಮನರ ಅಧೀನದಲ್ಲಿತ್ತು. ಜರ್ಮನಿಯು ಯುದ್ಧದಲ್ಲಿ ಸೋತ ಮೇಲೆ ಸೆಕ್ ರಾಷ್ಟ್ರವು ಸ್ವತಂತ್ರವಾಯಿತು. ಆಮೇಲೆ ಅಲ್ಲಿ ರಿಪಬ್ಲಿಕ್ ರಾಜ್ಯ ಸ್ಥಾಪಿತವಾಯಿತು; ಮಸಾರಿಕ್ ಎಂಬ ಉಜ್ವಲ ದೇಶ ಭಕ್ತನು ಅದರ ಅಧ್ಯಕ್ಷನಾಗಿದ್ದನು. ಹೊಸದಾಗಿ ಸ್ಥಾಪಿತವಾದ ರಿಪಬ್ಲಿಕ್ ರಾಜ್ಯಕ್ಕೆ ಬೆಂಬಲಕೊಡುವ ಉದ್ದೇಶದಿಂದಲೂ, ಅಲ್ಲಿನ ಜರ್ಮನ್ ಅಲ್ಪಸಂಖ್ಯಾತರ ಸ್ಥಿತಿಗತಿಗಳನ್ನು ಅರಿಯುವ ಆಸೆಯಿಂದಲೂ ಐನ್‌ಸ್ಟೈನರು ಸೆಕಸ್ಲೋವೇಕಿಯಾಕ್ಕೆ ಹೋಗಲು ಮನಸ್ಸು ಮಾಡಿದರು. ಅವರಿಗೆ ಪ್ರಾಗ್ ನಗರವಾಗಲೀ, ಸೆಕ್ ದೇಶವಾಗಲೀ ಹೊಸದಾಗಿರಲಿಲ್ಲ. ಬರ್ಲಿನ್ ವಿಶ್ವವಿದ್ಯಾನಿಲಯಕ್ಕೆ ನೇಮಕವಾಗುವ ಮೊದಲು ಅವರು ಪ್ರಾಗ್ ನಗರದಲ್ಲಿದ್ದುದನ್ನು ನಾವು ನೆನಪಿಗೆ ತಂದುಕೊಳ್ಳಬಹುದು. ಆದರೆ ಆಗ ಆ ದೇಶವನ್ನು ಆಳುತ್ತಿದ್ದವರು ಜರ್ಮನರು. ಅದು ಜರ್ಮನರಿಂದ ಸ್ವತಂತ್ರವಾದ ಮೇಲೆ ಅಲ್ಲಿನ ಪರಿಸ್ಥಿತಿಯು ಬದಲಾಯಿತು. ಐನ್‌ಸ್ಟೈನರು ಭೇಟಿಕೊಡಲು ಉದ್ದೇಶಪಟ್ಟಿದ್ದು ಈ ಬದಲಾವಣೆಗಳನ್ನು ತಿಳಿಯಲು. ಯಹೂದಿಗಳ ಸ್ಥಿತಿ ಈ ಬದಲಾವಣೆಯಿಂದ ಉತ್ತಮಗೊಂಡಿದೆಯೋ ಇಲ್ಲವೋ ಎಂಬುದನ್ನು ತಿಳಿಯಲೂ ಸಹ ಅವರು ತವಕಿಸುತ್ತಿದ್ದರು. ಇವೆಲ್ಲವುಗಳ ಜೊತೆಗೆ ತಮ್ಮ ಹಳೆಯ ಆಪ್ತೇಷ್ಟರುಗಳನ್ನು ಪುನಃ ಸಂಧಿಸಬೇಕೆಂಬ ಇಚ್ಛೆಯೂ ಇದ್ದಿತು. ಈ ಎಲ್ಲ ಕಾರಣಗಳಿಂದ ಸೆಕ್ಕರು ನೀಡಿದ ಆಹ್ವಾನವನ್ನು ಕೂಡಲೆ ಒಪ್ಪಿಕೊಂಡರು.

ಜೆಕೊಸ್ಲೋವೇಕಿಯಾದ ಪ್ರಜೆಗಳು ಮತ್ತು ಸರ್ಕಾರದವರು ಐನ್‌ಸ್ಟೈನರಿಗೆ ಸಂಭ್ರಮದ ಸ್ವಾಗತ ನೀಡಲು ಮನಸ್ಸು ಮಾಡಿದರು. ಅಲ್ಲಿಯ ಜರ್ಮನರಿಗಂತೂ ಅಸದಳವಾದ ಉತ್ಸಾಹವಿದ್ದಿತು. ಜರ್ಮನ್ ಸಂಸ್ಕೃತಿಯು ಐನ್‌ಸ್ಟೈನರಲ್ಲಿ ಮೂರ್ತಿವೆತ್ತು ಬಂದಿದೆ ಎಂದು ಆ ಜನಗಳು ಭಾವಿಸಿದ್ದರು. ಕೆಲವು ಜರ್ಮನ್ ಪತ್ರಿಕೆಗಳು ಐನ್‌ಸ್ಟೈನರ ಆಗಮನದ ಸಮಯಕ್ಕೆ ಸರಿಯಾಗಿ ವಿಶೇಷ ಸಂಚಿಕೆಗಳನ್ನು ಹೊರಡಿಸಿದವು. ಅವುಗಳಲ್ಲಿ ಐನ್‌ಸ್ಟೈನರನ್ನೂ ಅವರ ಸಿದ್ಧಾಂತವನ್ನೂ ಕುರಿತ ಲೇಖನಗಳು ಪ್ರಕಟವಾದವು. ಒಬ್ಬ ಚಕ್ರವರ್ತಿ ಅಥವಾ ಹಿರಿಯ ರಾಜಕಾರಣಿ ಭೇಟಿಕೊಟ್ಟಾಗ ತೋರಿಸುವಂಥ ಆನಂದ ಸಂಭ್ರಮಗಳನ್ನು ಐನ್‌ಸ್ಟೈನರ ಭೇಟಿಯ ಕಾಲದಲ್ಲಿ ಸೆಕ್ ಜನರು ತೋರಿಸಿದರು. ಈ ಸ್ವಾಗತದಿಂದುಂಟಾದ ಇತರ ಪರಿಣಾಮಗಳೇನೇ ಇರಲಿ, ಸುಡೆಟನ್ ಜರ್ಮನರಲ್ಲಿ ಧೈರ್ಯ ಮತ್ತು ಸ್ವಾವಲಂಬನೆ ಬೆಳೆಯಲು ಈ ಘಟನೆ ವಿಶೇಷ ಸಹಕಾರಿಯಾಯಿತು.

ಜನಗಳಿಗೆ ಐನ್‌ಸ್ಟೈನರನ್ನು ನೋಡಿ ಅವರ ದರ್ಶನ ಪಡೆಯಲು ಎಷ್ಟು ಉತ್ಸಾಹವಿದ್ದಿತೋ, ಐನ್‌ಸ್ಟೈನರಿಗೆ ಗುಂಪಿನಿಂದ ದೂರವಾಗಿರಲು ಅಷ್ಟೇ ಉತ್ಕಟೇಚ್ಛೆ ಇದ್ದಿತು. ಆಡಂಬರದ ಸಮಾರಂಭಗಳಲ್ಲಿ ಭಾಗವಹಿಸುವುದು ಅವರ ಪ್ರಕೃತಿಗೆ ಸರಿಹೋಗುತ್ತಿರಲಿಲ್ಲ. ಹೊಗಳಿಕೆಯ ಮಾತುಗಳನ್ನು ಕೇಳುವುದೆಂದರೆ ಐನ್‌ಸ್ಟೈನರಿಗೆ ಆಗದು. ಆದ್ದರಿಂದ ಸೆಕ್ ಜನಗಳು ಬಹು ಹಣ ವೆಚ್ಚಮಾಡಿ ಏರ್ಪಡಿಸಿದ ಸಮಾರಂಭಗಳಿಗೆ ಅವರು ಮನಸ್ಸಿಲ್ಲದ ಮನಸ್ಸಿನಿಂದ ಹೋಗುತ್ತಿದ್ದರು. ತಾವು ಜನರ ಗುಂಪಿನಿಂದ ಆದಷ್ಟು ದೂರವಿರಲಿಚ್ಛಿಸುವುದಾಗಿ ಐನ್‌ಸ್ಟೈನರು ತಮ್ಮ ಶಿಷ್ಯನಾದ ಫಿಲಿಪ್ ಫ್ರಾಂಕರವರಿಗೆ ಬರೆದರು. ಫ್ರಾಂಕರು

ಆಗ ಫ್ರಾಗ್ ವಿಶ್ವವಿದ್ಯಾನಿಲಯದ ಭೌತಶಾಸ್ತ್ರವಿಶಾರದರಾಗಿದ್ದರು. ಪ್ರಾಗ್ ಪಟ್ಟಣದಲ್ಲಿ ಅವರಿಗೆ ಯಾವ ಮನೆಯೂ ಬಾಡಿಗೆಗೆ ದೊರೆಯದೆ ಹೋದದ್ದರಿಂದ ಅವರು ವಿಶ್ವವಿದ್ಯಾನಿಲಯದ ಒಂದು ಕೊಠಡಿಯಲ್ಲಿಯೇ ವಾಸವಾಗಿದ್ದುಬಿಟ್ಟಿದ್ದರು. ಅವರಿಗೆ ಐನ್‌ಸ್ಟೈನರ ಪತ್ರ ಬಂದಮೇಲೆ ಐನ್‌ಸ್ಟೈನರ ವಸತಿಯ ವಿಷಯವಾಗಿ ಯೋಚನೆ ಪ್ರಾರಂಭವಾಯಿತು. ತಾವು ಇಳಿದುಕೊಂಡಿದ್ದ ಕೊಠಡಿ ವಿಶಾಲವಾಗಿಯೂ, ಅನುಕೂಲವಾಗಿಯೂ ಇಲ್ಲದಿದ್ದುದರಿಂದ ಅಲ್ಲಿ ಐನ್‌ಸ್ಟೈನರನ್ನು ಬಿಡಾರ ಮಾಡಿಸುವುದು ಉಚಿತವಲ್ಲವೆಂದು ಫ್ರಾಂಕರಿಗೆ ಅನ್ನಿಸಿತು. ಹೋಟೆಲಿನಲ್ಲಿ ವಸತಿಯನ್ನೇರ್ಪಡಿಸಿದರೆ ಅಲ್ಲಿಗೆ ಎಲ್ಲ ತರಹದ ಜನಗಳೂ ಬರುವುದರಿಂದ ಐನ್‌ಸ್ಟೈನರ ಇಚ್ಛೆಯಂತೆ ನಡೆದಂತಾಗುವುದಿಲ್ಲವೆಂದೂ ಫ್ರಾಂಕರಿಗೆ ತೋರಿತು. ಈ ವಿಷಯವಾಗಿ ಅನೇಕ ದಿನಗಳವರೆಗೆ ಅವರು ಯೋಚಿಸಬೇಕಾಯಿತು. ಕೊನೆಗೆ ತಮ್ಮ ಕೊಠಡಿಯಲ್ಲಿಯೇ ಐನ್‌ಸ್ಟೈನರನ್ನು ಬಿಡಾರ ಮಾಡಿಸುವ ನಿರ್ಧಾರಕ್ಕೆ ಬಂದರು. ಜರ್ಮನಿಯಿಂದ ಪ್ರಾಗ್ ಪಟ್ಟಣಕ್ಕೆ ಐನ್‌ಸ್ಟೈನರು ಬಂದ ಕೂಡಲೇ, ಫ್ರಾಂಕರು ಅವರನ್ನು ತಮ್ಮ ನಿವಾಸಕ್ಕೆ ಕರೆದುಕೊಂಡು ಬಂದರು. ಇದರಿಂದ ಐನ್‌ಸ್ಟೈನರ ಇಚ್ಛೆ ಕೈಗೂಡಿತು. ಸೆಕಸ್ಲೋವೇಕಿಯಾದ ಯಾವ ಪ್ರಜೆಯೂ ಐನ್‌ಸ್ಟೈನರ ಬಿಡಾರವನ್ನು ಕಂಡುಹಿಡಿಯಲು ಸಾಧ್ಯವಿರಲಿಲ್ಲ. ವಿಶ್ವವಿಖ್ಯಾತ ವಿಜ್ಞಾನಿಯೊಬ್ಬರು ವಿಶ್ವವಿದ್ಯಾನಿಲಯದ ಸಾಧಾರಣ ಕೊಠಡಿಯಲ್ಲಿ ಉಳಿಯುತ್ತಾರೆಂದು ಯಾರು ತಾನೆ ಊಹಿಸಿಯಾರು? ಐನ್‌ಸ್ಟೈನರಲ್ಲಿಗೆ ಸಾಮಾನ್ಯವಾಗಿ ಬರುತ್ತಿದ್ದ ಆಟೋಗ್ರಾಫ್ ಬೇಟೆಗಾರರೂ, ಫೋಟೋಗ್ರಾಫರುಗಳೂ, ಪತ್ರಿಕಾ ವರದಿಗಾರರೂ, ಅವರನ್ನು ಪೀಡಿಸುವುದು ತಪ್ಪಿತು. ದುಡ್ಡಿನ ಬಲದಿಂದ ದೊಡ್ಡವರಾಗಿದ್ದವರ ಕಾಟಲೆಯಂತೂ ಸಂಪೂರ್ಣವಾಗಿ ತಪ್ಪಿಹೋಯಿತು. ವಿಶ್ವವಿದ್ಯಾನಿಲಯದ ನೌಕರನೊಬ್ಬನ ಮನೆಗೆ ಸಮಾಜದಲ್ಲಿ ಹಿರಿಯ ಸ್ಥಾನ ಗಳಿಸಿದ್ದ ದೊಡ್ಡ ಮನುಷ್ಯರು ಹೋಗುವುದು ಅವರ ಘನತೆಗೆ ಕುಂದಲ್ಲವೇ? ಐನ್‌ಸ್ಟೈನರು ಪ್ರಾಗ್ ನಗರದಲ್ಲಿದ್ದಷ್ಟು ದಿನಗಳೂ ಈ ಸಾಮಾನ್ಯ ಕೊಠಡಿಯೇ ಅವರ ವಾಸಸ್ಥಾನವಾಗಿದ್ದಿತು. ಅವರು ಪ್ರಾಗಿಗೆ ಬಂದ ದಿನ ಆ ಕೊಠಡಿಯಲ್ಲಿ ಯಾವ ಮಂಚವೂ ಇರಲಿಲ್ಲ. ಆದ್ದರಿಂದ ಇಡೀ ರಾತ್ರಿಯನ್ನು ಅವರು ಅಲ್ಲಿಯ ಸೋಫಾ ಒಂದರ ಮೇಲೆಯೇ ಕಳೆಯಬೇಕಾಯಿತು. ಹೀಗೆ ಅನೇಕ ಅನಾನುಕೂಲಗಳಿದ್ದಾಗ್ಯೂ, ಐನ್‌ಸ್ಟೈನರು ಆ ಬಿಡಾರವನ್ನು ಮೆಚ್ಚಿದ್ದರು. ಇದಕ್ಕೆ ಮುಖ್ಯ ಕಾರಣ ಅಲ್ಲಿಯ ಶಾಂತ ವಾತಾವರಣ.

ಪ್ರಾಗಿಗೆ ಬಂದ ಮೂರನೆಯ ದಿನವೇ ಐನ್‌ಸ್ಟೈನರು ವಿಶ್ವವಿದ್ಯಾನಿಲಯಕ್ಕೆ ಭೇಟಿಯಿತ್ತರು. ಅಲ್ಲಿಯ ಅಧ್ಯಾಪಕರಿಗೆ ಐನ್‌ಸ್ಟೈನರನ್ನು ಕಂಡು ಆಶ್ಚರ್ಯವಾಯಿತು. ಯಾರಿಗೂ ಹೇಳದೆ, ಕೇಳದೆ ಅವರು ಪ್ರಾಗಿಗೆ ಭೇಟಿಕೊಟ್ಟುದೂ, ಬಂದಮೇಲೆ ಊರಿನ ಉತ್ಕೃಷ್ಟವಾದ ಹೋಟೇಲಿನಲ್ಲಿಳಿದುಕೊಳ್ಳದೆ ಯಾವುದೋ ಕೊಠಡಿಯಲ್ಲಿ ನಿಂತುದೂ ಅಲ್ಲಿಯವರಿಗೆ ವಿಸ್ಮಯವನ್ನುಂಟುಮಾಡಿತು. ಆಡಂಬರದಿಂದಲೇ ದೊಡ್ಡಸ್ತಿಕೆ ಬರುವುದೆಂದು ತಿಳಿದಿರುವವರಿಗೆ ಈ ಸರಳತೆ ಒಂದು ದೊಡ್ಡ ಪಾಠ.

ಆ ದಿನ ಸಾಯಂಕಾಲ 'ಉರೇನಿಯಾ ಸಂಘ' (Urania Association) ಎಂಬ ಸಂಸ್ಥೆಯ ಆಶ್ರಯದಲ್ಲಿ ಐನ್‌ಸ್ಟೈನರು ಭಾಷಣಮಾಡಿದರು. ಊರಿನ ನಾಗರಿಕರಿಂದ ಭಾಷಣ ಮಂದಿರವು ಕಿಕ್ಕಿರಿದು ತುಂಬಿದ್ದಿತು. ಹಾಗೆ ಸೇರಿದ್ದವರಲ್ಲಿ ಐನ್‌ಸ್ಟೈನರ ಸಿದ್ಧಾಂತವನ್ನು ಅರ್ಥಮಾಡಿಕೊಳ್ಳಬಲ್ಲವರು ಎಲ್ಲೋ ಕೆಲವು ಮಂದಿ ಇದ್ದರು. ಉಳಿದವರು ಬಂದಿದ್ದುದು ಐನ್‌ಸ್ಟೈನರನ್ನು ನೋಡುವ ಕುತೂಹಲದಿಂದ. ಇದರಿಂದ ಐನ್‌ಸ್ಟೈನರು ಸಾಮಾನ್ಯರ ದರ್ಜೆಗೆ ಇಳಿದು ಭಾಷಣ ಮಾಡಬೇಕಾಯಿತು. ಅವರು ಅತಿ ಸರಳವಾದ ಭಾಷೆಯಲ್ಲಿ ತಮ್ಮ ಸಿದ್ಧಾಂತವನ್ನು ವಿವರಿಸಿದರು. ಅವರ ಭಾಷಣ ಮುಗಿದ ಮೇಲೆ ಅವರನ್ನು ಗೌರವಿಸಲೋಸುಗ ಒಂದು ಪುಟ್ಟ ಸಭೆ ನಡಿಯಿತು. 'ಯುರೇನಿಯ ಸಂಘ'ದ ಅಧ್ಯಕ್ಷನು ಅದರ ಏರ್ಪಾಡಿಗೆ ಕಾರಣನಾಗಿದ್ದನು. ಕೆಲವು ಪ್ರಮುಖರು ಆ ಸಭೆಯಲ್ಲಿ ಭಾಷಣ ಮಾಡಿದರು. ಅವರೆಲ್ಲರೂ ಐನ್‌ಸ್ಟೈನರನ್ನು ಹೊಗಳಿ ಮಾತನಾಡಿದರು, ಈ ಭಾಷಣಕ್ಕೆ ಪ್ರತ್ಯುತ್ತರ ಕೊಡುವ ಸರದಿ ಬಂದಿತು. ಆಗ ಐನ್‌ಸ್ಟೈನರ ಉತ್ತರವಾದರೂ ಎಂಥಾದ್ದು? ಮಾತನಾಡದೆ ತಮ್ಮ ಪಿಟೀಲನ್ನು ತೆಗೆದು ನುಡಿಸತೊಡಗಿದರು! ಹೊಗಳಿಕೆ ಅವರಿಗೆ ಎಂಥ ಬೇಸರವನ್ನುಂಟುಮಾಡುತ್ತಿತ್ತು ಎಂಬುದಕ್ಕೆ ಈ ಉದಾಹರಣೆಯೊಂದೇ ಸಾಕು. ಐನ್‌ಸ್ಟೈನರ ಈ ವಿಚಿತ್ರ ವರ್ತನೆ ಎಷ್ಟು ಜನಕ್ಕೆ ಹಿಡಿಸಿತೋ, ತಿಳಿಯದು. ಅಂತೂ ಫಿಲಿಪ್ ಫ್ರಾಂಕರಿಗೆ ಅದು ತುಂಬ ಮೆಚ್ಚಿಕೆಯಾಯಿತು. "ಸೃಷ್ಟಿಯ ವೈಚಿತ್ರ್ಯವನ್ನು ಕಂಡು ಉಂಟಾಗುವ ಭವ್ಯ ಭಾವನೆಯೂ, ಇಷ್ಟು ವಿಚಿತ್ರವಾಗಿರುವ ಸೃಷ್ಟಿಯನ್ನು ಸರಳವಾದ ಸೂತ್ರಗಳಲ್ಲಿ ವಿವರಿಸಲು ಮಾನವನಿಗೆ ಸಾಧ್ಯವಾಗಿದೆಯಲ್ಲಾ ಎಂಬ ಆನಂದವೂ, ಐನ್‌ಸ್ಟೈನರ ಆ ವಾದನದಲ್ಲಿ ಅಡಗಿತ್ತು" ಎಂದು ಫ್ರಾಂಕ್ ನುಡಿದಿದ್ದಾರೆ.

ಮರುದಿನ ಸಾಯಂಕಾಲ ಫಿಲಿಪ್ ಫ್ರಾಂಕರ ಅಧ್ಯಕ್ಷತೆಯಲ್ಲಿ ಒಂದು ವಿಚಾರಗೋಷ್ಠಿ ನಡೆಯಿತು. ಆ ವಿಚಾರಗೋಷ್ಠಿಗೆ ಐನ್‌ಸ್ಟೈನರ ಸಿದ್ಧಾಂತ ವಿಷಯವಾಗಿತ್ತು. ಆಸ್ಕರ ಕ್ರೌಸ್ (Oscar Craus) ಎಂಬ ತತ್ವಶಾಸ್ತ್ರ ಪಂಡಿತರು ಆ ಸಭೆಯಲ್ಲಿ ಭಾಗವಹಿಸಿದ್ದರು. ಅವರು ಮೊದಲಿನಿಂದಲೂ ಐನ್‌ಸ್ಟೈನರ ತತ್ವವನ್ನು ವಿರೋಧಿಸುತ್ತಿದ್ದರು. ಆ ಸಿದ್ಧಾಂತವನ್ನು ಸಾಧಾರಣ ಜನಗಳಿಗೆ ವಿವರಿಸಲು ಐನ್‌ಸ್ಟೈನರ ಶಿಷ್ಯವರ್ಗವು ಉಪಯೋಗಿಸುತ್ತಿದ್ದ ಉಪಮೆಗಳನ್ನೂ, ಇನ್ನು ಕೆಲವು ವಾಕ್ಯಗಳನ್ನೂ ಆ ಪಂಡಿತರು ಉದಹರಿಸಿ, ಐನ್‌ಸ್ಟೈನರ ಸಿದ್ಧಾಂತವನ್ನು ತುಂಡು ತುಂಡು ಮಾಡಿಬಿಟ್ಟರು. ಆದರೆ ಈ ಪಂಡಿತರು ಐನ್‌ಸ್ಟೈನರ ಮೂಲ ಬರವಣಿಗೆ ಯಾವುದನ್ನೂ ಆಧಾರವಾಗಿಟ್ಟುಕೊಂಡಿರಲಿಲ್ಲ. ಅವರಂತೆಯೇ ಐನ್‌ಸ್ಟೈನರ ಸಿದ್ಧಾಂತದಲ್ಲಿ ಸಂಶಯ ತಾಳಿದ್ದ ಅನೇಕರು ಆ ಸಭೆಗೆ ಬಂದಿದ್ದರು. ಅವರೆಲ್ಲರೂ ಒಳ್ಳೆಯ ಅವಕಾಶ ದೊರೆಯಿತೆಂದು ಭಾವಿಸಿ, ತಮತಮಗೆ ತೋರಿದಂತೆ ಸಾಪೇಕ್ಷ ಸಿದ್ಧಾಂತವನ್ನು ಖಂಡಿಸಿದರು. ತಮ್ಮ ಅಭಿಪ್ರಾಯಗಳನ್ನು ಬಹಿರಂಗವಾಗಿ ಹೇಳಲು ಹೆದರುತ್ತಿದ್ದ ಆ ವಿದ್ವಾಂಸರು ಕ್ರೌಸ್ ಮಹನೀಯನು ಒದಗಿಸಿಕೊಟ್ಟ ಅವಕಾಶವನ್ನು ಚೆನ್ನಾಗಿಯೇ ಉಪಯೋಗಿಸಿಕೊಂಡರು. ಐನ್‌ಸ್ಟೈನರಿಗೆ ಈ ಪಂಡಿತರ ಅಜ್ಞಾನವನ್ನು ಕಂಡು ನಗು ಬಂದಿತು.

ಅವರ ವಾದದಲ್ಲಿ ಸ್ವಲ್ಪವೂ ತಿರುಳಿಲ್ಲದ್ದರಿಂದ ಅದನ್ನು ಪ್ರತಿಭಟಿಸುವ ಗೋಜಿಗೇ ಹೋಗಲಿಲ್ಲ. ಕೊನೆಯಲ್ಲಿ ಸಾಂಪ್ರದಾಯಿಕವಾಗಿ ಹೇಳಬೇಕಾದ ಯಾವ ಮಾತನ್ನೂ ಅವರು ಆಡಲಿಲ್ಲ. ಇದರಿಂದ ಐನ್‌ಸ್ಟೈನರ ವಿರೋಧಿಗಳು ತಾವು ಐನ್‌ಸ್ಟೈನರನ್ನು ವಾದದಲ್ಲಿ ಜಯಿಸಿದೆವೆಂದು ಭಾವಿಸಿಕೊಂಡರು. ಒಂದು ಭಾರೀ ಸಿದ್ಧಾಂತವನ್ನು ಸುಳ್ಳೆಂದು ತೋರಿಸಿ ಸಾಧಿಸಿದುದರಿಂದ ತಾವು ಅತಿ ದೊಡ್ಡ ಮನುಷ್ಯರಾದೆವೆಂದು ಅವರು ತಿಳಿದುಕೊಂಡರು. ಐನ್‌ಸ್ಟೈನರಿಗಾದರೋ ಈ ಘಟನೆ ವಿನೋದಕರವಾಗಿ ಕಂಡು, ಅದರಿಂದ ಅವರ ಮನಸ್ಸು ಹಗುರಾಯಿತು.

ಈ ಮಧ್ಯೆ ಐನ್‌ಸ್ಟೈನರು ವಿಶ್ವವಿದ್ಯಾನಿಲಯದಲ್ಲಿ ಉಳಿದಿರುವ ಸುದ್ದಿ ಪ್ರಾಗ್ ನಗರದಲ್ಲೆಲ್ಲಾ ಹರಡಿತು. ಕೂಡಲೇ ತಂಡೋಪತಂಡವಾಗಿ ಅಲ್ಲಿಗೆ ಜನರು ಬರಲಾರಂಭಿಸಿದರು. ಐನ್‌ಸ್ಟೈನರಿಗೆ ಜನಸಮೂಹ ಸರಿಬೀಳದಿದ್ದರೂ ಬಂದ ಜನರನ್ನು ಭೇಟಿ ಮಾಡದೆ ಹಿಂದಕ್ಕೆ ಕಳಿಸುವುದು ಮನಸ್ಸಿಗೆ ನೋವನ್ನುಂಟುಮಾಡುತ್ತಿತ್ತು. ಆದ್ದರಿಂದ ಅವರು ತಮಗೆ ಭೇಟಿ ಮಾಡಬಂದವರಿಗೆಲ್ಲಾ ತಕ್ಕ ಸಮಾಧಾನ ಹೇಳಿ ಕಳಿಸುತ್ತಿದ್ದರು. ಒಂದೆರಡು ದಿನಗಳ ನಂತರ ಆ ಊರನ್ನು ಬಿಟ್ಟರು.

### ವಿಯನ್ನಾ ಭೇಟಿ

ಐನ್‌ಸ್ಟೈನ್‌ರವರು ಪ್ರಾಗ್ ನಗರದಲ್ಲಿದ್ದಾಗಲೇ, ಅವರಿಗೆ ವಿಯನ್ನಾ (Vienna) ದಿಂದ ಆಹ್ವಾನ ಹೋಗಿತ್ತು. ಈ ಆಹ್ವಾನವನ್ನು ಮನ್ನಿಸಿ ಅವರು ಪ್ರಾಗ್‌ನಿಂದ ವಿಯನ್ನಾಕ್ಕೆ ಹೋದರು. ಮಹಾಯುದ್ಧಕ್ಕೆ ಮುಂಚೆ ಆ ಪಟ್ಟಣವು ಆಸ್ಟ್ರಿಯಾ–ಹಂಗರಿ ಚಕ್ರಾಧಿಪತ್ಯಕ್ಕೆ ರಾಜಧಾನಿಯಾಗಿದ್ದಿತು. ಮಹಾಯುದ್ಧದ ಪರಿಣಾಮವಾಗಿ ಆ ಚಕ್ರಾಧಿಪತ್ಯವು ನಿರ್ನಾಮವಾಯಿತು. ಆಮೇಲೆ ಅದು ಇಬ್ಭಾಗವಾಯಿತು. ಇವುಗಳ ಒಂದು ಭಾಗವಾದ ಆಸ್ಟ್ರಿಯಾ ರಿಪಬ್ಲಿಕ್ ರಾಷ್ಟ್ರವಾಯಿತು. ವಿಯನ್ನಾ ಪಟ್ಟಣವು ಹೊಸ ರಿಪಬ್ಲಿಕ್ಕಿನ ರಾಜಧಾನಿಯಾಗಿ ಉಳಿಯಿತು. ಈ ಪ್ರಜಾಸರ್ಕಾರಗಳ ಬೆಂಬಲಿಗರಾದ ಐನ್‌ಸ್ಟೈನರು ಆಸ್ಟ್ರಿಯಾ ದೇಶ ಹೇಗೆ ಮುಂದುವರಿಯುತ್ತಿತ್ತೆಂಬುದನ್ನು ತಿಳಿಯಲು ಕುತೂಹಲರಾಗಿದ್ದರು. ಆದ್ದರಿಂದಲೇ ಅವರು ವಿಯನ್ನಾದಿಂದ ಬಂದ ಆಹ್ವಾನವನ್ನು ಕೂಡಲೇ ಒಪ್ಪಿದ್ದರು. ಆದರೆ ಆ ದೇಶಕ್ಕೆ ಹೋದ ಮೇಲೆ ಅವರಿಗೆ ಆನಂದಕ್ಕಿಂತ ಹೆಚ್ಚಾಗಿ ವ್ಯಥೆ ಉಂಟಾಯಿತು. ಅವರ ಬಾಲ್ಯ ಸ್ನೇಹಿತರಾದ ಆ್ಯಡ್ಲರ್ ತುಂಬಾ ದುರವಸ್ಥೆಗೊಳಗಾಗಿದ್ದರು. ಅವರಿಗೆ ಬುದ್ಧಿ ಭ್ರಮಣೆಯಾಗಿ ಕೊಲೆಯೊಂದನ್ನು ನಡೆಸಿಬಿಟ್ಟಿದ್ದರು. ಸರ್ಕಾರ ಅವರನ್ನು ಕಾರಾಗೃಹದಲ್ಲಿ ಸೆರೆಹಾಕಿದ್ದಿತು. ಅತ್ಯಂತ ಮೇಧಾವಿಗಳಲ್ಲೊಬ್ಬರೂ ತಮ್ಮ ಹಿತಚಿಂತಕರೂ (ಐನ್‌ಸ್ಟೈನರು ಜೂರಿಚ್ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿ ನೇಮಕವಾದದ್ದು ಈತನ ದೆಸೆಯಿಂದಲೇ) ಆದ ಗೆಳೆಯರೊಬ್ಬರು ಅತ್ಯಂತ ಸಂಕಟಕ್ಕೊಳಗಾಗಿರುವ ವಿಷಯ ಐನ್‌ಸ್ಟೈನರಿಗೆ ತುಂಬಾ ನೋವನ್ನುಂಟುಮಾಡಿತು. ಈ ನೋವು, ಹೊಸ ರಾಜ್ಯದಲ್ಲಿ ಪ್ರಜೆಗಳು ಅನುಭವಿಸುತ್ತಿದ್ದ ವ್ಯಕ್ತಿಸ್ವಾತಂತ್ರ್ಯವನ್ನು ನೋಡಿ ಅವರಿಗೆ ಉಂಟಾಗಿದ್ದ ಸಂತೋಷವನ್ನು ಮರೆಸಿತು.

ಆ್ಯಡ್ಲರ್ ಕಾರಾಗೃಹಕ್ಕೆ ಹೋಗಲು ಮುಖ್ಯ ಕಾರಣವು ಅವರು ಸತ್ಯಕ್ಕಾಗಿ ಹೊಡೆದಾಡಿ ಪಡೆದ ನಿರಾಶೆ. ಮಹಾಯುದ್ಧ ನಡೆಯುತ್ತಿದ್ದ ಸಮಯದಲ್ಲಿ ಆಸ್ಟ್ರಿಯಾ ಸರ್ಕಾರ ಅನೇಕ ಹೊಸ ಹೊಸ ಶಾಸನಗಳನ್ನು ಆಚರಣೆಗೆ ತಂದಿದ್ದಿತು. ಅವುಗಳಲ್ಲಿ ಅನೇಕವು ಶಾಸನಸಭೆಯ ಅನುಮತಿಯನ್ನು ಪಡೆದಿರಲಿಲ್ಲ. ಪ್ರಜಾಸ್ವಾಮ್ಯತತ್ವಕ್ಕೆ ವಿರೋಧವಾದ ಈ ನೀತಿಯನ್ನು ಆ್ಯಡ್ಲರ್ ಪ್ರತಿಭಟಿಸಿದರು. ಸರ್ಕಾರ ತೆಗೆದುಕೊಳ್ಳಬಹುದಾದ ಮುಖ್ಯವಾದ ತೀರ್ಮಾನಗಳಿಗೆಲ್ಲಾ ಶಾಸನಸಭೆಯ ಅನುಮತಿ ಇದ್ದೇ ಇರಬೇಕೆಂದು ಅವರು ಚಳುವಳಿ ನಡೆಸಿದರು. ಆದರೆ ಆ್ಯಡ್ಲರ್‌ರವರ ಪ್ರಚಾರ ಪ್ರಭಾವಗಳು ಹೆಚ್ಚಾದಂತೆ ಸರಕಾರ ಬಿಗಿಯಾಯಿತು; ಮತ್ತಷ್ಟು ದಬ್ಬಾಳಿಕೆಯನ್ನು ನಡೆಸತೊಡಗಿತು. ಆಸ್ಟ್ರಿಯಾ ಸರ್ಕಾರವು ನ್ಯಾಯಕ್ಕೆ ಬಗ್ಗದೆಂದು ಆ್ಯಡ್ಲರ್‌ರವರಿಗೆ ಮನವರಿಕೆಯಾಯಿತು. ನ್ಯಾಯಕ್ಕೆ ಬಗ್ಗದ ಸರ್ಕಾರವನ್ನು ಹಿಂಸೆಯಿಂದಲಾದರೂ ನಿವೃತ್ತಿಗೊಳಿಸುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯವೆಂದು ಅವರು ಬಗೆದರು. ಹಗಲಿರುಳು ಇದೇ ಅವರ ತಲೆಯಲ್ಲಿ ಗುಂಯ್‌ಗುಟ್ಟುತ್ತಿತ್ತು. ಇದು ಅವರಿಗೆ ಹುಚ್ಚು ಹಿಡಿಸಿತು. ಹೀಗೆ ಬುದ್ಧಿ ಸ್ವಾಧೀನದಲ್ಲಿಲ್ಲದ ಆ್ಯಡ್ಲರ್ ಒಂದು ದಿನ ದೊಡ್ಡ ಹೊಟೆಲ್ ಒಂದರೊಳಕ್ಕೆ ನುಗ್ಗಿ ಅಲ್ಲಿ ಭೋಜನ ಕೂಟದಲ್ಲಿ ಭಾಗವಹಿಸಿದ್ದ ಆಸ್ಟ್ರಿಯಾ ದೇಶದ ಮುಖ್ಯಮಂತ್ರಿಯನ್ನು ಗುಂಡಿಕ್ಕಿ ಕೊಂದುಬಿಟ್ಟರು! ಸರ್ಕಾರವು ಅವರನ್ನು ದಸ್ತಗಿರಿ ಮಾಡಿ ವಿಚಾರಣೆಗೆ ಗುರಿಪಡಿಸಿತು. ನ್ಯಾಯಸ್ಥಾನವು ಅವರಿಗೆ ಮರಣದಂಡನೆಯನ್ನು ವಿಧಿಸಿತು. ಆದರೆ ಚಕ್ರವರ್ತಿಯು ಆ್ಯಡ್ಲರ್ ಮನೆತನವು ದೇಶಕ್ಕೆ ಸಲ್ಲಿಸಿದ್ದ ಸೇವೆಯನ್ನೂ, ಕೊಲೆ ಮಾಡುವಾಗ ಆ್ಯಡ್ಲರ್‌ಗೆ ಇದ್ದ ಬುದ್ಧಿ ಸ್ಥಿತಿಯನ್ನೂ ಮನಸ್ಸಿಗೆ ತಂದುಕೊಂಡು ಮರಣದಂಡನೆಯನ್ನು ಜೀವಾವಧಿ ಶಿಕ್ಷೆಗೆ ಇಳಿಸಿದನು. ಸೆರೆಮನೆಗೆ ನೂಕಲ್ಪಟ್ಟ ಆ್ಯಡ್ಲರ್‌ರವರು ಅದನ್ನೇ ತಮ್ಮ ಪುಸ್ತಕಭಂಡಾರವನ್ನಾಗಿ ಮಾಡಿಕೊಂಡರು! ಅವರ ಹುಚ್ಚೇ ಸ್ಫೂರ್ತಿಯಾಗಿ ಪರಿವರ್ತಿತವಾಯಿತು. ಸೆರೆಮನೆಯಲ್ಲಿ ಶಿಕ್ಷೆಯನ್ನನುಭವಿಸುತ್ತಿದ್ದ ಕಾಲದಲ್ಲಿ ಆ್ಯಡ್ಲರ್ ಐನ್‌ಸ್ಟೈನರ ಸಾಪೇಕ್ಷವಾದವನ್ನು ಖಂಡಿಸಿ ಒಂದು ಪುಸ್ತಕ ಬರೆದರು. ಒಂದಾನೊಂದು ಕಾಲದಲ್ಲಿ ಮನಃಪೂರ್ವಕವಾಗಿ ಸಾಪೇಕ್ಷವಾದವನ್ನು ಅನುಮೋದಿಸಿದ್ದ ಆ್ಯಡ್ಲರ್ ತಮ್ಮ ಹುಚ್ಚಿನಲ್ಲಿ ಅದನ್ನು ಖಂಡಿಸಿಬಿಟ್ಟರು. ಅವರು ಹುಚ್ಚಿನಲ್ಲಿ ಏನೇ ಹೇಳಿರಲಿ, ಆ ಗ್ರಂಥವು ಒಮ್ಮೆಯಾದರೂ ಅವಲೋಕಿಸಲು ಯೋಗ್ಯವಾಗಿದೆ ಎಂದು ಪಂಡಿತರು ಹೇಳುತ್ತಾರೆ. ಆ್ಯಡ್ಲರ್‌ನ ಈ ದುರಂತ ಜೀವನ ಐನ್‌ಸ್ಟೈನರಿಗೆ ಹೇಳಲಾರದ ಸಂಕಟವನ್ನುಂಟುಮಾಡಿತು.

ಐನ್‌ಸ್ಟೈನರ ವಿಯನ್ನಾ ನಗರದ ಪ್ರವಾಸ ಕಥೆ ಅವರ ಸೌಜನ್ಯ ಸರಳತೆಗಳನ್ನು ತಿಳಿಸುತ್ತದೆ. ಅವರು ವಿಯನ್ನಾ ಪಟ್ಟಣದಲ್ಲಿ ಫೆಲಿಕ್ಸ್ ಎರಿನಾಫ್ಟ್ (Felix Ehrenhaft) ಎಂಬವರ ಮನೆಯಲ್ಲಿ ತಂಗಿದ್ದರು. ಎರಿನಾಫ್ಟ್ ವಿಯನ್ನಾ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿದ್ದರು; ಉತ್ತಮ ಸಂಶೋಧಕರೆಂದು ಹೆಸರು ಪಡೆದಿದ್ದರು. ಅವರು ಐನ್‌ಸ್ಟೈನ್ ಸಿದ್ಧಾಂತವನ್ನು ಒಪ್ಪಿರಲಿಲ್ಲ. ಎರಿನಾಫ್ಟರ ಈ ಅಸಮ್ಮತಿಯೇ ಐನ್‌ಸ್ಟೈನರು ಅವರಲ್ಲಿ ಹೆಚ್ಚಿನ ಗೆಳೆತನ ಬೆಳೆಸಲು ಕಾರಣವಾಗಿದ್ದಿತು. ಟೀಕೆಗಳು ಎತ್ತಕಡೆಯಿಂದ ಬಂದರೂ

ಅವುಗಳನ್ನು ಎಚ್ಚರದಿಂದ ಕೇಳುತ್ತಿದ್ದ ಐನ್‌ಸ್ಟೈನರು ಎರಿನಾಫ್ಟರ ಟೀಕೆಗಳನ್ನು ಅತಿ ಜಾಗರೂಕತೆಯಿಂದ ಓದುತ್ತಿದ್ದರು. ಅಂಥ ಟೀಕೆಗಳು ತನ್ನ ಡೊಂಕುಗಳನ್ನು ತಿದ್ದಿಕೊಳ್ಳಲು ಸಹಾಯವಾಗುವುದೆಂದು ಐನ್‌ಸ್ಟೈನರ ನಂಬಿಕೆ. ಎರಿನಾಫ್ಟರೂ ಐನ್‌ಸ್ಟೈನರ ಸಿದ್ಧಾಂತವನ್ನು ಒಪ್ಪದಿದ್ದರೂ ಅವರ ವಿಶಾಲ ಮನೋಭಾವನೆಯನ್ನು ಮೆಚ್ಚಿದ್ದರು. ಈ ಪರಸ್ಪರ ಮೆಚ್ಚಿಗೆ ಗಾಢಸ್ನೇಹವಾಗಿ ಬೆಳೆಯಿತು. ಐನ್‌ಸ್ಟೈನರು ಎರಿನಾಫ್ಟರ ಮನೆಯಲ್ಲಿ ಉಳಿಯುವದಕ್ಕೆ ಈ ಮಮತೆಯೇ ಕಾರಣ.

ಅವರು ವಿಯನ್ನಾ ನಗರದಲ್ಲಿದ್ದಷ್ಟು ದಿನವೂ ಎರಿನಾಫ್ಟರ ಪತ್ನಿ—ಮನೆಯ ಯಜಮಾನಿ—ಅವರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದರು. ಆಕೆಯೂ ಒಬ್ಬ ಹೆಸರಾಂತ ವಿಜ್ಞಾನಿಯಾದ್ದರಿಂದ ಐನ್‌ಸ್ಟೈನರ ಹಿರಿತನ ಅವಳಿಗೆ ಗೊತ್ತಿದ್ದಿತು. ಆದ್ದರಿಂದ ತಮ್ಮ ಅತಿಥಿಯನ್ನು ಬಹು ಗೌರವ ಭಕ್ತಿಗಳಿಂದ ನೋಡಿಕೊಳ್ಳುತ್ತಿದ್ದಳು. ಐನ್‌ಸ್ಟೈನರು ವಿಯನ್ನಾಕ್ಕೆ ಹೋಗುವಾಗ ತಾವು ಹಾಕಿಕೊಂಡಿದ್ದ ಬಟ್ಟೆಗಳ ಜೊತೆಗೆ ಒಂದು ಜೊತೆ ಷರಾಯಿ ಮತ್ತು ಒಂದು ಜೊತೆ ಕಾಲರ್, ಇವುಗಳನ್ನು ಮಾತ್ರ ತೆಗೆದುಕೊಂಡು ಹೋಗಿದ್ದರು. ಕೆಲವು ದಿನಗಳ ನಂತರ ಐನ್‌ಸ್ಟೈನರು ತೆಗೆದುಕೊಂಡು ಹೋಗಿದ್ದ ಎರಡು ಷರಾಯಿಗಳಿಗೂ ಇಸ್ತ್ರಿ ಹಾಳಾಗಿಹೋಯಿತು. ಇದನ್ನು ನೋಡಿ ಶ್ರೀಮತಿ ಎರಿನಾಫ್ಟರಿಗೆ ಮನಸ್ಸು ಚುಚ್ಚಿತು. ತಮ್ಮ ಅತಿಥಿಯು ಆದಷ್ಟು ಸುಖದಿಂದಿರಬೇಕೆಂಬ ಉದ್ದೇಶದಿಂದ ಐನ್‌ಸ್ಟೈನರು ತೆಗೆದು ಹಾಕಿದ್ದ ಒಂದು ಷರಾಯಿಯನ್ನು ಆಕೆ ಇಸ್ತ್ರಿಮಾಡಿಸಿ ತರಿಸಿದಳು. ಈ ಷರಾಯಿಯನ್ನು ಐನ್‌ಸ್ಟೈನರು ಧರಿಸಬೇಕೆಂದು ಆ ಯಜಮಾನಿಯ ಇಷ್ಟವಾಗಿದ್ದಿತು; ಅವರು ಅದೇ ಷರಾಯಿಯನ್ನು ಹಾಕಿಕೊಂಡೇ ಹೊರಗೆ ಹೋಗುವರೆಂದು ಆಕೆ ಎಣಿಸಿದ್ದಳು. ಆದರೆ ಆ ಸಾಯಂಕಾಲ ಭಾಷಣ ಮಂದಿರದಲ್ಲಿ ಐನ್‌ಸ್ಟೈನರನ್ನು ನೋಡಿದಾಗ ಆಕೆಗೆ ತೀರಾ ನಿರಾಶೆಯಾಯಿತು. ಅತಿಥಿಯು ಇಸ್ತ್ರಿ ಕೆಟ್ಟುಹೋಗಿದ್ದ ಷರಾಯಿಯನ್ನೇ ಧರಿಸಿ ಆ ದೊಡ್ಡ ಸಭೆಗೆ ಬಂದಿದ್ದರು !

ಹೀಗೆಯೇ ಮತ್ತೊಂದು ಪ್ರಸಂಗ ಆಕೆಗೆ ಆಶ್ಚರ್ಯವನ್ನೂ, ನಿರಾಶೆಯನ್ನೂ ಉಂಟುಮಾಡಿತು. ಐನ್‌ಸ್ಟೈನರು ಎರಿನಾಫ್ಟರ ಮನೆಯಲ್ಲಿ ತಿರುಗಾಡುವಾಗ ಚಪ್ಪಲಿಯನ್ನು ಹಾಕಿಕೊಳ್ಳದೆ ಬರಿಗಾಲಿನಲ್ಲಿ ತಿರುಗಾಡುತ್ತಿದ್ದರು. ಅತಿಥಿಯು ತಮ್ಮ ಚಪ್ಪಲಿಗಳನ್ನು ಮರೆತು ಬಂದಿರಬಹುದೆಂದು ಯಜಮಾನಿ ಭಾವಿಸಿದಳು. ಆ ಕೂಡಲೇ ಅವಳು ಒಂದು ಜೊತೆ ಚಪ್ಪಲಿಗಳನ್ನು ಅಂಗಡಿಯಿಂದ ತರಿಸಿ ಐನ್‌ಸ್ಟೈನರು ಉಳಿದುಕೊಂಡಿದ್ದ ಕೋಣೆಯಲ್ಲಿಸಿದಳು. ಆದರೂ ಐನ್‌ಸ್ಟೈನರು ಅವುಗಳನ್ನು ಪಯೋಗಿಸದೆ ಬರಿಗಾಲಲ್ಲೇ ತಿರುಗಾಡುತ್ತಿದ್ದರು. ಅಚ್ಚರಿಗೊಂಡ ಶ್ರೀಮತಿ ಎರಿನಾಫ್ಟರು ಐನ್‌ಸ್ಟೈನರಿಗೆ ಚಪ್ಪಲಿಗಳಿರುವ ಸ್ಥಳವನ್ನು ತೋರಿಸಿದಳು. ಐನ್‌ಸ್ಟೈನರು ಒಂದು ಸಾರಿ ತಮಗಾಗಿ ತಂದಿರಿಸಿದ ಸಾಮಾನುಗಳನ್ನು ನೋಡಿ "ಹೋ! ಇವೇ! ಇವು ಅನಾವಶ್ಯಕವಾದ ನಿಲುಭಾರಗಳು (ballast)!" ಎಂದು ನಕ್ಕುಬಿಟ್ಟರು. ಐನ್‌ಸ್ಟೈನರ ಸರಳಜೀವನ ಎರಿನಾಫ್ಟ ದಂಪತಿಗಳನ್ನು ಮುಗ್ಧರನ್ನಾಗಿ ಮಾಡಿತು.

ವಿಯುನ್ನಾ ನಗರದಲ್ಲಿದ್ದಾಗ ಐನ್‌ಸ್ಟೈನರು ಜೋಸೆಫ್ ಬ್ರೂಯರ್ (Joseph Breur) ಎಂಬ ಮನಶ್ಶಾಸ್ತ್ರಜ್ಞರನ್ನೂ ಪಾಪೆರ್ ಲೈಂಕಯುಸ್ (Popper Lynkeus) ಎಂಬ ಭೌತಶಾಸ್ತ್ರಜ್ಞರನ್ನೂ ಭೇಟಿಮಾಡಿದರು. ಬ್ರೂಯರ್ ವಿಖ್ಯಾತ ಮನಶ್ಶಾಸ್ತ್ರಜ್ಞರಾದ ಸಿಗ್ಮಂಡ್ ಫ್ರಾಯಿಡ್‌ರ ಅನುಯಾಯಿಯಾಗಿದ್ದನು. ಲೈಂಕೆಯುಸ್ ಅಂದಿನ ಪ್ರಮುಖ ಭೌತಶಾಸ್ತ್ರಜ್ಞನಾಗಿದ್ದ ಅರ್ನೆಸ್ಟ್ ಮಾಚ್‌ನ (Ernest Mach) ಗೆಳೆಯನಾಗಿದ್ದನು. ಮಾಚ್ ಮತ್ತು ಫ್ರಾಯಿಡ್ ಇವರುಗಳ ಸಿದ್ಧಾಂತಗಳು ಬಹು ಪ್ರಭಾವಯುತವಾಗಿದ್ದವು. ಐನ್‌ಸ್ಟೈನರು ಭೇಟಿ ಮಾಡಿದ ಪಂಡಿತರುಗಳು ತಮ್ಮ ತಮ್ಮ ಸಿದ್ಧಾಂತಗಳನ್ನು ಪ್ರತಿಪಾದಿಸುವುದರಲ್ಲಿ ಅದ್ವಿತೀಯರಾಗಿದ್ದರು. ಇದರಿಂದ ಆ ಸಿದ್ಧಾಂತಗಳನ್ನು ಚೆನ್ನಾಗಿ ಪರಿಚಯ ಮಾಡಿಕೊಳ್ಳಲು ಐನ್‌ಸ್ಟೈನರಿಗೆ ಅನುಕೂಲವಾಯಿತು.

ಪ್ರಾಗ್ ನಗರದ ಜನರಂತೆಯೇ ವಿಯುನ್ನಾ ಪಟ್ಟಣದ ಪ್ರಜೆಗಳೂ ಐನ್‌ಸ್ಟೈನರ ಭಾಷಣಗಳನ್ನು ಕೇಳಲು ಕಿಕ್ಕಿರಿದು ಸೇರುತ್ತಿದ್ದರು. ಆದರೆ ಈ ಜನರು ಅಷ್ಟು ಹೆಚ್ಚಾಗಿ ಸೇರುತ್ತಿದ್ದುದು ಐನ್‌ಸ್ಟೈನರನ್ನು ನೋಡುವ ಕುತೂಹಲದಿಂದಲೇ ಹೊರತು ಅವರ ಸಿದ್ಧಾಂತವನ್ನು ಅರ್ಥಮಾಡಿಕೊಳ್ಳುವ ಉದ್ದೇಶದಿಂದಲ್ಲ. ಆದ್ದರಿಂದ ಅವರಿಗೆ ಐನ್‌ಸ್ಟೈನರ ಭಾಷಣಗಳಿಂದ (ನಿಃಶಸ್ತ್ರೀಕರಣದ ಮೇಲೆ ಅವರು ಮಾಡಿದ ಭಾಷಣಗಳ ಹೊರತು) ಅಷ್ಟು ಪ್ರಯೋಜನವಾಗಲಿಲ್ಲ.

### ಅಮೇರಿಕಾ ಪ್ರವಾಸ

ವಿಯುನ್ನಾ ಪಟ್ಟಣದಿಂದ ಹಿಂತಿರುಗಿದ ಮೇಲೆ ಐನ್‌ಸ್ಟೈನರಿಗೆ ಕೆಲದಿನಗಳವರೆಗೆ ವಿರಾಮ ದೊರಕಿತು. ಯಾವ ದೇಶದಿಂದಲೂ ಅವರಿಗೆ ಆಹ್ವಾನ ಬಂದಿರಲಿಲ್ಲವಾದ್ದರಿಂದ ಅವರು ಎಲ್ಲಿಯೂ ಪ್ರವಾಸ ಹೊರಡಬೇಕಾಗಿರಲಿಲ್ಲ. ಈ ಸಮಯದಲ್ಲಿ ಸಂಶೋಧನೆ ಮತ್ತು ಬೋಧನೆ ಅವರ ದಿನಚರಿ ಕಾರ್ಯಕ್ರಮವಾಗಿತ್ತು. ಅವರು ಹೀಗೆ ಯಾವ ಹವ್ಯಾಸಕ್ಕೂ ಹೋಗದೆ ತಮ್ಮ ಸ್ವಂತ ಕೆಲಸದಲ್ಲಿ ಮಗ್ನರಾಗಿದ್ದರೂ ಪ್ರಕಟಣಾ ಪ್ರಪಂಚ ಅವರನ್ನು ಬಿಡಲಿಲ್ಲ. ಐನ್‌ಸ್ಟೈನ ಸಿದ್ಧಾಂತದ ವಿಷಯವಾಗಿ ಆಗಾಗ್ಗೆ ಲೇಖನಗಳನ್ನು ಬರೆಸಿ ಪ್ರಕಟಿಸುವುದು ಆಗಿನ ಪತ್ರಿಕೆಗಳಿಗೆ ಒಂದು ಫ್ಯಾಶನ್ ಆಗಿಹೋಗಿಬಿಟ್ಟಿದ್ದಿತು. ಇಂಥವುಗಳಲ್ಲಿ ಕೆಲವು ಮಾತ್ರ ವಿಚಾರಪೂರಿತವಾಗಿರುತ್ತಿದ್ದವು. ಉಳಿದವೆಲ್ಲಾ ಅರ್ಥಶೂನ್ಯವಾಗಿದ್ದಂಥವು. ಸಾಪೇಕ್ಷಸಿದ್ಧಾಂತವನ್ನು ಅಂದಿನ ಆರ್ಥಿಕ – ಸಾಮಾಜಿಕ ಸಮಸ್ಯೆಗಳಿಗೆ ಅನ್ವಯ ಮಾಡಿಕೊಂಡು, ಅದರ ಸತ್ಯಾಸತ್ಯತೆಗಳನ್ನು ಪರೀಕ್ಷಿಸಲು ಹೊರಟ ಪ್ರಬಂಧಗಳು ಕೆಲವು. ಮತ್ತೆ ಕೆಲವು ಕಲ್ಪನಾ ಸಂಭಾಷಣೆಗಳು. ಈ ಸಂಭಾಷಣೆಗಳಲ್ಲಿ ಬರುವ ಕಲ್ಪನಾ ವ್ಯಕ್ತಿಗಳಲ್ಲಿ ಒಬ್ಬನು ಐನ್‌ಸ್ಟೈನರ ಪಕ್ಷವನ್ನೂ ಮತ್ತೊಬ್ಬನು ಅವರ ವಿರೋಧಪಕ್ಷವನ್ನೂ ಹಿಡಿದು ವಾದ ಮಾಡುತ್ತಿದ್ದರು. ಇಂಥ ಲೇಖನಗಳಿಂದ ಜನಗಳು ಸಾಪೇಕ್ಷಸಿದ್ಧಾಂತವನ್ನು ಅರ್ಥಮಾಡಿಕೊಳ್ಳುವ ಬದಲು ಅದನ್ನು ಅಪಾರ್ಥ ಮಾಡಿಕೊಳ್ಳಲು ಹೆಚ್ಚು ಅವಕಾಶವಿದ್ದಿತು.

ಅಂತೂ ಒಟ್ಟನಲ್ಲಿ ತತ್ವಶಾಸ್ತ್ರದಿಂದ ಹಿಡಿದು ಬೀದಿಯ ವ್ಯವಹಾರದವರೆಗಿನ ಎಲ್ಲ ಚಟುವಟಿಕೆಗಳಿಗೂ ಸಾಪೇಕ್ಷಸಿದ್ಧಾಂತದ ಊರುಗೋಲು ಬೇಕಾಗಿದ್ದಿತು. ಐನ್‌ಸ್ಟೈನರ ಯುರೋಪ್ ಪ್ರವಾಸದಿಂದ ಅವರಿಗೆ ಬಂದ ಜನಪ್ರಿಯತೆ ಇಂಥ ಪ್ರಕಟಣೆಗಳಿಗೆ ಕಾರಣವಿದ್ದಿರಬಹುದು. ಅವರ ಜನಪ್ರಿಯತೆಯನ್ನು ಉಪಯೋಗಿಸಿಕೊಂಡು, ಆದರಿಂದ ತಮ್ಮ ಪತ್ರಿಕೆಗಳ ಪ್ರಚಾರವನ್ನು ಹೆಚ್ಚಿಸಿಕೊಳ್ಳಲು ಪತ್ರಿಕಾಕರ್ತರು ಹೂಡಿದ ಉಪಾಯವಿರಬಹುದು. ಈ ಲೇಖನಗಳ ಪ್ರಕಟಣೆ. ಹೀಗೆ ಜರ್ಮನಿ ಮತ್ತು ಪಶ್ಚಿಮ ಯುರೋಪಿನ ರಾಷ್ಟ್ರಗಳಲ್ಲಿ ವಿದ್ಯುಚ್ಛಕ್ತಿಯಂತೆ ಪ್ರಸರಿಸುತ್ತಿದ್ದ ಐನ್‌ಸ್ಟೈನರ ಖ್ಯಾತಿ ಅಮೇರಿಕಕ್ಕೂ ಹಬ್ಬಿತು. ಅಲ್ಲಿಯ ಜನರೂ ಯುರೋಪಿಯನ್ನರಂತೆ ಐನ್‌ಸ್ಟೈನರನ್ನು ನೋಡಲು ಬಯಸಿದರು. ಜನಮನವನ್ನರಿತ ಅಲ್ಲಿಯ ಮುಖಂಡರು ಐನ್‌ಸ್ಟೈನರನ್ನು ತಮ್ಮ ದೇಶಕ್ಕೆ ಆಹ್ವಾನಿಸಿದರು. ಈ ಕರೆಯ ಜೊತೆಗೆ ಆಗ ಅಮೇರಿಕಾದಲ್ಲಿದ್ದ ವೀಸ್‌ಮನ್ನರ ಬಿನ್ನಹವೂ ಐನ್‌ಸ್ಟೈನರಿಗೆ ಹೋಯಿತು. ಸಯೋನಿಸ್ಟ್ ಚಳುವಳಿಗೆ ಅಮೇರಿಕದ ಯಹೂದಿಗಳ ಆರ್ಥಿಕ ಬೆಂಬಲ ಪಡೆಯುವ ಮತ್ತು ಅಮೇರಿಕದ ರಾಜಕೀಯ ಮುಖಂಡರ ಸಹಾನುಭೂತಿಯನ್ನು ಸಂಪಾದಿಸುವ ಉದ್ದೇಶಗಳಿಂದ ವೀಸ್‌ಮನ್ ಆ ಪರರಾಷ್ಟ್ರಕ್ಕೆ ಹೋಗಿದ್ದರು. ತಮ್ಮ ಈ ಪ್ರಯತ್ನಕ್ಕೆ ಐನ್‌ಸ್ಟೈನರ ಸಹಕಾರ ಅತ್ಯಮೂಲ್ಯವಾದುದೆಂದೂ, ಆದ್ದರಿಂದ ಆ ಕೂಡಲೇ ಐನ್‌ಸ್ಟೈನರು ಅಮೇರಿಕಕ್ಕೆ ಹೊರಟು ಬರಬೇಕೆಂದೂ ವೀಸ್‌ಮನ್ ಐನ್‌ಸ್ಟೈನರಿಗೆ ಬರೆದರು. ಸಯೋನಿಸ್ಟರು ಜಯಪಡೆದರೆ ಯಹೂದಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವುದು ಸಾಧ್ಯವಾಗುವುದೆಂದು ವೀಸ್‌ಮನ್ ತಿಳಿಸಿದ್ದರು. ಇಂಥ ವಿದ್ಯಾಸಂಸ್ಥೆಯ ಸ್ಥಾಪನೆಯು ಐನ್‌ಸ್ಟೈನರಿಗೆ ಅತಿ ಪ್ರಿಯವಾಗಿದ್ದುದರಿಂದ ಅವರು ಹೆಚ್ಚು ಸಾವಕಾಶಮಾಡದೆ ಅಮೇರಿಕಾಕ್ಕೆ ಹೊರಟರು,

ಐನ್‌ಸ್ಟೈನರ ಆಗಮನವನ್ನು ತಿಳಿದ ಅಮೇರಿಕನ್ನರು ಅವರಿಗೆ ಸುಸ್ವಾಗತ ಕೋರಲು ನ್ಯೂಯಾರ್ಕ್ ಬಂದರಿನಲ್ಲಿ ಸೇರಿದ್ದರು. ಸೇರಿದ್ದ ಗುಂಪು ಅತಿ ದೊಡ್ಡದಾಗಿಯೇ ಇತ್ತು. ಅವರಲ್ಲಿ ಪತ್ರಿಕಾಕರ್ತರೂ ಸಾಹಿತಿಗಳೂ, ವೈಜ್ಞಾನಿಕರೂ, ತತ್ವಶಾಸ್ತ್ರಕೋವಿದರೂ ಇದ್ದರು. ಅಮೇರಿಕಾಕ್ಕೆ ಹೊರಗಿನಿಂದ ಬಂದ ಯಾವ ವೈಜ್ಞಾನಿಕನಿಗೂ ಐನ್‌ಸ್ಟೈನರಿಗೆ ದೊರಕಿದಂಥ ಅದ್ಭುತ ಸ್ವಾಗತ ದೊರಕಿರಲಿಲ್ಲ. ವಿಜ್ಞಾನಿಯಿರಲಿ, ಎಂಥ ರಾಜಕೀಯ ಪಟುವಿಗಾದರೂ ಅಸೂಯೆ ಹುಟ್ಟಿಸುತ್ತಿತ್ತು. ಅಮೇರಿಕದ ಜನತೆ ಐನ್‌ಸ್ಟೈನರ ವಿಷಯದಲ್ಲಿ ತೋರಿಸಿದ ಉತ್ಸಾಹ, ಸಿನೆಮಾ ತಾರೆಯರನ್ನೋ, ಬೇಸ್‌ಬಾಲ್ ಆಟಗಾರರನ್ನೋ, ಅಥವಾ ಉದ್ದನೆಯ ಭಾಷಣ ಮಾಡಬಲ್ಲ ರಾಜಕೀಯ ಮುಖಂಡರನ್ನೊ, ತಮ್ಮ ಆದರ್ಶವನ್ನಾಗಿಟ್ಟು ಕೊಂಡು ಅವರ ದರ್ಶನ ಪಡೆಯಲು ಹತ್ತಾರು ಮೈಲಿಗಳಿಂದ ಬರುವ ಅಮೇರಿಕದ ಜನತೆ, ರಹಸ್ಯತಮವಾದ ವಿಶ್ವರಚನೆಯನ್ನು ಅನೇಕರಿಗೆ ಅರ್ಥವಾಗುವ ಭಾಷೆಯಲ್ಲಿ ವಿವರಿಸಿದ್ದ ವೈಜ್ಞಾನಿಕನಲ್ಲಿ ಅಭಿಮಾನ ತೋರಿದುದು ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡಿತು. ಅಮೇರಿಕದ ಜನಾಂಗ ಜೀವನದ ವಿಚಾರವಾಗಿ ತನಗಿದ್ದ ದೃಷ್ಟಿಯನ್ನು ಬದಲಾಯಿಸಿಕೊಂಡಿತೇ ಎಂದು ವಿಚಾರಪರರು ಯೋಚಿಸತೊಡಗಿದರು. ಜನರ ಅತ್ಯಾಶ್ಚರ್ಯಕರವಾದ ನಡತೆಗೆ ಅನೇ

ಕರು ಅನೇಕ ತರಹ ಕಾರಣಗಳನ್ನೂ ಊಹಿಸಲಾರಂಭಿಸಿದರು. ಕೊನೆಗೊಬ್ಬ ಪತ್ರಿಕಾಪ್ರತಿನಿಧಿ ಜನರ ನಡವಳಿಕೆಗೆ ಕಾರಣವೇನೆಂದು ಐನ್‌ಸ್ಟೈನರನ್ನೇ ಕೇಳಿದ. ಕೂಡಲೆ ಅವನಿಗೆ ಉತ್ತರ ದೊರಕಿತು. “ಸಾಮಾನ್ಯವಾಗಿ ವೈಜ್ಞಾನಿಕ ವಿಷಯಗಳಲ್ಲಿ ನಿರಾಸಕ್ತರಾಗಿರುವ ಜನ ಸಾಪೇಕ್ಷಸಿದ್ಧಾಂತವನ್ನು ಪ್ರಪಂಚದ ಮುಂದಿಟ್ಟಿರುವ ವಿಜ್ಞಾನಿಯ ವಿಷಯದಲ್ಲಿ ಹೆಚ್ಚಿನ ಆಸಕ್ತಿ ತೋರುತ್ತಿರುವುದಕ್ಕೆ ಮನಃಶಾಸ್ತ್ರಜ್ಞರೇ ಉತ್ತರ ಹೇಳಬೇಕು”ಎಂದು. ಮತ್ತೊಬ್ಬರು ಇಂಥದೇ ಪ್ರಶ್ನೆಯನ್ನು ಹಾಕಿದಾಗ ಐನ್‌ಸ್ಟೈನರು ವಿನೋದಪೂರ್ವಕವಾಗಿ ಹೀಗೆ ಹೇಳಿದರು: “ನ್ಯೂಯಾರ್ಕ್ ನಗರದ ಬೆಡಗುಗಾತಿಯರಿಗೆ ವರ್ಷವರ್ಷವೂ ಒಂದೊಂದು ಹೊಸ ಫ್ಯಾಷನ್ ಬೇಕು. ಈ ಜನಕ್ಕೆ ‘ಸಾಪೇಕ್ಷ ಸಿದ್ಧಾಂತ’ ಈ ವರ್ಷದ ಫ್ಯಾಷನ್ ಆಗಿದೆ.”

ವ್ಯಂಗಪೂರ್ವಕವಾಗಿ ಐನ್‌ಸ್ಟೈನರು ಏನೇ ಹೇಳಿರಲಿ. ಅಮೇರಿಕನ್ನರ ಉತ್ಸಾಹಕ್ಕೆ ಕಾರಣವನ್ನು ನಾವು ದೂರ ಹುಡುಕಬೇಕಾಗಿಲ್ಲ. ತನ್ನ ತಪೋಬಲದಿಂದಲೋ ಧೀಶಕ್ತಿಯಿಂದಲೋ, ಪ್ರತಿಭೆಯಿಂದಲೋ ಒಬ್ಬ ಮಹಾತ್ಮ ಸಾಧಾರಣ ಜನರಿಗೆ ಅಸಾಧ್ಯವಾದುದನ್ನು ಸಾಧಿಸಿದ್ದರೆ, ಅಂಥವರನ್ನು ದೇವಾಂಶಪುರುಷನೆಂದು ತಿಳಿಯುವುದು ಮನುಷ್ಯನ ಸ್ವಭಾವ. ಅಂಥ ಮಹನೀಯರ ವಿಚಾರದಲ್ಲಿ ಗೌರವ-ಭಕ್ತಿಗಳು ಬೆಳೆಯುತ್ತವೆ. ಕಾಲಕ್ರಮೇಣ ಜನರು ಅವರನ್ನು ಆರಾಧಿಸತೊಡಗುತ್ತಾರೆ. ಈ ಆರಾಧನೆಯೇ ವಿಭೂತಿ ಪೂಜೆ. ಧೀಶಕ್ತಿ, ಸತ್ಯನಿಷ್ಠೆಗಳಿಂದ ಸಾಧಾರಣ ಜನರಿಗೆ ಮೀರಿದ್ದ ಅಂಶಗಳನ್ನು ಸಾಧಿಸಿದ್ದರಿಂದ ಐನ್‌ಸ್ಟೈನರು ಈ ವಿಭೂತಿ ಪೂಜೆಗೆ ಒಳಗಾದುದು ಆಶ್ಚರ್ಯವೇನಲ್ಲ. ಅಮೇರಿಕನ್ನರು ತೋರಿದ ಉತ್ಸಾಹಕ್ಕೆ ಐನ್‌ಸ್ಟೈನರ ಸಾಧನೆಯೇ ಕಾರಣ.

ಯಹೂದಿಗಳ ಹಿತವನ್ನು ಸಾಧಿಸುವ ಉದ್ದೇಶದಿಂದ ಅಮೇರಿಕಾಕ್ಕೆ ಹೋಗಿದ್ದ ಐನ್‌ಸ್ಟೈನರು, ಅವರು ಏರ್ಪಡಿಸುತ್ತಿದ್ದ ಸಭೆಗಳಿಗೆ ತಪ್ಪದೇ ಹೋಗುತ್ತಿದ್ದರು. ಆದರೆ ಹೋಗುತ್ತಿದ್ದುದು ಸಯೋನಿಸ್ಟ್ ಮುಖಂಡರ ಸಂಗಡ. ಕಾರಣವೇನೆಂದರೆ ರಾಜಕೀಯ ಸಭೆಗಳಲ್ಲಿ ಮಾತನಾಡಲು ಅವರಿಗೆ ಇಷ್ಟವಿರಲಿಲ್ಲ. ಇತರ ನಾಯಕರ ಸಂಗಡ ಹೋಗುತ್ತಿದ್ದುದರಿಂದ, ಭಾಷಣದ ಕೆಲಸವನ್ನು ಅವರಿಗೇ ಒಪ್ಪಿಸಿ ತಾವು ಸುಮ್ಮನಿರಲು ಐನ್‌ಸ್ಟೈನರಿಗೆ ಸಾಧ್ಯವಾಗುತ್ತಿತ್ತು. ಆದ್ದರಿಂದ ಅನೇಕ ಸಭೆಗಳಲ್ಲಿ ಅವರು ಭಾಗವಹಿಸಿದರೂ, ಅವರು ಮಾತನಾಡದ ಪ್ರಸಂಗಗಳು ಎಲ್ಲೋ ಕೆಲವು. ಮಾತನಾಡಬೇಕಾದ ಸಂದರ್ಭ ಬಂದಾಗ. ಅವರು ತಮ್ಮ ಭಾಷಣಗಳನ್ನು ನಾಲ್ಕಾರು ವಾಕ್ಯಗಳಲ್ಲಿ ಮುಗಿಸಿಬಿಡುತ್ತಿದ್ದರು. ಒಂದೆರಡು ವಾಕ್ಯಗಳಲ್ಲಿ ಸಯೋನಿಸ್ಟ್ ಚಲುವಳಿಯ ಧ್ಯೇಯವನ್ನು ವಿವರಿಸಿ, ಯಹೂದಿ ವಿಶ್ವವಿದ್ಯಾನಿಲಯ ಸ್ಥಾಪನೆಗೆ ಉದಾರವಾಗಿ ಸಹಾಯ ಮಾಡಬೇಕೆಂದು ಸಭಿಕರಲ್ಲಿ ಭಿನ್ನವಿಸಿಕೊಳ್ಳುತ್ತಿದ್ದರು. ವೀಸ್‌ಮನ್ನರನ್ನು ಅನುಸರಿಸುವುದು ಯಹೂದಿಗಳಿಗೆ ಶ್ರೇಯಸ್ಕರವಾದದ್ದೆಂದು ಹೇಳಿ ತಮ್ಮ ಮಾತುಗಳನ್ನು ಮುಗಿಸುತ್ತಿದ್ದರು. ಹೀಗೆ ಅವರು ಭಾಷಣ ಮಾಡಿದ ಪ್ರತಿಯೊಂದು ಸಂದರ್ಭದಲ್ಲಿಯೂ, ತಾವು ಯಾವ ರಾಜಕೀಯ ಪಂಥಕ್ಕೂ ಸೇರಿದವರಲ್ಲವೆಂಬ ಅಂಶವನ್ನು ಒತ್ತಿ ಒತ್ತಿ ಹೇಳುತ್ತಿದ್ದರು. ಐನ್‌ಸ್ಟೈನರ ಮಾತುಗಳೂ ಅವರ ಧೋರಣೆಯೂ ಅಮೇರಿಕದ

ಯಹೂದಿಗಳಿಗೆ ಅತ್ಯಂತ ಪ್ರಿಯವಾಗಿದ್ದವು. ಆ ಜನರು ಐನ್‌ಸ್ಟೈನರನ್ನು ದೇವದೂತನೆಂದು ಭಾವಿಸತೊಡಗಿದರು. ಭಗವಂತನು ಕೃಪೆಮಾಡಿ ತಮ್ಮ ರಕ್ಷಣೆಗೆ ಈ ಅವತಾರ ಪುರುಷನನ್ನು ಕಳುಹಿಸಿರುವನೆಂದು ಅಮೇರಿಕದ ಯಹೂದಿಗಳು ಬಗೆದರು. ಐನ್‌ಸ್ಟೈನರ ಸರಳ ವರ್ತನೆ ಯಹೂದಿಗಳೊಬ್ಬರಿಗೇ ಅಲ್ಲದೆ ಕ್ರೈಸ್ತರಿಗೂ ಮೆಚ್ಚಿಕೆಯಾಗಿದ್ದಿತು. ಅಮೇರಿಕದ ಮುಖ್ಯ ವಿಶ್ವವಿದ್ಯಾನಿಲಯಗಳಲ್ಲೊಂದಾದ ಪ್ರಿನ್‌ಸ್ಟನ್ (Princeton) ವಿಶ್ವವಿದ್ಯಾನಿಲಯವೂ, ನ್ಯೂಯಾರ್ಕ್ ನಗರಸಭೆಯೂ ಅವರನ್ನು ಗೌರವಿಸಿದವು.

ಹೀಗೆ ಸಾಮಾನ್ಯ ಜನರೂ, ಪಂಡಿತ ವರ್ಗವೂ ಐನ್‌ಸ್ಟೈನರನ್ನು ಗೌರವಿಸುತ್ತಿದ್ದ ಸಮಯದಲ್ಲಿ, ಅವರನ್ನು ಕುತ್ಸಿತಬುದ್ಧಿಯಿಂದ ಟೀಕಿಸುವ ಗುಂಪೊಂದು ಅಮೇರಿಕದಲ್ಲಿ ಹುಟ್ಟಿಕೊಂಡಿತು. ಹೋದೆಡೆಗಳಲ್ಲೆಲ್ಲಾ ಐನ್‌ಸ್ಟೈನರು ತಮ್ಮ ತಾಯ್ನುಡಿಯಾದ ಜರ್ಮನ್ ಭಾಷೆಯಲ್ಲಿ ಮಾತನಾಡುತ್ತಿದ್ದುದು ಕುತ್ಸಿತ ಟೀಕೆಗಳಿಗೆ ಕಾರಣವಾಯಿತು. ನ್ಯೂಯಾರ್ಕ್ ನಗರಸಭೆಯ ಕೆಲ ಸದಸ್ಯರು ಐನ್‌ಸ್ಟೈನರಿಗೆ ಬಿನ್ನವತ್ತಳೆಯನ್ನರ್ಪಿಸಬೇಕೆಂದು ಒಂದು ನಿರ್ಣಯವನ್ನು ಸಭೆಯಲ್ಲಿ ಮಂಡಿಸಿದಾಗ, ಅದರ ಹಿರಿಯ ಸದಸ್ಯರೊಬ್ಬರು ಜರ್ಮನ್ ಭಾಷೆಯಾಡುವ ವ್ಯಕ್ತಿಗೆ ಗೌರವ ತೋರಿಸುವುದು ನ್ಯೂಯಾರ್ಕಿನಂಥ ನಗರಕ್ಕೆ ತಕ್ಕುದಲ್ಲವೆಂದು ವಾದಿಸಿದರು. ಅಮೇರಿಕಾದ ಮಹಿಳಾಸಂಘವೊಂದು ಐನ್‌ಸ್ಟೈನರು ತಮ್ಮ ದೇಶದೊಳಕ್ಕೆ ಕಾಲಿಡುವುದನ್ನು ವಿರೋಧಿಸಿತು. ಐನ್‌ಸ್ಟೈನರ ವಿಷಯವಾಗಿ ಈ ರೀತಿಯಲ್ಲಿ ಅಸಭ್ಯವಾಗಿ ನಡೆದುಕೊಂಡ ಜನಗಳು, ಅಮೇರಿಕವು ಸದಾ ಜರ್ಮನಿಯ ಶತ್ರುರಾಷ್ಟ್ರವಾಗಿ ಉಳಿಯಬೇಕೆಂದು ಬಯಸುತ್ತಿದ್ದವರು. ಅವರಿಗೆ ಜರ್ಮನ್ ಭಾಷೆಯೂ, ಆ ಸಂಸ್ಕೃತಿಯೂ ಅಮೇರಿಕಾಕ್ಕೆ ಪ್ರವೇಶಿಸಲು ಅನರ್ಹವಾದ ವಸ್ತುಗಳಾದವು!

ಐನ್‌ಸ್ಟೈನರು ಆಗಾಗ ರಾಜಕೀಯ ಚಟುವಟಿಕೆಗಳ ಮಧ್ಯೆ ಬಿಡುವು ಮಾಡಿಕೊಂಡು ಅಮೇರಿಕದ ಸಾಂಸ್ಕೃತಿಕ ಸಂಘಗಳಿಗೆ ಭೇಟಿಕೊಡುತ್ತಿದ್ದರು. ಹೀಗೆ ಅವರು ಭೇಟಿಕೊಟ್ಟ ಮುಖ್ಯ ಸಂಸ್ಥೆಗಳೆಂದರೆ ಹಾರ್ವರ್ಡ್ ಮತ್ತು ಕೊಲಂಬಿಯಾ ವಿಶ್ವವಿದ್ಯಾನಿಲಯಗಳು. ಅಲ್ಲಿ ನಡೆಯುತ್ತಿದ್ದ ಕಾರ್ಯಕಲಾಪಗಳನ್ನು ನೋಡಿ ಅವುಗಳನ್ನು ಉತ್ತಮಗೊಳಿಸಲು ಸೂಕ್ತ ಸಲಹೆಗಳನ್ನು ಕೊಟ್ಟರು. ಹೆಚ್ಚು ಕಾಲಾವಕಾಶವಿಲ್ಲದಿದ್ದುದರಿಂದ ಅಮೇರಿಕದ ಎಲ್ಲ ಭಾಗಗಳನ್ನೂ ಸಂಚರಿಸಿ ಅಲ್ಲಿಯ ಜನರ ಸಂಸ್ಕೃತಿಯನ್ನೂ ಜೀವನವನ್ನೂ ತಿಳಿಯಲು ಸಾಧ್ಯವಿಲ್ಲದೆ ಹೋಯಿತು.

ಐನ್‌ಸ್ಟೈನರು ಅಮೇರಿಕದಲ್ಲಿದ್ದಾಗ ವಿಶ್ವವಿದ್ಯಾನಿಲಯದ ಶಿಕ್ಷಣದ ವಿಚಾರವಾಗಿ ಒಂದು ದೊಡ್ಡ ವಿವಾದ ಉಂಟಾಯಿತು. ಇದು ಉದ್ಭವಿಸುವುದಕ್ಕೆ ಮೂಲ ಕಾರಣ ಥಾಮಸ್ ಎಡಿಸನ್ನರ ಒಂದು ಲೇಖನ. ಎಡಿಸನ್ನರು ಭೌತಶಾಸ್ತ್ರದ ಆಧಾರದ ಮೇಲೆ ಅನೇಕ ಹೊಸ ಹೊಸ ಯಂತ್ರಗಳನ್ನು ರಚಿಸಿದ್ದ ಯಂತ್ರಕುಶಲರು. ಅವರು ತಮ್ಮ ಲೇಖನದಲ್ಲಿ, ವಿಶ್ವವಿದ್ಯಾನಿಲಯಗಳು ಭಾವನಾಪ್ರಧಾನವಾದ ವಿಷಯಗಳನ್ನು ಹೇಳಿಕೊಡುವುದರ ಬದಲು ಜೀವನದಲ್ಲಿ ಉಪಯೋಗವಾಗುವ ವಾಸ್ತವಿಕ ಸಂಗತಿಗಳನ್ನು ಬೋಧಿಸಬೇಕು ಎಂದು

ವಾದಿಸಿದ್ದರು. ಅವರ ಅಭಿಪ್ರಾಯದಂತೆ ವಿದ್ಯಾರ್ಥಿ ಶಬ್ದಪ್ರಸಾರಕ್ಕೆ ಸಂಬಂಧಪಟ್ಟ ಜ್ಞಾನಕ್ಕಿಂತ ಅದರ ವೇಗವನ್ನು ನೆನಪಿನಲ್ಲಿಟ್ಟುಕೊಳ್ಳುವುದು ಹೆಚ್ಚು ಉಪಯುಕ್ತವಾದುದಾಗಿತ್ತು. ಐನ್‌ಸ್ಟೈನರಿಗೆ ಈ ವಾದ ಸರಿ ಕಾಣಲಿಲ್ಲ. ಎಡಿಸನ್ನರ ಅಭಿಪ್ರಾಯಗಳಿಗೆ ತಮ್ಮ ಅಸಮ್ಮತಿಯನ್ನು ಸೂಚಿಸಿ ಅವರು ಈ ರೀತಿಯಾಗಿ ಬರೆದರು: "ಶಬ್ದದ ವೇಗ ಎಷ್ಟೆಂದು ನನಗೆ ತಿಳಿಯದು. ಅದನ್ನು ನೆನಪಿನಲ್ಲಿಟ್ಟುಕೊಳ್ಳಲು ನಾನು ಪ್ರಯತ್ನಪಡುವುದೂ ಇಲ್ಲ. ಹಾಗೆ ಅದನ್ನು ನೆನಪಿನಲ್ಲಿಟ್ಟುಕೊಳ್ಳುವುದು ಅನಾವಶ್ಯಕವೆಂದು ನನಗೆ ತೋರುತ್ತದೆ. ಎಲ್ಲ ಪಠ್ಯಪುಸ್ತಕಗಳಲ್ಲಿಯೂ ದೊರೆಯುವ ಈ ಅಂಶವನ್ನು ನೆನಪಿನಲ್ಲಿಟ್ಟುಕೊಳ್ಳಲು ಪ್ರಯತ್ನಪಡುವುದು ವ್ಯಥಾ ಶ್ರಮವೆಂದು ಅನಿಸುತ್ತದೆ.

ಕೇವಲ ಪುಸ್ತಕದ ಬದನೆಕಾಯಿಯನ್ನು ಕಲಿಯುವ ವಿದ್ಯಾರ್ಥಿಯು ಕಾಲೇಜಿಗೆ ಏಕೆ ಹೋಗಬೇಕು? ಪುಸ್ತಕಗಳನ್ನು ಓದಿಕೊಂಡೇ ಅವನು ಎಲ್ಲ ವಿಷಯಗಳನ್ನೂ ಸಂಗ್ರಹಿಸಬಹುದಲ್ಲವೇ? ಆದ್ದರಿಂದ ಪುಸ್ತಕಗಳಿಂದ ಕಲಿಯಲಾಗದಂಥ ವಿಚಾರಶೀಲತೆಯನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವದು ವಿಶ್ವವಿದ್ಯಾನಿಲಯಗಳ ಗುರಿಯಾಗಬೇಕು."

ಐನ್‌ಸ್ಟೈನ ಮತ್ತು ಎಡಿಸನ್ನರು ವಿಶ್ವವಿದ್ಯಾನಿಲಯದ ಶಿಕ್ಷಣದ ವಿಷಯದಲ್ಲಿ ಭಿನ್ನ ಭಿನ್ನ ಅಭಿಪ್ರಾಯ ಹೊಂದುವುದಕ್ಕೆ ಕಾರಣ ಅವರವರ ಮನೋಧರ್ಮಗಳು. ಹೆಸರಾಂತ ಈ ಇಬ್ಬರು ವೈಜ್ಞಾನಿಕರು ಜೀವನವನ್ನೂ ವಿಜ್ಞಾನವನ್ನೂ ಭಿನ್ನ ಭಿನ್ನ ದೃಷ್ಟಿಗಳಿಂದ ನೋಡಿದ್ದಾರೆ. ಎಡಿಸನ್ನರಿಗೆ ವಿಜ್ಞಾನವೆಂಬುದು ದೈನಂದಿನ ಬದುಕನ್ನು ಸುಲಭ ಮಾಡುವ ಒಂದು ಸಾಧನ. ಐನ್‌ಸ್ಟೈನರಿಗಾದರೋ ಅದು ಸೃಷ್ಟಿಯ ರಹಸ್ಯವನ್ನು ತಿಳಿಯಲು ಸಹಾಯಮಾಡಬಲ್ಲ ಒಂದು ಕಠಿಣ ತಪಸ್ಸು. ವಿಜ್ಞಾನದ ಮೂಲಕ ಜಗತ್ತಿನ ಸತ್ಯವನ್ನು ತಿಳಿಯಬಯಸುವವನು ಎಂಥ ಕಷ್ಟಗಳಿಗೂ ಬಗ್ಗಬಾರದು; ನಿರಾಶೆಯಿಂದ ಕುಗ್ಗಬಾರದು. ವಿಜ್ಞಾನವನ್ನು ಅವನು ಒಂದು ಅಸಿಧಾರಾವ್ರತವೆಂದು ಭಾವಿಸಬೇಕು. ಈ ಇಬ್ಬರಿಗೂ ಅವರವರ ಸಾಧನೆಗೆ ತಕ್ಕಂತೆ ನಿಧಿ ದೊರಕಿತು. ಅವರಲ್ಲಿ ಒಬ್ಬರು ಮಾನವನ ದಿನದಿನದ ಬದುಕನ್ನು ಉತ್ತಮ ಪಡಿಸಬಲ್ಲ ಯಂತ್ರಗಳನ್ನು ರಚಿಸಿ ಶಾಶ್ವತವಾದ ಕೀರ್ತಿಯನ್ನು ಪಡೆದರು. ಮತ್ತೊಬ್ಬರು ಸಂದೇಹ ಸಾಗರದಲ್ಲಿ ಸಿಲುಕಿ ತೊಳಲಾಡುತ್ತಿದ್ದ ವಿಜ್ಞಾನನೌಕೆಗೆ ಸರಿಯಾದ ದಾರಿ ತೋರಿಸಬಲ್ಲ ಧ್ರುವತಾರೆಯಾದರು. ವಿಜ್ಞಾನದ ಸಹಾಯದಿಂದ ಮಾನವ ಕಲ್ಯಾಣವನ್ನು ಹೇಗೆ ಸಾಧಿಸಬಹುದೆಂಬುದನ್ನು ಈ ಇಬ್ಬರೂ ಬೇರೆ ಬೇರೆ ವಿಧದಲ್ಲಿ ತೋರಿಸಿದ್ದಾರೆ.

ಇದೇ ಸಮಯದಲ್ಲಿ ಧೂಮ್ರಪಾನವನ್ನು ವಿರೋಧಿಸುವ ಚಳವಳಿಯೊಂದು ಅಮೇರಿಕದಲ್ಲಿ ನಡೆಯುತ್ತಿತ್ತು. ಇದರ ಜೊತೆಗೆ ಭಾನುವಾರದ ದಿನ ಜನರು ಯಾವ ವಿನೋದ ವಿಹಾರಗಳಲ್ಲಿಯೂ ಭಾಗವಹಿಸದೆ ವಿರಾಮದಿಂದಿರಬೇಕೆಂಬ ಚಳುವಳಿ ಸೇರಿಕೊಂಡಿತು. ಈ ಚಳುವಳಿಗಳ ಮುಖಂಡರು ಐನ್‌ಸ್ಟೈನರಲ್ಲಿಗೆ ಹೋಗಿ ತಮಗೆ ಬೆಂಬಲ ಕೊಡುವಂತೆ ಕೇಳಿಕೊಂಡರು. ಐನ್‌ಸ್ಟೈನರು ಆ ಮುಖಂಡರನ್ನು ಕುರಿತು 'ಜನಂಗೆ

ವಾರಕ್ಕೊಂದು ಸಾರಿ ವಿರಾಮ ಬೇಕು, ನಿಜ. ಆದರೆ ಆ ವಿರಾಮಕಾಲವನ್ನು ಒಂದು ನಿರ್ದಿಷ್ಟ ರೀತಿಯಲ್ಲಿಯೇ ಉಪಯೋಗಿಸಿಕೊಳ್ಳಬೇಕೆಂದು ಕಾನೂನು ಮಾಡಲು ಸಾಧ್ಯವೇ? ನಿದ್ದೆ ಮಾಡಿದರೆ ವಿರಾಮ ದೊರೆಕಿದಂತೆ ಕೆಲವರು ಭಾವಿಸುತ್ತಾರೆ. ಮತ್ತೆ ಕೆಲವರಿಗೆ ವ್ಯಾಯಾಮ ಮಾಡುವುದರ ಮೂಲಕ ವಿರಾಮ ದೊರೆಯುವುದೆಂದು ಹೇಳುತ್ತಾರೆ. ಇನ್ನೂ ಕೆಲವರು ಲೇಖನವನ್ನು ಬರೆಯುವುದರಲ್ಲೋ ತಮಗೆ ಇಷ್ಟವಾದ ಪುಸ್ತಕವನ್ನು ಓದುವುದರಲ್ಲೋ ತೊಡಗಿದರೆ ವಿರಾಮ ಪಡೆದಂತಾಗುತ್ತದೆಂದು ತಿಳಿಯುತ್ತಾರೆ. ಒಂದೇ ರೀತಿಯಲ್ಲಿ ವಿರಾಮ ಪಡೆಯುವಂತೆ ಅವರೆಲ್ಲರನ್ನೂ ಬಲಾತ್ಕರಿಸಿದರೆ, ಜನಗಳ ಭಿನ್ನ ಭಿನ್ನ ಅಭಿರುಚಿಗೆ ಮಾನ್ಯತೆ ಕೊಟ್ಟಂತಾಗುವುದಿಲ್ಲ. ಹೀಗೆ ಮಾಡುವುದರಿಂದ ವ್ಯಕ್ತಿಸ್ವಾತಂತ್ರ್ಯ ಕುಂಠಿತವಾಗುತ್ತದೆ' ಎಂದು ಹೇಳಿದರು. ಮಾನವ ಸಮಾಜದ ಒಟ್ಟು ಹಿತಕ್ಕೆ ಭಂಗ ಬಾರದಿರುವುದಕ್ಕೆ ಎಂಥ ಕಾನೂನುಗಳು ಆವಶ್ಯಕವೋ ಅಷ್ಟನ್ನು ಮಾತ್ರ ಸರ್ಕಾರಗಳು ರಚಿಸಬೇಕು. ಹಾಗಲ್ಲದೆ ಉಳಿದ ವ್ಯವಹಾರಗಳಿಗೆ ರಾಷ್ಟ್ರಗಳು ಕೈಹಾಕುವುದಾದರೆ ತನ್ನ ಅಧಿಕಾರವನ್ನು ದುರ್ವಿನಿಯೋಗಪಡಿಸಿಕೊಂಡಂತೆ. ಸರ್ಕಾರ ಹೇಗೆ ವೈಯುಕ್ತಿಕ ವ್ಯವಹಾರಗಳಿಗೆ ಕೈಹಾಕಬಾರದೋ, ಹಾಗೆಯೇ ಜನಗಳು ತಮ್ಮ ನೆರೆಹೊರೆಯವರ ವ್ಯವಹಾರಗಳನ್ನು – ಅವು ತಮಗೆ ಸಂಬಂಧಪಡದಿದ್ದಲ್ಲಿ ಟೀಕಿಸಬಾರದು. ಆದ್ದರಿಂದ ಧೂಮ್ರಪಾನದ ವಿಷಯದಲ್ಲಿ ಕಟ್ಟುಪಾಡುಗಳನ್ನು ಮಾಡಬೇಕೆಂದು ಬಯಸುವುದು ಪ್ರಜಾಪ್ರಭುತ್ವದ ನಾಗರಿಕರಿಗೆ ತಕ್ಕುದಲ್ಲ. ಸಮಾಜದ ಹಿತಕ್ಕೆ ಧಕ್ಕೆ ತರದಂಥ ಈ ಉಲ್ಲಾಸವನ್ನು ವ್ಯಕ್ತಿ ಅನುಭವಿಸಿದರೆ ಅದರಲ್ಲಿ ಪಾಪವೇನಿದೆ?

### ಬ್ರಿಟನ್ನಿನಲ್ಲಿ ಕೆಲದಿನಗಳು

ಅಮೇರಿಕಾ ಪ್ರವಾಸ ಮುಗಿದಮೇಲೆ ಐನ್‌ಸ್ಟೈನರು ಇಂಗ್ಲೆಂಡಿಗೆ ಭೇಟಿಕೊಟ್ಟರು. ಅವರನ್ನು ಇಂಗ್ಲೆಂಡಿಗೆ ಬರಮಾಡಿಕೊಳ್ಳಲು ಪ್ರಯತ್ನಪಟ್ಟವರಲ್ಲಿ ಲಾರ್ಡ್ ಹಾಲೇನ್ ಬಹು ಮುಖ್ಯರಾಗಿದ್ದರು. ಅವರು ವಿಶೇಷ ಪ್ರಭಾವವುಳ್ಳವರಾಗಿದ್ದರು. ಅವರಿಗೆ ಭೌತಶಾಸ್ತ್ರ, ತತ್ವಶಾಸ್ತ್ರಗಳಲ್ಲಿ ವಿಶೇಷ ಅಭಿರುಚಿ, ಆಸಕ್ತಿಗಳಿದ್ದವು. ಸಾಪೇಕ್ಷಸಿದ್ಧಾಂತವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕೆಂದು ಹಾಲ್ಡೇನರಿಗೆ ಆಕಾಂಕ್ಷೆ ಇತ್ತು, ಆ ಸಿದ್ಧಾಂತದಲ್ಲಿ ಪರಿಶ್ರಮವುಳ್ಳ ಪಂಡಿತರೆಲ್ಲರನ್ನೂ ಒಟ್ಟುಗೂಡಿಸಿ ಸಂಬಂಧಪಟ್ಟ ಸಮಸ್ಯೆಗಳನ್ನು ಆಮೂಲಾಗ್ರವಾಗಿ ಚರ್ಚಿಸಬೇಕೆಂದು ಅವರಿಗೆ ಆಸೆ ಇದ್ದಿತು. ಪಂಡಿತ ಮಂಡಳಿಯಲ್ಲಿ ಐನ್‌ಸ್ಟೈನರು ಭಾಗ ವಹಿಸಿದರೆ, ಚರ್ಚೆಯಲ್ಲಿ ತಲೆದೋರಬಹುದಾದ ಸಕಲ ಸಂಶಯಗಳೂ ನಿವಾರಣೆಯಾಗುವ ಅವಕಾಶವಿತ್ತು. ಈ ರೀತಿಯಲ್ಲಿ ಜ್ಞಾನಬೆಳವಣಿಗೆಗೆ ಸಹಾಯ ಮಾಡುವ ಉದ್ದೇಶದಿಂದ ಹಾಲ್ಡೇನರು ಐನ್‌ಸ್ಟೈನರನ್ನು ಇಂಗ್ಲೆಂಡಿಗೆ ಕರೆತರಲು ಪ್ರಯತ್ನಪಟ್ಟರು. ಆದರೆ ಇಂಗ್ಲೆಂಡಿನಲ್ಲಿದ್ದ ರಾಜಕೀಯ ವಾತಾವರಣ ಹಾಲ್ಡೇನರಿಗೆ ಅನುಕೂಲವಾಗಿರಲಿಲ್ಲ. ಮೊದಲನೆಯದಾಗಿ ಶತ್ರುಜನಾಂಗಕ್ಕೆ ಸೇರಿದವರೆಂದು ಐನ್‌ಸ್ಟೈನರನ್ನು ಇಂಗ್ಲೀಷರು ದ್ವೇಷಿಸುತ್ತಿದ್ದರು. ಎರಡನೆಯದಾಗಿ ಇಂಗ್ಲೆಂಡಿನ ವೈಜ್ಞಾನಿಕರಿಗೆ ಐನ್‌ಸ್ಟೈನರಲ್ಲಿ ಅಭಿಮಾನವಿರಲಿಲ್ಲ. ಆ ವೈಜ್ಞಾನಿಕರ ಅಭಿಪ್ರಾಯದಲ್ಲಿ ನ್ಯೂಟನ್ನನಿಂದ ಆರಂಭವಾಗಿ ಬೆಳೆದುಬಂದಿದ್ದ ಇಂಗ್ಲೆಂಡಿನ

ವೈಜ್ಞಾನಿಕ ಸಂಪ್ರದಾಯಕ್ಕೂ ಸಾಪೇಕ್ಷ ಸಿದ್ಧಾಂತದ ವಿಚಾರಧಾರೆಗೂ ಅಪಾರವಾದ ಭಿನ್ನತೆ ಇತ್ತು. ನ್ಯೂಟನ್ ತಿಳಿಸಿದಂಥ ತತ್ವಗಳನ್ನು ಪ್ರಯೋಗದಿಂದ ಕೂಡಲೇ ಪರೀಕ್ಷೆ ಮಾಡ ಬಹುದಿತ್ತು. ಇದೇ ಪರಂಪರೆಯಲ್ಲಿ ಬೆಳೆದುಬಂದ ಎಲ್ಲ ಭೌತಿಕ ತತ್ವಗಳನ್ನೂ ಪ್ರಯೋಗ ಗಳಿಂದ ತೋರಿಸಿಕೊಡಲು ಸಾಧ್ಯ. ಭೌತಿಕ ತತ್ವಗಳ ಸತ್ಯಾಸತ್ಯತೆಯನ್ನು ಜ್ಞಾನೇಂದ್ರಿಯ ಗಳ ಮೂಲಕ ನಿಷ್ಕರ್ಷಿಸುವಂತಿರಬೇಕು. ಯಾವ ಭೌತಿಕ ತತ್ವವನ್ನು ಪ್ರಯೋಗಗಳಿಂದ ವಿಶದೀಕರಿಸಲು ಸಾಧ್ಯವಿಲ್ಲವೋ, ಅವು ನ್ಯೂಟನ್ ಸಂಪ್ರದಾಯಕ್ಕೆ ಸೇರಿದ ತತ್ವಗಳೆಂದೂ ಅವುಗಳನ್ನು ವೈಜ್ಞಾನಿಕತತ್ವಗಳೆಂದು ಕರೆಯುವುದೂ ಕೂಡ ತಪ್ಪೆಂದೂ ಇಂಗ್ಲೀಷರು ಹೇಳು ತ್ತಿದ್ದರು. ಸಾಪೇಕ್ಷ ಸಿದ್ಧಾಂತವು ಕೆಲವು ಮೂಲಪ್ರಮೇಯಗಳಿಂದ (hypotheses) ತಾರ್ಕಿಕ ವಾಗಿ ಸಿದ್ಧಗೊಳಿಸಿದ ಸಿದ್ಧಾಂತವಾದ್ದರಿಂದ, ಅದನ್ನು ಇಂಗ್ಲೀಷರು ಅಲ್ಲಗಳೆಯುತ್ತಿದ್ದರು. ಅಂತೆಯೇ ಅದರ ಕರ್ತೃವಾದ ಐನ್‌ಸ್ಟೈನರನ್ನು ಅವರು ತೆಗಳುತ್ತಿದ್ದರು. ಮೂರನೆಯದಾಗಿ ನ್ಯೂಟನ್‌ಗೆ ಸಾಟಿಯಾಗಬಲ್ಲ ವಿಜ್ಞಾನಿ ಜಗತ್ತಿನಲ್ಲೇ ಹುಟ್ಟುವುದಿಲ್ಲವೆಂಬ ದುರಭಿಮಾನ ಇಂಗ್ಲೆಂಡಿನ ಸಾಮಾನ್ಯ ಜನರಲ್ಲಿ ಮನೆಮಾಡಿಕೊಂಡಿತ್ತು. ಆದ್ದರಿಂದ ಇಪ್ಪತ್ತನೆಯ ಶತಮಾ ನದ ನ್ಯೂಟನ್ ಎಂಬ ಪ್ರಸಿದ್ಧಿಗೊಂಡಿದ್ದ ಐನ್‌ಸ್ಟೈನರಲ್ಲಿ ಅವರಿಗೆ ಅಸೂಯೆಯಿತ್ತು. ಇಂಥ ಕಲುಷಿತ ವಾತಾವರಣದಲ್ಲಿ ಐನ್‌ಸ್ಟೈನರಂಥ ಹಿರಿಯ ವ್ಯಕ್ತಿಯನ್ನು ತಮ್ಮ ದೇಶಕ್ಕೆ ಅತಿಥಿಯ ನ್ನಾಗಿ ಬರಮಾಡಿಕೊಳ್ಳುವದು ಅಷ್ಟೇನೂ ಸೂಕ್ತವಲ್ಲವೆಂದು ಹಾಲ್ಡೇನರಿಗೆ ಅನ್ನಿಸುತ್ತಿತ್ತು.

ಐನ್‌ಸ್ಟೈನರನ್ನು ತಮ್ಮ ಅತಿಥಿಯನ್ನಾಗಿ ಕರೆಯಲು ಹಾಲ್ಡೇನರಿಗೆ ಎಂಥ ಎಡರು ತೊಡರುಗಳಿದ್ದವೋ, ಇಂಗ್ಲೆಂಡಿಗೆ ಭೇಟಿಕೊಡಲು ಐನ್‌ಸ್ಟೈನರಿಗೆ ಅಂಥವೇ ತೊಂದರೆಗಳಿ ದ್ದವು. ಜರ್ಮನಿಯನ್ನು ಇಂಗ್ಲೆಂಡ್ ಭಂಗಪಡಿಸಿತ್ತಾದ ಕಾರಣ ಅಲ್ಲಿಗೆ ಹೋಗುವದು ತಮ್ಮ ತಾಯ್ನಾಡಿಗೆ ದ್ರೋಹ ಬಗೆದಂತಾಗುತ್ತದೆಂದು ಜರ್ಮನರು ತಿಳಿದಿದ್ದರು. ಹೀಗೆ ಕಲುಷಿತ ವಾಗಿದ್ದ ಇಂಗ್ಲೆಂಡ್-ಜರ್ಮನ್ ಬಾಂಧವ್ಯವನ್ನು ಉತ್ತಮಪಡಿಸಬೇಕೆಂದು ಹಾಲ್ಡೇನರೂ ಐನ್‌ಸ್ಟೈನರೂ ಪ್ರಯತ್ನಪಡುತ್ತಿದ್ದರು. ಇಂಗ್ಲೆಂಡಿನಲ್ಲಿ ಸಾಪೇಕ್ಷ ಸಿದ್ಧಾಂತದ ವಿಷಯವಾಗಿ ವಿಚಾರಗೋಷ್ಠಿ ಏರ್ಪಡಿಸುವ ಸಾಧಕ-ಬಾಧಕಗಳನ್ನು ಇವರಿಬ್ಬರೂ ಪತ್ರಮುಖೇನ ಚರ್ಚಿಸುತ್ತಿದ್ದರು. ದೀರ್ಘಕಾಲದ ಪತ್ರವ್ಯವಹಾರದ ನಂತರ, ಐನ್‌ಸ್ಟೈನರ ಭೇಟಿಯಿಂದ ಜರ್ಮನ್ ಇಂಗ್ಲೆಂಡ್‌ಗಳ ನಡುವಿನ ಬಾಂಧವ್ಯವು ಉತ್ತಮಗೊಳ್ಳುವ ಸಂಭವ ಹೆಚ್ಚೆಂದು ಇಬ್ಬರಿಗೂ ಅನ್ನಿಸಿತು. ಅದರಂತೆ ಐನ್‌ಸ್ಟೈನರು ಇಂಗ್ಲೆಂಡಿಗೆ ಭೇಟಿಕೊಡಲು ನಿರ್ಧರಿಸಿದರು.

ತಮ್ಮ ನಿರ್ಧಾರದಂತೆ ಐನ್‌ಸ್ಟೈನರು ಇಂಗ್ಲೆಂಡ್ ದೇಶಕ್ಕೇನೋ ಹೋದರು. ಆದರೆ ತಾವು ಆಶಿಸಿದಂತೆ ಇಂಗ್ಲೆಂಡ್-ಜರ್ಮನ್ ಮೈತ್ರಿಯನ್ನು ಬೆಳೆಸಲು ಅವರಿಗೆ ಸಾಧ್ಯ ವಾಗಲಿಲ್ಲ. ಇಂಗ್ಲೆಂಡ ದೇಶವೆಲ್ಲವನ್ನೂ ಸಂಚರಿಸಿ ತಮಗೆ ಅತಿಪ್ರಿಯವಾದ ಶಾಂತಿಸಂದೇಶ ವನ್ನು ಸಾರಲಾಗಲಿಲ್ಲ. ಇದಕ್ಕೆ ಮುಖ್ಯಕಾರಣ ಅಂದಿನ ರಾಜಕೀಯ ವಾತಾವರಣ.

ಜನಸಾಮಾನ್ಯರಲ್ಲಿ ತಮ್ಮ ಅಭಿಪ್ರಾಯವನ್ನು ಪ್ರಚಾರಮಾಡಲು ಐನ್‌ಸ್ಟೈನರಿಗೇನೋ ಆಗದೆ ಹೋಯಿತು. ಆದರೆ ಪಂಡಿತ ವರ್ಗದಲ್ಲಿ ಅವರು ಸಾಕಷ್ಟು ಪ್ರಭಾವಗಳಿಸಿದರು.

ಆಗ ಇಂಗ್ಲೆಂಡಿನಲ್ಲಿ ಖ್ಯಾತಿಪಡೆದಿದ್ದ ಪ್ರತಿಯೊಬ್ಬ ಮಹಾಪುರುಷನನ್ನೂ ಅವರು ಭೇಟಿ ಮಾಡಿದರು. ಪ್ರಖ್ಯಾತ ತತ್ವಜ್ಞಾನಿಯಾಗಿದ್ದ ಆಲ್ಫ್ರೆಡ್‌ನಾರ್ತ್‌ವೈಟ್‌ಹೆಡ್, ಅಮರ ಸಾಹಿತಿ ಬರ್ನಾರ್ಡ್ ಷಾ, ಶ್ರೇಷ್ಠ ವಿಜ್ಞಾನಿ ಥಾಮ್ಸನ್ ಇವರೆಲ್ಲರೂ ಐನ್‌ಸ್ಟೈನರನ್ನು ಭೇಟಿ ಮಾಡಿ ವಿಚಾರವಿನಿಮಯ ಮಾಡಿಕೊಂಡರು. ಅಂದಿನ ಸಮಾಜದಲ್ಲಿ ಗಣ್ಯಸ್ಥಾನವನ್ನು ಗಳಿಸಿದ್ದ ಲಾಯಿಡ್ ಜಾರ್ಜ ಮತ್ತು ಕ್ಯಾಂಟರ್‌ಬರಿಯ ಆರ್ಚ ಬಿಷಪ್ – ಇವರುಗಳು ಐನ್‌ಸ್ಟೈನರೊಂದಿಗೆ ಸಂಭಾಷಣೆ ನಡೆಸಿ ಅವರ ಮನೋಧರ್ಮವನ್ನು ಅರಿತುಕೊಂಡರು. ಅವರೆಲ್ಲರೂ ಐನ್‌ಸ್ಟೈನರ ವಿಚಾರ ಧೋರಣೆಯನ್ನೂ ಸರಳತೆಯನ್ನೂ ಮೆಚ್ಚಿಕೊಂಡರು.

ಐನ್‌ಸ್ಟೈನರನ್ನು ಇಂಗ್ಲೆಂಡಿಗೆ ಬರಮಾಡಿಕೊಂಡಿದ್ದ ಲಾರ್ಡ್ ಹಾಲ್ಡೇನರು ಒಮ್ಮೆ ಐನ್‌ಸ್ಟೈನರ ಗೌರವಾರ್ಥವಾಗಿ ಭೋಜನಕೂಟವನ್ನು ಏರ್ಪಡಿಸಿದ್ದರು. ಅದಕ್ಕೆ ಕ್ಯಾಂಟರ್‌ಬರಿಯ ಆರ್ಚ್ ಬಿಶಪ್ಪರೇ ಮುಂತಾದ ಗಣ್ಯ ವ್ಯಕ್ತಿಗಳು ಆಹ್ವಾನಿತರಾಗಿ ಹೋಗಿದ್ದರು. ಆರ್ಚ್ ಬಿಷಪ್ಪರಿಗೂ ಐನ್‌ಸ್ಟೈನರಿಗೂ ಪಕ್ಕ ಪಕ್ಕದಲ್ಲಿ ಆಸನಗಳನ್ನು ಏರ್ಪಡಿಸಲಾಗಿತ್ತು. ಆರ್ಚ್ ಬಿಷಪ್ಪರಿಗೆ ಮೊದಲಿನಿಂದಲೂ ಸಾಪೇಕ್ಷ ಸಿದ್ಧಾಂತದಲ್ಲಿ ಆಸಕ್ತಿ; ಆದರೆ ಅದನ್ನು ಅರ್ಥಮಾಡಿಕೊಳ್ಳಲು ಅವರು ಮಾಡಿದ ಪ್ರಯತ್ನಗಳೆಲ್ಲಾ ವಿಫಲವಾಗಿದ್ದವು. ಲಾರ್ಡ್ ಹಾಲ್ಡೇನರು ಏರ್ಪಡಿಸಿದ್ದ ಸಂತೋಷಕೂಟವು ಆರ್ಚ್ ಬಿಷಪ್ಪರಿಗೆ ಒಂದು ಸದವಕಾಶವನ್ನೊದಗಿಸಿ ಕೊಟ್ಟಿತು. ಪಕ್ಕದಲ್ಲೇ ಸಾಪೇಕ್ಷ ಸಿದ್ಧಾಂತದ ಕರ್ತೃವಿದ್ದಿದ್ದರಿಂದ ಬಿಷಪ್ಪರ ಆ ಸಿದ್ಧಾಂತದಲ್ಲಿ ತಮಗಿದ್ದ ಸಂಶಯಗಳೆಲ್ಲವನ್ನೂ ನಿವಾರಿಸಿಕೊಳ್ಳಲು ಅನುಕೂಲವಾಯಿತು. ಐನ್‌ಸ್ಟೈನರಿಗೂ ಬಿಷಪ್ಪರಿಗೂ ಔಪಚಾರಿಕವಾಗಿ ಆರಂಭವಾದ ಸಂಭಾಷಣೆ ಸ್ವಾಭಾವಿಕವಾಗಿ ಸಾಪೇಕ್ಷ ಸಿದ್ಧಾಂತದ ಕಡೆಗೆ ತಿರುಗಿತು. ಬಿಷಪ್ಪರು "ಐನ್‌ಸ್ಟೈನರೇ, ನೀವು ಪ್ರತಿಪಾದಿಸಿರುವ ಸಾಪೇಕ್ಷ ಸಿದ್ಧಾಂತಕ್ಕೂ ಧರ್ಮಕ್ಕೂ ಏನಾದರೂ ಸಂಬಂಧವಿದೆಯೇ?" ಎಂದು ಪ್ರಶ್ನೆ ಹಾಕಿದರು. ಇದಕ್ಕೆ ಐನ್‌ಸ್ಟೈನರು "ಏನೂ ಇಲ್ಲ; ನನ್ನ ಸಿದ್ಧಾಂತವು ಕೇವಲ ಭೌತವಿಜ್ಞಾನಕ್ಕೆ ಸಂಬಂಧಿಸಿದ್ದು. ಆದ್ದರಿಂದ ಧರ್ಮಕ್ಕೆ ಸಂಬಂಧಪಟ್ಟ ಯಾವ ವಿಷಯವೂ ನನ್ನ ಸಿದ್ಧಾಂತದಲ್ಲಿ ಅಡಗಿಲ್ಲ" ಎಂದರು. ಈ ಉತ್ತರದಿಂದ ಲಾರ್ಡ್ ಹಾಲ್ಡೇನರಿಗೆ ತುಂಬಾ ನಿರಾಶೆಯುಂಟಾಗಿರಬೇಕು. ಏಕೆಂದರೆ, ಸಾಪೇಕ್ಷ ಸಿದ್ಧಾಂತದ ಆಧಾರದ ಮೇಲೆ ತತ್ವಶಾಸ್ತ್ರದ ವಿವಿಧ ಸಿದ್ಧಾಂತಗಳನ್ನೂ, ಧರ್ಮದ ಸ್ವರೂಪವನ್ನೂ ಪರೀಕ್ಷಿಸಬಹುದೆಂದು ಅವರು ಎಣಿಸಿದ್ದರು.

ಐನ್‌ಸ್ಟೈನರ ಭೇಟಿಯಿಂದ ಮತ್ತಾವ ಪ್ರಯೋಜನವಾಗದಿದ್ದರೂ ಜರ್ಮನಿ–ಇಂಗ್ಲೆಂಡ್‌ಗಳ ಪಂಡಿತೋತ್ತಮರ ಸಂಬಂಧ ಕುದುರಿತು. ಸ್ವಲ್ಪಮಟ್ಟಿಗಾದರೂ ಈ ಎರಡು ದೇಶಗಳ ಸಾಂಸ್ಕೃತಿಕ ಸಂಬಂಧ ಬೆಳೆಯಿತು. ಅಷ್ಟರಮಟ್ಟಿಗೆ ಐನ್‌ಸ್ಟೈನರ ಶಾಂತಿ ಸಂದೇಶ ಪರಿಣಾಮಕಾರಿಯಾಯಿತು.

## ಫ್ರಾನ್ಸಿಗೆ ಭೇಟಿ

ಐನ್‌ಸ್ಟೈನರು ಇಂಗ್ಲೆಂಡಿಗೆ ಹೋದದ್ದು ಪೂರ್ವ ವಿಶ್ವಾಸಾಂಧರಾದ ಜರ್ಮನರು ಅವರನ್ನು ತೆಗಳಲು ಎಡೆಗೊಟ್ಟಿತ್ತು. ಜರ್ಮನಿಯಲ್ಲಿನ ಸಾಮಾನ್ಯ ಜನರು ಇಂಗ್ಲೀಷರನ್ನು

ಪಶುದೆಸೆಯಲ್ಲಿರುವ ಅಸಂಸ್ಕೃತರೆಂದೂ ಸುಸಂಸ್ಕೃತರಾದ ಜರ್ಮನರ ಶತ್ರುಗಳೆಂದೂ ಭಾವಿಸಿದ್ದರು. ಈ ಭಾವನೆ ಜನರಲ್ಲಿ ಹರಡಲು ಸ್ವಾರ್ಥಪರರಾದ ಕೆಲವರು ಮಾಡುತ್ತಿದ್ದ ಅಪಪ್ರಚಾರವೇ ಕಾರಣ. ಜರ್ಮನಿ ಮತ್ತು ಇಂಗ್ಲೆಂಡ್‌ಗಳು ಸದಾ ಹಗೆತನದಿಂದ ಇರಬೇಕೆಂಬುದು ಅವರ ಬಯಕೆಯಾಗಿದ್ದಿತು. ಜರ್ಮನಿ—ಇಂಗ್ಲೆಂಡುಗಳು ಈ ರೀತಿಯಲ್ಲಿ ದ್ವೇಷವನ್ನು ಕಾರುತ್ತಿದ್ದರೆ, ಸಮಯ ನೋಡಿ ಯುದ್ಧದ ಬೆಂಕಿ ಹಚ್ಚಿ, ತಾವು ಯುದ್ಧೋಪಕರಣಗಳನ್ನು ಮಾರಿ ಅತಿ ಲಾಭಗಳಿಸಬಹುದೆಂದು ಆ ನೀಚ ಜನರ ಎಣಿಕೆ ಆಗಿತ್ತು. ಇಂಗ್ಲೆಂಡಿನ ಪಂಡಿತ ವರ್ಗವು ಐನ್‌ಸ್ಟೈನರನ್ನು ಅತ್ಯಾದರದಿಂದ ಬರಮಾಡಿಕೊಂಡಿದ್ದು ಆ ಕುಹಕಿಗಳಿಗೆ ಆಶಾಭಂಗವನ್ನುಂಟು ಮಾಡಿತ್ತು. ಆದರೆ ಈ ಆಶಾಭಂಗ ಅವರ ಅಪಪ್ರಚಾರದ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡಲಿಲ್ಲ. 'ಇಂಗ್ಲೆಂಡೇನೋ ಆಯಿತು; ಜರ್ಮನಿಯ ಬದ್ಧ ವೈರಿಯಾದ ಫ್ರಾನ್ಸಿಗೆ ಭೇಟಿ ಕೊಟ್ಟು ಈ ಶಾಂತಿವಾದಿ ಗೌರವದಿಂದ ಹಿಂದಿರುಗಲಿ, ಆಗ ನೋಡೋಣ' ಎಂದು ಸವಾಲು ಹಾಕಲಾರಂಭಿಸಿದರು. ಮೌನಪ್ರಿಯರಾದ ಐನ್‌ಸ್ಟೈನರು ಪ್ರತಿ ಸವಾಲು ಹಾಕಲು ಸಿದ್ಧರಿರಲಿಲ್ಲ. ಏಕಾಂಗಿಯಾಗಿ ಲಂಕೆಗೆ ಹೋಗಿ ಧರ್ಮ ಪ್ರಸಾರ ಮಾಡಿದ ಹನುಮಂತನಂತೆ, ಶತ್ರುಪಾಳ್ಯಕ್ಕೆ ಹೋಗಿ ಶಾಂತಿ ಪ್ರಸಾರ ಮಾಡಲು ಐನ್‌ಸ್ಟೈನರು ಹಿಂಜರಿಯಲಿಲ್ಲ. ಅಂಥ ಸಂದರ್ಭವನ್ನು ಎದುರುನೋಡುತ್ತಿದ್ದರು.

ಐನ್‌ಸ್ಟೈನ್ ಫ್ರಾನ್ಸಿಗೆ ಹೋಗಲು ಇದ್ದ ತೊಡರುಗಳಾದರೂ ಯಾವುವು? ಯುದ್ಧದಲ್ಲಿ ಫ್ರಾನ್ಸ್ ಮತ್ತು ಜರ್ಮನಿಗಳು ಕಕ್ಷಿ-ಪ್ರತಿಕಕ್ಷಿಗಳಾಗಿ ಕಾದಾಡಿದ್ದು ತಾನೆ? ಈ ಯುದ್ಧ ನಡೆಯಲು ಜರ್ಮನಿ ಮತ್ತು ಇಂಗ್ಲೆಂಡ್-ಫ್ರಾನ್ಸ್ ಜನಾಂಗಗಳ ಪರಸ್ಪರ ದ್ವೇಷವೇ ಕಾರಣವಾಗಿತ್ತು. ಕೆಲವು ಸ್ವಾರ್ಥಪರರಿಂದ ಪೋಷಿಸಲ್ಪಟ್ಟ ಈ ವಿಷವೃಕ್ಷವನ್ನು ಬೇರುಸಹಿತ ತೆಗೆದುಹಾಕಿದರೆ ಸಮರವೆಲ್ಲಿ ಬಂತು? ಸತ್ಯಾಗ್ರಹಿಯಾದವನು ಜನಮನದಲ್ಲಿ ಬೇರು ಬಿಟ್ಟಿದ್ದ ವಿಷವೃಕ್ಷವನ್ನು ಕಿತ್ತುಹಾಕಲು ಹಿಂದು ಮುಂದು ನೋಡುವನೇ !

ಎಲ್ಲ ಜನಾಂಗಗಳ ಹಿತವನ್ನು ಹಾರೈಸುತ್ತಿದ್ದ ಐನ್‌ಸ್ಟೈನರಂಥ ಮಾನವ ಶ್ರೇಷ್ಠರು ಫ್ರಾನ್ಸ್‌ನಲ್ಲಿ ಇಲ್ಲದಿರಲಿಲ್ಲ. ಆದರೆ ಅವರ ಸಂಖ್ಯೆ ಸ್ವಾಭಾವಿಕವಾಗಿ ಕಡಿಮೆಯಾಗಿತ್ತು. ಐನ್‌ಸ್ಟೈನರನ್ನು ತಮ್ಮ ದೇಶಕ್ಕೆ ಬರಮಾಡಿಕೊಂಡು ಅವರೊಡನೆ ವಿಚಾರ ವಿನಿಮಯ ಮಾಡಿಕೊಳ್ಳಲು ಈ ಮಹನೀಯರು ಹವಣಿಸುತ್ತಿದ್ದರು. ಐನ್‌ಸ್ಟೈನರ ಆಗಮನದಿಂದ ಅವರ ಶಾಂತಿವಾದವು ಫ್ರಾನ್ಸಿನ ಸಾಮಾನ್ಯ ಜನರಲ್ಲಿ ಹಬ್ಬುತ್ತದೆಂದು ಅವರ ನಂಬಿಕೆ. ಹೀಗೆ ಐನ್‌ಸ್ಟೈನರನ್ನು ಬರಮಾಡಿಕೊಳ್ಳುವುದರಲ್ಲಿ ಮುಖ್ಯಸ್ಥರಾದವರು ಗಣಿತ ಶಾಸ್ತ್ರ ವಿಶಾರದ ಪೇಯಿನ್‌ಲೀವ್ ಮತ್ತು ಭೌತಶಾಸ್ತ್ರಜ್ಞ ಲಾಂಜೆವಿನ್. ಪೇಯಿನ್‌ಲೀವ್ ಮೊದಲನೆ ಮಹಾಯುದ್ಧದ ಕಾಲದಲ್ಲಿ ಫ್ರಾನ್ಸಿನ ಯುದ್ಧಮಂತ್ರಿಯಾಗಿದ್ದನು. ಸ್ವಲ್ಪ ಕಾಲದ ಮೇಲೆ ಆ ದೇಶದ ರಾಷ್ಟ್ರಾಧ್ಯಕ್ಷನಾದನು. ಇಂಥ ರಾಜಕಾರಣಿ ಶಾಂತಿವಾದವನ್ನು ಪ್ರಸಾರ ಮಾಡಲು ಟೊಂಕಕಟ್ಟಿ ನಿಂತಿದ್ದು ಆಶ್ಚರ್ಯವೇ ಸರಿ ! ಯುದ್ಧದಿಂದಾಗುವ ದುಷ್ಪರಿ

ಣಾಮಗಳು ಯುದ್ಧಮಂತ್ರಿಯಾದ ಪೇಯಿನ್‌ಲೀವ್‌ಗೆ ಚೆನ್ನಾಗಿ ಮನದಟ್ಟಾಗಿರಬೇಕು. ಮಾನವನನ್ನು ಕಟುಕನನ್ನಾಗಿ ಮಾಡುವ ಪರಿಸ್ಥಿತಿಯನ್ನು ಕಂಡು ಆತನ ಮನಸ್ಸು ತುಂಬ ನೊಂದಿರಬೇಕು. ಈ ಪಶ್ಚಾತ್ತಾಪವೇ ಪ್ರಾಯಶಃ ಅವನು ಶಾಂತಿವಾದಿಯಾಗಲು ಕಾರಣವಿರಬಹುದು. ಇಂಥ ನಾಲ್ಕಾರು ಮಹನೀಯರ ಯತ್ನದ ಫಲವಾಗಿ ಕಾಲೇಜ್-ಡಿ-ಫ್ರಾನ್ಸ್ ಸಂಸ್ಥೆಯಿಂದ ಐನ್‌ಸ್ಟೈನರಿಗೆ ಆಹ್ವಾನ ಹೋಯಿತು.

ಕಾಲೇಜ್-ಡಿ-ಫ್ರಾನ್ಸ್ ಇಡೀ ರಾಷ್ಟ್ರದಲ್ಲೇ ಹೆಸರಾಂತ ವಿದ್ಯಾಸಂಸ್ಥೆ. ಮೇಲೆ ಹೇಳಿದ ಲಾಂಜೆವಿನ್ ಅದರ ಅಧ್ಯಕ್ಷ. ಕಾಲೇಜ್-ಡಿ-ಫ್ರಾನ್ಸ್‌ದಂಥ ರಾಷ್ಟ್ರಸಂಸ್ಥೆಯೊಂದರಿಂದ ಐನ್‌ಸ್ಟೈನರಿಗೆ ಆಹ್ವಾನ ಹೋದದ್ದು ಅನೇಕರಿಗೆ ಸರಿ ಬೀಳಲಿಲ್ಲ. ರಾಜಕೀಯ ವಲಯದಲ್ಲಿ ಸಾಕಷ್ಟು ಪ್ರಭಾವ ಗಳಿಸಿದ್ದ ಆ ಜನರು ಫ್ರಾನ್ಸಿಗೆ ಅನೇಕರು ಬಾರದಂತೆ ಅಡ್ಡಿಗಳನ್ನು ತರುತ್ತಿದ್ದರು. ಹೀಗೆಯೇ ಜರ್ಮನಿಯಲ್ಲಿನ ಕೆಲವರು ಐನ್‌ಸ್ಟೈನರು ಫ್ರಾನ್ಸಿಗೆ ಹೋಗುವುದನ್ನು ತಪ್ಪಿಸಲೆತ್ನಿಸಿದರು. ದ್ವೇಷ, ಮಾತ್ಸರ್ಯ ಮುಂತಾದ ದೌರ್ಬಲ್ಯಗಳನ್ನು ದಮನ ಮಾಡಿದ್ದ ಲಾಂಜೆವಿನ್ ಮತ್ತು ಐನ್‌ಸ್ಟೈನರ ಮುಂದೆ ಈ ಕುತಂತ್ರಗಳು ನಡೆಯಲಿಲ್ಲ. ೧೯೨೨ನೇ ಮಾರ್ಚಿ ತಿಂಗಳ ಕೊನೆಯಲ್ಲಿ ಐನ್‌ಸ್ಟೈನರು ಫ್ರಾನ್ಸಿಗೆ ಭೇಟಿಕೊಡುವುದಾಗಿ ನಿಶ್ಚಯವಾಯಿತು.

ಐನ್‌ಸ್ಟೈನರು ಫ್ರಾನ್ಸಿನಿಂದ ಬಂದ ಆಹ್ವಾನವನ್ನು ಒಪ್ಪಿದ ಶಾಸ್ತ್ರವೇನೋ ಆಯಿತು. ಇದರಿಂದ ಆಹ್ವಾನಿಸಿದವರಿಗೆ ಒಂದು ಸಮಾಧಾನವೂ ಆಯಿತು. ಆದರೆ ಅವರ ಮನಸ್ಸು ಕಳವಳದಿಂದ ದೂರವಾಗಲಿಲ್ಲ. ದೇಶ ಭಕ್ತಿಯ ಅತಿರೇಕದಲ್ಲಿ ಯಾವನಾದರೂ ದುರಾತ್ಮ ಐನ್‌ಸ್ಟೈನರ ಪ್ರಾಣಕ್ಕೆ ಅಪಾಯ ತರಬಹುದೇನೋ ಎಂಬ ಭಯ ವ್ಯವಸ್ಥಾಪಕರ ಮನಸ್ಸಿನಲ್ಲಿತ್ತು. ಐನ್‌ಸ್ಟೈನರನ್ನು ಕರೆತರುವ ಜವಾಬ್ದಾರಿ ಹೊತ್ತಿದ್ದ ಮುಖ್ಯಸ್ಥರು ಫ್ರಾನ್ಸಿನ ಗಡಿಯಿಂದ ಅವರನ್ನು ಕರೆತರುವ ಏರ್ಪಾಡಾಯಿತು. ಹಾಗೆ ಮಾಡುವದರಿಂದ ಐನ್‌ಸ್ಟೈನರಿಗೆ ತಕ್ಕ ರಕ್ಷಣೆ ದೊರಕುವದೆಂದು ವ್ಯವಸ್ಥಾಪಕರು ಬಗೆದಿದ್ದರು. ವಿಶ್ವವಿದ್ಯಾನಿಲಯಗಳಲ್ಲಿ ಪಾಠ ಹೇಳುತ್ತಿರುವ ಜನ ಅಂಗರಕ್ಷಕರಾಗಿ ನಿಂತು ಮತ್ತೊಬ್ಬ ವಿಶಾರದನನ್ನು ದೂರಪ್ರದೇಶದಿಂದ ಕರೆದುಕೊಂಡು ಬಂದ ವಿಚಿತ್ರ ಸಂದರ್ಭ ಪ್ರಾಯಶಃ ಮತ್ತೆಲ್ಲಿಯೂ ಕಂಡು ಬರದು! ಅತಿಥಿಯಾದವನಿಗಾದರೂ ಈ ಜನರಿಂದ ಎಂಥ ರಕ್ಷಣೆ ದೊರಕೀತು ? ಅಂತೂ ಲಾಂಜೆವಿನ್ನರು ತಮ್ಮ ಸಹೋದ್ಯೋಗಿಯೊಬ್ಬನೊಡನೆ ಫ್ರಾನ್ಸ್-ಬೆಲ್ಜಿಯಂ ಗಡಿಗೆ ಹೋಗಿ ಐನ್‌ಸ್ಟೈನರನ್ನು ಕರೆತಂದರು. ಖಗೋಳ ಶಾಸ್ತ್ರಜ್ಞನಾದ ಚಾರ್ಲಸ್ ಕಾರ್ಡ್‌ಮನ್ ಎಂಬುವನೇ ಐನ್‌ಸ್ಟೈನರ ಮತ್ತೊಬ್ಬ ಅಂಗರಕ್ಷಕನಾಗಿದ್ದನು !

ಐನ್‌ಸ್ಟೈನರನ್ನು ಪ್ಯಾರಿಸ್ಸಿಗೆ ಕರೆತರುವಾಗ ಒಂದು ವಿನೋದ ಪ್ರಸಂಗ ನಡೆಯಿತು. ಅವರ ಆಗಮನದಿಂದ ಪ್ಯಾರಿಸ್ಸಿನಲ್ಲೇನಾದರೂ ಗಲಭೆಯುಂಟಾಗುವ ಸಂಭವವಿದೆಯೇ ಎಂಬುದನ್ನು ಪರೀಕ್ಷಿಸಿ ಆಗಾಗ ತಿಳಿಸಬೇಕೆಂದು ಲಾಂಜೆವಿನ್ ಪೋಲೀಸರಿಗೆ ಸೂಚನೆಯಿತ್ತಿದ್ದರು. ಅದರಂತೆ ಅವರಿಗೆ ಪ್ರತಿಕ್ಷಣವೂ ಸಮಾಚಾರ ಬರುತ್ತಿತ್ತು. ಕೊನೆಯಲ್ಲಿ ಬಂದ ತಾರು

(Telegram)

ಪ್ಯಾರಿಸ್ ನಿಲ್ದಾಣದಲ್ಲಿ ದೊಡ್ಡ ಗುಂಪು ಸೇರಿದೆ ಎಂಬ ಸುದ್ದಿಯನ್ನು ತಂದಿತು. ಆಗ ಐನ್‌ಸ್ಟೈನರೂ ಅವರ ಮಿತ್ರರೂ ಪ್ಯಾರಿಸ್ಸಿನಿಂದ ಕೇವಲ ನಾಲ್ಕಾರು ಮೈಲುಗಳಷ್ಟು ದೂರದಲ್ಲಿದ್ದರು. ಗಾಬರಿಗೊಂಡ ಲಾಂಜೆವಿನ್ನರು ಕೂಡಲೇ ರೈಲನ್ನು ನಿಲ್ಲಿಸಿ ಐನ್‌ಸ್ಟೈನ ರನ್ನು ಬಿಡಾರಕ್ಕೆ ಕರೆದುಕೊಂಡು ಹೋಗಿಬಿಟ್ಟರು ಪ್ಯಾರಿಸ್ ನಿಲ್ದಾಣದಲ್ಲಿ ಸೇರಿದ್ದ ಜನರು ಐನ್‌ಸ್ಟೈನರಿಗಾಗಿ ಕಾದು ಕಾದು ಸಾಕಾಗಿ ಹತಾಶರಾಗಿ ತಮ್ಮ ಮನೆಗಳಿಗೆ ತೆರಳಿದರು. ಅವರು ಗುಂಪು ಸೇರಿದ್ದುದು ಐನ್‌ಸ್ಟೈನರನ್ನು ವೈಭವದಿಂದ ಬರಮಾಡಿಕೊಳ್ಳುವುದಕ್ಕೋಸ್ಕರ; ಗುಂಪಿನ ಯಜಮಾನ ಲಾಂಜೆವಿನ್ನರ ಮಗ! ಐನ್‌ಸ್ಟೈನರಿಗೆ ಅವ ಮರ್ಯಾದೆ ಮಾಡುವ ಉದ್ದೇಶದಿಂದ ಸೇರಿದ ಗುಂಪಾಗಿರಲಿಲ್ಲ ಅದು.

೧೯೨೨ನೆಯ ಮಾರ್ಚಿ ೩೧ನೇ ತಾರೀಖು ಕಾಲೇಜ್-ಡಿ-ಫ್ರಾನ್ಸಿನ ಸಭಾಂಗಣದಲ್ಲಿ ಐನ್‌ಸ್ಟೈನರು ಭಾಷಣ ಮಾಡಿದರು. ಭಾಷಣದ ಮಧ್ಯೆ ಗೊಂದಲವುಂಟಾಗುವ ಸಂಭವವಿದ್ದುದರಿಂದ ವ್ಯವಸ್ಥಾಪಕರಾದ ಪೇಯಿನ್ ಲೀವ್ ಮತ್ತು ಲಾಂಜೆವಿನ್ನರು ಸಾಕಷ್ಟು ಎಚ್ಚರಿಕೆಯನ್ನು ತೆಗೆದುಕೊಂಡಿದ್ದರು. ಸಭಾಭವನದೊಳಕ್ಕೆ ಪ್ರವೇಶವನ್ನು ಮಿತಿಗೊಳಿಸಲಾಗಿದ್ದಿತು; ಟಿಕೆಟ್ ಪಡೆದವರು ಮಾತ್ರ ಅಲ್ಲಿಗೆ ಕಾಲಿಡಲು ಸಾಧ್ಯವಾಗಿದ್ದಿತು. ಈ ವ್ಯವಸ್ಥೆಯಿಂದ ಸದುದ್ದೇಶವನ್ನು ಹೊಂದಿದ್ದ ಪ್ಯಾರಿಸ್ ನಾಗರೀಕರನೇಕರು ಐನ್‌ಸ್ಟೈನರ ಮಾತುಗಳನ್ನು ಕೇಳಲು ಸಾಧ್ಯವಾಗಲಿಲ್ಲ. ಈ ವ್ಯವಸ್ಥೆಯು ಅಸಾಧುವಾದುದ್ದಾದರೂ ಆ ಸಂದರ್ಭದಲ್ಲಿ ಅನಿವಾರ್ಯವಾಗಿತ್ತು.

ಆ ದಿನದ ಸಭೆಗೆ ಬಂದವರಲ್ಲಿ ಬಹು ಮುಖ್ಯರಾದವರು ಮೇಡಂ ಕ್ಯೂರಿ, ಹೆನ್ರಿ ಬರ್ಗ್‌ಸನ್ ಮತ್ತು ರಾಜಕುಮಾರ ರೋಲೆಂಡ್ ಬೋನಪಾರ್ಟೆ. ಮೇಡಂ ಕ್ಯೂರಿ ಭೌತಶಾಸ್ತ್ರಕ್ಕಾಗಿ ತನ್ನ ಸರ್ವ ಸುಖವನ್ನೂ ವರ್ಜಿಸಿದ್ದ ತಪಸ್ವಿನಿಯಾಗಿದ್ದಳು. ಬರ್ಗ್‌ಸನ್ ವಿಶ್ವದಲ್ಲೇ ಹೆಸರುಗಳಿಸಿದ್ದ ತಾತ್ವಿಕ. ರೋಲೆಂಡ್ ಬೋನಾಪಾರ್ಟೆ ಸಮಾಜದಲ್ಲಿ ಮಾನ್ಯತೆಗಳಿಸಿದ್ದವನು. ನೆಪೋಲಿಯನ್ ಬೋನಾಪಾರ್ಟೆಯ ವಂಶಸ್ಥ. ಐನ್‌ಸ್ಟೈನರು ಫ್ರೆಂಚ್ ಭಾಷೆಯಲ್ಲಿನ ಹೆಚ್ಚಿನ ಪಾಂಡಿತ್ಯವನ್ನು ಹೊಂದಿದ್ದರು. ಇದರಿಂದ ಅವರು ತಮ್ಮ ಭಾವನೆಗಳನ್ನು ಆ ಗಣ್ಯಸಭೆಗೆ ಸುಲಭವಾಗಿಯೂ ಮತ್ತು ಪರಿಣಾಮಕಾರಿಯಾಗಿಯೂ ತಿಳಿಸಲು ಸಾಧ್ಯವಾಯಿತು.

ಈ ಸಾರ್ವಜನಿಕ ಸಮಾರಂಭವಲ್ಲದೆ, ಅನೇಕ ಗಣಿತ ಮತ್ತು ವೈಜ್ಞಾನಿಕ ಸಂಘಗಳ ಆಶ್ರಯದಲ್ಲಿ ಅವರ ಭಾಷಣಗಳು ನಡೆದವು. ಭಾಷಣ ಮುಗಿದ ಮೇಲೆ ಐನ್‌ಸ್ಟೈನರು ಸಭಾಸದರನ್ನು ಪ್ರಶ್ನೆಗಳನು ಹಾಕುವಂತೆ ಬಿನ್ನವಿಸಿಕೊಳ್ಳುತ್ತಿದ್ದರು. ಬಂದ ಪ್ರಶ್ನೆಗಳಿಗೆಲ್ಲಾ ಶಾಂತರೀತಿಯಿಂದ ಉತ್ತರ ಕೊಡುವದು ಅವರ ವೈಶಿಷ್ಟ್ಯವಾಗಿತ್ತು. ಈ ಪದ್ಧತಿಯಿಂದ ಜನರ ಮನಸ್ಸಿನಲ್ಲಿ ಮೂಡಿದ್ದ ಅನೇಕ ಸಂಶಯಗಳು ನಿವಾರಣೆಯಾಗಲು ಅನುಕೂಲವಾಯಿತು. ಈ ಭಾಷಣಮಾಲೆಯಿಂದ ಫ್ರೆಂಚ್ ವಿದ್ವಾಂಸರು ಜರ್ಮನ್ ಪಂಡಿತರನ್ನು ಗೌರವದಿಂದ

ಕಾಣುವಂತಾಯಿತು; ಹೆಚ್ಚಲ್ಲದಿದ್ದರೂ ಸ್ವಲ್ಪ ಮುಂದಿಯಾದರೂ ವೈಜ್ಞಾನಿಕ ಪ್ರಪಂಚದಲ್ಲಿ ರಾಜಕೀಯ ದ್ವೇಷವನ್ನು ಬೆಳೆಸಬಾರದೆಂದು ನಿಶ್ಚೈಸಿಕೊಂಡರು.

ಕಾಲೇಜ್-ಡಿ-ಫ್ರಾನ್ಸಿನಂಥ ವಿದ್ಯಾಸಂಸ್ಥೆಗಳು ಐನ್‌ಸ್ಟೈನರನ್ನು ಪುರಸ್ಕರಿಸುತ್ತಿದ್ದರೆ ಇಡೀ ರಾಷ್ಟ್ರಕ್ಕೆ ದೊಡ್ಡ ಸಂಸ್ಥೆಯಾದ ಫ್ರೆಂಚ್ ಅಕಾಡಮಿ ವಿಚಿತ್ರ ಧೋರಣೆಯನ್ನು ತಾಳಿತು. ಜರ್ಮನಿಯು ಲೀಗ್ ಆಫ್ ನೇಷನ್ಸ್ ಸಂಸ್ಥೆಯ ಸದಸ್ಯ ರಾಷ್ಟ್ರವಲ್ಲದ್ದರಿಂದ ಅಲ್ಲಿಯ ಪ್ರಜೆಯನ್ನು ಸತ್ಕರಿಸುವುದು ಅಕಾಡಮಿಯ ನೀತಿನಿಯಮಗಳಿಗೆ ವಿರುದ್ಧವಾದುದೆಂದು ಆ ಸಂಸ್ಥೆ ಹೇಳತೊಡಗಿತು. ಈ ವಿಚಿತ್ರವಾದವನ್ನು ಕೇಳಿ ಕೋಪಗೊಂಡ ಒಂದು ಪತ್ರಿಕೆ ಹೀಗೆ ಟೀಕೆ ಮಾಡಿತು; "ಯಾರಾದರೂ ಜರ್ಮನ್ ವೈದ್ಯನೊಬ್ಬನು ಉದರವ್ರಣ (Cancer)ಕ್ಕೋ, ಕ್ಷಯರೋಗಕ್ಕೋ ಮದ್ದನ್ನು ಕಂಡುಹಿಡಿದರೆ ಆ ಔಷಧವನ್ನು ಬಳಸಲು ಜರ್ಮನಿ ಲೀಗ್ ಸದಸ್ಯತ್ವವನ್ನು ಪಡೆಯುವ ತನಕ ಅಕಾಡಮಿ ಸದಸ್ಯರು ಕಾಯುವರೇ?"

ಐನ್‌ಸ್ಟೈನರ ಪ್ರವಾಸದಿಂದ ಒಂದು ವಿಷಯ ಖಚಿತವಾಯಿತು; ಐನ್‌ಸ್ಟೈನರ ಸಾಪೇಕ್ಷ ಸಿದ್ಧಾಂತವನ್ನು ಜನ ಟೀಕಿಸಲು ಮುಖ್ಯಕಾರಣ ರಾಜಕೀಯ ಸಂಬಂಧವಾದುದೆಂಬುದು. ಸಾಪೇಕ್ಷ ಸಿದ್ಧಾಂತದ ವಿಷಯವಾಗಿ ಹೊರಟ ನಾನಾ ವಿಧವಾದ ಟೀಕೆಗಳಿಗೆ ಐನ್‌ಸ್ಟೈನರ ವ್ಯಕ್ತಿತ್ವವಾಗಲೀ, ಸಿದ್ಧಾಂತದಲ್ಲಿನ ಲೋಪದೋಷಗಳಾಗಲೀ ಕಾರಣಗಳಾಗಿರಲಿಲ್ಲ.

ಫ್ರಾನ್ಸಿನ ಜನಸಾಮಾನ್ಯರು ಐನ್‌ಸ್ಟೈನರನ್ನು ಆಹ್ವಾನಿಸಿದ ಮುಖಂಡರನ್ನು ತರಾಟೆಗೆ ತೆಗೆದುಕೊಂಡರು. ಅವರನ್ನು ಸತ್ಕರಿಸಿದ ಸಂಸ್ಥೆಗಳಿಗೂ ನಿಂದೆಯ ಸುರಿಮಳೆಯಾಯಿತು. ಅಂತೆಯೇ, ಶತ್ರುದೇಶವಾದ ಫ್ರಾನ್ಸಿಗೆ ಹೋದದ್ದಕ್ಕಾಗಿ ಐನ್‌ಸ್ಟೈನರಿಗೆ ತಮ್ಮ ದೇಶಬಾಂಧವರಿಂದ ಬಹಿಷ್ಕಾರವಾಯಿತು. ಫ್ರಾನ್ಸಿನಿಂದ ಹಿಂದಿರುಗಿದ ಮೇಲೆ ಐನ್‌ಸ್ಟೈನರು ಪ್ರಷ್ಯನ್ ಅಕಾಡಮಿಯ ಸಭೆಗೆ ಹೋದಾಗ ತಮ್ಮ ಸುತ್ತಮುತ್ತಲಿದ್ದ ಆಸನಗಳೆಲ್ಲಾ ಬರಿದಾಗಿದ್ದುದನ್ನು ಕಂಡರು. ಶತ್ರು ದೇಶಕ್ಕೆ ಹೋದದ್ದರಿಂದ ಅಸ್ಪೃಶ್ಯರಾದುದೇ ಈ ಪರಿಸ್ಥಿತಿಗೆ ಕಾರಣವೆಂದು ಅವರಿಗೆ ಆಮೇಲೆ ತಿಳಿಯಿತು. ಶತ್ರು ರಾಷ್ಟ್ರಕ್ಕೆ ಕಾಲಿಟ್ಟೊಡನೆಯೇ ಮೈಲಿಗೆಯಾಗುವುದೆಂದು ತಿಳಿದಿದ್ದ ಜರ್ಮನ್ ವೈಜ್ಞಾನಿಕರ ಮಧ್ಯೆ ಈ ಅಸ್ಪೃಶ್ಯ ಹೇಗೆ ತಾನೆ ಬಾಳಿಯಾನು ?

## ಪ್ರಾಚ್ಯ ದೇಶಗಳಲ್ಲಿ ಸುತ್ತಾಟ

ಐನ್‌ಸ್ಟೈನರು ಫ್ರಾನ್ಸ್ ದೇಶಕ್ಕೆ ಯಾವ ವರ್ಷ ಪ್ರವಾಸ ಹೊರಟರೋ ಅದೇ ವರ್ಷದಲ್ಲಿ ಅವರಿಗೆ ಚೀನಾ ಮತ್ತು ಜಪಾನ್ ರಾಷ್ಟ್ರಗಳಿಂದ ಆಹ್ವಾನ ಬಂತು. ಪೌರ್ವಾತ್ಯ ಜನಗಳ ಜೀವನವನ್ನು ಪರಿಚಯಮಾಡಿಕೊಳ್ಳಲು ಅತ್ಯಾಸಕ್ತಿಯನ್ನು ಹೊಂದಿದ್ದ ಅವರು ಈ ಕರೆಗೆ ಕೂಡಲೆ ಓಗೊಟ್ಟರು. ಫ್ರಾನ್ಸಿನಿಂದ ಹಿಂತಿರುಗಿದ ಸ್ವಲ್ಪ ದಿನಗಳಲ್ಲೇ ಪ್ರಾಚ್ಯ ದೇಶಗಳಿಗೆ ಪ್ರಯಾಣ ಮಾಡಲು ಅಣಿ ಮಾಡಿಕೊಂಡರು. ೧೯೨೨ನೇ ನವಂಬರ್ ೧೭ನೆಯ ತಾರೀಖು ಐನ್‌ಸ್ಟೈನರನ್ನು ಹೊತ್ತ ಹಡಗು ಷಾಂಘೈ ರೇವನ್ನು ತಲುಪಿತು. ಜಪಾನೀಯರು ಐನ್‌ಸ್ಟೈನರನ್ನು ಅತಿ ಸಂಭ್ರಮದಿಂದ ಬರಮಾಡಿಕೊಂಡರು. ಜಪಾನಿನಲ್ಲಿ ನೆಲೆಸಿದ್ದ

ಜರ್ಮನ್ ದೇಶೀಯ ಪ್ರಮುಖರೆಲ್ಲರೂ ಐನ್‌ಸ್ಟೈನರನ್ನು ಬರಮಾಡಿಕೊಳ್ಳಲು ಬಂದರಿಗೆ ಬಂದಿದ್ದರು. ಜಪಾನಿನ ರಾಣಿ ಸ್ವತಃ ಬಂದು ದೇಶದ ಪ್ರಜೆಗಳ ಮತ್ತು ಸರಕಾರದ ಪರವಾಗಿ ಅವರನ್ನು ಸ್ವಾಗತಿಸಿದಳು.

ದೂರಪ್ರಾಚ್ಯದ ಜನಗಳ ಸರಳತೆ ಐನ್‌ಸ್ಟೈನರ ಮನಸ್ಸನ್ನು ಸೂರೆಗೊಂಡಿತು. ಆ ಜನರ ಅಭಿರುಚಿಯೂ, ಕಲೆ ಮತ್ತು ಸಂಗೀತಗಳಲ್ಲಿ ಅವರು ತೋರಿಸುತ್ತಿದ್ದ ಆಸಕ್ತಿಯೂ ಐನ್‌ಸ್ಟೈನರಿಗೆ ಮೆಚ್ಚಿಕೆಯಾದವು. ಅವರ ನಡೆ-ನುಡಿಗಳು ಐನ್‌ಸ್ಟೈನರಿಗೆ ಸಂತೋಷವನ್ನುಂಟುಮಾಡಿದುವು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಕಂಡುಬರುತ್ತಿದ್ದ ದ್ವೇಷಾಸೂಯೆಗಳಿಂದ ಈ ದೇಶಗಳು ದೂರವಾಗಿದ್ದುದರಿಂದ ಅಲ್ಲಿನ ವಾತಾವರಣ ಐನ್‌ಸ್ಟೈನರಿಗೆ ಅತ್ಯಂತ ಅಪ್ಯಾಯಮಾನವಾಗಿದ್ದಿತು. ಯಾವ ರಾಜಕೀಯ ವಿಷಪ್ರವಾಹದ ಸುಳಿಯೂ ಆ ದೇಶಗಳಲ್ಲಿಲ್ಲದಿದ್ದುದರಿಂದ ಅವರಿಗೆ ಶಾಂತಿ ದೊರೆಯಿತು. ಮನಸ್ಸು ನೆಮ್ಮದಿಯಿಂದಿರಲು ಸಾಧ್ಯವಾಯಿತು. ಪೌರ್ವಾತ್ಯರ ಭಾಷೆ ಅವರಿಗೆ ಅರ್ಥವಾಗುತ್ತಿದ್ದು ಅಲ್ಲಿನ ಸಂಗೀತ ಅವರಿಗೆ ಆಹ್ಲಾದಕರವಾಗಿ ಕಂಡುಬಂದಿದ್ದರೆ ಪ್ರಾಯಶಃ ಐನ್‌ಸ್ಟೈನರಿಗೆ ಚೀನಾ-ಜಪಾನ್ ದೇಶಗಳು ಆದರ್ಶ ರಾಷ್ಟ್ರಗಳಾಗಿ ಬಿಡುತ್ತಿದ್ದುವು !

ಪ್ರಾಚ್ಯ ದೇಶೀಯರ ಸರಳತೆಯನ್ನು ಕಂಡು ಐನ್‌ಸ್ಟೈನರು ಎಷ್ಟು ಮೆಚ್ಚಿಕೊಂಡರೋ, ಅವರ ದಾರಿದ್ರ್ಯವನ್ನು ಕಂಡು ಅಷ್ಟೇ ದುಃಖಿಗೊಂಡರು. ಹೊಟ್ಟೆಗೆ ಅನ್ನವಿಲ್ಲದೆ, ಮೈಗೆ ಬಟ್ಟೆಯಿಲ್ಲದೆ ಬೀದಿ-ಬೀದಿಗಳಲ್ಲಿ ಹೊರಳಾಡುತ್ತಿದ್ದ ಅನಾಥ ಹೆಂಗಸರು ಮಕ್ಕಳನ್ನು ಕಂಡು ಅವರಿಗೆ ಕರುಳು ಕಿವುಚಿದಂತಾಯಿತು. ಆ ನಿರ್ಭಾಗ್ಯರು ಬೇರೆ ದೇಶಗಳ ಗುಲಾಮರಾಗಿ ಬಾಳುತ್ತಿದ್ದುದನ್ನು ಕಂಡು ಅವರು ಸಿಡಿಗೊಂಡರು. ಸೌಜನ್ಯಶೀಲರಾದ ಆ ಜನರನ್ನು ದಾಸ್ಯದಲ್ಲಿಟ್ಟಿದ್ದ ಶ್ವೇತವರ್ಣೀಯರಲ್ಲಿ ಖತಿಗೊಂಡರು. ಸುಸಂಸ್ಕೃತರಾದ ಒಂದು ಜನಾಂಗವನ್ನು ಪಾಶವೀಬಲದಿಂದ ಗುಲಾಮಗಿರಿಯಲ್ಲಿಡುವ ಸರಕಾರಗಳು ನಾಗರಿಕವಾದವುಗಳೇ ಎಂಬ ಶಂಕೆ ಅವರ ಮನಸ್ಸಿನಲ್ಲಿ ಮೂಡಿತು. ಅಂಥ ಸರಕಾರಗಳ ವಿಷಯದಲ್ಲಿ ಒಂದು ವಿಧವಾದ ತಿರಸ್ಕಾರ ಭಾವನೆ ಬೆಳೆಯಿತು. ಸುಸಂಸ್ಕೃತವೂ ಆದರೆ ದುರ್ಬಲವೂ ಆದ ಜನಾಂಗಗಳಿಗೆ ಆಗುತ್ತಿದ್ದ ಅನ್ಯಾಯವನ್ನು ಕಂಡು ಒಳಗೊಳಗೇ ಕುದಿಯುತ್ತಿದ್ದ ಅವರ ಮನಸ್ಸು ಒಮ್ಮೆ ಜ್ವಾಲಾಮುಖಿಯಂತೆ ಸಿಡಿಯಿತು. ಪ್ರಾಚ್ಯ ರಾಷ್ಟ್ರಗಳ ವಿಷಯವಾಗಿ ಭಾಷಣ ಮಾಡಿದ ಸಂದರ್ಭದಲ್ಲಿ ಯುರೋಪಿನ ನಾಗರಿಕ ಸರಕಾರಗಳನ್ನು ಐನ್‌ಸ್ಟೈನರು ಈ ಮಾತುಗಳಲ್ಲಿ ಖಂಡಿಸಿದರು: "ತನ್ನ ರಕ್ತಶೋಷಣೆ ನಡೆಯುತ್ತಿದ್ದರೂ ಕೂಡ ಅದನ್ನು ಎದುರಿಸಲಾಗದಷ್ಟು ದುರ್ಬಲರಾದ ಜನಗಳಿಂದ ಯಾವ ರಾಷ್ಟ್ರವು ಕಪ್ಪಕಾಣಿಕೆಗಳನ್ನು ವಸೂಲ ಮಾಡುತ್ತದೆಯೋ ಅದಕ್ಕಿಂತ ನೀಚವಾದ ಕಾರ್ಯ ಮತ್ತೊಂದಿಲ್ಲ."

ಐನ್‌ಸ್ಟೈನರ ಜೀವನಚರಿತ್ರೆ ಬರೆದಿರುವ ಫಿಲಿಪ್ ಫ್ರಾಂಕ್ ಒಮ್ಮೆ ಐನ್‌ಸ್ಟೈನರನ್ನು ಕುರಿತು "ಪ್ರಾಚ್ಯಜನರ ನಡೆ ನುಡಿಗಳು ನಿಮಗೆ ವಿನೋದವನ್ನುಂಟುಮಾಡಲಿಲ್ಲವೇ? ಎಂದು ಪ್ರಶ್ನಿಸಿದರು.

ಐನ್‌ಸ್ಟೈನರು "ಇಲ್ಲ. ಖಂಡಿತ ಇಲ್ಲ. ಅಂಥ ಸಂಗತಿಗಳನ್ನು ನಾನು ಎಲ್ಲಾದರೂ ಕಂಡಿದ್ದರೆ ಅದು ನಮ್ಮ ತೌರೂರಿನಲ್ಲಿ, ಉದಾಹರಣೆಗೆ ಪ್ರಷ್ಯನ್ ಅಕಾಡಮಿ ಸಭೆಗಳಲ್ಲಿ'' ಎಂದರು.

ಉತ್ತರವನ್ನು ಕೇಳಿದ ಫ್ರಾಂಕ್ ಚಕಿತರಾಗಿರಬೇಕು: ಹಿಂದುಳಿದ ಏಷ್ಯನ್ನರ ಸಂಸ್ಕೃತಿಗೂ 'ಮುಂದುವರಿದ' ಯುರೋಪಿನ ನಾಗರೀಕತೆಯ ಮೇಲೂ ಬೇರೆ ಟೀಕೆ ಬೇಕಿಲ್ಲ.

ಪ್ರಾಚ್ಯದೇಶಗಳ ಪ್ರವಾಸದಿಂದ ಸ್ವದೇಶಕ್ಕೆ ಹಿಂತಿರುಗಿದಾಗ ಐನ್‌ಸ್ಟೈನರು ಪ್ಯಾಲೆಸ್ಟೈನಿಗೆ ಭೇಟಿಕೊಟ್ಟರು. ಅವರಿಗೆ ಪ್ಯಾಲೆಸ್ಟೈನಿನಲ್ಲಿ ದೊರೆತಂಥ ಗೌರವಾದರಗಳು ಮತ್ತೆಲ್ಲಿಯೂ ದೊರಕಲಿಲ್ಲ. ಅವರು ಸಯೋನಿಸ್ಟ ಚಳುವಳಿಗೆ ತಮ್ಮ ಬೆಂಬಲವನ್ನು ಕೊಟ್ಟು ಪ್ಯಾಲೆಸ್ಟೈನ್ ರಾಷ್ಟ್ರವನ್ನು ನಿರ್ಮಿಸುವುದರಲ್ಲಿ ಅತಿ ಗಣನೀಯವಾದ ಪಾತ್ರವನ್ನು ವಹಿಸಿದ್ದುದೇ ಇಂಥ ಸ್ವಾಗತಕ್ಕೆ ಕಾರಣವಾಗಿದ್ದಿತು. ನಿಲ್ಲಲು ಕಾಲವಿಲ್ಲದೆ ದೇಶವಿದೇಶಗಳಿಂದ ಹೊರದೂಡಲ್ಪಟ್ಟಿದ್ದ ಯಹೂದಿಗಳಿಗೆ ಐನ್‌ಸ್ಟೈನರ ಆಶೀರ್ವಾದ ಬೆಂಬಲಗಳಿಂದ ಪ್ಯಾಲೆಸ್ಟೈನಿನಲ್ಲಿ ನೆಲೆ ದೊರಕಿತು. ಆದ್ದರಿಂದ ಈ ಜನರು ಐನ್‌ಸ್ಟೈನರ ವಿಷಯದಲ್ಲಿ ಕೃತಜ್ಞತೆಯನ್ನೂ ವಿಶ್ವಾಸವನ್ನೂ ತೋರಿಸುತ್ತಿದ್ದುದರಲ್ಲಿ ಆಶ್ಚರ್ಯವೇನೂ ಇರಲಿಲ್ಲ.

ಹೀಗೆ ಪ್ರಜಾಸಮುದಾಯದ ಆದರಕ್ಕಷ್ಟೇ ಅಲ್ಲದೆ ಸರಕಾರದ ವಿಶ್ವಾಸಕ್ಕೂ ಐನ್‌ಸ್ಟೈನರು ಬಾಧ್ಯರಾಗಿದ್ದರು. ಪ್ಯಾಲೆಸ್ಟೈನ್ ಹೈ ಕಮಿಷನರ್ ಆಗಿದ್ದ ಸರ್ ಹರ್ಬರ್ಟ್ ಸ್ಯಾಮ್ಯುಯಲ್ ಐನ್‌ಸ್ಟೈನರನ್ನು ತನ್ನ ಅತಿಥಿಯನ್ನಾಗಿ ಬರಮಾಡಿಕೊಂಡನು. ಆತನು ಜಾತಿಯಲ್ಲಿ ಯಹೂದಿಯಾಗಿದ್ದನು. ಆದ್ದರಿಂದ ಐನ್‌ಸ್ಟೈನರಲ್ಲಿ ವಿಶೇಷವಾದ ಅಭಿಮಾನ ಹೊಂದಿದ್ದನು.

ಬ್ರಿಟಿಷ್ ಮಹಾಸಾಮ್ರಾಜ್ಯದ ಪ್ರತಿನಿಧಿಯಾದ ಸ್ಯಾಮ್ಯುಯಲ್ ತನ್ನ ಅಧಿಕಾರಕ್ಕೆ ಉಚಿತವಾದ ವೈಭವಯುತವಾದ ಜೀವನವನ್ನು ನಡೆಸಬೇಕಾಗಿದ್ದಿತು. ಅನೇಕ ಸಂದರ್ಭಗಳಲ್ಲಿ ಅದು ಡಂಭಾಚಾರವಾಗಿ ಪರಿಣಮಿಸುತ್ತಿದ್ದಿತು. ಇಂಥ ಅಧಿಕಾರಿಗಳ ಮನೆಯಲ್ಲಿ ಐನ್‌ಸ್ಟೈನರ ಸರಳತೆಗೆ ಸ್ಥಾನವೆಲ್ಲಿ? ಆದರೆ ಐನ್‌ಸ್ಟೈನರ ಶ್ರೇಷ್ಠತೆಯನ್ನರಿತಿದ್ದ ಹೈಕಮಿಷನರ್ ಸರಳ ಉಡುಪಿನ ತಮ್ಮ ಅತಿಥಿಯನ್ನು ಬಹು ಗೌರವದಿಂದಲೇ ಕಂಡುಕೊಂಡರು. ಆ ಸರಳತೆಯಲ್ಲಿದ್ದ ಒಂದು ಸೌಂದರ್ಯವೂ ಹೈಕಮಿಷನರಿಗೆ ಗೋಚರವಾಗದೆ ಹೋಗಲಿಲ್ಲ. ಅವರ ಪರಿವಾರದವರಿಗೆ ಮಾತ್ರ ಬ್ರಿಟಿಷ್ ಸಾಮ್ರಾಜ್ಯದ ಅತಿಥಿಯ ಬಹು ಸರಳವಾದ ನಡವಳಿಕೆಯೂ ಆ ಸಾಮಾನ್ಯ ಮನುಷ್ಯನ ಮುಂದೆ ಸಾಮ್ರಾಟರ ಪ್ರತಿನಿಧಿಯು ತೋರುತ್ತಿದ್ದ ವಿನಯವೂ ಅಚ್ಚರಿಯನ್ನುಂಟುಮಾಡಿದವು.

ಯುರೋಪ್ ಮತ್ತು ಅಮೇರಿಕಾದಲ್ಲಿನ ಯಹೂದಿಗಳ ಮುಖ್ಯ ವೃತ್ತಿ ವ್ಯಾಪಾರ. ಅವರಾರೂ ದೇಹಶ್ರಮವನ್ನು ಕಂಡವರಲ್ಲ. ಹೀಗಿದ್ದರೂ ದೇಶದ ಸಂಪತ್ತೆಲ್ಲಾ ಯಹೂದಿಗಳ ಕೈಯಲ್ಲಿಯೇ ಇತ್ತು. ಬೆವರು ಸುರಿಸದೆ ಕೇವಲ ತಮ್ಮ ಚಾಕಚಕ್ಯತೆಯಿಂದ ಅಪಾರ ದ್ರವ್ಯವನ್ನು ಸಂಪಾದಿಸುತ್ತಿದ್ದ ಯಹೂದಿಗಳನ್ನು ಕಂಡರೆ ಉಳಿದವರಿಗೆ ಮಾತ್ಸರ್ಯ.

ಯಹೂದಿಗಳು ಪರದೇಶಿಗಳಾಗಲು ಈ ಮತಾತ್ಸರ್ಯವೇ ಬಹುಮಟ್ಟಿಗೆ ಕಾರಣವಾಗಿದ್ದಿತು. ಯುರೋಪ್ ಮತ್ತು ಅಮೇರಿಕಾದೇಶದ ಕ್ರೈಸ್ತರು ತಮಗಿರುವ ಸಂಖ್ಯಾ ಬಲದಿಂದ ಯಹೂದಿಗಳಿಗೆ ಕಿರುಕುಳವನ್ನು ಕೊಟ್ಟು ಅವರು ದೇಶವನ್ನು ಬಿಡುವಂತೆ ಮಾಡುತ್ತಿದ್ದರು. ಪ್ಯಾಲಿಸ್ಟೈನಿನಲ್ಲಿ ವಾಸವಾಗಿದ್ದ ಯಹೂದಿಗಳಲ್ಲಿ ಬಹುಮಂದಿ ಹೀಗೆ ದೇಶಭ್ರಷ್ಟರಾಗಿದ್ದವರು.

ಪ್ಯಾಲಿಸ್ಟೈನಿಗೆ ಬಂದು ನೆಲೆಸಿದ ಯಹೂದಿಗಳಾದರೋ ತಮ್ಮ ಹಿಂದಿನ ಲೋಪದೋಷಗಳನ್ನು ಅರಿತುಕೊಂಡಿದ್ದಂಥವರು. ಯುರೋಪಿನಿಂದ ಓಡಿಸಲ್ಪಟ್ಟ ಈ ಜನರು ತಾವು ಶರೀರಶ್ರಮದಿಂದ ಮಾತ್ರ ಬದುಕಬಲ್ಲರೆಂಬುದನ್ನು ಕೂಡಲೆ ಅರಿತುಕೊಂಡರು. ಆದ್ದರಿಂದ ತಮ್ಮ ಹೊಸ ನಾಡಿನಲ್ಲಿ ಅವರು ಎಲ್ಲ ತರಹದ ಕೆಲಸಗಳನ್ನೂ ಮಾಡುತ್ತಿದ್ದರು. ಪ್ಯಾಲೆಸ್ಟೈನಿನಲ್ಲಿ ಹೊಸದಾಗಿ ನಿರ್ಮಿತವಾದಿದ್ದ ಟೆಲ್ ಆವೀವ್ ಪಟ್ಟಣದಲ್ಲಿ ಕಮ್ಮಾರನಿಂದ ಹಿಡಿದು ವಿಶ್ವವಿದ್ಯಾನಿಲಯದ ವಿಶಾರದನವರೆಗಿನ ವೃತ್ತಿಗಳು ಎಲ್ಲದರಲ್ಲಿಯೂ ಯಹೂದಿಗಳಿದ್ದರು. ಟೆಲ್ ಆವೀವ್ ನಗರದ ಅಂದಿನ ಸ್ಥಿತಿಯಲ್ಲಿ ಇದು ಅನಿವಾರ್ಯವೂ ಆಗಿದ್ದಿತು. ಏತಕ್ಕೆಂದರೆ ಆ ಪಟ್ಟಣವು ಯಹೂದಿಗಳಿಂದಲೇ ನಿರ್ಮಿಸಲ್ಪಟ್ಟಿದ್ದಾದ್ದರಿಂದ ಬೇರೆಯವರು ಅಲ್ಲಿಗೆ ಬರಲು ಹಿಂಜರಿಯುತ್ತಿದ್ದರು. ಈ ಕಾರಣದಿಂದ ನಗರಜೀವನಕ್ಕೆ ಆವಶ್ಯಕವಾದ ಕೆಲಸಗಳೆಲ್ಲವನ್ನೂ ಯಹೂದಿಗಳು ಮಾಡಬೇಕಿತ್ತು. ಈ ಹೊಸ ಸನ್ನಿವೇಶಕ್ಕೆ ಕೂಡಲೆ ಹೊಂದಿಕೊಂಡ ತನ್ನ ಜನರನ್ನು ನೋಡಿ ಐನ್‌ಸ್ಟೈನರಿಗೆ ಸಂತೋಷವಾಯಿತು. ಎಳ್ಳಷ್ಟೂ ದುಡಿಯದೆ ಎಲ್ಲ ಸೌಲಭ್ಯಗಳನ್ನೂ ಅನುಭವಿಸುತ್ತಿದ್ದ ಯಹೂದಿ ಜನಾಂಗ ತಮ್ಮ ದುಡಿಮೆಯಿಂದ ಅನ್ನಗಳಿಸುತ್ತಿದ್ದುದನ್ನು ನೋಡಿ ಐನ್‌ಸ್ಟೈನರಿಗೆ ತೃಪ್ತಿಯಾಯಿತು.

ಈ ರೀತಿಯಲ್ಲಿ ಅವರಿಗೆ ಆಹ್ಲಾದವನ್ನುಂಟುಮಾಡುವ ನೂರೆಂಟು ಸಂಗತಿಗಳು ಇದ್ದರೂ ಪ್ಯಾಲೆಸ್ಟೈನಿನಲ್ಲಿ ಅವರ ಮನಸ್ಸು ನೆಮ್ಮದಿಯಿಂದಿರಲಿಲ್ಲ. ಪ್ಯಾಲೆಸ್ಟೈನಿನಲ್ಲೇ ಸಾವಿರಾರು ವರ್ಷಗಳಿಂದ ನೆಲೆಸಿದ್ದ ಅರಬ್ಬರಿಗೂ ಹೊಸದಾಗಿ ವಲಸೆ ಹೋದ ಯಹೂದಿಗಳಿಗೂ ಪದೇ ಪದೇ ನಡೆಯುತ್ತಿದ್ದ ಘರ್ಷಣೆಗಳು ಐನ್‌ಸ್ಟೈನರ ಅಶಾಂತಿಗೆ ಕಾರಣವಾಗಿದ್ದವು. ಪ್ಯಾಲೆಸ್ಟೈನ್ ಯಹೂದಿಗಳ ನೆಲೆವೀಡಾಗಬೇಕೆಂಬುದು ಮಾತ್ರವಲ್ಲದೆ ಯಹೂದಿ ಅರಬ್ ಸೌಹಾರ್ದ ಅಲ್ಲಿ ಬೆಳೆಯಬೇಕೆಂದು ಐನ್‌ಸ್ಟೈನ್ ಬಯಸಿದ್ದರು. ಹೊಸದಾಗಿ ವಲಸೆ ಹೋದ ಯಹೂದಿಗಳು ಅರಬ್ಬರ ಸ್ನೇಹವನ್ನು ಸಂಪಾದಿಸಿ ಎರಡು ಜನಾಂಗಗಳೂ ವಿಶ್ವಾಸದಿಂದ ಬಾಳಬೇಕೆಂದು ಅವರು ಹೇಳುತ್ತಿದ್ದರು. ಸಯೋನಿಸ್ಟ್ ಚಳುವಳಿಗೆ ಬೆಂಬಲ ಕೊಟ್ಟಾಗ ಅವರು, ಅರಬ್ಬರೂ ಯಹೂದಿಗಳೂ ಅಣ್ಣತಮ್ಮಂದಿರಂತೆ ಬಾಳುವರೆಂಬ ಆಶೆಯನ್ನಿಟ್ಟುಕೊಂಡಿದ್ದರು. ಪ್ಯಾಲೆಸ್ಟೈನಿಗೆ ಭೇಟಿಕೊಟ್ಟಾಗ ತಮ್ಮ ಆಶೆ ಮಣ್ಣುಗೂಡಿದೆ ಎಂಬುದು ಅರಿವಾಯಿತು. ಅರಬ್ ಮತ್ತು ಯಹೂದಿ ಜನಾಂಗಗಳಿಗೆ ನಡೆಯುತ್ತಿದ್ದ ಯಾದವೀಕಲಹ ಅವರಿಗೆ ತುಂಬ ನಿರಾಶೆಯನ್ನೂ ನೋವನ್ನೂ ಉಂಟುಮಾಡಿತು. ಈ ಪರಿಸ್ಥಿತಿಗೆ ಕಾರಣರಾದ ಯಹೂದಿಗಳನ್ನು ಖಂಡಿಸಿ ಅರಬ್ ಜನಾಂಗದ ಸ್ನೇಹ ಗಳಿಸಲು ಪ್ರಯತ್ನ ಪಡಬೇಕೆಂದು ಅವರು ತಮ್ಮ ಜನಾಂಗಕ್ಕೆ ಬುದ್ಧಿ ಹೇಳಿದರು.

ಐನ್‌ಸ್ಟೈನರ ಬುದ್ಧಿವಾದ ಅನೇಕರಿಗೆ ರುಚಿಸಲಿಲ್ಲ. ತಮ್ಮ ತಪ್ಪನ್ನು ತಿಳಿಯದ ಈ ಕುಹಕಿಗಳು ಐನ್‌ಸ್ಟೈನರನ್ನು 'ಯಹೂದಿ ದ್ವೇಷಿ' ಎಂದು ಹಳಿಯತೊಡಗಿದರು. ಯಹೂದಿಮತದ ಸನಾತನಿಗಳು ಈ ಕುಹಕಿಗಳ ಜೊತೆಗೆ ದನಿಗೂಡಿಸಿದರು. ಸಾಂಪ್ರದಾಯಿಕವಾಗಿ ಆಚರಿಸಬೇಕಾಗಿದ್ದ ವ್ರತನಿಯಮಗಳಾವುದನ್ನೂ ಐನ್‌ಸ್ಟೈನರು ಪರಿಪಾಲಿಸುತ್ತಿರಲಿಲ್ಲವಾದ್ದರಿಂದ ಸನಾತನಿಗಳು ಅವರ ಮೇಲೆ ಕೋಪಗೊಂಡಿದ್ದರು. ಆದ್ದರಿಂದ ಅವರನ್ನು ನಿಂದಿಸಲು ಒದಗಿದ ಅವಕಾಶವನ್ನು ಈ ಧರ್ಮಾಂಧರು ಚೆನ್ನಾಗಿಯೇ ಉಪಯೋಗಿಸಿಕೊಂಡರು. ಯಾರ ಪುರಸ್ಕಾರ ತಿರಸ್ಕಾರಗಳಿಗೂ ಕಿವಿಗೊಡದ ಐನ್‌ಸ್ಟೈನರು ಈ ನಿಂದೆಗಳ ಕಡೆ ಗಮನವನ್ನೇ ಕೊಡಲಿಲ್ಲ. 'ಮುಸ್ಲಿಮರೊಂದಿಗೆ ಸ್ನೇಹದಿಂದ ನಡೆದುಕೊಳ್ಳಿ; ಹರಿಜನರನ್ನು ಅಸ್ಪೃಶ್ಯರನ್ನಾಗಿ ಕಾಣಬೇಡಿ' ಎಂದು ಬೋಧಿಸುತ್ತಿದ್ದ ಮಹಾತ್ಮಾ ಗಾಂಧಿಯವರು ತಮ್ಮನ್ನು ನಿಂದಿಸುತ್ತಿದ್ದ ಸಂಪ್ರದಾಯಶರಣರ ವಾಣಿಗೆ ಎಷ್ಟು ಬೆಲೆ ಕೊಟ್ಟರು?

ಐನ್‌ಸ್ಟೈನರ ಈ ಪ್ರವಾಸ ೧೯೨೩ರಲ್ಲಿ ಮುಗಿಯಿತು. ಅವರು ಪ್ಯಾಲೆಸ್ಟೈನಿನಿಂದ ಮ್ಯಾಡ್ರಿಡ್ ಮಾರ್ಗವಾಗಿ ಸ್ವದೇಶಕ್ಕೆ ಹಿಂದಿರುಗಿದರು. ಮ್ಯಾಡ್ರಿಡ್‌ನಲ್ಲಿ ಸ್ಪೆಯಿನ್ ಚಕ್ರವರ್ತಿಯಾದ ಅಲ್ಫೊನ್ಸೋ ಅವರನ್ನು ಭೇಟಿ ಮಾಡಿದನು.

ಈ ಪ್ರಪಂಚಪರ್ಯಟನೆ ಐನ್‌ಸ್ಟೈನರ ಮನಸ್ಸಿಗೆ ಸ್ವಲ್ಪ ಶಾಂತಿಯನ್ನು ತಂದಿತು.

### ನೋಬೆಲ್ ಪಾರಿತೋಷಕ ದೊರೆತಿದ್ದು

ಐನ್‌ಸ್ಟೈನರು ಪ್ರಾಚ್ಯದೇಶಗಳಲ್ಲಿ ಪ್ರವಾಸಮಾಡುತ್ತಿದ್ದಾಗ ಸ್ವೀಡಿಷ್ ಅಕಾಡೆಮಿಯು ಒಂದು ಮುಖ್ಯವಾದ ನಿರ್ಣಯವನ್ನು ಅನುಮೋದಿಸಿತು. ಭೌತಶಾಸ್ತ್ರಕ್ಕೆ ಸಂಬಂಧಪಟ್ಟ ನೋಬೆಲ್ ಪಾರಿತೋಷಕವನ್ನು ಆ ವರ್ಷ ಐನ್‌ಸ್ಟೈನರಿಗೆ ಕೊಡಬೇಕೆಂದು ನಿರ್ಧರಿಸಿತು. ಭೌತಶಾಸ್ತ್ರದಲ್ಲಿ ವಿಖ್ಯಾತಸಂಶೋಧನೆ ನಡೆಸಿದವರಿಗೆ ವರ್ಷ ವರ್ಷವೂ ನೋಬೆಲ್ ಬಹುಮಾನ ಕೊಡುವ ಆ ಸಂಸ್ಥೆಯು ಸಾಪೇಕ್ಷ ಸಿದ್ಧಾಂತವನ್ನು ಪ್ರಕಟಿಸಿದ ೧೫ ವರ್ಷಗಳ ತರುವಾಯ ಅವರಿಗೆ ಪಾರಿತೋಷಕ ಕೊಡಬೇಕೆಂದು ನಿಶ್ಚಯಿಸಿತು. 'ಇಲ್ಲ ಎಂದು ಹೇಳುವುದಕ್ಕಿಂತ ತಡವಾಗಿಯಾದರೂ ಕೊಡುವುದು ಉತ್ತಮ' ಎಂಬ ನೀತಿಯನ್ನು ಅನುಸರಿಸಿತು ಆ ಸಂಸ್ಥೆ.

ಸ್ವೀಡಿಷ್ ಅಕಾಡೆಮಿಯು ಐನ್‌ಸ್ಟೈನರಂಥ ವಿಖ್ಯಾತ ಶಾಸ್ತ್ರಜ್ಞರಿಗೆ ಗೌರವ ತೋರಿಸಲು ಇಷ್ಟು ತಡಮಾಡಿದುದಕ್ಕೆ ಹಲವು ಕಾರಣಗಳಿದ್ದುವು. ಬಹುಮಾನವನ್ನು ಸ್ಥಾಪಿಸಿದ ನೋಬೆಲ್ ಮಹಾಶಯನು ತನ್ನ ಉಯಿಲಿನಲ್ಲಿ ನಾಲ್ಕಾರು ಶರತ್ತುಗಳನ್ನು ಹಾಕಿದ್ದನು. ಅವುಗಳಲ್ಲಿ ಪಾರಿತೋಷಕವನ್ನು ಪಡೆಯುವಂಥವರು ಮಾನವಕೋಟಿಗೆ "ಉಪಯೋಗವಾಗುವಂಥ ಸಂಶೋಧನೆ"ಯನ್ನು ನಡೆಸಿರಬೇಕೆಂಬುದೂ ಒಂದು. ೧೯೧೫ ಮತ್ತು ೧೯೧೬ರಲ್ಲಿ ಐನ್‌ಸ್ಟೈನರು ಪ್ರಕಟಿಸಿದ ಸಿದ್ಧಾಂತಗಳಲ್ಲಿ ಮನುಷ್ಯಕೋಟಿಗೆ "ಉಪಯೋಗ"ವಾಗುವಂಥ ಯಾವ ಸಂಶೋಧನೆಯೂ ಇರಲಿಲ್ಲ. ಆದ್ದರಿಂದ ಅವರಿಗೆ ಪಾರಿತೋಷಕವನ್ನು ಕೊಡುವುದು ಪುದುವಟ್ಟನಿಟ್ಟ ನೋಬೆಲ್ಲನ ಇಚ್ಛೆಗೆ ವಿರೋಧವಾಗುತ್ತದೆಂದು ಅಕಾಡೆಮಿಯ ಸದಸ್ಯರು ವಿರೋಧಿಸುತ್ತಿದ್ದರು.

ಐನ್‌ಸ್ಟೈನರಿಗೆ ಬಹುಮಾನ ನೊಬೆಲ್ ಪಾರಿತೋಷ ದೊರೆಯದ ಕಾರಣವೇ



ಐನ್‌ಸ್ಟೈನರಿಗೆ ಬಹುಮಾನ ದೊರಕಲು ತಡೆಯಾಗಿದ್ದವರು ಅವರ ರಾಜಕೀಯ ವಿರೋಧಿಗಳು. ಹೇಗಾದರೂ ಮಾಡಿ ಐನ್‌ಸ್ಟೈನರಿಗೆ ಬಹುಮಾನ ತಪ್ಪಿಹೋಗುವಂತೆ ಮಾಡಲು ಅವರು ಹೊಂಚುಹಾಕುತ್ತಿದ್ದರು. ಈ ದುರುದ್ದೇಶವನ್ನು ಸಾಧಿಸಿಕೊಳ್ಳಲೋಸುಗ ಅವರು ಮೇಲೆ ಹೇಳಿದ 'ಉಪಯೋಗ ತತ್ತ್ವ'ದ ವಾದವನ್ನು ಹಿಡಿದಿದ್ದರು: ಅವರ ದೃಷ್ಟಿಯಲ್ಲಿ 'ಉಪಯೋಗವಾಗುವುದು' ಎಂದರೆ ಮನುಷ್ಯನ ಸಹಜೀವನವನ್ನು ಸುಖಗೊಳಿಸಬಲ್ಲ ಸಾಧನೆಗಳು ಮಾತ್ರ; ಇಂಥ ಸಾಧನಗಳಾದ ರೇಡಿಯೋ, ಟೆಲಿಫೋನ್, ಪೆನಿಸಿಲಿನ್ ಇವುಗಳನ್ನು ಕಂಡುಹಿಡಿದ ಮಹನೀಯರು ಮಾತ್ರ ನೋಬೆಲ್ ಪಾರಿತೋಷಕ ಪಡೆಯಲು ಅರ್ಹರಾಗಿದ್ದರು! ಇಡೀ ವಿಶ್ವದ ರಚನೆಯನ್ನು ವಿವರಿಸಬಲ್ಲ ಸಿದ್ಧಾಂತವು 'ಉಪಯೋಗಕಾರಿ' ಆಗಿರಲಿಲ್ಲ! ಅದನ್ನು ತಿಳಿಸಿದವರು ಮಾನವಕೋಟಿಗೆ 'ಉಪಯೋಗ'ವಾಗುವಂಥ ಕಾರ್ಯವೇನನ್ನೂ ಮಾಡಿಲ್ಲವೆಂದು ಅವರ ವಾದವಾಗಿತ್ತು.

ಐನ್‌ಸ್ಟೈನರಿಗೆ ಬೇಕಾಗಿದ್ದ ಕೆಲವು ಸದಸ್ಯರು ನೋಬೆಲ್ ಪಾರಿತೋಷಕ ಸಮಿತಿಯಲ್ಲಿದ್ದರೂ, ಅವರು ಮೇಲೆ ತಿಳಿಸಿದ 'ಉಪಯೋಗವಾದ'ವನ್ನು ಎದುರಿಸಲಾಗಲಿಲ್ಲ. ಇದಕ್ಕೆ ಕಾರಣ ಸಾಪೇಕ್ಷವಾದ ವ್ಯಾವಹಾರಿಕ ದೃಷ್ಟಿಯಿಂದ ಪ್ರಯೋಜನಕಾರಿಯಲ್ಲದೆ ಹೋದದ್ದು. ಈ ರೀತಿಯಲ್ಲಿ ಐನ್‌ಸ್ಟೈನರ ವಿರೋಧಿಗಳ ಕೈಮೇಲಾಗಿ ಅವರಿಗೆ ನ್ಯಾಯವಾಗಿ ಲಭಿಸಬೇಕಾಗಿದ್ದ ಪಾರಿತೋಷಕ ಬಹುದಿನಗಳ ವರೆಗೆ ದೊರಕಲಿಲ್ಲ.

ಐನ್‌ಸ್ಟೈನರಿಗೆ ಪಾರಿತೋಷಕ ತಪ್ಪಿಹೋದದ್ದು ಅನೇಕ ಸದಸ್ಯರಿಗೆ ಸಂತೋಷವನ್ನುಂಟುಮಾಡಿದ್ದರೂ, ಅದು ಸಂಸ್ಥೆಯ ಚಾಲಕರ ಮನಸ್ಸನ್ನು ಕೊರೆಯುತ್ತಲೇ ಇತ್ತು, ಐನ್‌ಸ್ಟೈನರಂಥ ವಿಖ್ಯಾತ ಪುರುಷರಿಗೆ ಗೌರವ ತೋರಿಸದೆ ಹೋದರೆ ಸಂಸ್ಥೆಯು ಅಪಕೀರ್ತಿಗೆ ಒಳಗಾಗುವುದೆಂದು ಅವರು ತಿಳಿದಿದ್ದರು. ಹೇಗಾದರೂ ಮಾಡಿ ಅವರಿಗೆ ಪಾರಿತೋಷಕವನ್ನು ಕೊಡಬೇಕೆಂದು ಚಾಲಕರು ಪ್ರಯತ್ನಮಾಡುತ್ತಿದ್ದರು. ಆದರೆ ವಿರೋಧಿಗಳು ಹೇಳುತ್ತಿದ್ದ ಕಾರಣಗಳು ಅವರಿಗೆ ಅಡ್ಡಿಯಾಗಿದ್ದುವು. ವಿರೋಧಿಗಳ ವಾದವನ್ನು ತುಳಿಯಲು ಅವರು ಕೊನೆಗೊಂದು ಉಪಾಯವನ್ನು ಹುಡುಕಿದರು. ಬಹು ವರ್ಷಗಳ ಹಿಂದೆ ಐನ್‌ಸ್ಟೈನರು ಬೆಳಕಿನ ವಿಷಯವಾಗಿ ಒಂದು ಲೇಖನವನ್ನು* ಪ್ರಕಟಿಸಿದ್ದರು. ಆ ಲೇಖನದಲ್ಲಿ ವಿವರಿಸಿದ್ದ ಸಂಶೋಧನೆಯು ಐನ್‌ಸ್ಟೈನ್ ವಿರೋಧಿಗಳು ಹೇಳುತ್ತಿದ್ದಂತೆ 'ಪ್ರಯೋಜನ'ಕಾರಿಯಾಗಿದ್ದಿತು. ಸಂಸ್ಥೆಯ ಚಾಲಕರು ಐನ್‌ಸ್ಟೈನರಿಗೆ ಬೆಳಕಿನ ಸಂಶೋಧನೆಗಾಗಿ ಬಹುಮಾನ ಕೊಡಬೇಕೆಂಬ ಸೂಚನೆಯನ್ನು ತಂದಾಗ ವಿರೋಧಿಗಳು ತಣ್ಣಗಾದರು. ಪಾರಿತೋಷಕ ಕೊಡಬೇಕೆಂದು ತೀರ್ಮಾನವಾಯಿತು.

ಐನ್‌ಸ್ಟೈನರಿಗೆ ನೋಬೆಲ್ ಪಾರಿತೋಷಕವನ್ನು ಒದಗಿಸಿಕೊಟ್ಟ ಸಂಶೋಧನೆಯು ನಡೆದದ್ದು ೧೯೦೫ರಲ್ಲಿ. ಅದು ಪ್ರಕಟವಾದದ್ದು ಹೆಚ್ಚು ಕಡಿಮೆ ಸಾಪೇಕ್ಷವಾದ (ವಿಶೇಷ)

---

*ಲೇಖಕನ 'ಕ್ವಾಂಟಮ್ ಚಲನಶಾಸ್ತ್ರ'ವನ್ನು ನೋಡಿ.

ಪ್ರಕಟವಾದ ಸಮಯದಲ್ಲಿಯೇ. ಆದರೂ ಸ್ವೀಡಿಷ್ ಅಕಾಡೆಮಿ ಬಹುಮಾನ ಕೊಡಲು ನಿರ್ಧರಿಸಿದ್ದು ೧೯೨೨ರಲ್ಲಿ; ೧೭ ವರ್ಷಗಳ ಅನಂತರ ಅಂತೂ ಇಡೀ ಶತಮಾನದಲ್ಲೇ ಶ್ರೇಷ್ಠರಾದ ವಿಜ್ಞಾನಿಯೊಬ್ಬನಿಗೆ ಮಾಡಬೇಕಾದ ಸನ್ಮಾನವನ್ನು ಮಾಡಲಿಲ್ಲ ಎಂಬ ಕಳಂಕವನ್ನು ಸಂಸ್ಥೆ ತಪ್ಪಿಸಿಕೊಂಡಿತು.

ಪ್ಯಾಲೆಸ್ಟೈನಿನಿಂದ ಹಿಂತಿರುಗಿದ ಸ್ವಲ್ಪ ದಿನಗಳಲ್ಲಿಯೇ ಐನ್‌ಸ್ಟೈನರು ನೋಬೆಲ್ ಪಾರಿತೋಷಕವನ್ನು ಸ್ವೀಕರಿಸಲೋಸುಗ ಸ್ವೀಡನ್ನಿಗೆ ಹೋದರು; ಅವರು ಸುಮಾರು ನಾಲ್ಕು ತಿಂಗಳವರೆಗೆ ಸ್ವೀಡನ್ನಿನಲ್ಲಿದ್ದರು. ಈ ಅವಧಿಯಲ್ಲಿ ಅನೇಕ ವಿದ್ಯಾಸಂಸ್ಥೆಗಳಿಗೆ ಭೇಟಿಕೊಟ್ಟು ಉಪನ್ಯಾಸ ಮಾಡಿದರು. ಈ ರೀತಿ ಅವರು ಸ್ಕಾಂಡಿನೇವಿಯದಲ್ಲಿ ಕಾರ್ಯನಿರತರಾಗಿದ್ದಾಗ, ಅವರಿಗಾಗದ ಕೆಲವರು ಅಪಪ್ರಚಾರ ಮಾಡಲಾರಂಭಿಸಿದರು. ಐನ್‌ಸ್ಟೈನರು ಜರ್ಮನಿಯ ಶತ್ರು, ಅವರು ಜರ್ಮನಿಯಿಂದ ಓಡಿಹೋಗಿ ರಷ್ಯದಲ್ಲಿ ತಲೆ ಮರೆಸಿಕೊಂಡಿದ್ದಾರೆ—ಎಂದರು. ಈ ಅಪಪ್ರಚಾರದ ದಿಸೆಯಿಂದ ಐನ್‌ಸ್ಟೈನರು ಜರ್ಮನಿಯಲ್ಲಿರುವುದೇ ಕಷ್ಟವಾಯಿತು.

16/1/81

# ೭ ಹಾಲಾಹಲ

**ರಾಥೆನೋ ಕೊಲೆ; ಏಕಕ್ಷೇತ್ರ (Unified field) ವಾದ**

ಐನ್‌ಸ್ಟೈನರು ಶಾಂತಿಸಂದೇಶವನ್ನು ಹೊತ್ತು ದೇಶ-ವಿದೇಶಗಳಲ್ಲಿ ಪ್ರವಾಸ ಮಾಡುತ್ತಿದ್ದ ಸಮಯದಲ್ಲಿ ಜರ್ಮನಿಯಲ್ಲಿನ ರಾಜಕೀಯ ವಾತಾವರಣ ಕಲುಷಿತವಾಗುತ್ತಿತ್ತು. ನಾಜೀ ಪಕ್ಷ ಒಳಗೊಳಗೇ ತನ್ನ ಕಾರ್ಯಾಚರಣೆಯನ್ನು ನಡೆಸುತ್ತಿತ್ತು. ರಾಷ್ಟ್ರದ ಅಧಿಕಾರವೆಲ್ಲವೂ ಈ ಗುಂಪಿನವರ ಕೈಯಲ್ಲಿದ್ದು, ಜರ್ಮನ್ ಗಣರಾಜ್ಯ ಹೆಸರಿಗೆ ಮಾತ್ರ ಅಧಿಕಾರ ನಡೆಸುತ್ತಿತ್ತು. ಪ್ರಜಾಸಮುದಾಯದಲ್ಲಿ ಕೇವಲ ಕೆಲವರು ಮಾತ್ರ ಗಣರಾಜ್ಯಕ್ಕೆ ನಿಷ್ಠೆ ತೋರಿಸುತ್ತಿದ್ದರು. ಬಹುಮಂದಿ ನಾಜೀ ಪಕ್ಷದ ಭಕ್ತರಾಗಿದ್ದರು. ಹೀಗೆ ಪ್ರಜಾಕೋಟಿ ನಾಜೀ ಪಕ್ಷಕ್ಕೆ ಸಹಾನುಭೂತಿ ತೋರಲು ಕಾರಣ ಅದು ಜರ್ಮನಿಯನ್ನು ಪುನರುದ್ಧಾರ ಮಾಡಿ ಮತ್ತೊಮ್ಮೆ ಪ್ರಬಲ ರಾಷ್ಟ್ರವನ್ನಾಗಿ ಮಾಡುತ್ತದೆಂಬ ನಂಬಿಕೆ. ವರ್ಸೇಲ್ಸ್ ಒಪ್ಪಂದವನ್ನು ಮುರಿದು ಆ ಒಪ್ಪಂದದಿಂದುಂಟಾದ ಅವಮಾನಕ್ಕೆ ತಕ್ಕ ಪ್ರತೀಕಾರ ಮಾಡಬಲ್ಲ ರಾಜಕೀಯ ಪಕ್ಷವೆಂದರೆ ನಾಜೀಗಳ ಗುಂಪೊಂದೇ ಎಂದು ಜರ್ಮನಿಯ ಅನೇಕ ಪ್ರಜೆಗಳು ತಿಳಿದಿದ್ದರು. ಆದ್ದರಿಂದ ನಾಜೀ ಪಕ್ಷ ಕೊಟ್ಟ ಸೂಚನೆಗಳನ್ನು ಪ್ರಜೆಗಳು ಚಾಚೂ ತಪ್ಪದೆ ಪಾಲಿಸುತ್ತಿದ್ದರು. ಹಾಗೆಯೇ ನಾಜೀ ಪಕ್ಷ ಮಾಡುತ್ತಿದ್ದ ಅಪಪ್ರಚಾರವನ್ನೂ ಜರ್ಮನರು ನಂಬುತ್ತಿದ್ದರು. 'ಜರ್ಮನರು ಜಗತ್ತಿಗೇ ಸರ್ವಶ್ರೇಷ್ಠರು; ಮಹಾಯುದ್ಧದಲ್ಲಿ ಜರ್ಮನಿಗೆ ಸೋಲಾದುದಕ್ಕೆ ಕಾರಣ ಆ ರಾಷ್ಟ್ರದ ದೌರ್ಬಲ್ಯವಲ್ಲ; ಹೀನಕುಲದವರಾದ ಯಹೂದಿಗಳ ಕುತಂತ್ರ' ಹೀಗೆಂದು ನಾಜೀ ಪಕ್ಷದವರು ಹೇಳುತ್ತಿದ್ದರು. ತಾವು ಸರ್ವಶ್ರೇಷ್ಠರೆಂಬ ಒಣಜಂಭವನ್ನು ಹೊಂದಿದ್ದ ಜರ್ಮನರಿಗೆ ನಾಜೀ ಪಕ್ಷದವರ ಪ್ರಚಾರ ಹಿಡಿಸಿತು. ಯಹೂದಿಗಳ ವಿಷಯದಲ್ಲಿ ನಾಜೀಗಳು ಜರ್ಮನ್ ಜನಾಂಗದ ಮನದಲ್ಲಿ ಬಿತ್ತಿದ ವಿಷ ಬೀಜ ಬೇರುಬಿಡಲು ಹೆಚ್ಚು ದಿನಗಳು ಬೇಕಾಗಲಿಲ್ಲ.

ಜರ್ಮನಿಯಲ್ಲಿ ನಾಜೀ ಪಕ್ಷವು ಅಧಿಕಾರಕ್ಕೆ ಬರುವ ಮುನ್ನ ರಾಥೆನೋ (Rathenau) ಎಂಬುವವರು ವಿದೇಶಾಂಗಮಂತ್ರಿಗಳಾಗಿದ್ದರು. ಅವರು ಆಗರ್ಭಶ್ರೀಮಂತರು ಮೇಧಾವಿಗಳು, ಸಂಧಾನಚತುರರು ಮತ್ತು ಉದಾರಿಗಳು. ಅವರು ವಿದೇಶಾಂಗ ಸಚಿವರಾಗಿದ್ದಾಗ ಜರ್ಮನ್ ಸರಕಾರ ಅನೇಕ ರಾಷ್ಟ್ರಗಳೊಡನೆ ಒಪ್ಪಂದ ಮಾಡಿಕೊಂಡಿದ್ದಿತು. ರಾಥೆನೋ ಅವರು ಜಾತಿಯಲ್ಲಿ ಯಹೂದಿಗಳಾಗಿದ್ದುದರಿಂದ ನಾಜೀಗಳಿಗೆ ಅವರನ್ನು ಕಂಡರೆ ಆಗುತ್ತಿರಲಿಲ್ಲ. ಅವರ ನೇತೃತ್ವದಲ್ಲಿ ನಡೆದ ಒಪ್ಪಂದಗಳು ಯುದ್ಧಪ್ರಿಯರಾದ ನಾಜೀಗಳಿಗೆ ರುಚಿಸಲಿಲ್ಲ. ಈ ಕಾರಣಗಳಿಂದ ನಾಜೀ ಮುಖಂಡರು ರಾಥೆನೋ ಅವರ ಮೇಲೆ

ಇಲ್ಲದ ಸಲ್ಲದ ಅಪಪ್ರಚಾರ ಮಾಡಲಾರಂಭಿಸಿದರು. ಜರ್ಮನ್ ಜನಾಂಗ ಈ ಅಪಪ್ರಚಾರದ ನಂಜನ್ನು ಸವಿದು ಕಾಲಕ್ರಮೇಣ ಅದನ್ನು ತನ್ನ ರಕ್ತಗತವನ್ನಾಗಿ ಮಾಡಿಕೊಂಡಿತು. ತನ್ನಲ್ಲಿ ಹುದುಗಿದ್ದ ವಿಷವನ್ನು ಕಾರಲು ಅದು ಸಮಯ ಕಾಯುತ್ತಿತ್ತು. ಯಾವ ತಪ್ಪನ್ನೂ ಮಾಡದ ರಾಥೆನೋ ಆ ವಿಷಕ್ಕೆ ಬಲಿಯಾಗಬೇಕಾಯಿತು. ೧೯೨೨ನೆಯ ಜೂನ್ ೨೪ನೆಯ ದಿನ ಜರ್ಮನ್ ವಿದ್ಯಾರ್ಥಿಗಳ ಒಂದು ಗುಂಪು ರಾಥೆನೋ ಅವರನ್ನು ಕೊಲೆ ಮಾಡಿ ಬಿಟ್ಟಿತು.

ರಾಥೆನೋ ಅವರ ಕೊಲೆಗೆ ಕಾರಣವೇನೆಂಬುದು ಯಾರಿಗೂ ತಿಳಿಯದ ವಿಷಯವಾಗಿರಲಿಲ್ಲ. ನಾಜೀಗಳ ಅಪಪ್ರಚಾರದಿಂದ ಬೆಳೆದು ಬಂದ ಯಹೂದಿ ದ್ವೇಷವೇ ಈ ಕಗ್ಗೊಲೆಗೆ ಕಾರಣವೆಂಬುದು ಸರ್ವವಿಧಿತವಾಗಿದ್ದಿತು. ಆದರೂ ಯಾರೂ ಅದನ್ನು ಅಷ್ಟಾಗಿ ಕುರಿತು ಚಿಂತಿಸುತ್ತಿರಲಿಲ್ಲ. ಈ ಪರಿಸ್ಥಿತಿಯು ಐನ್‌ಸ್ಟೈನರಿಗೆ ತುಂಬ ನೋವನ್ನುಂಟು ಮಾಡಿತು. ಪರಮಮಿತ್ರರಾಗಿದ್ದ ರಾಥೆನೋ ಅವರ ವಿಯೋಗಕ್ಕಿಂತ ರಾಷ್ಟ್ರಭಕ್ತಿಯ ಹೆಸರಿನಲ್ಲಿ ನಡೆದ ಪಾತಕ ಅವರ ದುಃಖಕ್ಕೆ ಕಾರಣವಾಗಿತ್ತು. ದೇಶದಲ್ಲಿ ಹುಚ್ಚು ಹೊಳೆಯಾಗಿ ಹರಿಯುತ್ತಿದ್ದ ದ್ವೇಷದ ಸೆಳೆತಕ್ಕೆ ಸಿಕ್ಕಿರುವ ಜನತೆ ಅದರಿಂದ ಸುಲಭವಾಗಿ ಪಾರಾಗಬಲ್ಲುದೇ ಎಂಬ ಚಿಂತೆ ಅವರ ಮನಸ್ಸನ್ನು ಕಲಕಿ ಅಶಾಂತಿ ಆವರಿಸುವಂತೆ ಮಾಡಿತು.

ರಾಥೆನೋ ಕೊಲೆ ನಡೆದ ನಂತರ ಅದಕ್ಕೆ ಕಾರಣರಾದ ಪಾತಕಿಗಳ ಮೇಲೆ ಸರಕಾರ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಕಾರಣ ಅದು ಅಷ್ಟು ನಿರ್ಬಲವಾಗಿತ್ತು. ಕೊಲೆ ನಡೆಸಿದ ತರುಣರಲ್ಲಿ ಅದನ್ನು ಪತ್ತೆ ಹಚ್ಚುವ ನಾಟಕವನ್ನು ಸರ್ಕಾರವು ಆಡಿತು. ಹೀಗೆ ಸರ್ಕಾರ ಕೊಲೆ ಪಾತಕಿಯನ್ನು ಹುಡುಕುವ ಸಂದರ್ಭದಲ್ಲಿ ಒಂದು ಭೀಕರವಾದ ವಿಷಯ ಹೊರಬಿದ್ದಿತು. ರಾಥೆನೋ ಅವರನ್ನು ಕೊಲೆಮಾಡಿದ ದುಷ್ಟರು ನಾಜೀಪಂಥಕ್ಕೆ ವಿರೋಧಿಗಳಾಗಿರುವವರೆಲ್ಲರನ್ನೂ ಮುಗಿಸಿಬಿಡಬೇಕೆಂದು ಫಿತೂರಿ ನಡೆಸಿದ್ದರು. ತಾವು ಯಾರನ್ನು ಆಹುತಿ ತೆಗೆದುಕೊಳ್ಳಬೇಕೆಂಬುದರ ಬಗ್ಗೆ ಒಂದು ಪಟ್ಟಿಯನ್ನು ತಯಾರಿಸಿದ್ದರು. ಆ ಪಟ್ಟಿಯಲ್ಲಿ ಐನ್‌ಸ್ಟೈನರ ಹೆಸರೂ ಇತ್ತು !

ಕೂಡಲೇ ಐನ್‌ಸ್ಟೈನರಿಗೆ ಈ ವಿಚಾರವು ತಿಳಿಯಿತು. ಆದರೆ ಅವರು ಅದನ್ನು ಕುರಿತು ಯೋಚಿಸಲೇ ಇಲ್ಲ. ಇಡೀ ದೇಶವೇ ವಿಷಜ್ವಾಲೆಯಲ್ಲಿ ಬೇಯುತ್ತಿರುವಾಗ ತನ್ನ ಯೋಗಕ್ಷೇಮವನ್ನು ಮಾತ್ರ ಕುರಿತು ಚಿಂತಿಸುತ್ತಿರುವುದು ಅವರಿಗೆ ಪಾಪವಾಗಿ ಕಂಡಿತು. ದೇಶದ ಸಾಮಾನ್ಯ ಪ್ರಜೆಗೆ ದೊರಕದ ಸೌಲಭ್ಯ ರಕ್ಷಣೆಗಳನ್ನು ತಾನು ಪಡೆದುಕೊಳ್ಳಲು ಐನ್‌ಸ್ಟೈನ್ ಇಷ್ಟಪಡಲಿಲ್ಲ. ಕೊಲೆಯಾಗುವುದಕ್ಕೆ ಅನೇಕ ದಿನಗಳು ಮುಂಚೆಯೇ ಅದರ ಸುಳಿವು ತಿಳಿದಿದ್ದರೂ ತನ್ನ ದೇಹರಕ್ಷಣೆಯ ವಿಷಯದಲ್ಲಿ ತೀರ ಔದಾಸೀನ್ಯ ತೋರಿಸಿದ ಮಹಾತ್ಮಾ ಗಾಂಧಿಯವರ ಉದಾಹರಣೆ ಈ ಸಂದರ್ಭದಲ್ಲಿ ನೆನಪಿಗೆ ಬರುತ್ತದೆ.

ನಾಜೀಗಳು ತಾವು ಬಲಿ ತೆಗೆದುಕೊಳ್ಳಬೇಕಾದ ನಾಜೀ ವಿರೋಧಿಗಳ ಗುಂಪಿಗೆ ಐನ್‌ಸ್ಟೈನರನ್ನು ಸೇರಿಸಲು ಕಾರಣನಾದವನು ಲೆನಾರ್ಡ್ ಎಂಬ ಭೌತಶಾಸ್ತ್ರವಿಶಾರದ.

ಈತನು ಐನ್‌ಸ್ಟೈನರ ಜನ್ಮಶತ್ರು. ಯಹೂದಿಗಳ ಬದ್ಧವೈರಿಯಾಗಿದ್ದ. ರಾಥೆನೋರವರ ಕಳೇಬರವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋಗುತ್ತಿದ್ದಾಗ, ಆವರಿಗೆ ಗೌರವ ತೋರಿಸಲು ದೇಶದ ಸಮಸ್ತ ಪ್ರಜೆಗಳೂ ತಮ್ಮ ಚಟುವಟಿಕೆಗಳನ್ನು ನಿಲ್ಲಿಸಿದ್ದರೆ, ಲೆನಾರ್ಡ್ ಕಾಲೇಜಿನ ಸಭಾಂಗಣದಲ್ಲಿ ಭಾಷಣ ಮಾಡುತ್ತಿದ್ದನು. ಭಾಷಣವನ್ನು ಕೇಳುತ್ತಿದ್ದವರು ನಾಜೀಪಕ್ಷವನ್ನು ಆರಾಧಿಸುತ್ತಿದ್ದ ವಿದ್ಯಾರ್ಥಿಗಳು. ಭಾಷಣದ ವಸ್ತು ರಾಥೆನೋ ಕೊಲೆಯ ಸಮರ್ಥನೆ. ಸ್ಮಶಾನಯಾತ್ರೆಯ ದಿನ ಸಾರ್ವಜನಿಕ ರಜಾದಿನವೆಂದು ಘೋಷಿಸಿದ್ದ ಸರಕಾರ, ಆದರ ಆಜ್ಞೆಯನ್ನುಲ್ಲಂಘಿಸಿ ಭಾಷಣ ಮಾಡುತ್ತಿದ್ದ ಲೆನಾರ್ಡಿನ ವಿಷಯದಲ್ಲಿ ತಕ್ಕ ಕ್ರಮ ತೆಗೆದುಕೊಳ್ಳಲು ಅಶಕ್ತವಾಗಿತ್ತು.

ಹೀಗೆ ರಾಜಕೀಯ ಮತ್ತು ಸಾಮಾಜಿಕ ಸ್ಥಿತಿಗಳು ಐನ್‌ಸ್ಟೈನರ ಮನಸ್ಸನ್ನು ಅತಿ ವ್ಯಾಕುಲಕ್ಕೆ ಈಡುಮಾಡಿದ್ದರೂ ಅವರ ಸತ್ಯಾನ್ವೇಷಣೆಗೆ ಅಡ್ಡಿ ಬರಲಿಲ್ಲ. ಸಾಪೇಕ್ಷವಾದ ಪ್ರಕಟವಾಗುವುದಕ್ಕೆ ಕೆಲವು ವರ್ಷಗಳು ಮುಂಚಿನಿಂದ ಕ್ವಾಂಟಂ ಸಿದ್ಧಾಂತಕ್ಕೆ ಸಂಬಂಧಿಸಿದ ಅನೇಕ ಪರಿಶೋಧನೆಗಳು ನಡೆದಿದ್ದುವು. ಈ ಪರಿಶೋಧನೆಗಳು ಪ್ರಾರಂಭವಾದದ್ದು ಐನ್‌ಸ್ಟೈನರ ಪರಮಮಿತ್ರರಾಗಿದ್ದ ಮ್ಯಾಕ್ಸ್‌ಪ್ಲಾಂಕ್‌ರಿಂದ; ರುದರ್ ಫರ್ಡ್, ಜೆ. ಜೆ. ಥಾಂಸನ್, ಬೋರ್, ಪ್ರಾಡಿಂಜರ್ ಮುಂತಾದವರು ಅವುಗಳನ್ನು ಮುಂದುವರಿಸಿದ್ದರು. ಸಾಪೇಕ್ಷವಾದ ಮತ್ತು ಕ್ವಾಂಟಂ ಸಿದ್ಧಾಂತಗಳು ಹೆಚ್ಚು ಕಡಿಮೆ ಒಂದೇ ಕಾಲದಲ್ಲಿ ಬೆಳೆಯುತ್ತಿದ್ದರೂ, ಒಂದಕ್ಕೊಂದಕ್ಕೆ ಸಂಪರ್ಕವಿರಲಿಲ್ಲ. ಭೌತಶಾಸ್ತ್ರ ವಲಯದಲ್ಲಿ ಕ್ರಾಂತಿಯನ್ನೆಬ್ಬಿಸಿದ ಈ ಎರಡು ಸಿದ್ಧಾಂತಗಳು ಒಂದನ್ನೊಂದು ಸಂಧಿಸದೆ ಇದ್ದುದು ಅತ್ಯಾಶ್ಚರ್ಯಕರವಾದ ಸಂಗತಿ. ನ್ಯೂಟನ್ ಮಹಾಶಯನ ತತ್ವಗಳನ್ನು ಅಲ್ಲಾಡಿಸಿದ ಈ ಆಧುನಿಕ ಸಿದ್ಧಾಂತಗಳಿಗೆ ಇರುವ ಪರಸ್ಪರ ಸಂಬಂಧವನ್ನು ಕುರಿತು ಯಾರೂ ಅಷ್ಟಾಗಿ ಯೋಚಿಸಿರಲಿಲ್ಲ. ಈ ಪರಿಸ್ಥಿತಿ ಐನ್‌ಸ್ಟೈನರ ಕುತೂಹಲವನ್ನು ಸ್ವಾಭಾವಿಕವಾಗಿ ಕೆರಳಿಸಿತ್ತು. ಅವರು, ಒಂದೇ ಒಂದು ಸೂತ್ರ ವಿಶ್ವವೆಲ್ಲವನ್ನು ಬಂಧಿಸಿದೆ ಎಂದು ನಂಬಿದ್ದರಾದ್ದರಿಂದ ಮ್ಯಾಕ್ಸ್‌ಪ್ಲಾಂಕ್ ಸಿದ್ಧಾಂತಕ್ಕೂ ತಮ್ಮ ಸಿದ್ಧಾಂತಕ್ಕೂ ಏನೋ ಸಂಬಂಧವಿದೆ ಎಂದು ತರ್ಕಿಸುತ್ತಿದ್ದರು. ಈ ಎರಡು ಸಿದ್ಧಾಂತಗಳನ್ನು ಬಂಧಿಸಿರುವ ಸೂತ್ರ ಗಜಬಿಜಿಯಾಗಿ ಎಲ್ಲೋ ಸಿಕ್ಕಿಕೊಂಡಿದೆ, ತಾಳ್ಮೆಯಿಂದ ಹುಡುಕಿ ಈ ಗಂಟನ್ನು ಬಿಡಿಸಿದರೆ ಇಡೀ ಸೂತ್ರ ಒಂದೇ ಎಂಬುದು ಖಚಿತವಾಗಬಹುದು—ಎಂಬುದಾಗಿ ಅವರು ಆಲೋಚಿಸುತ್ತಿದ್ದರು. ಪಂಚಾಗ್ನಿಗಳ ಮಧ್ಯೆ ಒಂಟಿಗಾಲಿನಲ್ಲಿ ನಿಂತು ತಪಸ್ಸು ಮಾಡುವ ವೀರ ಋಷಿವರ್ಯನಂತೆ, ಹಿಂಸೆ, ಕ್ರೌರ್ಯಗಳು ತನ್ನನ್ನು ಸುತ್ತುಗಟ್ಟಿದ್ದರೂ ಸತ್ಯಶೋಧನೆಯಲ್ಲಿ ನಿರತರಾಗಿದ್ದರು ಐನ್‌ಸ್ಟೈನ್.

ಐನ್‌ಸ್ಟೈನರ ದೀರ್ಘ ಪರಿಶ್ರಮವು ಫಲಕೊಡದೆ ಹೋಗಲಿಲ್ಲ. ಪರಮಾಣುವಿಗೆ ಸಂಬಂಧಪಟ್ಟ ವಿದ್ಯುತ್ಕಾಂತವಲಯವನ್ನೂ ಸಾಪೇಕ್ಷವಾದವು ವಿವರಿಸಿರುವ ಗುರುತ್ವಾಕರ್ಷಣ (Gravitational field) ವಲಯವನ್ನೂ ಒಂದೇ ಸಮೀಕರಣದಿಂದ ವಿಶದೀಕರಿಸಲು

ಸಾಧ್ಯ ಎಂಬುದು ಕಟ್ಟಕಡೆಗೆ ಖಚಿತವಾಯಿತು.* ಇದು ಖಚಿತವಾದದ್ದು ೧೯೨೯ರಲ್ಲಿ; ಐನ್‌ಸ್ಟೈನರ ಐವತ್ತನೆಯ ವರ್ಷದ ವರ್ಧಂತಿಯು ಸಮೀಪಿಸುತ್ತಿದ್ದಾಗ.

ಐನ್‌ಸ್ಟೈನರ ವರ್ಧಂತಿಯ ಸಮಯದಲ್ಲಿ ಯಾವುದಾದರೂ ಒಂದು ಸೋಜಿಗದ ಸುದ್ದಿಯನ್ನು ಪ್ರಕಟಿಸಬೇಕೆಂದು ಪ್ರಯತ್ನಪಡುತ್ತಿದ್ದ ಪತ್ರಿಕೋದ್ಯೋಗಿಗಳಿಗೆ ಮೇಲೆ ಹೇಳಿದ ಸಂಶೋಧನೆ ಒಳ್ಳೆಯ ಅವಕಾಶವನ್ನೊದಗಿಸಿಕೊಟ್ಟಿತು. ಸಂಶೋಧನೆಗೆ ಸಂಬಂಧಪಟ್ಟಂತೆ ವಿಶೇಷ ಲೇಖನಗಳನ್ನು ಬರೆಸಿ ಪ್ರಕಟಿಸಿದರು. ಮೊದಲೇ ಪವಾಡಪುರುಷರೆಂದು ಪ್ರಖ್ಯಾತರಾಗಿದ್ದ ಐನ್‌ಸ್ಟೈನರು ಈ ಪ್ರಕಟಣೆಗಳ ದೆಸೆಯಿಂದ ಮತ್ತಷ್ಟು ದೊಡ್ಡ ಯಕ್ಷಿಣೆಗಾರರಾಗಿಬಿಟ್ಟರು. ವಿಶ್ವದಲ್ಲಿ ಪ್ರತಿಕ್ಷಣವೂ ನಡೆಯುವ ಕೋಟ್ಯನುಕೋಟಿ ಭೌತಿಕ ಘಟನೆಗಳನ್ನು ಒಂದೇ ಸಮೀಕರಣದಿಂದ ವಿವರಿಸಲು ಸಾಧ್ಯ ಎಂಬ ಮಾತು ಎಲ್ಲರನ್ನೂ ಅಚ್ಚರಿಗೊಳಿಸಿತು. ಕೌತುಕಗೊಂಡ ಜನರು ಪತ್ರಿಕೆಗಳಲ್ಲಿ ಬಂದಿದ್ದ ಲೇಖನಗಳನ್ನು ಓದಿ ಓದಿ ನೋಡಿದರು. ಆದರೆ ಲೇಖನಗಳಲ್ಲಿ ಉಪಯೋಗಿಸಿದ್ದ ಗಣಿತ ಶಾಸ್ತ್ರ; ಅವರ ಜ್ಞಾನಮಟ್ಟವನ್ನು ಮೀರಿದ್ದರಿಂದ ಹತಾಶರಾದರು. ಈ ನಿರಾಶೆ ಐನ್‌ಸ್ಟೈನರಲ್ಲಿ ಜನರಿಗಿದ್ದ ಭಕ್ತಿಗೌರವಗಳನ್ನು ಹೆಚ್ಚಿಸಿದುವೇ ಹೊರತು ಅದನ್ನು ಕುಂದುಮಾಡಲಿಲ್ಲ.

ಈ ಅವಧಿಯಲ್ಲಿ ನಾಜೀಪಕ್ಷ ಬಹು ಶಕ್ತಿಯುತವಾಗಿ ಬೆಳೆದಿದ್ದಿತು. ಗಣರಾಜ್ಯ ನಾಮ ಮಾತ್ರ ಅಧಿಕಾರದಲ್ಲಿತ್ತು.

## ಬರ್ಲಿನ್ ನಗರ ಸಭೆಯ ಹಾಸ್ಯಾಸ್ಪದ ವರ್ತನೆ

ವಾಸ್ತವವಾಗಿ ಅಧಿಕಾರದಲ್ಲಿದ್ದ ನಾಜೀಪಕ್ಷ ಐನ್‌ಸ್ಟೈನರ ಖ್ಯಾತಿಯು ಹಬ್ಬುತ್ತಿದ್ದುದನ್ನು ನೋಡಿ ಸಹಿಸಲಿಲ್ಲ. ಹೊಸ ಸಂಶೋಧನೆಯ ಕುರುಹಾಗಿ, ಐವತ್ತನೆಯ ವರ್ಷ ವರ್ಧಂತಿಯ ನೆನಪಿಗಾಗಿ ಐನ್‌ಸ್ಟೈನರನ್ನು ಗೌರವಿಸಬೇಕೆಂದು ಹೊರಟ ಸಂಸ್ಥೆಗಳನ್ನು ಹಾಗೆ ಮಾಡದಂತೆ ನಾಜೀ ಪಕ್ಷ ಹೆದರಿಸಿತು. ಈ ರೀತಿಯಲ್ಲಿ ಭಂಗಪಟ್ಟ ಸಂಸ್ಥೆಗಳಲ್ಲಿ ಬರ್ಲಿನ್ ನಗರ ಸಭೆಯೂ ಒಂದು.

೧೯೨೯ನೇ ಮಾರ್ಚಿ ೧೪ನೇ ತಾರೀಖು ಐನ್‌ಸ್ಟೈನರ ಐವತ್ತನೆಯ ಹುಟ್ಟಿದ ಹಬ್ಬ. ಆ ದಿನ ಐನ್‌ಸ್ಟೈನರನ್ನು ಸನ್ಮಾನಿಸಿ ಅವರಿಗೆ ಬಹುಪ್ರಿಯವಾಗಿದ್ದ ಬಯಲು ಪ್ರದೇಶವೊಂದನ್ನು ಉಡುಗೊರೆಯಾಗಿ ಕೊಡಬೇಕೆಂದು ನಗರಸಭೆಯವರು ತೀರ್ಮಾನಿಸಿದ್ದರು; ಐನ್‌ಸ್ಟೈನರು ತಮಗೆ ವಿರಾಮ ದೊರೆತಾಗಲೆಲ್ಲ ಆ ಪ್ರದೇಶಕ್ಕೆ ಹೋಗಿ ವಿಶ್ರಾಂತಿಯನ್ನನುಭವಿಸುತ್ತಿದ್ದರು. ಬಹು ರಮಣೀಯವಾದ ಬಯಲು ಅದು. ಸುತ್ತಲೂ ವೃಕ್ಷರಾಶಿ;

---

* ಇವೆರಡು ವಲಯಗಳನ್ನು ಒಂದೇ ಸಮೀಕರಣದಿಂದ ವಿವರಿಸಲು ಸಾಧ್ಯ ಎಂಬುದನ್ನು ಸಂಶೋಧನೆ ತೋರಿಸಿಕೊಟ್ಟಿತೇ ಹೊರತು, ಅವೆರಡಕ್ಕೂ ಇರುವ ಗುಣ ಲಕ್ಷಣಗಳನ್ನು ವಿವರಿಸುವ ಸಾಮಾನ್ಯ ಸಮೀಕರಣ ಅದರಿಂದ ತಿಳಿದು ಬಂದಿರಲಿಲ್ಲ.

ಮುಂದೆ ಮಂಜುಳರವದ ತೊರೆ; ಮಧ್ಯೆ ಚೆಲುವಿನ ಹೂದೋಟ. ಇದಕ್ಕೆ ಕಲಶವಿದ್ದಂತೆ ಮಧ್ಯೆ ಸರಳವೂ ಸುಂದರವೂ ಆದ ಪುಟ್ಟ ಮನೆ. ಶಾಂತಿಪ್ರಿಯರಾದ ಐನ್‌ಸ್ಟೈನರಿಗೆ ಕೊಡಲು ಇದಕ್ಕಿಂತ ಉತ್ತಮ ಉಡುಗೊರೆ ಇರಲಿಲ್ಲ.

ನಗರಸಭೆಯ ಈ ತೀರ್ಮಾನ ಕೂಡಲೇ ಪತ್ರಿಕೆಗಳಲ್ಲೆಲ್ಲಾ ಪ್ರಕಟವಾಯಿತು. ಐನ್‌ಸ್ಟೈನರಿಗೆ ಮಾತ್ರ ಸಂಗತಿಯು ತಕ್ಷಣ ತಿಳಿಯಲಿಲ್ಲ. ಕಾರಣವೇನೆಂದರೆ, ವರ್ಧಂತಿಯ ದಿನವೇ ಮುಂಜಾನೆಯಲ್ಲೇ ಅವರು ಶುಭಸಂದೇಶಗಳನ್ನು ತೆಗೆದುಕೊಂಡು ಬರುವ ಜನಗಳಿಂದ ಪಾರಾಗಲು ಬರ್ಲಿನ್ ನಗರವನ್ನು ಬಿಟ್ಟುಬಿಟ್ಟಿದ್ದರು. ಬರ್ಲಿನ್‌ಗೆ ಹತ್ತಿರದಲ್ಲಿದ್ದ ಆದರೆ ಜನಜಂಗುಳಿಯಿಂದ ದೂರವಾಗಿದ್ದ ಹಳ್ಳಿಯೊಂದರಲ್ಲಿ ಐನ್‌ಸ್ಟೈನರ ಸಂಸಾರ ಆ ಚಾರಿತ್ರಿಕ ದಿನವನ್ನು ಆಚರಿಸಿತು. ಮಾರನೆಯ ದಿನ ಬರ್ಲಿನ್ ಪಟ್ಟಣಕ್ಕೆ ಹಿಂತಿರುಗಿದರು. ಆಗಲೇ ಐನ್‌ಸ್ಟೈನರಿಗೆ ನಗರಸಭೆಯ ತೀರ್ಮಾನ ಗೊತ್ತಾದದ್ದು. ನಗರಸಭೆಯು ಕೊಡಬೇಕೆಂದು ತೀರ್ಮಾನ ಮಾಡಿದ್ದ ಉಡುಗೊರೆಯು ಬಹು ಬೆಲೆಯುಳ್ಳದ್ದಾದರೂ, ಅದನ್ನು ಪಡೆಯಬೇಕಾಗಿದ್ದ ಐನ್‌ಸ್ಟೈನರಿಗೆ ಅದೇನೋ ಅಮಿತಾನಂದವನ್ನು ತರಲಿಲ್ಲ. ಐವತ್ತನೆಯ ವರ್ಷ ವರ್ಧಂತಿಯ ದಿನ ಅವರಿಗೆ ಅಸಂಖ್ಯಾತ ಉಡುಗೊರೆಗಳೂ ಶುಭಸಂದೇಶಗಳೂ ಬಂದಿದ್ದುವು. ಅವುಗಳನ್ನು ಕಳಿಸಿದ್ದವರಲ್ಲಿ ಆಗರ್ಭ ಶ್ರೀಮಂತನಿಂದ ಹಿಡಿದು ಸಾಧಾರಣ ಕೂಲಿಕಾರನವರೆಗೆ, ಸಾಪೇಕ್ಷ ಸಿದ್ಧಾಂತವನ್ನು ಅರ್ಥ ಮಾಡಿಕೊಳ್ಳಬಲ್ಲ ಮೇಧಾವಿಯಿಂದ ಮೊದಲ್ಗೊಂಡು ಅದರ ಹೆಸರನ್ನೇ ಅರಿಯದ ಪಾಮರನ ವರೆಗೆ–ಎಲ್ಲ ತರಹದ ಜನಗಳೂ ಇದ್ದರು. ಹೀಗೆ ರಿಕ್ತರು ಮತ್ತು ಪಾಮರರಿಂದ ಬಂದ ಉಡುಗೊರೆಗಿಂತ ಹೆಚ್ಚಿನ ಪ್ರಾಮುಖ್ಯತೆಯನ್ನೇನೂ ಐನ್‌ಸ್ಟೈನರು ಬರ್ಲಿನ್ ನಗರಸಭೆಯವರು ಕೊಡಬೇಕೆಂದಿದ್ದ ಕಾಣಿಕೆಗೆ ಕೊಟ್ಟಿರಲಿಲ್ಲ.

ಐಹಿಕ ಸಂಪತ್ತಿನಲ್ಲಿ ಐನ್‌ಸ್ಟೈನರಿಗಿದ್ದಂಥ ಔದಾಸೀನ್ಯವನ್ನು ಅವರ ಪತ್ನಿಯವರು ಬೆಳೆಸಿಕೊಳ್ಳಲು ಸಾಧ್ಯವಿಲ್ಲದೆ ಹೋಗಿತ್ತು. ನಗರಸಭೆಯ ತೀರ್ಮಾನ ತಿಳಿದ ಕೂಡಲೇ ಅವರು ತಮಗೆ ದೊರಕುವ ನಿವೇಶನವನ್ನು ನೋಡಲು ಸಂಭ್ರಮದಿಂದ ಹೊರಟರು. ನಿವೇಶನದಲ್ಲಿದ್ದ ಪುಟ್ಟ ಮನೆಯಲ್ಲಿ ಯಾರೋ ವಾಸಿಸುತ್ತಿದ್ದುದನ್ನು ಕಂಡು ಅವರಿಗೆ ಆಶ್ಚರ್ಯವಾಯಿತು. ವಿಚಾರಿಸಿದಾಗ, ಪೌರಸಭೆಯು ಆ ಮನೆಯವರಿಗೆ ಅಲ್ಲಿ ವಾಸಿಸಲು ಅಪ್ಪಣೆಕೊಟ್ಟಿದ್ದು ತಿಳಿಯಬಂದಿತು. ಆ ಕಟ್ಟಡವೂ ನಿವೇಶನವೂ ಪೌರಸಭೆಯ ಸ್ವಾಮ್ಯಕ್ಕೆ ಬರುವ ಮುನ್ನ ಅಲ್ಲಿ ವಾಸಿಸುತ್ತಿದ್ದವರೇ ಅವುಗಳ ಮಾಲೀಕರಾಗಿದ್ದರಂತೆ. ಪೌರಸಭೆಯು ಅವುಗಳನ್ನು ಕೊಳ್ಳುವಾಗ ಕಟ್ಟಡವನ್ನು ಯಾವ ರೀತಿಯಲ್ಲಿಯೂ ವಿನಿಯೋಗ ಮಾಡುವುದಿಲ್ಲವೆಂದೂ ಮಾಲೀಕರ ವಂಶಸ್ಥರು ಅಲ್ಲಿಯೇ ವಾಸಮಾಡಲು ಸಂಪೂರ್ಣ ಹಕ್ಕಿರುವುದೆಂದೂ ಒಪ್ಪಂದ ಮಾಡಿಕೊಂಡಿದ್ದಿತಂತೆ. ಈ ಒಪ್ಪಂದಕ್ಕೆ ಅನುಗುಣವಾಗಿ ಕಟ್ಟಡದಲ್ಲಿ ಜನ ವಾಸಿಸುತ್ತಿದ್ದರು. ಬರ್ಲಿನ್ ನಗರಪಿತೃಗಳಿಗೆ ಈ ಅಂಶ ಗೊತ್ತಾಗದೆ ನಿರ್ಣಯ ಮಾಡಿಬಿಟ್ಟಿದ್ದರು.

ತಮ್ಮಿಂದ ಜಾರಿಗೆ ತರಲಾರದ ನಿರ್ಣಯವನ್ನು ಪೌರಸಭೆಯು ಮಾಡಿದ್ದನ್ನು ನೋಡಿ ಜನ ಅದನ್ನು ಹಾಸ್ಯಮಾಡತೊಡಗಿದರು. ಮಾಡಿದ್ದ ನಿರ್ಣಯ ನಗುಪಾಟಲಾಯಿತು.

ನಗರಸಭೆಯ ಸದಸ್ಯರು ಜನಗಳ ಟೀಕೆಗಳನ್ನು ಕೇಳಿ ನಾಚಿದರು. ಈ ಅವಮಾನದಿಂದ ಪಾರಾಗಲು ಅವರು ಒಂದು ಉಪಾಯವನ್ನು ಹುಡುಕಿದರು. ಅದರಂತೆ ಹಿಂದೆ ಹೇಳಿದ ನಿವೇಶನದಲ್ಲಿ ಒಂದು ಭಾಗವನ್ನು ಐನ್‌ಸ್ಟೈನರಿಗೆ ಕೊಡಬೇಕೆಂದು ನಗರಸಭೆಯ ತೀರ್ಮಾನ ವಾಯಿತು. ಈ ವಿಚಾರವನ್ನು ನಗರಸಭೆಯವರು ಐನ್‌ಸ್ಟೈನರ ಪತ್ನಿಗೆ ತಿಳಿಸಿದರು. ಅವರಿಗೆ ಎರಡನೆಯ ನಿರ್ಣಯವೂ ಒಪ್ಪಿಗೆಯಾಯಿತು. ಅದರಂತೆ ತಮಗೆ ಅನುಕೂಲವಾದ ಜಾಗವನ್ನು ಚುನಾಯಿಸಲು ಪೌರಸಭೆಯ ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಹೋದರು. ಆದರೆ ಆಗಲೂ ಮನೆಯಲ್ಲಿ ವಾಸಿಸುತ್ತಿದ್ದವರಿಂದ ವಿರೋಧ ಬಂತು. ಕಟ್ಟಡ ಒಂದೇ ಅಲ್ಲದೆ ನಿವೇಶನದಲ್ಲಿನ ಯಾವ ಭಾಗವೂ ಬೇರೆಯವರಿಗೆ ವಿಲೆವಾರಿ ಮಾಡದಂತೆ ಅದರ ಮಾಲೀಕರೂ ಸ್ವತ್ತನ್ನು ಮಾರುವಾಗ ಪೌರಸಭೆಗೆ ಷರತ್ತು ಹಾಕಿದ್ದರಂತೆ. ಅರ್ಥಹೀನವಾದ ಈ ಷರತ್ತನ್ನು ನಗರಸಭೆಯೊಂದೇ ಅಲ್ಲದೆ ಸರ್ಕಾರವೂ ಮನ್ನಿಸಿತ್ತಂತೆ. ಈ ಷರತ್ತನ್ನು ಮುಂದು ಮಾಡಿಕೊಂಡು ಕಟ್ಟಡದಲ್ಲಿ ವಾಸಿಸುತ್ತಿದ್ದವರು ಪೌರಸಭೆಯ ತೀರ್ಮಾನವನ್ನು ವಿರೋಧಿಸಿದರು.

ನಗರಸಭೆಯ ಸ್ಥಿತಿ ಮತ್ತಷ್ಟು ನಾಚಿಕೆಗೀಡಾಯಿತು. ಸಾರ್ವಜನಿಕರ ಉಪಯೋಗಕ್ಕೆ ಅದರಲ್ಲೂ ಬರ್ಲಿನ್ ನಗರದ ಕಣ್ಮಣಿಯಾದ ಐನ್‌ಸ್ಟೈನರಿಗೆ ಉಡುಗೊರೆಯಾಗಿ ಕೊಡುವುದಕ್ಕೆ ಖಾಸಗೀ ನಿವೇಶನವೊಂದನ್ನು ವಶಮಾಡಿಕೊಳ್ಳಲು ಶಕ್ತಿಯಿಲ್ಲದ ನಗರಸಭೆಯನ್ನು ಕಂಡು ಎಲ್ಲರೂ ನಗತೊಡಗಿದರು.

ನಿಜಸ್ಥಿತಿ ಜನ ನಗುವಷ್ಟು ವಿನೋದಕರವಾಗಿರಲಿಲ್ಲ. ಅದು ನೋವನ್ನುಂಟು ಮಾಡುವಂಥದಾಗಿತ್ತು. ಐನ್‌ಸ್ಟೈನರಿಗೆ ಕೊಡಬೇಕೆಂದಿದ್ದ ನಿವೇಶನವು ಅತಿ ವಿಶಾಲವಾಗಿದ್ದುದರಿಂದ ಅದರಲ್ಲಿ ಒಂದು ಭಾಗವನ್ನು ಅದರ ಒಡೆಯರು ಬಿಟ್ಟು ಕೊಟ್ಟಿದ್ದರೆ ಅದರಿಂದ ಅವರಿಗೇನೂ ತೊಂದರೆಯಾಗುತ್ತಿರಲಿಲ್ಲ; ಪ್ರತಿಯಾಗಿ ಗೌರವ ಬರುತ್ತಿತ್ತು. ನಗರಸಭೆಯ ಅಧಿಕಾರವಾದರೂ ಜನ ತಿಳಿದಷ್ಟು ಮೊಟಕಾಗಿರಲಿಲ್ಲ. ಒಡೆಯರು ತಕರಾರು ಮಾಡಿದರೆ ಅದನ್ನು ಲಕ್ಷ್ಯಮಾಡದೆ ಜಮೀನನ್ನು ಸ್ವಾಧೀನಮಾಡಿಕೊಳ್ಳುವಷ್ಟು ಅಧಿಕಾರವು ನಗರಸಭೆಗಿತ್ತು. ನಾಜೀ ಪಕ್ಷಕ್ಕೆ ಒಳಗೊಳಗೆ ಬೆಂಬಲಕೊಡುತ್ತಿದ್ದವರೇ ನಗರಸಭೆಯ ಆಡಳಿತ ವರ್ಗದಲ್ಲಿದ್ದರು. ಐನ್‌ಸ್ಟೈನರನ್ನು ಗೌರವಿಸುವುದು ನಾಜೀ ಪಕ್ಷಕ್ಕೆ ಸಮ್ಮತವಾಗಿಲ್ಲದಿದ್ದುದರಿಂದ ಆಡಳಿತ ವರ್ಗವು ನಗರಸಭೆಯಲ್ಲಾದ ನಿರ್ಣಯವನ್ನು ಜಾರಿಗೆ ತರಲು ಮನಸ್ಸು ಮಾಡಲಿಲ್ಲ; ಬದಲಾಗಿ ಅದು ಜಾರಿಗೆ ಬರದಂತೆ ಮಾಡಲು ಪ್ರಯತ್ನಪಟ್ಟರು. ತಮ್ಮ ಪ್ರಯತ್ನದಲ್ಲಿ ಜಯಶೀಲರೂ ಆದರು. ಆಡಳಿತ ವರ್ಗದವರ ಮುಂದೆ ನಗರಸಭೆಯ ಸದಸ್ಯರು ನಿಸ್ಸಹಾಯಕರಾಗಿದ್ದರು. ನಿವೇಶನವನ್ನು ಅನುಭೋಗಿಸುತ್ತಿದ್ದ ಮಾಲೀಕರು ಆಡಳಿತ ವರ್ಗದವರಿಗೆ ಹೆದರಿಕೊಂಡಿದ್ದರು. ಹೀಗೆ ನಾಜೀ ಪಕ್ಷದ ಗುಪ್ತ ಶಕ್ತಿಯ ಎದುರಿಗೆ ನಗರಸಭೆಯ ಸದುದ್ದೇಶಪೂರಿತ ನಿರ್ಣಯ ನಿರ್ಬಲವಾಯಿತು.

ನಗರಸಭೆಯ ಸದಸ್ಯರಿಗೆ ತಮ್ಮ ನೌಕರರ ಕುಟಿಲತನ ಅರ್ಥವಾಗಿತ್ತು. ಪ್ರಜಾ ಸಮುದಾಯದಲ್ಲಿ ತಾವು ಎಂಥ ಅವಹೇಳನಕ್ಕೆ ಗುರಿಯಾಗಿದ್ದೇವೆಂಬುದೂ ಅರಿವಾಗಿತ್ತು. ತಮಗೊದಗಿರುವ ಅಪಕೀರ್ತಿಯನ್ನು ಹೇಗಾದರೂ ಮಾಡಿ ನೀಗಿಸಿಕೊಳ್ಳಬೇಕೆಂದು ಅವರು ಮತ್ತೊಂದು ಮಾರ್ಗವನ್ನು ಹುಡುಕಿದರು. ಅದರಂತೆ ಬರ್ಲಿನ್ ನಗರದಲ್ಲಿ ಮಾರಾಟಕ್ಕಿರುವ ನಿವೇಶನಗಳಲ್ಲಿ ಒಂದನ್ನು ಪೌರಸಭೆಯು ಕೊಂಡುಕೊಂಡು ಅದನ್ನು ಐನ್‌ಸ್ಟೈನರಿಗೆ ಅರ್ಪಿಸುವುದೆಂದು ತೀರ್ಮಾನವಾಯಿತು. ಅನುಕೂಲವಾದ ಸ್ಥಳವನ್ನು ಆರಿಸಿಕೊಳ್ಳಬೇಕೆಂದು ನಗರಸಭೆಯು ಐನ್‌ಸ್ಟೈನರ ಪತ್ನಿಯನ್ನು ಕೇಳಿಕೊಂಡಿತು. ಆಕೆ ಬರ್ಲಿನ್ ನಗರವನ್ನು ಸುತ್ತಾಡಿ ತಮಗೆ ಅನುಕೂಲವಾದ ಸ್ಥಳವನ್ನು ಸದಸ್ಯರಿಗೆ ತೋರಿಸಿದರು.

ಈ ವೇಳೆಗೆ ನಗರಸಭೆಯ ಸ್ಥಿತಿಯು ಹದಗೆಟ್ಟಿತು. ಅದರ ನಡವಳಿಕೆಗಳು ಐನ್‌ಸ್ಟೈನರಿಗೆ ತೀರಾ ಬೇಸರವನ್ನುಂಟುಮಾಡಿದ್ದುವು. ಸಾಲದ್ದಕ್ಕೆ ಜನಗಳು ಬೇರೆ ಐನ್‌ಸ್ಟೈನರನ್ನು ಆಡಿಕೊಳ್ಳಲು ಮೊದಲು ಮಾಡಿದ್ದರು. ಬರ್ಲಿನ್ ನಗರದಲ್ಲಿ ನಿವೇಶನ ಒಂದನ್ನು ಉಚಿತವಾಗಿ ಪಡೆದುಕೊಳ್ಳಲು ಐನ್‌ಸ್ಟೈನರು ನಗರಸಭೆಯ ಸದಸ್ಯರನ್ನು ಎತ್ತಿಕಟ್ಟಿದ್ದಾರೆ ಎಂದು ಜನ ಅನ್ನತೊಡಗಿದ್ದರು. ಅನಾವಶ್ಯಕವಾಗಿ ಇಂಥ ಅಪನಿಂದೆಯನ್ನು ಕೇಳಲು ಐನ್‌ಸ್ಟೈನರು ಇಷ್ಟಪಡಲಿಲ್ಲ. ಈ ಕಾರಣಗಳಿಂದ ಅವರು ಪೌರಸಭೆಯು ಕೊಡಬೇಕೆಂದಿದ್ದ ಕಾಣಿಕೆಯನ್ನು ನಿರಾಕರಿಸಲು ಮನಸ್ಸು ಮಾಡಿದ್ದರು. ಇದನ್ನು ತಿಳಿದ ನಗರಸಭೆಯ ಸದಸ್ಯರು ಐನ್‌ಸ್ಟೈನರಲ್ಲಿಗೆ ಹೋಗಿ ತಮ್ಮ ತೀರ್ಮಾನಕ್ಕೆ ಅವರು ಒಪ್ಪಿಗೆ ಕೊಡಬೇಕೆಂದೂ, ಇಲ್ಲದಿದ್ದಲ್ಲಿ ಸಭೆಗೆ ಜನಗಳಿಂದ ತುಂಬಾ ಅವಮಾನವಾಗುವುದೆಂದೂ ನಿವೇದಿಸಿಕೊಂಡಿದ್ದರು. ಸಭಾಸದಸ್ಯರ ಸದುದ್ದೇಶವನ್ನರಿತ ಐನ್‌ಸ್ಟೈನರು ಅವರ ಮನಸ್ಸನ್ನು ನೋಯಿಸಲು ಇಚ್ಛೆಪಡದೆ ಅವರ ಮನಸಿಗೆ ಅಸ್ತು ಅಂದಿದ್ದರು. ನಿವೇಶನವನ್ನು ಹುಡುಕಲು ಅವರ ಪತ್ನಿ ಹೊರಟದ್ದು ಐನ್‌ಸ್ಟೈನರ ಈ ಅನುಮತಿ ದೊರಕಿದ ಮೇಲೆಯೇ.

ನಗರಸಭೆಯ ದುರವಸ್ಥೆ ಅಷ್ಟಕ್ಕೇ ಮುಗಿಯಲಿಲ್ಲ. ಅವರ ಯಾವ ತೀರ್ಮಾನವನ್ನು ಜಾರಿಗೆ ತರಬಾರದೆಂದು ಮನಸ್ಸು ಮಾಡಿದ್ದ ನಾಜೀಗಳು ಮೇಲೆ ಹೇಳಿರುವ ಮೂರನೆಯ ನಿರ್ಣಯವನ್ನೂ ಮಣ್ಣುಗೂಡಿಸಿದರು. ನಿವೇಶನವನ್ನು ಕೊಳ್ಳಲು ಬೇಕಾದ ಹಣಕ್ಕೆ ನಗರಸಭೆಯ ಅನುಮತಿ ಕೊಡಬೇಕಾಗಿತ್ತು. ಐನ್‌ಸ್ಟೈನರನ್ನು ಗೌರವಿಸಬೇಕೆಂದಿದ್ದ ಸದಸ್ಯರು ತಕ್ಕ ನಿರ್ಣಯವನ್ನು ಸಭೆಯ ಮುಂದೆ ತಂದಿದ್ದರು. ಅನಿರೀಕ್ಷಿತವಾಗಿ ವಿರೋಧ ಬಂದಿತು. ಅಷ್ಟು ದಿನವೂ ಒಮ್ಮತದಿಂದ ಕೆಲಸ ಮಾಡುತ್ತಿದ್ದ ನಗರ ಪಿತೃಗಳ ವಿರಸ ಹುಟ್ಟಿಕೊಂಡಿತ್ತು. ಕೆಲವು ಸದಸ್ಯರು ನಾಜೀ ಪಕ್ಷದಕಡೆ ಸೇರಿಕೊಂಡುಬಿಟ್ಟರು. ಈ ಸದಸ್ಯರು ನಗರದ ಪ್ರತಿಯೋರ್ವನಿಗೆ ನಿವೇಶನ ಕೊಂಡುಕೊಡಲು ನಗರಸಭೆಯು ಹಣ ಖರ್ಚುಮಾಡುವುದು ಸರಿಯಲ್ಲ ಎಂದು ವಾದಿಸಲು ಆರಂಭಿಸಿದರು. ನಾಜೀ ಪ್ರಭಾವಕ್ಕೆ ಸಿಲುಕಿದ ಪತ್ರಿಕೆಗಳು ಆ ನಿರ್ಣಯವನ್ನು ಖಂಡಿಸಲು ಮೊದಲು ಪ್ರಯತ್ನ ಮಾಡಿದುವು. ನಗರಸಭೆಯಲ್ಲಿ ನಿರ್ಣಯದ ಪರವಾಗಿಯೂ ವಿರೋಧವಾಗಿಯೂ ವಾಗ್ಯುದ್ಧಗಳು ನಡೆದುವು. ಸಭೆ

ಗೊಂದಲವಾಗಿ ಪರಿಣಮಿಸಿತು. ಐನ್‌ಸ್ಟೈನರಿಗೆ ಉಡುಗೊರೆ ಕೊಡುವ ವಿಷಯದಲ್ಲಿ ನಗರಸಭೆಯು ಯಾವ ತೀರ್ಮಾನಕ್ಕೂ ಬರಲಾಗಲಿಲ್ಲ.

ನಗರಸಭೆಯ ಅವಿವೇಕದ ನಡುವಳಿಕೆಯನ್ನು ಸಹಿಸುವುದು ಐನ್‌ಸ್ಟೈನರಿಗೆ ಅಸಾಧ್ಯವಾಯಿತು. ಸಭೆಯಲ್ಲಿನ ಬಿಕ್ಕಟ್ಟಿಗೆ ಕಾರಣವಾಗಬೇಕಾಯಿತಲ್ಲಾ ಎಂದು ಅವರಿಗೆ ನೋವೂ ಆಯಿತು. ಆ ಬಿಕ್ಕಟ್ಟನ್ನು ಮತ್ತಷ್ಟು ಬೆಳೆಸಬಾರದೆಂಬ ಉದ್ದೇಶದಿಂದ ಅವರು ನಗರಸಭೆಯು ಕೊಡಬೇಕೆಂದಿದ್ದ ಉಡುಗೊರೆಯನ್ನು ವಿನಯಪೂರ್ವಕವಾಗಿ ನಿರಾಕರಿಸಿದರು. ಐನ್‌ಸ್ಟೈನರನ್ನು ಸನ್ಮಾನಿಸುವ ಸಲುವಾಗಿ ಸಭಾಸದಸ್ಯರು ಮಾಡಿದ್ದ ಪ್ರಯತ್ನ ಅಲ್ಲಿಗೆ ಕೊನೆಗೊಂಡಿತು. ಆದರ ಸಲುವಾಗಿ ನಗರ ಪಿತೃಗಳು ತಮ್ಮ ತಮ್ಮಲ್ಲಿ ಜಗಳವಾಡಿಕೊಳ್ಳುವುದು ತಪ್ಪಿತು.

ನಗರಸಭೆಯವರು ಕಾಣಿಕೆಯಾಗಿ ಕೊಡಬೇಕೆಂದಿದ್ದ ಮನೆಯೇನೋ ಐನ್‌ಸ್ಟೈನರಿಗೆ ಲಭಿಸಲಿಲ್ಲ. ಆದರೆ ಅದರಿಂದುಂಟಾದ ಸ್ವಂತ ಮನೆಯ ಆಶೆ ಐನ್‌ಸ್ಟೈನರ ಪತ್ನಿಯ ಮನಸ್ಸಿನಲ್ಲಿ ಬೇರೂರಿಬಿಟ್ಟಿತ್ತು. ತಾವು ಏನಾದರೂ ಮಾಡಿ ಒಂದು ಹೊಸ ಮನೆಯನ್ನು ಕಟ್ಟಿಕೊಳ್ಳಬೇಕೆಂದು ಆಕೆ ಆಶಿಸಿದಳು. ಈ ಆಶೆಯನ್ನು ಪತಿಗೆ ತಿಳಿಸಿದಳು. ಮನೆಯ ಸಲುವಾಗಿ ಕುಹಕಿಗಳ ಟೀಕೆಗೆ ಗುರಿಯಾಗಿದ್ದ ಐನ್‌ಸ್ಟೈನರು ಪತ್ನಿಯ ಆಶೆಯನ್ನು ಸಫಲಗೊಳಿಸುವ ನಿಶ್ಚಯ ಮಾಡಿದರು. ತಾವು ಸ್ವಂತಮನೆಯನ್ನು ಕಟ್ಟುವುದರಿಂದ ತಮಗುಂಟಾಗಿದ್ದ ಅಪಖ್ಯಾತಿಯು ಹೋಗುವುದೆಂದೂ ಅವರು ಎಣಿಸಿದರು. ಬರ್ಲಿನ್ ನಗರಕ್ಕೆ ಬಂದ ಮೇಲೆ ಗಳಿಸಿಟ್ಟಿದ್ದ ಹಣವೆಲ್ಲವನ್ನೂ ವೆಚ್ಚಮಾಡಿ ಐನ್‌ಸ್ಟೈನರು ಮನೆಯನ್ನು ಕಟ್ಟಿಸಿದರು; ಇದರಿಂದ ಅವರ ಉಳಿತಾಯವೆಲ್ಲವೂ ಕರಗಿಹೋಗಿದ್ದರೂ ತಾವು ಸ್ವಂತ ಮನೆಯಲ್ಲಿದ್ದೇವೆಂಬ ತೃಪ್ತಿಯು ಅವರಿಗೆ ದೊರಕಿ ಜನಗಳ ಟೀಕೆ ತಪ್ಪಿಹೋಯಿತು.

ಇದ್ದಕ್ಕಿದ್ದಂತೆಯೇ ಕುತ್ಸಿತ ಟೀಕೆಗಳು ನಿಂತುಹೋದುದನ್ನು ನೋಡಿ ಐನ್‌ಸ್ಟೈನರಿಗೆ ನಗುಬಂತು; ತಮ್ಮಲ್ಲಿದ್ದ ದುಡ್ಡನ್ನು ಖರ್ಚು ಮಾಡಿಸುವುದಕ್ಕೆ ಆ ಟೀಕೆಗಳು ಹುಟ್ಟಿಕೊಂಡುವೇನೋ ಎನ್ನಿಸಿತು. ಕಷ್ಟ ಸಂಕಟಗಳು ಬಂದ ಸಮಯದಲ್ಲಿ, ಶತ್ರುಗಳು ದುರ್ಬುದ್ಧಿಯಿಂದ ತಮಗೆ ತೊಂದರೆ ಕೊಟ್ಟ ಸಮಯದಲ್ಲಿ, ವಿನೋದಪಡುವುದು ಐನ್‌ಸ್ಟೈನರ ಸ್ವಭಾವವಾಗಿತ್ತು, ನಕ್ಕು ಒದಗಿರುವ ಕಷ್ಟವನ್ನು ಮರೆಯುವುದು ಅವರ ಹುಟ್ಟು ಗುಣವಾಗಿತ್ತು.

## ಅಮೇರಿಕಾಕ್ಕೆ ಮತ್ತೊಮ್ಮೆ ಭೇಟಿ

ಐನ್‌ಸ್ಟೈನರು ಹೊಸ ಮನೆಯಲ್ಲಿ ಹೋಗಿ ನಿಂತ ಸ್ವಲ್ಪ ದಿನಗಳೊಳಗಾಗಿ ಕ್ಯಾಲಿಫೋರ್ನಿಯಾದಿಂದ ಆಹ್ವಾನ ಬಂತು. ಅಲ್ಲಿನ ಪ್ರಮುಖ ವಿದ್ಯಾ ಸಂಸ್ಥೆಯಾದ 'ಕ್ಯಾಲಿಫೋರ್ನಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ'ಯು ವಿಸಿಟಿಂಗ್ ಪ್ರೊಫೆಸರಾಗಬೇಕೆಂದು ಐನ್‌ಸ್ಟೈನರನ್ನು ಬಿನ್ನವಿಸಿಕೊಂಡಿತು. ಈ ಕೋರಿಕೆಯನ್ನು ಮನ್ನಿಸಲು ಐನ್‌ಸ್ಟೈನರು ೧೯೩೦ನೇ ಡಿಸೆಂಬರ್‌ನಲ್ಲಿ ಹಡಗು ಹತ್ತಿದರು.

ಐನ್‌ಸ್ಟೈನರು ಅಮೇರಿಕಾದ ನೆಲವನ್ನು ಮುಟ್ಟಿದಾಗ ಒಂದು ವಿನೋದ ಪ್ರಸಂಗ ನಡೆಯಿತು. ಅಲ್ಲಿನ ಮಹಿಳೆಯರು ಐನ್‌ಸ್ಟೈನರಂಥ ಶಾಂತಿವಾದಿಗಳು 'ವೀರಭೂಮಿ'ಯಾದ ತಮ್ಮ ದೇಶಕ್ಕ ಕಾಲಿಡಕೂಡದೆಂದು ಚಳುವಳಿ ಹೂಡಿದರು. ಈ ಚಳುವಳಿಯನ್ನು ಕಂಡು ಐನ್‌ಸ್ಟೈನರಿಗೆ ತಡೆಯಲಸಾಧ್ಯವಾದ ನಗು ಬಂತು. "ಕಲ್ಲೆದೆಯ ಬಂಡವಾಳಗಾರರೊಂದಿಗೆ ನಿರ್ದಾಕ್ಷಿಣ್ಯವಾಗಿ ಹೂಡಬೇಕಾದ ಸಮರ ಮತ್ತು ಮನೆಯ ಮಡದಿಯೊಂದಿಗೆ ಅನಿವಾರ್ಯ ವಾಗಿ ಆಡಬೇಕಾದ ಜಗಳ—ಇವೆರಡು ಹೊರತು ಉಳಿದೆಲ್ಲ ತರಹದ ಯುದ್ಧಗಳನ್ನೂ ವಿರೋಧಿಸುವ ನನಗೆ ವೀರರಮಣಿಯರಾದ ನೀವು ಸ್ವಾಗತ ನೀಡಬೇಕಾದ್ದು ತಾನೇ ಏಕೆ? ರೋಮನ್ ಸಾಮ್ರಾಜ್ಯ ಒಮ್ಮೆ ತಮ್ಮಂಥ ಜಾಣೆಯರಿಂದ ರಕ್ಷಿಸಲ್ಪಟ್ಟಿತಲ್ಲವೇ ? ಅದನ್ನು ನೆನಪಿಗೆ ತಂದುಕೊಂಡು ನಿಮ್ಮ ಬುದ್ಧಿವಾದಕ್ಕೆ ಮಣಿಯುತ್ತೇನೆ" ಎಂದು ವಿನೋದವಾದ ಮಾತುಗಳನ್ನಾಡಿ ಚಳುವಳಿಗಾರರಿಗೆ ಪಾಠ ಕಲಿಸಿದರು. ಅಮೇರಿಕ ಸರ್ಕಾರವು ಮೊದ ಮೊದಲು ಈ ಚಳುವಳಿಗೆ ಸಲ್ಲದ ಪ್ರಾಮುಖ್ಯತೆಯನ್ನು ಕೊಟ್ಟಿತ್ತು. ಐನ್‌ಸ್ಟೈನರ ಆಗಮನಕ್ಕೆ ಅಡ್ಡಿಯನ್ನುಂಟುಮಾಡುವ ಯೋಜನೆ ಮಾಡಿದ್ದಿತು. ಆದರೆ ಕ್ರಮೇಣ ತನ್ನ ತಿಳಿಗೇಡಿತನವನ್ನು ಅರಿತುಕೊಂಡು ಐನ್‌ಸ್ಟೈನರಿಗೆ ಎಲ್ಲ ಸೌಲಭ್ಯಗಳನ್ನೂ ಒದಗಿಸಿತು.

ಐನ್‌ಸ್ಟೈನರು ಅಮೇರಿಕದಲ್ಲಿ ಸ್ವಲ್ಪ ಕಾಲವಿದ್ದು ೧೯೩೧ನೆಯ ವಸಂತ ಋತುವಿ ನಲ್ಲಿ ಸ್ವದೇಶಕ್ಕೆ ಮರಳಿದರು. ಕ್ಯಾಲಿಫೋರ್ನಿಯಾ ಸಂಸ್ಥೆಯೊಂದಿಗೆ ಆಗಿದ್ದ ಒಪ್ಪಂದದಂತೆ ಅವರು ಪ್ರತಿ ಹೇಮಂತ ಋತುವಿನಲ್ಲೂ ಅಮೇರಿಕಕ್ಕೆ ಹೋಗಿ ಅಲ್ಲಿ ಮುಂದಿನ ವಸಂತ ಋತುವಿನ ವರೆಗೆ ನಿಲ್ಲಬೇಕಾಗಿತ್ತು. ಈ ಒಪ್ಪಂದದ ಪ್ರಕಾರ ಅವರು ೧೯೩೧ನೆಯ ಡಿಸೆಂ ಬರ್‌ನಲ್ಲಿ ಅಮೇರಿಕಾಕ್ಕೆ ಹೋಗಿ ೧೯೩೨ನೇ ಮಾರ್ಚ್‌–ಎಪ್ರಿಲ್‌ನಲ್ಲಿ ಜರ್ಮನಿಗೆ ಹಿಂತಿರು ಗಿದರು. ಕ್ಯಾಲಿಫೋರ್ನಿಯಾದಲ್ಲಿ ಮತ್ತೊಬ್ಬ ಪ್ರಖ್ಯಾತ ವಿಜ್ಞಾನಿ ಮಿಲಿಕನ್ ಅವರ ಸಹೋದ್ಯೋಗಿಯಾಗಿದ್ದರು. ಐನ್‌ಸ್ಟೈನರಿಗೆ ಅವರ ಸಹವಾಸ ಮೆಚ್ಚಿನದಾಗಿತ್ತು.

## ದೇಶತ್ಯಾಗ

೧೯೩೨ನೇ ವಸಂತ ಋತುವಿನ ಹೊತ್ತಿಗೆ ಜರ್ಮನಿಯಲ್ಲಿ ಅತ್ಯಾಶ್ಚರ್ಯಕರವಾದ ಬದಲಾವಣೆಗಳಾಗಿಹೋಗಿದ್ದುವು. ಅಲ್ಲಿದ್ದ ಗಣರಾಜ್ಯವು ತನ್ನ ಎಲ್ಲ ಶಕ್ತಿಯನ್ನೂ ಕಳೆದು ಕೊಂಡು ಕುಟುಕು ಜೀವನವನ್ನಿಟ್ಟುಕೊಂಡಿದ್ದಿತು. ಐನ್‌ಸ್ಟೈನರು ಜರ್ಮನಿಗೆ ಬಂದ ಸ್ವಲ್ಪ ದಿನಗಳಲ್ಲಿಯೇ ಅಂದರೆ ೧೯೩೨ನೆಯ ಮಾರ್ಚ್ ತಿಂಗಳಲ್ಲಿ ಜರ್ಮನಿಯ ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಿತು. ಡೆಮೊಕ್ರಾಟಿಕ್ ಮತ್ತು ಸೋಷಿಯಲಿಸ್ಟ್ ಪಕ್ಷಗಳ ಪರವಾಗಿ ಹಿಂಡೆನ್ ಬರ್ಗನೂ (Hindenburg) ನಾಜೀ ಪಕ್ಷದ ಪರವಾಗಿ ಹಿಟ್ಲರನೂ ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಸಿದ್ದರು. ಹಿಂಡೆನ್‌ಬರ್ಗ್ ವಿಜಯಿಯಾದನು. ಹಿಟ್ಲರನು ಸೋತರೂ ಅತಿ ಪ್ರಭಾವ ಶಾಲಿಯಾಗಿಯೇ ಉಳಿದನು. ಇದನ್ನು ತಿಳಿದ ಹಿಂಡನ್‌ಬರ್ಗ್ ಪ್ರಜಾಪ್ರಭುತ್ವವಾದಿಗಳಾದ ತನ್ನ ಹಿಂದಿನ ಗೆಳೆಯರನ್ನೆಲ್ಲಾ ದೂರೀಕರಿಸಿ ಹಿಟ್ಲರ್‌ನ ಬೆಂಬಲಿಗರಿಗೇ ಅಧಿಕಾರಗಳನ್ನು

ಕೊಡುತ್ತಾ ಬಂದನು. ಹಿಟ್ಲರನು ಬೋಧಿಸುತ್ತಿದ್ದ ನಾಜೀ ವಾದದಲ್ಲಿ ಸಂಶೂಕಿಯುಳ್ಳವನಾಗಿದ್ದ ವಾನ್ ಪೇಪನ್ (Papen) ಎಂಬುವವನು ಛಾನ್ಸಲರ್ ಆದನು. ತಾವು ಪ್ರತಿಪಾದಿಸುತ್ತಿದ್ದುದಕ್ಕೆ ತಕ್ಕಂತೆ ಅಧಿಕಾರಕ್ಕೆ ಬಂದಮೇಲೆ ದೇಶವನ್ನಾಳಲು ಅವನು ಖಡ್ಗವನ್ನೇ ಆಶ್ರಯಿಸಿದನು. ದೇಶದಲ್ಲಿ ಅಶಾಂತಿ ಹೆಚ್ಚಿ ಪ್ರಜೆಗಳೆಲ್ಲರೂ ಭೀತರಾದರು. ಇದನ್ನು ಕಂಡು ಸರ್ವರ ಶುಭವನ್ನೂ ಹಾರೈಸುತ್ತಿದ್ದ ಹಿರಿಯರು ಖೇದಗೊಂಡರು. ಐನ್‌ಸ್ಟೈನರು ಮುಂದೊದಗಬಹುದಾದ ಅನಾಹುತಗಳನ್ನು ಊಹಿಸಿದರು. ದೇಶಕ್ಕೆ ಅನಿಷ್ಟವಾದ ಜಾಡ್ಯ ಹಿಡಿದಿದೆ ಎಂದು ಅವರಿಗೆ ಸಂಕಟವಾಯಿತು. ಪೇಪನ್ನಿನ ಆಡಳಿತ ನಾಜೀಗಳ ವಿಜಯದಲ್ಲಿ ಪರ್ಯವಸಾನವಾಗುವುದೆಂಬುದರಲ್ಲಿ ಅವರಿಗೆ ಎಳ್ಳಷ್ಟೂ ಸಂಶಯವಿರಲಿಲ್ಲ.

ಜರ್ಮನಿಯು ಹೀಗೆ ಪ್ರತಿಗಾಮಿಗಳಿಗೆ ಸಿಕ್ಕಿ ತನ್ನ ವಿನಾಶದ ಕಡೆಗೆ ರಭಸದಿಂದ ಮುನ್ನುಗ್ಗುತ್ತಿದ್ದಾಗಲೇ ಐನ್‌ಸ್ಟೈನರು ಮೂರನೆಯ ಬಾರಿ ಕ್ಯಾಲಿಫೋರ್ನಿಯಾಕ್ಕೆ ಹೊರಟಿದ್ದು. ಆ ಸಾರಿ ದೇಶವನ್ನು ಬಿಟ್ಟಮೇಲೆ ಮುಂದೆ ಸ್ವದೇಶಕ್ಕೆ ಕಾಲಿಡುವುದು ಅಸಂಭವವೆಂಬ ಅಂಶ ಅವರ ಕಣ್ಣಿಗೆ ಕಟ್ಟಿದಂತಾಗಿತ್ತು. ಮತ್ತೊಮ್ಮೆ ಕ್ಯಾಲಿಫೋರ್ನಿಯಾದಿಂದ ಹಿಂತಿರುಗುವ ವೇಳೆಗೆ ದೇಶವು ಯುದ್ಧ ಪಾತಕಿಗಳ ಪಾಲಾಗಿರುತ್ತದೆಂದು ಅವರು ಚೆನ್ನಾಗಿ ಮನಗಂಡಿದ್ದರು. ಆದ್ದರಿಂದ ಆ ಸಾರಿ ಮನೆಬಿಟ್ಟು ಹೊರಡುವಾಗ ತಮ್ಮ ಪತ್ನಿಗೆ "ನಾವು ಅತಿ ಕಷ್ಟಪಟ್ಟು ಕಟ್ಟಿಸಿರುವ ಈ ನಮ್ಮ ಮನೆಯನ್ನು ಮತ್ತೊಮ್ಮೆ ಚೆನ್ನಾಗಿ ನೋಡಿಬಿಡು" ಎಂದು ಹೇಳಿದರು.

"ಏಕೆ ?" ಅವರ ಪತ್ನಿಯವರ ಪ್ರಶ್ನೆ.

"ಏಕೆಂದರೆ ಇನ್ನೊಮ್ಮೆ ಇದನ್ನು ನೋಡಲಾರೆ."

ಐನ್‌ಸ್ಟೈನರ ಉತ್ತರದಲ್ಲಿ ನಿರಾಶೆಯಾಗಲೀ, ದುಗುಡವಾಗಲೀ, ಉದ್ರೇಕವಾಗಲೀ ಇರಲಿಲ್ಲ. "ಯಾವ ದೇಶದಲ್ಲಿ ವ್ಯಕ್ತಿಸ್ವಾತಂತ್ರ್ಯಕ್ಕೆ ಚ್ಯುತಿ ಬಂದಿದೆಯೋ, ಯಾವ ದೇಶದ ಪ್ರಜೆಗಳಲ್ಲಿ ಪರಸ್ಪರ ಸಹನೆ ಇರುವುದಿಲ್ಲವೋ ಎಲ್ಲಿ ನ್ಯಾಯ ಕಾನೂನುಗಳ ಮುಂದೆ ಪ್ರಜೆಗಳು ಸಮಾನರೆಂದು ಪರಿಗಣಿತವಾಗುವುದಿಲ್ಲವೋ, ಅಂಥ ದೇಶದಲ್ಲಿ ನಾನು ಕ್ಷಣಮಾತ್ರವೂ ಇರಲಾರೆ" ಎಂದು ಅವರು ಆಗಾಗ ಹೇಳುತ್ತಿದ್ದರು. ಅವರನ್ನು ಇಪ್ಪತ್ತು ವರುಷಗಳ ಕಾಲ ಸಲಹಿದ್ದ ಜರ್ಮನಿ ಕಾನೂನು ಕಾಯಿದೆಗಳನ್ನು ಮುರಿದುಹಾಕಿ ವ್ಯಕ್ತಿಸ್ವಾತಂತ್ರ್ಯವನ್ನು ಕಸಿದುಕೊಂಡು ಹೀನಸ್ಥಿತಿಗೆ ಇಳಿಯಿತು. ತಾಯಿನಾಡಾಗಿದ್ದರೂ ಅಂಥ ದೇಶವನ್ನು ತೊರೆಯಲು ಅವರು ದುಃಖವನ್ನೇಕೆ ಪಡಬೇಕು ? ಋಷಿಯಾದವನು ತನ್ನ ಆತ್ಮದ ಉದ್ಧಾರಕ್ಕೆ ಪ್ರಪಂಚವನ್ನೇ ತೊರೆಯಬೇಕಾಗುತ್ತದಲ್ಲವೆ ?

ಐನ್‌ಸ್ಟೈನರ ಎಣಿಕೆಯಂತೆಯೇ ಜರ್ಮನಿಯಲ್ಲಿ ಘಟನಾವಳಿಗಳು ನಡೆದು ಹೋದವು. ಸ್ವಲ್ಪ ದಿನಗಳಾದ ಮೇಲೆ ಹಿಂಡನ್‌ಬರ್ಗ್‌ನು ಪೇಪನ್‌ನನ್ನು ಬದಲಿಸಿ ಶ್ಲೀಚರ್ ಎಂಬ ಮತ್ತೊಬ್ಬನನ್ನು ಛಾನ್ಸಲರ್ ಪದವಿಗೇರಿಸಿದನು. ಅವನು ತನ್ನ ಕೈಕೆಳಗೆ ಕಾರ್ಮಿಕ ಸರಕಾರವನ್ನು ಏರ್ಪಡಿಸಲು ಪ್ರಯತ್ನಪಟ್ಟನು. ತನ್ನ ಪ್ರಯತ್ನದಲ್ಲಿ ವಿಫಲನಾಗಲು ಅವನು

ರಾಜೀನಾಮೆಯನ್ನು ಕೊಟ್ಟನು. ಬೇರೆ ಮಾರ್ಗವಿಲ್ಲದೆ ಹಿಂಡನ್‌ಬರ್ಗ್ ಹಿಟ್ಲರನನ್ನು ಅಧಿಕಾರಕ್ಕೆ ತಂದನು. ರಾಷ್ಟ್ರದಲ್ಲಿ ಪರೋಕ್ಷವಾಗಿ ಪ್ರಭುತ್ವ ನಡೆಸುತ್ತಿದ್ದ ಹಿಟ್ಲರ್ ಕಾನೂನಿನಂತೆ ಅಧಿಕಾರಕ್ಕೆ ಬಂದದ್ದು ೧೯೩೩ನೇ ಜನವರಿಯಲ್ಲಿ. ಅದೇ ವರ್ಷದ ಮಾರ್ಚ್ ತಿಂಗಳಿನಲ್ಲಿ ಹಿಟ್ಲರನಿಗೆ ಸರ್ವಾಧಿಕಾರ ದೊರಕಿತು. ಹೆಸರಿಗೆ ಮಾತ್ರ ಅಧ್ಯಕ್ಷನಾಗಿದ್ದ ಹಿಂಡನ್‌ಬರ್ಗ್ ಸ್ವಲ್ಪ ಕಾಲವಾದ ಮೇಲೆ ತೀರಿಹೋದನು, ಆಮೇಲೆ ಅಂದರೆ ೧೯೩೪ರಲ್ಲಿ ಹಿಟ್ಲರ್ ರಾಷ್ಟ್ರಕ್ಕೆ ಸರ್ವಾಧಿಪತಿಯಾದನು.

## ನಾಜೀ ಸರಕಾರದ ಅಪಪ್ರಚಾರ

ಹಿಟ್ಲರನು ಅಧಿಕಾರಕ್ಕೆ ಬಂದುದೇ ತಡ, ಒಳಗೊಳಗೇ ಹೊಗೆಯಾಡುತ್ತಿದ್ದ ಯಹೂದಿ ದ್ವೇಷ ಒಮ್ಮಿಂದೊಮ್ಮೆ ಪ್ರಜ್ವಲಿಸಿ ಹತ್ತಿಕೊಂಡು ಉರಿಯಲಾರಂಭಿಸಿತು. ನಾಜೀ ಪಕ್ಷದ ಅತಿರಥ-ಮಹಾರಥರು ಈ ಅಗ್ನಿಗೆ ಅಪಪ್ರಚಾರದ ಎಣ್ಣೆಯನ್ನು ಹೊಯ್ಯುತ್ತಿದ್ದರು. ನಂದಿಸಲಶದಳವಾದ ಈ ಅಗ್ನಿ ತನಗೆ ಸಲ್ಲಬೇಕಾದ ಆಹುತಿಯನ್ನು ಸ್ವಲ್ಪವೂ ಬಿಡದೆ ತೆಗೆದುಕೊಂಡಿತು. ಈ ಕಾಳ್ಗಿಚ್ಚಿಗೆ ಸಾಕಷ್ಟು ಬಲಿಯನ್ನೊದಗಿಸುವುದೇ ತಮ್ಮ ಪವಿತ್ರ ಕರ್ತವ್ಯವೆಂದು ಹೊಸ ಸರಕಾರ ಭಾವಿಸಿತು.

ನಾಜೀ ಪಕ್ಷದ ಸಿದ್ಧಾಂತ ಬಲು ವಿಚಿತ್ರವಾದದ್ದಾಗಿತ್ತು; ಅಷ್ಟೇ ವಿನಾಶಕಾರಿಯೂ ಆಗಿತ್ತು. "ಜಗತ್ತಿನಲ್ಲಿ ಜರ್ಮನರೇ ಸರ್ವ ಶ್ರೇಷ್ಠರು. ಪ್ರಪಂಚವನ್ನು ಆಳಲು ಸಮರ್ಥರಾದವರು ಅವರೇ. ಉಳಿದ ಜನಾಂಗಗಳು ಜರ್ಮನರಿಗೆ ಗುಲಾಮರಾಗಲು ಅರ್ಹರಾದವರು. ಗುಲಾಮರಾಗಿ ಸೇವೆ ಸಲ್ಲಿಸಿ ತಮ್ಮ ಸ್ವಾರ್ಥಕ್ಯ ಪಡೆದುಕೊಳ್ಳಬೇಕು. ಆದ್ದರಿಂದ ಪ್ರತಿಯೊಬ್ಬ ಜರ್ಮನ್ ಪ್ರಜೆಯೂ ತನ್ನ ಶ್ರೇಷ್ಠತೆಯನ್ನರಿತು ಕೀಳು ಜನಾಂಗಗಳನ್ನು ಅದಕ್ಕೆ ತಕ್ಕುದಾದ ಸ್ಥಾನಗಳಲ್ಲಿಡಲು ಪ್ರಯತ್ನ ಮಾಡಬೇಕು." ಎಂಬುದು ನಾಜೀ ಸಿದ್ಧಾಂತದ ತಿರುಳಾಗಿದ್ದಿತು. ಜರ್ಮನರನ್ನು 'ಆರ್ಯ'ರೆಂದೂ ಆ ಜನಾಂಗಕ್ಕೆ ಸೇರದವರನ್ನು 'ಅನಾರ್ಯ'ರೆಂದೂ ಹೊಸ ಸರಕಾರ ನಾಮಕರಣ ಮಾಡಿತು. ಅನಾರ್ಯರಿಂದ ಅಪವಿತ್ರವಾಗಿರುವ ದೇಶವನ್ನು ಪವಿತ್ರಗೊಳಿಸುವುದೇ ತಮ್ಮ ನೀತಿಯೆಂದು ಅದು ಘೋಷಿಸಿತು. ಅದಕ್ಕೆ ತಕ್ಕ ಎಲ್ಲ ಕಾರ್ಯಕ್ರಮಗಳನ್ನೂ ಕೈಗೊಳ್ಳುವುದಾಗಿ ಸಾರಿತು.

ನಾಜೀಗಳ ಭಾಷೆಯಲ್ಲಿ 'ಅನಾರ್ಯ' ಮತ್ತು 'ಶುದ್ಧೀಕರಣ' ಎನ್ನುವ ಪದಗಳಿಗೆ ಒಂದು ವಿಶೇಷವಾದ ಅರ್ಥವಿತ್ತು. 'ಅನಾರ್ಯ' ಎಂದರೆ, ಈ ಭಾಷೆಯಲ್ಲಿ 'ಯಹೂದಿ' ಎಂದರ್ಥವಾಗಿತ್ತು. ಹಾಗೆಯೇ 'ಶುದ್ಧೀಕರಣ' ವೆಂದರೆ, ಯಾವ ವ್ಯಕ್ತಿ 'ಅಶುದ್ಧ' ನಾಗಿರುವನೋ— 'ಅಶುದ್ಧತೆ' ಹುಟ್ಟಿನಿಂದ ಬಂದಿರಬಹುದು,— ಇಲ್ಲವೇ 'ಮಲಿನ' ವಾದ ಭಾವನೆಗಳನ್ನು ಹೊಂದಿರುವುದರಿಂದ ಬಂದಿರಬಹುದು,—ಅವನನ್ನು ದೇಶಭ್ರಷ್ಟನನ್ನಾಗಿ ಮಾಡುವುದು ಅಥವಾ ನಿರ್ನಾಮ ಮಾಡುವುದೆಂದರ್ಥವಾಗಿತ್ತು. ನಾಜೀ ಪ್ರಚಾರಕರು ಯಹೂದಿಗಳ ಮೇಲೆ ಅಪಪ್ರಚಾರವನ್ನು ಮಾಡುವಾಗ ಈ ಎರಡು ಪದಗಳನ್ನು ಮೇಲಿಂದ

ಮೇಲೆ ಉಪಯೋಗಿಸುತ್ತ ಬಂದರು. ಇದರ ಪರಿಣಾಮವಾಗಿ ಯಹೂದಿಗಳು ತಮ್ಮ ನಾಡಿನಲ್ಲಿರುವವರೆಗೆ ಜಗತ್ತಿನಲ್ಲಿ ತಮ್ಮ ಶ್ರೇಷ್ಠತೆಯನ್ನು ಸ್ಥಾಪಿಸಲಾಗುವದಿಲ್ಲವೆಂದು ಜರ್ಮನ್ ಕ್ರಿಸ್ತರು ನಂಬಿದ್ದರು. ಆ ದೇಶದಲ್ಲಿ ಯಹೂದಿಗಳು ಗೌರವದಿಂದ ಬಾಳುವು ದಕ್ಕೆ ಅವಕಾಶವಿಲ್ಲದಂತಾಯಿತು.

ನಾಜೀಗಳ ಗದಾಪ್ರಹಾರ ಮೊದಲು ಪ್ರಯೋಗವಾದದ್ದು ವಿಶ್ವವಿದ್ಯಾನಿಲಯ ಗಳಲ್ಲಿ ಪಾಠ ಹೇಳುತ್ತಿದ್ದ ಯಹೂದಿ ಅಧ್ಯಾಪಕರ ಮೇಲೆ. ಯಹೂದಿ ಅಧ್ಯಾಪಕರು ಸರ್ಕಾ ರದ ನೂತನ ನೀತಿಗೆ ಹೊಂದಿಕೊಳ್ಳಲಾರರೆಂದು ನೆಪಹೂಡಿ ವಿಶ್ವವಿದ್ಯಾನಿಲಯಗಳು ಅವ ರೆಲ್ಲರನ್ನು ಕೆಲಸದಿಂದ ತೆಗೆದುಹಾಕಿದುವು. ಜರ್ಮನಿಯಲ್ಲಿ ಗಣರಾಜ್ಯದಿಂದ ನೇಮಿತರಾಗಿದ್ದ ಯಹೂದಿ ಉಪಾಧ್ಯಾಯರುಗಳನ್ನು ಹೊಸ ಸರ್ಕಾರದ ಶತ್ರುಗಳೆಂದರು. ಮತ್ತೆ ಕೆಲವು ಯಹೂದಿಗಳನ್ನು ಡೆಮೋಕ್ರಾಟಿಕ್ ಮತ್ತು ಸೋಷಿಯಲಿಸ್ಟ್ ಪಕ್ಷದ ಬೆಂಬಲಿಗರೆಂಬ ನೆವ ದಿಂದ ಓಡಿಸಲಾಯಿತು. ನಾಜೀಗಳ ದೃಷ್ಟಿಯಲ್ಲಿ ಅವರ ಪಕ್ಷವನ್ನು ವಿರೋಧಿಸುವವರೆಲ್ಲರೂ ರಾಷ್ಟ್ರಘಾತಕರಾಗಿದ್ದರು. ಅಳಿದುಳಿದ ಕೆಲವರನ್ನು ದಕ್ಷತೆ ಸಾಲದೆಂಬ ನೆವದಿಂದ ಓಡಿಸ ಲಾಯಿತು. ಒಟ್ಟಿನಲ್ಲಿ ನಾಜೀಪಕ್ಷ ಅಧಿಕಾರಕ್ಕೆ ಬಂದ ಕೆಲವು ದಿನಗಳೊಳಗಾಗಿ ವಿಶ್ವವಿದ್ಯಾ ನಿಲಯದಲ್ಲಿ ಯಹೂದಿಗಳು ಯಾವ ಕೆಲಸದಲ್ಲಿಯೂ ಇರದಂತೆ ಮಾಡಿತು. ಯಹೂದಿ ಗಳಲ್ಲದೆ ನಾಜೀ ಪಕ್ಷಕ್ಕೆ ವಿರೋಧವಾಗಿದ್ದ ಇತರರಿಗೂ ಉಚ್ಚಾಟನೆಯಾಯಿತು. ಖಾಲಿ ಬಿದ್ದ ಸ್ಥಳಗಳಲ್ಲೆಲ್ಲಾ ಸರಕಾರವು ತನ್ನ ಪಕ್ಷದವರನ್ನೇ ನೇಮಿಸಿತು. ಇದರಿಂದ ವಿಶ್ವವಿದ್ಯಾ ನಿಲಯಗಳಲ್ಲಿ ನಾಜೀ ತತ್ವಗಳನ್ನು ಬೋಧಿಸಲು ಅನುಕೂಲವಾಯಿತು.

ನಾಜೀ ಸರ್ಕಾರದ ಪೆಟ್ಟು ಉಪಾಧ್ಯಾಯ ವೃತ್ತಿಯಲ್ಲಿದ್ದವರಿಗೆ ತಾಕಿತಾದರೂ ಅದು ಅಷ್ಟಕ್ಕೇ ನಿಲ್ಲಲಿಲ್ಲ; ಸರ್ಕಾರದ ಕಾರ್ಯಾಚರಣೆ ಇತರ ಕ್ಷೇತ್ರಗಳಿಗೂ ಹಬ್ಬಿತು. ಇದರಿಂದ ಯಹೂದಿಗಳು ಯಾವ ಸರ್ಕಾರೀ ಸಂಸ್ಥೆಯಲ್ಲೂ ಕೆಲಸ ಮಾಡಲು ಸಾಧ್ಯವಿಲ್ಲದಂತಾಯಿತು. ಸರ್ಕಾರದ ರೀತಿನೀತಿಗಳನ್ನು ಮೆಚ್ಚಿದ್ದ ಖಾಸಗೀ ಸಂಸ್ಥೆಗಳೂ ಇದೇ ನೀತಿಯನ್ನನುಸರಿಸ ಲಾರಂಭಿಸಿದುವು. ಎಲ್ಲ ಕಡೆಯಿಂದಲೂ ಯಹೂದಿಗಳಿಗೆ ತೊಂದರೆಗಳುಂಟಾದವು.

ಯಹೂದಿಗಳಾದ ಐನ್‌ಸ್ಟೈನರಲ್ಲಿ ಜರ್ಮನ್ ಜನಾಂಗವು ಇಟ್ಟಿದ್ದ ಪ್ರೇಮ-ಭಕ್ತಿಗಳನ್ನು ತಪ್ಪಿಸಲು ನಾಜೀ ಸರ್ಕಾರ ಹೊಸದೊಂದು ತಂತ್ರವನ್ನು ಹೂಡಿತು. ಐನ್‌ಸ್ಟೈನರು ಸಾರ್ವಜನಿಕ ವಿಷಯಗಳ ಮೇಲೆ ಆಗಾಗ ಕೊಡುತ್ತಿದ್ದ ಹೇಳಿಕೆಗಳಿಗೆ ನಾಜೀಗಳು ಅಪಾರ್ಥ ಕಲ್ಪಿಸುತ್ತಿದ್ದರು. ಅದರ ಆಧಾರದ ಮೇಲೆ ಐನ್‌ಸ್ಟೈನರು ಕಮ್ಯುನಿಸ್ಟರೆಂದು ಅಪಪ್ರಚಾರ ಮಾಡಲಾರಂಭಿಸಿದರು. ಅವರು ಕಮ್ಯೂನಿಸ್ಟ್ ರಾಷ್ಟ್ರಕ್ಕೆ ಸಹಾಯಮಾಡುವ ದೇಶದ್ರೋಹಿಗಳೆಂದೂ, ರಷ್ಯಾ ದೇಶದ ಗೂಢಚಾರರೆಂದೂ ಹೇಳತೊಡಗಿದರು.

ಐನ್‌ಸ್ಟೈನರ ವ್ಯಕ್ತಿತ್ವದ ವಿಷಯದಲ್ಲಿ ಅಪಪ್ರಚಾರ ನಡೆಯುತ್ತಿದ್ದ ಹಾಗೆಯೇ ಸಾಪೇಕ್ಷ ಸಿದ್ಧಾಂತದ ಮೇಲೆಯೂ ನಿರಂತರ ಅಪಪ್ರಚಾರ ಸಾಗಿತು. ನಾಜೀ ಪಕ್ಷಕ್ಕೆ ಸೇರಿದ್ದ ಹಲವು ವೈಜ್ಞಾನಿಕರು ಅದನ್ನು ಯಹೂದಿ ಭೌತಶಾಸ್ತ್ರಕ್ಕೆ ಸೇರಿದ ಒಂದು ವಿಭಾಗ

ವೆಂದು ಹೇಳತೊಡಗಿದರು. ಆರ್ಯನರ ಭೌತಶಾಸ್ತ್ರದಲ್ಲಿ ಸಾಪೇಕ್ಷಸಿದ್ಧಾಂತಕ್ಕೆ ಸ್ಥಾನವಿಲ್ಲವೆಂದು ಜರಿಯುತ್ತಿದ್ದರು. ಎಲ್ಲ ಜನಾಂಗಗಳ ಪರಿಶ್ರಮದಿಂದ ಬೆಳೆದುಬಂದು ಸರ್ವರಿಗೂ ಸೇರಿದ ಭೌತಶಾಸ್ತ್ರವು ನಾಜೀಗಳಿಂದ 'ಆರ್ಯನ್ ಭೌತಶಾಸ್ತ್ರ' ಮತ್ತು 'ಯಹೂದಿ ಭೌತಶಾಸ್ತ್ರ' ಎಂದು ಎರಡು ಭಾಗವಾಗಿ ಹೋಯಿತು, ಪ್ರಾಯಶಃ ಸತ್ಯವನ್ನೂ ಎರಡು ಭಾಗ ಮಾಡಲು ಆ ಜನರು ಕಲಿತಿದ್ದರೇನೋ ?

ನಾಜೀಗಳ ಅಪಪ್ರಚಾರ ಬಹು ಪರಿಣಾಮಕಾರಿಯಾಗಿದ್ದಿತು. ಇದರ ಫಲಿತಾಂಶವಾಗಿ ಇಡೀ ಜರ್ಮನ್ ಜನಾಂಗ ಐನ್‌ಸ್ಟೈನರನ್ನು ದ್ವೇಷಿಸುವಂತಾಯಿತು, ಅವತಾರ ಪುರುಷನೆಂದು ಪೂಜೆಗೊಳ್ಳುತ್ತಿದ್ದ ಅದೇ ವ್ಯಕ್ತಿಯೇ ಜನರ ಕುತಂತ್ರದಿಂದ ದೇಶದ್ರೋಹಿಯೆಂದೆನಿಸಿಕೊಳ್ಳುವಂತಾಯಿತು. ಈ ಹುಚ್ಚು ಎಲ್ಲಿಯವರೆಗೆ ಹೋಗಿತ್ತೆಂದರೆ ಕಾಲೇಜುಗಳಲ್ಲಿ ಸಾಪೇಕ್ಷ ಸಿದ್ಧಾಂತವನ್ನು ಬೋಧಿಸುವುದೂ ನಿಂತುಹೋಗಿತ್ತು.

ಅಮೇರಿಕಾದಲ್ಲಿ ಐನ್‌ಸ್ಟೈನರಿಗೆ ಜರ್ಮನಿಯಲ್ಲಿನ ಆಂದಿನ ವಿಪರೀತ ಸ್ಥಿತಿ ಗೊತ್ತಾಯಿತು. ದ್ವೇಷದಿಂದ ಕಲುಷಿತವಾಗಿದ್ದ ಜರ್ಮನಿಗೆ ಹಿಂತಿರುಗುವುದು ಅಪೇಕ್ಷಣೀಯವಲ್ಲವೆಂದು ಅವರಿಗೆ ಮನವರಿಕೆಯಾಯಿತು. ಈ ಕಾರಣಗಳಿಂದ ಐನ್‌ಸ್ಟೈನರು ಪಶ್ಚಿಮ ಯುರೋಪಿನಲ್ಲಿ ಒಂದು ಕಡೆ ನಿಲ್ಲುವ ಯೋಚನೆ ಮಾಡಿದರು. ತಾವು ಒಂದು ನಿರ್ಧಾರಕ್ಕೆ ಬರುವ ಮುನ್ನ ಅಮೇರಿಕಾದಲ್ಲಿದ್ದ ಜರ್ಮನ್ ರಾಯಭಾರಿಯನ್ನೊಮ್ಮೆ ಸಲಹೆ ಕೇಳುವದು ಸೂಕ್ತವೆಂದು ಅವರಿಗೆ ಅನ್ನಿಸಿತು. ಆ ರಾಯಭಾರಿ ಮಹಾಶಯನನ್ನು ಭೇಟಿ ಮಾಡಿದರು. ಆತನು "ಜರ್ಮನಿಯ ರಾಷ್ಟ್ರೀಯ ಸರಕಾರಕ್ಕೆ ವಿಧೇಯನಾಗಿಯೂ ಭಕ್ತಿಯುತನಾಗಿಯೂ ನಡೆದುಕೊಳ್ಳುವ ಯಾವ ಪ್ರಜೆ ಬೇಕಾದರೂ ಆ ದೇಶದಲ್ಲಿ ಗೌರವಯುತವಾಗಿ ವಾಸಿಸಬಹುದು" ಎಂದು ಐನ್‌ಸ್ಟೈನರಿಗೆ ಉತ್ತರ ಹೇಳಿದನು.

"ನೀನು ಹೇಳುವಂತೆ ನಡೆದುಕೊಂಡು, ಸರಕಾರ ಮಾಡುವ ಎಲ್ಲ ಅನ್ಯಾಯಗಳನ್ನು ನೋಡಿಕೊಂಡು ಮೌನದಿಂದ ಕುಳಿತುಕೊಂಡಿರಲಾರೆ. ಆದ್ದರಿಂದ ಇಂದಿನ ಜರ್ಮನಿಯಲ್ಲಿ ನನಗೆ ಸ್ಥಾನವಿಲ್ಲ" ಎಂದು ಐನ್‌ಸ್ಟೈನರು ಹೇಳಿದರು. ಕಛೇರಿಯ ನೌಕರನೊಬ್ಬನು ಅವರನ್ನು ಹಿಂಬಾಲಿಸಿ ಬಂದು "ತಾವು ಜರ್ಮನಿಗೆ ಹೋಗುವದು ಕ್ಷೇಮವಲ್ಲ" ಎಂದು ಸೂಚನೆ ಕೊಟ್ಟು ಸ್ವಸ್ಥಾನಕ್ಕೆ ಮರಳಿದನು. ರಾಯಭಾರಿ ಕಛೇರಿಯ ಆ ನೌಕರನಿಂದ ಬಂದ ಸೂಚನೆ ಐನ್‌ಸ್ಟೈನರ ನಿರ್ಧಾರಕ್ಕೆ ಪುಷ್ಟಿ ಕೊಟ್ಟಿತು.

ಐನ್‌ಸ್ಟೈನರು 'ಕ್ಯಾಲಿಫೋರ್ನಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ' ಯೊಡನೆ ಮಾಡಿಕೊಂಡಿದ್ದ ಒಪ್ಪಂದ ೧೯೩೩ನೇ ವಸಂತ ಋತುವಿನಲ್ಲಿ ಮುಗಿಯಿತು. ಆ ಕೂಡಲೇ ಅವರು ಅಮೇರಿಕವನ್ನು ಬಿಟ್ಟರು. ಯುರೋಪನ್ನು ತಲುಪಿದನಂತರ ಬೆಲ್ಜಿಯಂ ದೇಶದಲ್ಲಿ ಲಾಕಾಕ್ ಎಂಬ ಪಟ್ಟಣದಲ್ಲಿ ತಾತ್ಕಾಲಿಕವಾಗಿ ನೆಲಸಿದರು. ಆ ಊರು ಕಡಲ ತೀರದಲ್ಲಿದ್ದು ಅತ್ಯಂತ ರಮಣೀಯವಾದ ಸನ್ನಿವೇಶದ ಮಧ್ಯೆ ಇತ್ತು. ಆಸ್ಟೆಂಡ್ ಪಟ್ಟಣವು ಆ ಊರಿಗೆ ತೀರಾ ಹತ್ತಿರದಲ್ಲಿತ್ತು.

## ಪ್ರಷ್ಯನ್ ಅಕಾಡೆಮಿ ಸದಸ್ಯತ್ವಕ್ಕೆ ರಾಜೀನಾಮೆ

ಲಾಕಾಕ್‌ನಲ್ಲಿ ನೆಲಸಿದಮೇಲೆ ಐನ್‌ಸ್ಟೈನರು ಜರ್ಮನಿಯೊಡನೆ ತಮಗಿದ್ದ ಎಲ್ಲ ಸಂಬಂಧವನ್ನು ತ್ಯಜಿಸುವ ಯೋಚನೆ ಮಾಡಿದರು. ಆ ಸಮಯದಲ್ಲಿ ಐನ್‌ಸ್ಟೈನರಿಗೆ ಜರ್ಮನಿಯೊಡನಿದ್ದ ಸಂಬಂಧಗಳೆಂದರೆ ಎರಡು. ಮೊದಲನೆಯದು, ಜರ್ಮನ್ ಪೌರರಾಗಿದ್ದುದು; ಎರಡನೆಯದು, ಪ್ರಷ್ಯನ್ ಅಕಾಡೆಮಿಯ ಸದಸ್ಯರಾಗಿದ್ದುದು. ಪ್ರಷ್ಯನ್ ಅಕಾಡೆಮಿಯಿಂದ ಹೊರಬಿದ್ದರೆ ಜರ್ಮನ್ ರಾಷ್ಟ್ರತ್ವ ತಾನಾಗಿಯೇ ಬಿಟ್ಟು ಹೋಗುವುದೆಂದು ಮೊದಲು ಸದಸ್ಯತನದ ಬಂಧನದಿಂದ ಬಿಡಿಸಿಕೊಳ್ಳಲು ಐನ್‌ಸ್ಟೈನರು ಪ್ರಯತ್ನಪಟ್ಟರು.

ಆಗ ಪ್ರಷ್ಯನ್ ಅಕಾಡೆಮಿಗೆ ಮ್ಯಾಕ್ಸ್ ಪ್ಲಾಂಕರು ಅಧ್ಯಕ್ಷರಾಗಿದ್ದರು. ಅವರು ಸತ್ಯನಿಷ್ಠರು, ಅಭಿಮಾನಶಾಲಿಗಳು. ಇಂಥ ಮಹನೀಯರು ಅದರ ಅಧ್ಯಕ್ಷರಾಗಿದ್ದಾಗ್ಯೂ ಅಕಾಡೆಮಿ ನಾಜೀಗಳ ದುಷ್ಟಪ್ರಭಾವದಿಂದ ದೂರವಾಗಿರಲಿಲ್ಲ; ನಾಜೀ ಮುಖಂಡರು ಆ ಸಂಸ್ಥೆಯ ಆಡಳಿತದಲ್ಲಿ ಅನಾವಶ್ಯಕವಾಗಿ ತಲೆಹಾಕುತ್ತಿದ್ದರು; ಅಲ್ಲಿಯ ಸದಸ್ಯರನೇಕರನ್ನು ತಮ್ಮ ಕಡೆ ಒಲಿಸಿಕೊಂಡು ಅಕಾಡೆಮಿಯು ತಾವು ಹೇಳಿದಂತೆ ಕೇಳುವಂತೆ ಮಾಡಿಕೊಂಡಿದ್ದರು. ಈ ಕುಟಿಲನೀತಿ ಪ್ಲಾಂಕರಿಗೆ ಸರಿಬೀಳುತ್ತಿರಲಿಲ್ಲ, ಆದರೆ ನಾಜೀ ಸರ್ಕಾರದ ಎದುರು ಅವರು ನಿಸ್ಸಹಾಯಕರಾಗಿದ್ದರು.

ಅಕಾಡೆಮಿಯು ನಾಜೀಗಳ ಕೈಗೆ ಹೋದಮೇಲೆ ಅಲ್ಲಿನ ಯಹೂದಿ ಸದಸ್ಯರುಗಳನ್ನು ಒಬ್ಬೊಬ್ಬರನ್ನಾಗಿ ವಜಾ ಮಾಡಲಾಯಿತು. ಐನ್‌ಸ್ಟೈನರ ಸರದಿಯೂ ಬಂತು. ಅವರಂಥ ನಿಷ್ಕಪಟ ಮನಸ್ಸಿನ ಮೇಧಾವಿಗಳನ್ನು ಹೊರದೂಡಲು ಪ್ಲಾಂಕರಿಗೆ ತುಂಬಾ ಸಂಕಟವಾಯಿತು. ಐನ್‌ಸ್ಟೈನರಿಗೆ ಪ್ಲಾಂಕರ ಧರ್ಮಸಂಕಟ ಗೊತ್ತಾಯಿತು. ನೆಚ್ಚಿನ ಗೆಳೆಯರೂ, ಹಿತೈಷಿಗಳೂ ಆದ ಪ್ಲಾಂಕರ ಮನಸ್ಸಿಗೆ ಆಗುವ ನೋವನ್ನು ತಪ್ಪಿಸಲು ಐನ್‌ಸ್ಟೈನರು ೧೯೩೩ನೇ ಮಾರ್ಚಿ ೨೮ನೆಯ ತಾರೀಕಿನ ದಿನ ಅಕಾಡೆಮಿಗೆ ತಾವೇ ರಾಜೀನಾಮೆ ಪತ್ರವನ್ನು ಕಳುಹಿಸಿದರು.

ಐನ್‌ಸ್ಟೈನರ ರಾಜೀನಾಮೆಯನ್ನು ಅಕಾಡೆಮಿ ಕೂಡಲೇ ಒಪ್ಪಿಕೊಳ್ಳಲಿಲ್ಲ. ಅದರ ಬದಲು ಐನ್‌ಸ್ಟೈನರ ಮೇಲೆ ಇಲ್ಲದ ಸಲ್ಲದ ಆರೋಪಣೆಗಳನ್ನು ಮಾಡಿತು. “ಜರ್ಮನಿಯೊಂದಿಗೆ ಅಷ್ಟೇನೂ ಮೈತ್ರಿಯಿಂದಿಲ್ಲದ ದೇಶಗಳಿಗೆ ಐನ್‌ಸ್ಟೈನರು ಹೋಗಿ ಅಲ್ಲಿ ಜರ್ಮನ್ ಸರಕಾರದ ಮೇಲೆ ಅಪಪ್ರಚಾರ ಮಾಡಿ, ದೇಶಕ್ಕೆ ಅವಮಾನ ಮಾಡಿದ್ದಾರೆ” ಎಂದಿತು. ಐನ್‌ಸ್ಟೈನರು ಈ ದೋಷಾರೋಪಣೆಯನ್ನು ನಿರಾಕರಿಸಿದರು; ಅಕಾಡೆಮಿ ಹೇಳುವುದು ಶುದ್ಧ ಸುಳ್ಳೆಂದು ಸಾಧಿಸಿದರು. ಇದಕ್ಕೆ ಪ್ರತ್ಯುತ್ತರವಾಗಿ ಅಕಾಡೆಮಿ ಈ ರೀತಿ ಉತ್ತರ ಕೊಟ್ಟಿತು:

“ನಮ್ಮ ಸಂಸ್ಥೆಯಲ್ಲಿರುವ ಹಳೆಯ ಸದಸ್ಯರೊಬ್ಬರು—ಅವರ ರಾಜಕೀಯ ಅಭಿಪ್ರಾಯ ಏನೇ ಇರಲಿ–ರಾಷ್ಟ್ರದ ಮೇಲೆ ಸುಳ್ಳಿನ ಮಳೆ ಸುರಿಯುತ್ತಿದ್ದಾರೆ. ಈ ಸಮಯದಲ್ಲಿ ನೀವು ದೇಶಭಕ್ತರಿಗೆ ಬೆಂಬಲ ಕೊಡುತ್ತೀರೆಂದು ನಾವು ನಿರೀಕ್ಷಿಸಿದೆವು....ಇದಕ್ಕೆ ಬದಲಾಗಿ

ನಿಮ್ಮ ಹೇಳಿಕೆಗಳು ಪ್ರಸಕ್ತ ಸರಕಾರಕ್ಕೆ ಮಾತ್ರವಷ್ಟೇ ಅಲ್ಲದೆ ಇಡೀ ಜರ್ಮನ್ ರಾಷ್ಟ್ರಕ್ಕೇ ಶತ್ರುಗಳಾಗಿರುವಂಥವರಿಗೆ ಸಹಾಯಕವಾಗಿವೆ. ಈ ಪರಿಸ್ಥಿತಿಯು ನಮಗೆಲ್ಲರಿಗೂ ಅತಿ ನಿರಾಶೆಯನ್ನುಂಟುಮಾಡಿದೆ. ಇಂದಿನ ಸನ್ನಿವೇಶದಲ್ಲಿ ನಾವು ಪರಸ್ಪರ ದೂರವಿರಬೇಕಾದುದು ಅನಿವಾರ್ಯವಾಗಿದೆ. ನೀವು ರಾಜೀನಾಮೆ ಕೊಡದಿದ್ದರೂ ಇಂಥ ತೀರ್ಮಾನವನ್ನು ನಾವು ತೆಗೆದುಕೊಳ್ಳಲೇಬೇಕಾಗುತ್ತಿತ್ತು. ಇದು ನಿಃಸಂದೇಹವಾದ ವಿಚಾರ."

ಜರ್ಮನಿಯ ಪರವಾಗಿ ಪ್ರಚಾರ ಮಾಡಿದ್ದರೆ ಅದರಿಂದ ಜನತೆಗೂ ಜರ್ಮನ್ ಸಂಸ್ಕೃತಿಗೂ, ದೇಶದ ಮಹಾಪುರುಷರಿಗೂ ದ್ರೋಹ ಬಗೆದಂತಾಗುತ್ತಿತ್ತೆಂದು ಬಗೆದು ಐನ್‌ಸ್ಟೈನರು ಅಕಾಡೆಮಿಯ ಈ ಉತ್ತರಕ್ಕೆ ಲಕ್ಷ್ಯ ಕೊಡಲಿಲ್ಲ. ಐನ್‌ಸ್ಟೈನರ ಸದಸ್ಯತ್ವ ಕೊನೆಗೊಂಡಿತು.

ಇತರ ದೇಶೀಯರು ಜರ್ಮನಿಯ ವಿಷಯದಲ್ಲಿ ತಿರಸ್ಕಾರ ಭಾವನೆಯನ್ನು ಹೊಂದಿದ್ದಾಗ ಐನ್‌ಸ್ಟೈನರು ತಮ್ಮ ಸರಕಾರದ ರೀತಿ ನೀತಿಗಳನ್ನು ಸಮರ್ಥಿಸಿಕೊಳ್ಳದಿದ್ದುದು ದೇಶದ್ರೋಹವೆಂದು ಕೆಲವರು ಶಂಕಿಸಬಹುದು. ಅಂಥವರು ಐನ್‌ಸ್ಟೈನರು ವಿಶ್ವಪ್ರಜೆ ಎಂಬುದನ್ನೂ, ಅನ್ಯಾಯವು ಎಲ್ಲಿಯೇ ನಡೆಯಲಿ ಅದನ್ನು ಸಹಿಸುತ್ತಿದ್ದವರಲ್ಲವೆಂಬುದನ್ನೂ ಗಣನೆಗೆ ತಂದುಕೊಳ್ಳಬೇಕು ಜರ್ಮನ್ ಸರಕಾರದ ನೀತಿಯನ್ನು ಅವರು ಒಪ್ಪುತ್ತಿರಲಿಲ್ಲವೇ ಹೊರತು ಅವರು ಇಡೀ ಜರ್ಮನ್ ಜನಾಂಗವನ್ನು ಎಂದೂ ದೂಷಿಸಿದವರಲ್ಲ. ಅವರು ಫ್ರೆಂಚ್ ಸಂಸ್ಥೆಯೊಂದಕ್ಕೆ ಬರೆದ ಕಾಗದದಿಂದ ಈ ಅಂಶ ವ್ಯಕ್ತವಾಗುತ್ತದೆ. ಯಹೂದಿಗಳ ವಿಷಯದಲ್ಲಿ ಜರ್ಮನ್ ಸರಕಾರವು ಅನುಸರಿಸುತ್ತಿದ್ದ ನೀತಿಯನ್ನು ಪ್ರತಿಭಟಿಸುವುದು ಆ ಫ್ರೆಂಚ್ ಸಂಸ್ಥೆಯ ಮುಖ್ಯ ಗುರಿಯಾಗಿದ್ದಿತು. ಈ ಗುರಿಗೆ ಅನುಗುಣವಾಗಿ ಅದು ಒಂದು ಘೋಷಣೆಯನ್ನು ಹೊರಡಿಸಿತು. ಆ ಘೋಷಣೆಗೆ ರುಜು ಹಾಕುವಂತೆ ಸಂಸ್ಥೆ ಐನ್‌ಸ್ಟೈನರಲ್ಲಿ ಮನವಿ ಮಾಡಿಕೊಂಡಿತು. ಅವರು ರುಜು ಹಾಕಲು ನಿರಾಕರಿಸಿ ಸಂಸ್ಥೆಗೆ ಹೀಗೆ ಬರೆದರು:

"ಜರ್ಮನಿಯಲ್ಲಿ ನಡೆಯುತ್ತಿರುವ ಘಟನೆಗಳಿಗಾಗಿ ನಾನು ವಿಷಾದಪಡುತ್ತೇನೆ. ಸರಕಾರದ ಬೆಂಬಲದಿಂದ ನಡೆಯುತ್ತಿರುವ ದುಷ್ಕೃತ್ಯಗಳನ್ನು ಖಂಡಿಸುತ್ತೇನೆ; ನಿಜ. ಆದರೆ ಇತರ ದೇಶಗಳ ಜವಾಬ್ದಾರಿಯುತವಾದ ಪ್ರಜೆಗಳು ತೊಡಗಿರುವ ಈ ಕಾರ್ಯದಲ್ಲಿ ಭಾಗವಹಿಸುವುದು ನನ್ನಿಂದ ಅಸಾಧ್ಯ. ನನ್ನ ಸ್ಥಿತಿಯಲ್ಲಿರುವ ಫ್ರೆಂಚ್ ಪ್ರಜೆಯೊಬ್ಬನು ಜರ್ಮನಿಯ ಕೆಲವು ಜನರೊಡನೆ ಸೇರಿಕೊಂಡು ತನ್ನ ಸರಕಾರದ ನೀತಿಯನ್ನು ವಿರೋಧಿಸುತ್ತಾನೆಂದು ಭಾವಿಸೋಣ. ಹಾಗೆ ವಿರೋಧಿಸಲು ಆತನಿಗೆ ತಕ್ಕಷ್ಟು ಕಾರಣಗಳಿರಬಹುದು. ಆದರೂ ನೀವು ನಿಮ್ಮ ದೇಶಬಾಂಧವನ ವರ್ತನೆಯನ್ನು ದೇಶದ್ರೋಹವೆಂದು ಬಗೆಯುತ್ತಿರಲಿಲ್ಲವೆ? ಈ ಉದಾಹರಣೆಯಿಂದ ನಿಮಗೆ ನನ್ನ ನಿಲುವು ಅರ್ಥವಾಗುತ್ತದೆಂದು ತಿಳಿಯುತ್ತೇನೆ.

ಜರ್ಮನ್ ಸರಕಾರದ ಮುಖಕ್ಕೆ ಮಸಿ ಬಳಿಯುವುದೇ ಐನ್‌ಸ್ಟೈನರ ಉದ್ದೇಶವಾಗಿದ್ದಿದ್ದರೆ, ಅವರು ಫ್ರೆಂಚ್ ಸಂಸ್ಥೆಯ ಮುಖ್ಯಸ್ಥರು ತಲೆ ತಗ್ಗಿಸುವಂಥ ಈ ಉತ್ತರವನ್ನು ಕೊಡುತ್ತಿರಲಿಲ್ಲ.

ಪ್ರಷ್ಯನ್ ಅಕಾಡೆಮಿ ಸದಸ್ಯತ್ವಕ್ಕೆ ಐನ್‌ಸ್ಟೈನರು ರಾಜೀನಾಮೆಯನ್ನು ಕೊಟ್ಟ ಕೂಡಲೆ, ಅದರ ಸೋದರ ಸಂಸ್ಥೆಯಾದ ಬವೇರಿಯಾದ ಅಕಾಡೆಮಿ ಐನ್‌ಸ್ಟೈನರಿಗೆ ಸದಸ್ಯತ್ವದ ವಿಚಾರವಾಗಿ ಕಾಗದ ಬರೆಯಿತು. ಬವೇರಿಯನ್ ಅಕಾಡೆಮಿಯ ವಿಷಯವಾಗಿ ಐನ್‌ಸ್ಟೈನರು ತಮ್ಮ ಧೋರಣೆಯನ್ನು ವ್ಯಕ್ತಪಡಿಸಬೇಕೆಂದು ಆ ಪತ್ರದಲ್ಲಿ ಕೇಳಲಾಗಿತ್ತು. ಐನ್‌ಸ್ಟೈನರು ಆ ಕಾಗದಕ್ಕೆ ಈ ರೀತಿ ಉತ್ತರ ಕೊಟ್ಟರು:

"ಜರ್ಮನ್ ಸರಕಾರದಲ್ಲಿರುವುದು ನನಗೆ ಒಪ್ಪಿತವಾಗದಿರುವುದೇ ನಾನು ಪ್ರಷ್ಯನ್ ಅಕಾಡೆಮಿಗೆ ರಾಜೀನಾಮೆ ಕೊಡಲು ಕಾರಣ. ಈ ವಿಷಯವನ್ನು ಆಗಲೇ ತಿಳಿಸಿದ್ದೇನೆ.

"ಆದರೆ ಬವೇರಿಯಾ ಅಕಾಡೆಮಿಯಿಂದ ನಾನು ದೂರವಾಗಬಯಸುವುದು ಮೇಲೆ ತಿಳಿಸಿರುವಷ್ಟೇ ಕಾರಣಕ್ಕಲ್ಲ. ಬೇರೆ ಕಾರಣದಿಂದ.

"ದೇಶದ ವೈಜ್ಞಾನಿಕ ಜೀವನವನ್ನು ರಕ್ಷಿಸುವುದೂ ಅದನ್ನು ಬೆಳೆಸುವುದೂ ಅಕಾಡೆಮಿಯ ಪ್ರಥಮ ಕರ್ತವ್ಯ. ಜರ್ಮನಿಯ ಅನೇಕ ಪಂಡಿತರುಗಳೂ, ವಿದ್ಯಾರ್ಥಿಗಳೂ, ಪ್ರಾಧ್ಯಾಪಕರುಗಳೂ ತಮ್ಮ ದೇಶದಲ್ಲಿಯೇ ನಿಂತು ಜೀವನೋಪಾಯವನ್ನು ಗಳಿಸಲು ಅವಕಾಶವಿಲ್ಲದಂತಾಗಿದೆ. ಈ ವಿಷಯವನ್ನು ಕುರಿತು ಅಕಾಡೆಮಿ ಯಾವ ಮಾತನ್ನೂ ಆಡಿಲ್ಲ. ಈ ರೀತಿ ಮಾತನಾಡದೆ ಇರುವುದಕ್ಕೆ ಬಲಾತ್ಕಾರವೇ ಕಾರಣವಿರಬಹುದು. ಬಲಾತ್ಕಾರಕ್ಕೆ ಒಳಗಾಗಿ ತನ್ನ ಧ್ಯೇಯವನ್ನು ಬಿಟ್ಟಿರುವ ಸಂಸ್ಥೆಯಲ್ಲಿ ನಾನು ಇರಲು ಇಚ್ಛಿಸುವುದಿಲ್ಲ."

ಪ್ರಷ್ಯನ್ ಮತ್ತು ಬವೇರಿಯನ್ ಅಕಾಡೆಮಿಗಳಿಗೆ ರಾಜೀನಾಮೆ ಕೊಟ್ಟಮೇಲೆ ಜರ್ಮನಿಗೂ ಐನ್‌ಸ್ಟೈನರಿಗೂ ಇದ್ದ ಋಣಾನುಬಂಧ ಕಡಿದು ಹೋಯಿತು.

## ಲಾಕಾಕ್‌ನಲ್ಲಿ ವಾಸ

ಐನ್‌ಸ್ಟೈನರ ಅಜ್ಞಾತ ವಾಸಸ್ಥಳವಾದ ಲಾಕಾಕ್ ಜರ್ಮನಿಯ ಗಡಿಯಿಂದ ಹೊರಗೇನೋ ಇದ್ದಿತು. ಆದರೆ ಅದು ಅಷ್ಟು ಸುರಕ್ಷಿತವಾದುದಾಗಿರಲಿಲ್ಲ ಕಾರಣವೇನೆಂದರೆ ಅದು ಜರ್ಮನ್ ಗಡಿಗೆ ತೀರಾ ಸಮೀಪದಲ್ಲಿದ್ದು ಐನ್‌ಸ್ಟೈನರ ಪ್ರಾಣಾಪಹಾರ ಮಾಡಲು ಹೊಂಚು ಹಾಕುತ್ತಿದ್ದ ನಾಜೀ ಕೊಲೆಗಡುಕರು ಅಲ್ಲಿಗೆ ಸುಲಭವಾಗಿ ಬಂದು ಜರ್ಮನಿಗೆ ಹಿಂತಿರುಗಿ ಬಿಡಬಹುದಾಗಿತ್ತು; ಜರ್ಮನಿಗೆ ಹಿಂತಿರುಗಿದ ಮೇಲೆ ಅಲ್ಲಿನ ಸರಕಾರವು ಅವರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಳ್ಳುತ್ತಿರಲಿಲ್ಲ. ನಾಜೀ ಮುಖಂಡರು ಇಂಥ ಪಿತೂರಿಯನ್ನು ನಡೆಸಿದ್ದರು. ಐನ್‌ಸ್ಟೈನರ ಮಿತ್ರರಿಗೆ ಇದರ ಸುಳಿವು ತಿಳಿಯಿತು. ಆ ಕೂಡಲೇ ಅವರು ಐನ್‌ಸ್ಟೈನರಿಗೆ ಎಚ್ಚರಿಕೆ ಕೊಟ್ಟರು. ತಮಗೆ ಗೊತ್ತಾಗಿದ್ದ ವಿಷಯಗಳನ್ನು ಬೆಲ್ಜಿಯಂ ಸರಕಾರಕ್ಕೂ ತಿಳಿಸಿದರು. ಬೆಲ್ಜಿಯಂ ಸರಕಾರವು ಐನ್‌ಸ್ಟೈನರಲ್ಲಿ ಹೆಚ್ಚಾದ ಗೌರವವನ್ನಿಟ್ಟುಕೊಂಡಿತ್ತು; ಹಾಗೆಯೇ ಅಲ್ಲಿನ ರಾಜ-ರಾಣಿಯರು ಐನ್‌ಸ್ಟೈನರಿಗೆ ಪರಮ ಮಿತ್ರರಾಗಿದ್ದರು. ಆದ್ದರಿಂದ ಐನ್‌ಸ್ಟೈನರ ರಕ್ಷಣೆಯ ವಿಚಾರವಾಗಿ ಬೆಲ್ಜಿಯಂ ಸರಕಾರ ಎಲ್ಲ

ಮುನ್ನೆಚ್ಚರಿಕೆಯನ್ನೂ ತೆಗೆದುಕೊಂಡಿತು. ಐನ್‌ಸ್ಟೈನರು ವಾಸಿಸುತ್ತಿದ್ದ ಸ್ಥಳಕ್ಕೆ ತಕ್ಕಷ್ಟು
ಪೋಲೀಸ್ ಬಂದೋಬಸ್ತನ್ನು ಕಳಿಸಿ ಆಗಂತುಕರಾರೂ ಆ ಸ್ಥಳದಲ್ಲಿ ತಿರುಗಾಡದಂತೆ
ಏರ್ಪಾಡು ಮಾಡಿತು. ಐನ್‌ಸ್ಟೈನರ ಮನೆಯ ಹತ್ತಿರ ಇಬ್ಬರು ಗೂಢಚಾರರನ್ನು ಕಾವಲು
ಹಾಕಿ ಆ ಕಡೆ ತಿರುಗಾಡುವವರ ಮೇಲೆ ಗಮನವಿಟ್ಟಿರುವಂತೆ ಬೆಲ್ಜಿಯಂ ಸರಕಾರವು ಅವ
ರಿಗೆ ಸೂಚನೆಯನ್ನು ಕೊಟ್ಟಿತು. ಈ ಏರ್ಪಾಡೆಲ್ಲವೂ ತಮ್ಮ ಪ್ರಾಣರಕ್ಷಣೆಗೆ ಮಾಡಿ
ದ್ದೆಂದು ಐನ್‌ಸ್ಟೈನರಿಗೆ ಗೊತ್ತಾಗಿದ್ದರೂ, ಅವರಿಗೆ ಆ ವ್ಯವಸ್ಥೆಯಿಂದ ಸಂತೋಷ
ಉಂಟಾಗಲಿಲ್ಲ. ಈ ಎಚ್ಚರಿಕೆಯ ಕಾರ್ಯಕ್ರಮಗಳು ಕೈದಿಗಳನ್ನು ಕೂಡಿ ಇಡುವ ಬಂದೀ
ಖಾನೆಯ ವ್ಯವಸ್ಥೆಯಂತೆ ಅವರಿಗೆ ತೋರಿದುವು.

ಹೀಗೆ ಅವರು ಲಾಕಾಕ್ ಗ್ರಾಮದಲ್ಲಿ ಅಷ್ಟೇನೂ ಸ್ವಾತಂತ್ರ್ಯವಿಲ್ಲದ ಜೀವನವನ್ನು
ನಡೆಸುತ್ತಿರುವಾಗ ಜೆರೂಸಲೆಮ್ ವಿಶ್ವವಿದ್ಯಾನಿಲಯವು ಅವರಿಗೆ ಒಂದು ವಿಜ್ಞಾಪನಾ ಪತ್ರ
ವನ್ನು ಕಳಿಸಿತು. ಐನ್‌ಸ್ಟೈನರು ಆ ವಿಶ್ವವಿದ್ಯಾನಿಲಯದ ಭೌತಶಾಸ್ತ್ರ ಶಾಖೆಯ ಮುಖ್ಯಾಧಿ
ಕಾರಿಗಳ ಸ್ಥಾನವನ್ನು ವಹಿಸಿಕೊಂಡು ಸಂಸ್ಥೆಯನ್ನು ಗೌರವಿಸಬೇಕೆಂದು ಆ ಪತ್ರದಲ್ಲಿ
ಬಿನ್ನವಿಸಿಕೊಳ್ಳಲಾಗಿತ್ತು. ಈ ಬಿನ್ನಹವನ್ನು ಮನ್ನಿಸಬೇಕೆಂದು ಐನ್‌ಸ್ಟೈನರಿಗೆ ಇಷ್ಟ
ವೇನೋ ಇತ್ತು. ಆದರೆ ತಾವೇ ಅಧಿಕಾರವನ್ನು ವಹಿಸಿಕೊಂಡರೆ ಜರ್ಮನಿಯಿಂದ ಹೊರ
ದೂಡಲ್ಪಟ್ಟ ಸಹಸ್ರಾರು ಪ್ರತಿಭಾವಂತ ಯುವಕರಲ್ಲಿ ಒಬ್ಬರಿಗಾದರೂ ಕೆಲಸ ಸಿಗುವ ಅವ
ಕಾಶ ತಪ್ಪುವುದೆಂದು ತಾವು ಹೋಗದೆ ನಿಂತರು. ಐನ್‌ಸ್ಟೈನರು ತಾವು ಜೆರೂಸಲೇಮ್‌ಗೆ
ಹೋಗದೆ ನಿಂತದ್ದು ಹಾಗಿರಲಿ; ತಮ್ಮಂತೆ ವಿಖ್ಯಾತರಾದ ಶಾಸ್ತ್ರಜ್ಞರಾರೂ ಅಲ್ಲಿಗೆ ಹೋಗ
ದಂತೆ ತಡೆದರು. ಈ ರೀತಿ ಐನ್‌ಸ್ಟೈನರಿಂದ ತಡೆಯಲ್ಪಟ್ಟವರಲ್ಲಿ ಪ್ರಖ್ಯಾತ ರಸಾಯನ
ಶಾಸ್ತ್ರಜ್ಞರಾದ ಹೇಬರ್‌ರವರೂ ಒಬ್ಬರು. ಹೇಬರ್, ಐನ್‌ಸ್ಟೈನರಂಥ ವಿಖ್ಯಾತ ಪಂಡಿತ
ರಿಗೆ ಜಗತ್ತಿನಲ್ಲಿ ಯಾವ ಭಾಗದಲ್ಲಿಯಾದರೂ ಕೆಲಸ ದೊರಕುತ್ತಿತ್ತು. ಅಷ್ಟೇ ಮೇಧಾವಿ
ಗಳಾದ ಆದರೆ ಇನ್ನೂ ಖ್ಯಾತಿಯನ್ನು ಗಳಿಸದಿದ್ದ ಜರ್ಮನ್ ಯಹೂದಿ ಯುವಕರಿಗೆ
ಜೆರೂಸಲೆಂ ವಿಶ್ವವಿದ್ಯಾನಿಲಯವನ್ನು ಬಿಟ್ಟರೆ ಬೇರಾವ ನೆಲೆಯೂ ಇರಲಿಲ್ಲ.

### ನಾಜೀ ಸರ್ಕಾರದ ಸೇಡು

ಐನ್‌ಸ್ಟೈನರ ರಕ್ತಕ್ಕಾಗಿ ಹಾತೊರೆಯುತ್ತಿದ್ದ ನಾಜೀ ಸರ್ಕಾರ, ಬೆಲ್ಜಿಯಂ ಸರ್ಕಾರ
ತೆಗೆದುಕೊಂಡ ಕಾರ್ಯಕ್ರಮಗಳ ದೆಸೆಯಿಂದ ತನ್ನ ಆಸೆಯನ್ನು ತೀರಿಸಿಕೊಳ್ಳಲಾರದೆ ಭಂಗ
ಪಟ್ಟಿತಷ್ಟೆ. ತನ್ನ ಸೇಡನ್ನು ಬೇರೆ ರೀತಿಯಲ್ಲಿ ತೀರಿಸಿಕೊಳ್ಳಲು ಅದು ಮನಸ್ಸು ಮಾಡಿತು.
ಈ ಉದ್ದೇಶದಿಂದ ನಾಜೀ ಸರಕಾರವು ಐನ್‌ಸ್ಟೈನರ ಮನೆಯನ್ನು ಕಮ್ಯೂನಿಸ್ಟ್ ಚಟುವಟಿಕೆ
ಗಳ ಕೇಂದ್ರವೆಂದು ಘೋಷಿಸಿತು. ಘೋಷಣೆ ಹೊರಟ ಸ್ವಲ್ಪ ದಿನಗಳೊಳಗಾಗಿ ಆ ಮನೆ
ಯನ್ನು ಜರ್ಮನ್ ಪೋಲೀಸ್ ಪಡೆಯು ಜಪ್ತಿ ಮಾಡಿತು. ಪೋಲೀಸರು ತಮಗೆ ಬೇಕಾದ
ಸಾಮಾನುಗಳನ್ನು ಕೊಳ್ಳೆ ಹೊಡೆದು, ಬೇಡವಾದ ಪುಸ್ತಕಗಳನ್ನೂ, ಹಸ್ತಪ್ರತಿಯಲ್ಲಿದ್ದ

ಐನ್‌ಸ್ಟೈನರ ಕೆಲವು ಲೇಖನಗಳನ್ನೂ ಸುಟ್ಟುಹಾಕಿದರು. ಐನ್‌ಸ್ಟೈನರ ಪುಸ್ತಕಗಳೆಲ್ಲವನ್ನೂ ಸುಟ್ಟುಹಾಕಿದ್ದರಿಂದ ಅವರ ಭಾವನೆಗಳನ್ನೂ ಸುಟ್ಟುಹಾಕಿದಂತೆ ಎಂದು ಪೋಲೀಸರು ಭಾವಿಸಿದರು. ನಾಜೀ ಸರ್ಕಾರವು ಪೋಲೀಸ್ ದಳಕ್ಕೆ ತಮ್ಮ ಶಹಭಾಸ್‌ಗಿರಿಯನ್ನು ಕೊಟ್ಟಿತು. ಈ ರೀತಿ ಪುಸ್ತಕ ದಹನವಾದ ಸ್ವಲ್ಪ ದಿನಗಳ ನಂತರ ನಾಜೀ ಸರ್ಕಾರವು ಐನ್‌ಸ್ಟೈನರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡಿತು.

## ಬೆಲ್ಜಿಯಂ ಯುವಕರಿಗೆ ಐನ್‌ಸ್ಟೈನರ ಬುದ್ಧಿವಾದ

ಹಿಟ್ಲರನು ಮಾಡುತ್ತಿದ್ದ ಭಾಷಣಗಳೂ, ನಾಜೀ ಪಕ್ಷಕ್ಕೆ ಕೊಡುತ್ತಿದ್ದ ಸೂಚನೆಗಳೂ ನೆರೆಹೊರೆಯ ದೇಶಗಳಲ್ಲಿ ಗಾಬರಿಯನ್ನುಂಟುಮಾಡಿದುವು. ಆತನು ಕಟ್ಟುತ್ತಿದ್ದ ಸೈನ್ಯವು ಆ ಗಾಬರಿಯನ್ನು ಮತ್ತಷ್ಟು ಹೆಚ್ಚಿಸಿತ್ತು. ಹೀಗೆ ಯೋಚನೆಗೊಳಗಾದ ಆಸ್ಟ್ರಿಯಾ, ಜೆಕೋಸ್ಲೋವೇಕಿಯಾ, ಹಾಲೆಂಡ್ ಮತ್ತು ಬೆಲ್ಜಿಯಂ ದೇಶಗಳ ಸರ್ಕಾರಗಳೂ, ಪ್ರಜಾಕೋಟಿಯೂ ಸ್ವದೇಶದ ರಕ್ಷಣೆಯ ವಿಚಾರದಲ್ಲಿ ಹೆಚ್ಚು ಆಸಕ್ತಿ ತಾಳಿದುವು.

ಬೆಲ್ಜಿಯಂ ದೇಶವು ಮೊದಲನೆಯ ಮಹಾಯುದ್ಧದಲ್ಲಿ ಹೆಚ್ಚಿನ ಕಷ್ಟನಷ್ಟಗಳನ್ನು ಅನುಭವಿಸಿದ್ದಿತು. ಆದ್ದರಿಂದ ಅದಕ್ಕೆ ಯುದ್ಧದ ವಿಫಲತೆ ಮನದಟ್ಟಾಗಿತ್ತು. ಈ ತಿಳಿವಳಿಕೆ ಆ ದೇಶದ ಜನರು ಶಸ್ತ್ರಸನ್ಯಾಸದಲ್ಲಿ ಹೆಚ್ಚಿನ ನಂಬಿಕೆಯನ್ನಿಡುವಂತೆ ಮಾಡಿತ್ತು. ಯುದ್ಧಕ್ಕೆ ಬೇಕಾಗುವ ಶಸ್ತ್ರಾಸ್ತ್ರಗಳ ತಯಾರಿಕೆಯನ್ನು ಎಲ್ಲ ರಾಷ್ಟ್ರಗಳೂ ನಿಲ್ಲಿಸಿದರೆ ಮಾತ್ರ ಜಗತ್ತಿನಲ್ಲಿ ಶಾಂತಿ ದೊರಕುವದೆಂದು ಬೆಲ್ಜಿಯನ್ನರು ಭಾವಿಸಿದ್ದರು. ಕಮ್ಯೂನಿಸ್ಟ್ ಪ್ರಭಾವಕ್ಕೆ ಒಳಗಾಗಿದ್ದ ಆ ದೇಶದ ಯುವಕರಂತೂ "ಯುದ್ಧಗಳು ನಡೆಯಲು ಬಂಡವಾಳಗಾರರ ಹಿತಾರಿಯೇ ಕಾರಣ; ಅವರು ಯುದ್ಧದ ಬೆಂಕಿಯನ್ನು ಹೊತ್ತಿಸಿ, ಅದು ಹೊತ್ತಿಕೊಂಡು ಉರಿಯುವಾಗ, ಗಾಬರಿಗೊಂಡ ಸರ್ಕಾರಗಳಿಂದ ಅತಿ ಲಾಭ ಸಂಪಾದಿಸುವರು" ಎಂದು ಹೇಳುತ್ತಿದ್ದರು. ಈ ನಂಬಿಕೆಯನ್ನು ಹೊಂದಿದ್ದರಿಂದ ಬೆಲ್ಜಿಯಂ ಯುವಕರು ತಮ್ಮ ಸರ್ಕಾರ ದೇಶರಕ್ಷಣೆಗೆ ಬೇಕಾದ ಏರ್ಪಾಡುಗಳನ್ನು ಮಾಡುತ್ತಿದ್ದುದನ್ನು ವಿರೋಧಿಸುತ್ತಿದ್ದರು. ಹಿಟ್ಲರ್‌ನ ವಿದೇಶಾಂಗ ನೀತಿ ಈ ಜನರ ಕಣ್ಣು ತೆರೆಯುವಂತೆ ಮಾಡಿತು. ಸಣ್ಣ ಪುಟ್ಟ ರಾಷ್ಟ್ರಗಳನ್ನು ಧ್ವಂಸಗೊಳಿಸುವ ಉದ್ದೇಶದಿಂದಲೇ ತಯಾರಾಗುತ್ತಿದ್ದ ಆತನ ಸೈನ್ಯವನ್ನು ಎದುರಿಸಬೇಕಾದರೆ ತಮ್ಮ ದೇಶದ ಸೈನಿಕಶಕ್ತಿಯೂ ಬೆಳೆಯಬೇಕು–ಎಂದು ಆಲೋಚಿಸುವಂತಾಯಿತು. ಆದ್ದರಿಂದ ಆ ತರುಣರ ಮನಸ್ಸಿನಲ್ಲಿ ಒಳತೋಟಿ ನಡೆಯತೊಡಗಿತು. ಒಂದು ಕಡೆ ಅವರಿಗೆ ಶಸ್ತ್ರಸನ್ಯಾಸದಲ್ಲಿದ್ದ ನಂಬಿಕೆ, ಮತ್ತೊಂದು ಕಡೆ ತಮ್ಮ ದೇಶವನ್ನು ಜರ್ಮನ್ ಸೈನ್ಯದ ದಾಳಿಯಿಂದ ರಕ್ಷಿಸಬೇಕೆಂಬ ದೇಶಪ್ರೇಮ–ಇವು ಅವರ ಮನಸ್ಸನ್ನು ಎಳೆದಾಡುತ್ತಿದ್ದವು. ಅವರ ಮನಸ್ಸಿನಲ್ಲಿ ನಡೆಯುತ್ತಿದ್ದ ಈ ಹೊಯ್ದಾಟವನ್ನು ಶಮನ ಮಾಡಿ ಅವರಿಗೆ ತಕ್ಕ ದಾರಿ ತೋರಬಲ್ಲವರಾರೂ ಬೆಲ್ಜಿಯಂನಲ್ಲಿ ಇರಲಿಲ್ಲ. ಆದ್ದರಿಂದ ಆ ಯುವಕಸ್ತೋಮವು ತಮಗೆ ಸರಿಯಾದ ದಾರಿ ತೋರಬೇಕೆಂದು ಐನ್‌ಸ್ಟೈನರನ್ನು ಕೇಳಿ

ಕೊಂಡಿತು. ಐನ್‌ಸ್ಟೈನರು ಸರ್ವ ಜನರ ಹಿತವನ್ನು ಬಯಸುವ ತಪಸ್ವಿಗಳೆಂದೂ, ತಮಗೆ ತಕ್ಕ ಬುದ್ಧಿವಾದ ಹೇಳಬಲ್ಲ ಗುರುಗಳೆಂದೂ ಬೆಲ್ಜಿಯಂನ ಯುವಜನ ತಿಳಿದಿದ್ದರು. ತಮ್ಮನ್ನು ಭೇಟಿಮಾಡಲು ಬಂದ ಯುವಕರಿಗೆ ಐನ್‌ಸ್ಟೈನರು ಒಂದೇ ವಾಕ್ಯದಲ್ಲಿ ಬುದ್ಧಿವಾದ ಹೇಳಿ ಕಳಿಸಿದರು. "ಇಂದಿನ ಪರಿಸ್ಥಿತಿಯಲ್ಲಿ ಪ್ರತಿಯೊಬ್ಬನೂ ಬೆಲ್ಜಿಯಂನ ಸ್ವಾತಂತ್ರ್ಯವನ್ನು ರಕ್ಷಿಸಲು ಹೋರಾಡಲು ಸಿದ್ಧನಿರಬೇಕು."

ಐನ್‌ಸ್ಟೈನರು ಕೊಟ್ಟ ಬುದ್ಧಿವಾದವು ಬೆಲ್ಜಿಯಂ ಯುವಕರ ಸಂಶಯವನ್ನು ಹೋಗಲಾಡಿಸಿತು. ಅವರನ್ನು ಕಾರ್ಯೋನ್ಮುಖರನ್ನಾಗಿ ಮಾಡಿತು. ಆದರೆ ಯುರೋಪಿನ ಶಾಂತಿವಾದಿಗಳಿಗೆ ಈ ಉತ್ತರ ತೀರಾ ನಿರಾಶೆಯನ್ನು ಉಂಟುಮಾಡಿತು. ಐನ್‌ಸ್ಟೈನರು ಯಾವ ಸಂದರ್ಭದಲ್ಲಿಯೂ ಹೋರಾಟಕ್ಕೆ ಪ್ರೋತ್ಸಾಹ ಕೊಡುವುದಿಲ್ಲವೆಂದು ಶಾಂತಿವಾದಿಗಳು ಬಗೆದಿದ್ದರು. ಬೆಲ್ಜಿಯಂ ಯುವಕರು ತಮ್ಮ ದೇಶದ ಸ್ವಾತಂತ್ರ್ಯವನ್ನು ರಕ್ಷಿಸಲೋಸುಗ ಶಸ್ತ್ರಾಸ್ತ್ರಗಳನ್ನು ಹಿಡಿಯಲು ತಯಾರಿರಬೇಕು, ಎಂಬುದಾಗಿ ಅವರು ಕೊಟ್ಟ ಬುದ್ಧಿವಾದವನ್ನು ಕೇಳಿ, ಶಾಂತಿವಾದಿಗಳು, "ಐನ್‌ಸ್ಟೈನರು ಒಮ್ಮೊಮ್ಮೆ ಒಂದೊಂದು ರೀತಿ ಮಾತನಾಡುತ್ತಾರೆ; ಅವರದ್ದು ಅಸಂಬದ್ಧ ಪ್ರಲಾಪ" ಎಂದು ಟೀಕಿಸತೊಡಗಿದರು. ಐನ್‌ಸ್ಟೈನರನ್ನು ಟೀಕಿಸುವ ಭರದಲ್ಲಿ ಶಾಂತಿವಾದಿಗಳು ಅವರ ಸದುದ್ದೇಶವನ್ನು ಮರೆತರು.

ಅಂದಿನ ಸಂದರ್ಭದಲ್ಲಿ ಬೆಲ್ಜಿಯಂನಂಥ ಸಣ್ಣ ರಾಷ್ಟ್ರ ಶಾಂತಿಮಂತ್ರವನ್ನು ಜಪಿಸುತ್ತಾ ಕುಳಿತುಕೊಳ್ಳುವಂತಿರಲಿಲ್ಲ. ಹಾಗೇನಾದರೂ ಅವು ಶಾಂತಿಬೋಧನೆಯಲ್ಲೇ ತೊಡಗಿದ್ದಲ್ಲಿ ಹಿಟ್ಲರನಿಗೆ ಆಹ್ವಾನ ಕೊಟ್ಟಂತಾಗುತ್ತಿತ್ತು. ಶತ್ರು ಸೈನ್ಯಗಳು ದೇಶದ ಮೇಲೆ ದಾಳಿಯೆತ್ತಿಬಂದಾಗ ಅದನ್ನು ವಿರೋಧಿಸದೆ ಹೋಗುವುದು ಆತ್ಮಗೌರವವುಳ್ಳ ಜನಾಂಗದ ಲಕ್ಷಣವಾಗುತ್ತಿರಲಿಲ್ಲ. ಪ್ರತಿಭಟನೆ ತೋರಿಸದೆ ತಮ್ಮ ದೇಶದೊಳಕ್ಕೆ ಪರರಾಷ್ಟ್ರದ ಸೈನ್ಯವನ್ನು ಬಿಟ್ಟುಕೊಡುವುದು ಆ ಜನಾಂಗದ ನೈತಿಕ ಪತನಕ್ಕೆ ಕಾರಣವಾಗುತ್ತದೆ. ಅಂಥ ಜನಾಂಗ ಆತ್ಮಾಭಿಮಾನವನ್ನು ಕಳೆದುಕೊಳ್ಳುತ್ತದೆ. ಸ್ವಾತಂತ್ರ್ಯದಿಂದ ಬಾಳಲು ಅನರ್ಹವಾಗುತ್ತದೆ. ಆತ್ಮಗೌರವವನ್ನು ಉಳಿಸಿಕೊಳ್ಳಬೇಕೆಂಬ ಜನ, ಯುದ್ಧದಲ್ಲಿ ಸೋತರೂ ಸರಿಯೇ, ಶತ್ರುವಿಗೆ ಸರಿಸಮಾನವಾಗಿ ಹೋರಾಡಬೇಕು. ಈ ಅಂಶಗಳನ್ನು ಗಮನದಲ್ಲಿಟ್ಟರೆ ಐನ್‌ಸ್ಟೈನರ ಬುದ್ಧಿವಾದದಲ್ಲಿ ಯಾವ ವಿರೋಧಾಭಾಸವೂ ನಮಗೆ ಕಂಡುಬರುವುದಿಲ್ಲ. ಅಹಿಂಸಾವಾದಿಗಳಾಗಿದ್ದ ಮಹಾತ್ಮಾ ಗಾಂಧಿಯವರೂ ಕೂಡ ನಾಜೀಗಳು ಪೋಲೆಂಡಿಗೆ ನುಗ್ಗಿದಾಗ ಪೋಲಿಷ್ ಜನಾಂಗ ಶಸ್ತ್ರ ಹಿಡಿಯಬೇಕೆಂದು ಸೂಚಿಸಿದ್ದು ಈ ಕಾರಣದಿಂದಲೇ.

### ಇಂಗ್ಲೆಂಡಿಗೆ ಪ್ರಯಾಣ

ನಾಜೀ ಸರಕಾರವು ಪ್ರಬಲಗೊಂಡಂತೆ ಯಹೂದಿಗಳ ಸ್ಥಿತಿ ಕಠಿಣವಾಗಹತ್ತಿತ್ತು. ಐನ್‌ಸ್ಟೈನರು ಜರ್ಮನಿಯನ್ನು ಬಿಟ್ಟ ಕೆಲವು ತಿಂಗಳುಗಳೊಳಗಾಗಿ ಜರ್ಮನ್ ಯಹೂದಿ

ಗಳು ಆ ದೇಶವನ್ನು ಬಿಡಬೇಕಾಯಿತು. ಹೀಗೆ ಜರ್ಮನಿಯನ್ನು ಬಿಟ್ಟ ಯಹೂದಿಗಳಲ್ಲಿ ಅನೇಕ ಉದ್ದಾಮ ಪಂಡಿತರಿದ್ದರು. ಅವರು ತಮ್ಮ ಮನೆ ಮಠಗಳೆಲ್ಲವನ್ನೂ ಕಳೆದುಕೊಂಡು ಯೂರೋಪಿನ ದೇಶಗಳಲ್ಲಿ ಪರದಾಡುತ್ತಿದ್ದರು. ಈ ದುರಂತ ಸನ್ನಿವೇಶವನ್ನು ಕಂಡು ಅನೇಕ ಮಹಾನುಭಾವರು ಮರುಗಿದರು. ಆದರಲ್ಲಿ ಕೆಲವರು ಯಹೂದಿಗಳಿಗೆ ಅಲ್ಪಸ್ವಲ್ಪ ಸಹಾಯಮಾಡಲು ಪ್ರಯತ್ನಪಟ್ಟರು. ಅಂಥವರಲ್ಲಿ ಇಂಗ್ಲೆಂಡಿನ ರುದರ್ ಫರ್ಡ್ ಒಬ್ಬ. ತನ್ನ ಉದ್ಯಮದಲ್ಲಿ ನೆರವಾಗಬೇಕೆಂದು ಆತ ಐನ್‌ಸ್ಟೈನರನ್ನು ಪ್ರಾರ್ಥಿಸಿದ್ದನು.

ರುದರ್ ಫರ್ಡನ ಆಹ್ವಾನವನ್ನು ಒಪ್ಪಿಕೊಳ್ಳುವ ಮುಂಚೆ ಐನ್‌ಸ್ಟೈನರು ದೀರ್ಘವಾಗಿ ಆಲೋಚಿಸಬೇಕಾಯಿತು. ನಾಜೀ ಸರ್ಕಾರದ ರೀತಿನೀತಿಗಳಿಂದ ಪರದೇಶಿಗಳಾದ ಯಹೂದಿಗಳಲ್ಲಿ ತಾನೂ ಒಬ್ಬರಾದುದರಿಂದ, ರುದರ್ ಫರ್ಡನಿಗೆ ಬೆಂಬಲ ಕೊಟ್ಟರೆ ಸ್ವಪ್ರಯೋಜನಕ್ಕೆ ಕೆಲಸ ಮಾಡಿದಂತಾಗುವುದಿಲ್ಲವೇ ? ಜನ ಆ ರೀತಿ ಆಡಿಕೊಳ್ಳುವುದಿಲ್ಲವೇ ? ಎಂಬ ಚಿಂತೆ ಅವರನ್ನು ಬಾಧಿಸಿತು. ಆದರೆ ಅಂಥ ಪ್ರಯತ್ನದಿಂದ ತನಗಿಂತ ಹೆಚ್ಚಾಗಿ ತನ್ನ ಅನಾಥ ಸೋದರರಿಗೆ ಉಪಯೋಗವಾಗುತ್ತದೆ ಎಂಬುದನ್ನು ತಿಳಿದು ಅವರು ಇಂಗ್ಲೆಂಡಿಗೆ ಹೋದರು. ಅಲ್ಲಿ ಆ ವರ್ಷದ ಅಕ್ಟೋಬರ್ ತಿಂಗಳವರೆಗೆ ಇದ್ದು ದೇಶಭ್ರಷ್ಟರಾದ ಯಹೂದಿಗಳಿಗೆ ತಮ್ಮಿಂದ ಸಾಧ್ಯವಾದ ಸೇವೆಯನ್ನು ಸಲ್ಲಿಸಿದರು.

# 2 ಹೊಸ ಬಾಳು

**ಅಮೇರಿಕಾದಲ್ಲಿ ನೆಲೆಸಿದ್ದು**

ಇಂಗ್ಲೆಂಡಿನಲ್ಲಿ ಐನ್‌ಸ್ಟೈನರು ಸೇವಾಕಾರ್ಯದಲ್ಲಿ ನಿರತರಾಗಿದ್ದಾಗ ಅಮೇರಿಕಾದಿಂದ ಅವರಿಗೆ ಆಹ್ವಾನ ಹೋಯಿತು. ಆ ದೇಶದಲ್ಲಿ ಆಗತಾನೇ 'ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್' ಎಂಬ ಸಂಸ್ಥೆ ಸ್ಥಾಪಿತವಾಗಿದ್ದಿತು. ವಿಜ್ಞಾನಶಾಸ್ತ್ರಗಳ ವಿವಿಧ ಶಾಖೆಗಳಲ್ಲಿ ಸಂಶೋಧನೆಗಳನ್ನು ನಡೆಸುವುದು ಆ ಸಂಸ್ಥೆಯ ಗುರಿಯಾಗಿತ್ತು. ಜಾತಿ, ಮತ ಮತ್ತು ದೇಶಗಳ ಭೇದವನ್ನೆಣಿಸದೆ ಯೋಗ್ಯತೆಯಿದ್ದ ಯುವಕರನ್ನು ಆ ಸಂಸ್ಥೆಯ ವಿದ್ಯಾರ್ಥಿಗಳನ್ನಾಗಿ ಆರಿಸಿಕೊಳ್ಳಬೇಕೆಂದು ಇನ್‌ಸ್ಟಿಟ್ಯೂಟಿನ ಸ್ಥಾಪಕರು ಮನಸ್ಸು ಮಾಡಿದ್ದರು. ಸ್ಥಾಪಕರ ಹೆಸರು ಲೂಯಿ ಬಾಂಬರ್‌ಜರ್ ಮತ್ತು ಶ್ರೀಮತಿ ಫೆಲಿಕ್ಸ್ ಫಲ್ (Louis Bomberger and Felix Fuld). ಸಂಸ್ಥೆಯ ಅಧ್ಯಕ್ಷ ಸ್ಥಾನವನ್ನು ವಹಿಸಿದ್ದವರು ಏಬ್ರಹಂ ಫ್ಲೆಕ್ಸ್‌ನರ್ (Abraham Flexner) ಎಂಬ ಪ್ರಸಿದ್ಧ ವಿದ್ವಾಂಸರು. ಸಂಸ್ಥೆಯಲ್ಲಿ ಎಲ್ಲ ಶಾಖೆಗಳನ್ನೂ ತೆರೆಯುವುದಕ್ಕೆ ಮುಂಚೆ ಗಣಿತಶಾಸ್ತ್ರದ ಶಾಖೆಯನ್ನು ಪ್ರಾರಂಭಿಸುವುದು ಒಳ್ಳೆಯದೆಂದು ಫ್ಲೆಕ್ಸ್‌ನರ್ ತೀರ್ಮಾನಿಸಿದರು. ಕಾರ್ಯಗತ ಮಾಡುವ ಮುನ್ನ ಡಾ। ಮಿಲಿಕನ್ನರ ಅಭಿಪ್ರಾಯವನ್ನು ಕೇಳಿದರು. ಮಿಲಿಕನ್ನರು ಫ್ಲೆಕ್ಸ್‌ನರ್‌ರ ಸೂಚನೆಯನ್ನು ಒಪ್ಪಿದರು; ಮತ್ತು ಗಣಿತಶಾಸ್ತ್ರ ಶಾಖೆಗೆ ಐನ್‌ಸ್ಟೈನರನ್ನು ಮುಖ್ಯಸ್ಥರನ್ನಾಗಿ ಮಾಡುವುದು ಸೂಕ್ತವೆಂದು ಸಲಹೆಯಿತ್ತರು. ಈ ಸಲಹೆಯ ಪ್ರಕಾರ ಫ್ಲೆಕ್ಸ್‌ನರ್ ಐನ್‌ಸ್ಟೈನರನ್ನು ತಮ್ಮ ದೇಶಕ್ಕೆ ಆಹ್ವಾನಿಸಿದರು.

ಫ್ಲೆಕ್ಸ್‌ನರ್‌ಗೆ ಐನ್‌ಸ್ಟೈನರನ್ನು ತಮ್ಮ ಸಂಸ್ಥೆಗೆ ಬರಮಾಡಿಕೊಳ್ಳುವ ಆಸೆ ದಿನೇ ದಿನೇ ವೃದ್ಧಿಯಾಯಿತು. ಐನ್‌ಸ್ಟೈನರನ್ನು ಒಪ್ಪಿಸುವ ಉದ್ದೇಶದಿಂದ ಅವರು ಎರಡು–ಮೂರು ಸಾರೆ ಯುರೋಪಿಗೆ ಹೋದರು. ಅಲ್ಲಿ ಐನ್‌ಸ್ಟೈನರನ್ನು ಭೇಟಿಮಾಡಿ ತಮ್ಮ ಸಂಸ್ಥೆಯ ಉದ್ದೇಶವನ್ನೂ ನಿಯಮಿತರಾಗುವ ಅಧಿಕಾರಿಗಳ ಕಾರ್ಯವ್ಯಾಪ್ತಿಯನ್ನೂ ವಿವರಿಸಿದರು. ಫ್ಲೆಕ್ಸ್‌ನರ್ ನಡೆಸಿದ ಸಂಭಾಷಣೆಗಳಿಂದ ಸಂಸ್ಥೆಯನ್ನು ನಡೆಸುವ ಆಡಳಿತ ಭಾರ ಅಧ್ಯಾಪಕರ ಮೇಲೆ ಬೀಳುವುದಿಲ್ಲವೆಂದು ಐನ್‌ಸ್ಟೈನರಿಗೆ ಖಚಿತವಾಯಿತು. ಫ್ಲೆಕ್ಸ್‌ನರ್ ಕೊಟ್ಟ ಈ ಆಹ್ವಾನವನ್ನು ಒಪ್ಪಿಕೊಂಡರೆ ತಮ್ಮ ಕಾಲವನ್ನೆಲ್ಲಾ ಸಂಶೋಧನೆಗೆ ಉಪಯೋಗಿಸಬಹುದೆಂದು ಐನ್‌ಸ್ಟೈನರು ಅಮೇರಿಕಾಕ್ಕೆ ಬರಲು ಒಪ್ಪಿದರು. ಫ್ಲೆಕ್ಸ್‌ನರ್‌ರವರ ಇಷ್ಟಾರ್ಥ ನೆರವೇರಿತು.

ಐನ್‌ಸ್ಟೈನರು ಮನಸ್ಸು ಮಾಡಿದ್ದರೆ ಯುರೋಪಿನಲ್ಲೋ ಪ್ಯಾಲೆಸ್ಟೈನಿನಲ್ಲೋ ನೆಲೆಸಬಹುದಾಗಿತ್ತು. ಜೆರೂಸಲೆಮ್ ವಿಶ್ವವಿದ್ಯಾನಿಲಯದ ಜೊತೆಗೆ ಮ್ಯಾಡ್ರಿಡ್ ಮತ್ತು ಪ್ಯಾರಿಸ್ ವಿಶ್ವವಿದ್ಯಾನಿಲಯಗಳೂ ಅವರಿಗೆ ಆಮಂತ್ರಣಗಳನ್ನಿತ್ತಿದ್ದುವು. ಐನ್‌ಸ್ಟೈನರು ಇವಾವುದನ್ನೂ ಮನ್ನಿಸದೆ ಅಮೇರಿಕಾದಿಂದ ಬಂದ ಆಹ್ವಾನವನ್ನು ಒಪ್ಪಿಕೊಳ್ಳಲು ಎರಡು ಕಾರಣಗಳಿದ್ದುವು. ಆ ದೇಶದಲ್ಲಿ ಸಂಶೋಧನೆಗೆ ಹೆಚ್ಚು ಸೌಲಭ್ಯ ದೊರಕುತ್ತದೆಂಬುದು ಒಂದು; ಯುರೋಪಿನಿಂದ ಅಥವಾ ಪ್ಯಾಲೆಸ್ಟೈನಿನಿಂದ ಬಂದ ಆಹ್ವಾನವನ್ನು ಒಪ್ಪಿದರೆ ಅವರಿಗೆ ಸಂಶೋಧನೆಗೆ ಹೆಚ್ಚು ಕಾಲ ದೊರೆಯುತ್ತಿರಲಿಲ್ಲ. ಆ ವಿಶ್ವವಿದ್ಯಾನಿಲಯಗಳಲ್ಲಿಯ ಪ್ರಾಧ್ಯಾಪಕರು ಸಂಶೋಧನ ನಡೆಸುವದರ ಜೊತೆಗೆ ತಮ್ಮ ಶಾಖೆಯ ಆಡಳಿತವನ್ನು ನಡೆಸಬೇಕಾಗಿತ್ತು. ಎರಡನೆಯದಾಗಿ ಅಮೇರಿಕಾ ದೇಶದಲ್ಲಿ ಯುರೋಪಿಗಿಂತ ಉತ್ತಮ ವಾತಾವರಣವಿತ್ತು. ಯುರೋಪಿನ ದೇಶಗಳು ಸಮರಸನ್ನಾಹಗಳಲ್ಲಿ ತೊಡಗಿ ಜನಾಂಗ-ಜನಾಂಗಗಳ ನಡುವೆ ದ್ವೇಷವನ್ನು ಬೆಳೆಸುತ್ತಿದ್ದುವು. ಜನರ ಭೀತಿಯನ್ನು ಹೆಚ್ಚಿಸುತ್ತಿದ್ದುವು. ಅಮೇರಿಕಾದೇಶ ಈ ಕಲ್ಮಶ ವಾತಾವರಣದಿಂದ ದೂರವಾಗಿತ್ತು. ಯುರೋಪಿನ ಗೋಜಿಗೆ ಹೋಗದೆ ತನ್ನ ಅಭಿವೃದ್ಧಿಗಾಗಿ ಶ್ರಮಿಸುತ್ತಿತ್ತು. ಇದರಿಂದ ಅಲ್ಲಿಯ ವಾತಾವರಣ ತಿಳಿಯಾಗಿತ್ತು.

ಇನ್‌ಸ್ಟಿಟ್ಯೂಟಿನ ಕೆಲಸವನ್ನು ಐನ್‌ಸ್ಟೈನರು ಒಪ್ಪಿಕೊಳ್ಳುವುದಾಗಿ ತಿಳಿಸಿದ ಮೇಲೆ ಅದರ ಸ್ಥಾಪಕರು ಅವರಿಗೆ ಸಂಬಳವನ್ನು ನಿಗದಿ ಮಾಡಬೇಕಾಗಿ ಬಂತು. ಐನ್‌ಸ್ಟೈನರನ್ನು ಭೇಟಿ ಮಾಡಿದ ಫ್ಲೆಕ್ಸ್‌ನರ್ ಈ ವಿಚಾರದಲ್ಲಿ ಅವರೊಂದಿಗೆ ಯಾವ ಮಾತನ್ನೂ ಆಡಿರಲಿಲ್ಲ. ಐನ್‌ಸ್ಟೈನರೊಂದಿಗೆ ಆ ವಿಚಾರವನ್ನು ಚರ್ಚಿಸಲು ಫ್ಲೆಕ್ಸ್‌ನರ್ ಸಂಕೋಚಗೊಂಡಿದ್ದರು. ಈ ವಿಷಯದಲ್ಲಿ ಯಾವ ಇತ್ಯರ್ಥಕ್ಕೂ ಬರದೆ ಇರುವುದು ಒಳ್ಳೆಯದಲ್ಲವೆಂದು ಅವರಿಗೆ ಅನ್ನಿಸಿತು. ಐನ್‌ಸ್ಟೈನರು ಅಪೇಕ್ಷಿಸುವ ಸಂಬಳವನ್ನು ತಮಗೆ ತಿಳಿಸುವಂತೆ ಅವರಿಗೆ ಕಾಗದ ಬರೆದರು. ಐನ್‌ಸ್ಟೈನರು ಕೇಳಿದ ಸಂಬಳ ಫ್ಲೆಕ್ಸ್‌ನರ್ ಕೊಡಬೇಕೆಂದು ಆಲೋಚಿಸಿದ್ದ ಸಂಬಳದ ಅತಿಸ್ವಲ್ಪ ಭಾಗವಾಗಿದ್ದಿತು! ಈ ಉತ್ತರ ಫ್ಲೆಕ್ಸ್‌ನರಿಗೆ ತುಂಬಾ ಆಶ್ಚರ್ಯವನ್ನುಂಟುಮಾಡಿತು. ಸಂಶೋಧನೆಯಲ್ಲಿ ತೊಡಗಿದವನು ಹೆಚ್ಚಿನ ಸಂಬಳವನ್ನು ತೆಗೆದುಕೊಳ್ಳುವುದು ಅನ್ಯಾಯವೆಂದು ನಂಬಿದ್ದ ಐನ್‌ಸ್ಟೈನರು ತಾವು ಅಮೇರಿಕಾದಲ್ಲಿ ಜೀವನ ನಡೆಸಲು ಎಷ್ಟು ಅವಶ್ಯಕವೋ ಅಷ್ಟನ್ನು ಮಾತ್ರ ಇನ್‌ಸ್ಟಿಟ್ಯೂಟಿನಿಂದ ಅಪೇಕ್ಷಿಸಿದ್ದರು. ಐನ್‌ಸ್ಟೈನರ ಈ ಮನೋಭಾವನೆ ಅವರು ವ್ಯವಹಾರದಲ್ಲಿ ಅಷ್ಟು ಚತುರರಲ್ಲವೆಂಬುದನ್ನು ತೋರಿಸಿಕೊಟ್ಟಿತು. ಸಂಬಳದ ವಿಚಾರದಲ್ಲಿ ಐನ್‌ಸ್ಟೈನರೊಂದಿಗೆ ಪತ್ರವ್ಯವಹಾರ ನಡೆಸುವದು ಪ್ರಯೋಜನವಿಲ್ಲವೆಂದು ಫ್ಲೆಕ್ಸ್‌ನರ್ ನಿರ್ಧರಿಸಿದರು. ಆ ಸಂಬಂಧವಾಗಿ ಶ್ರೀಮತಿ ಎಲ್ಸಾ ಐನ್‌ಸ್ಟೈನರೊಂದಿಗೆ ಮಾತುಕತೆ ನಡೆಸಿ ಐನ್‌ಸ್ಟೈನರ ಸಂಬಳವನ್ನು ಗೊತ್ತುಮಾಡಿದರು.

'ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್' ಬರ್ಲಿನ್ ವಿಶ್ವವಿದ್ಯಾನಿಲಯದಂತೆ ವೈಜ್ಞಾನಿಕ ಸಂಶೋಧನೆಗಳನ್ನು ಮುಂದುವರಿಸುವುದನ್ನೇ ಏಕಮಾತ್ರ ಧ್ಯೇಯವಾಗಿ ಹೊಂದಿ

ತ್ತಾದ್ದರಿಂದ ಐನ್‌ಸ್ಟೈನರು ತಮ್ಮ ಹೊಸ ಸ್ಥಾನದಲ್ಲಿ ಮಾಡಬೇಕಾಗಿದ್ದ ಕೆಲಸ ಅವರು ಹಿಂದೆ ಮಾಡುತ್ತಿದ್ದುದಕ್ಕಿಂತ ಭಿನ್ನವಾದುದಾಗಿರಲಿಲ್ಲ. ಬರ್ಲಿನ್ ನಗರದಲ್ಲಿ ಮಾಡುತ್ತಿದ್ದಂತೆ ಅಮೇರಿಕಾದಲ್ಲಿಯೂ ಐನ್‌ಸ್ಟೈನರು ಅರ್ಹರಾದ ವಿದ್ಯಾರ್ಥಿಗಳಿಗೆ ಸಂಶೋಧನೆಗಳ ವಿಚಾರವಾಗಿ ತಕ್ಕ ತಿಳಿವಳಿಕೆಯನ್ನು ಕೊಡಬೇಕಾಗಿದ್ದಿತು. ಆದರೆ ಬರ್ಲಿನ್‌ನಲ್ಲಿದ್ದಂತೆ ಇಲ್ಲಿಯೂ ಅವರ ಕೈ ಕೆಳಗೆ ಹೆಚ್ಚು ಮಂದಿ ಕೆಲಸ ಮಾಡುತ್ತಿರಲಿಲ್ಲ. ಐನ್‌ಸ್ಟೈನರ ಬಳಿಯಲ್ಲಿ ಸಂಶೋಧನೆ ನಡೆಸಲು ಯುವಕರು ಮುಂದೆ ಬರುತ್ತಿರಲಿಲ್ಲ. ಏಕೆಂದರೆ ಐನ್‌ಸ್ಟೈನರು ಕೊಡುತ್ತಿದ್ದ ಸಮಸ್ಯೆಗಳು ಅತ್ಯಂತ ಕಠಿಣವಾಗಿರುತ್ತಿದ್ದವು. ಈ ಸಮಸ್ಯೆಗಳ ಮೇಲೆ ಸಾಕಷ್ಟು ಸಂಶೋಧನೆಗಳನ್ನು ನಡೆಸಿ ಜಯಗಳಿಸುವುದು ಸುಲಭದ ಮಾತಾಗಿರಲಿಲ್ಲ. ಹೆಚ್ಚು ಸಂಖ್ಯೆಯ ಸಂಶೋಧನೆಗಳನ್ನು ನಡೆಸಿ ಕೀರ್ತಿ ಮತ್ತು ಪದವಿಗಳನ್ನುಗಳಿಸಬೇಕೆಂಬ ಆಸೆಯಿಂದ ಇನ್‌ಸ್ಟಿಟ್ಯೂಟಿಗೆ ಬರುತ್ತಿದ್ದ ವಿದ್ಯಾರ್ಥಿಗಳು ಐನ್‌ಸ್ಟೈನರು ಕೊಡುವ ಒಂದೋ. ಎರಡೋ ಕಠಿಣ ಸಮಸ್ಯೆಗಳ ಮೇಲೆ ಸಂಶೋಧನೆ ನಡೆಸಿ ತಮ್ಮ ಕಾಲವನ್ನೆಲ್ಲ ಉಪಯೋಗಿಸಲು ಸಿದ್ಧರಾಗಿರಲಿಲ್ಲ. ಅವರಿಗೆ ಬೇಕಾಗಿದ್ದುದು ಸುಲಭವಾಗಿರುವ ಅನೇಕ ಸಮಸ್ಯೆಗಳ ; ಆದರೆ ಐನ್‌ಸ್ಟೈನರು ಕೊಡುತ್ತಿದ್ದುದು ಒಂದೋ, ಎರಡೋ ಮುಖ್ಯ ಸಮಸ್ಯೆಗಳು. ಸಾಮಾನ್ಯ ವಿದ್ಯಾರ್ಥಿಗಳಿಗೆ ಈ ರೀತಿಯ ಅನಾನುಕೂಲವಿದ್ದುದರಿಂದ ಅವರು ಐನ್‌ಸ್ಟೈನರ ಕಡೆಗೆ ಸುಳಿಯುತ್ತಿರಲಿಲ್ಲ. ಯಾವ ಪ್ರತಿಫಲವನ್ನೂ ಅಪೇಕ್ಷಿಸದೆ ಜ್ಞಾನಾರ್ಜನೆಯಲ್ಲಿ ತಮ್ಮ ದೇಹವನ್ನು ಸವೆಸಲು ಸಿದ್ಧರಾಗಿದ್ದವರು ಮಾತ್ರ ಐನ್‌ಸ್ಟೈನರ ಶಿಷ್ಯರಾಗಬಹುದಾಗಿದ್ದಿತು. ಇಂಥ ಉದಾತ್ತ ಧ್ಯೇಯವನ್ನು ಹೊಂದಿರುವವರ ಸಂಖ್ಯೆ ತೀರಾ ಕಡಿಮೆಯಾಗಿದ್ದುದರಿಂದ ಐನ್‌ಸ್ಟೈನರ ಶಿಷ್ಯವೃಂದ ಯಾವಾಗಲೂ ಚಿಕ್ಕದಾಗಿರುತ್ತಿತ್ತು. ಅಮೇರಿಕಾದಲ್ಲಿ ಐನ್‌ಸ್ಟೈನರಿಗೆ ಶಿಷ್ಯರಾದವರಲ್ಲಿ ಪ್ರಮುಖರಾದವರು ಪೀಟರ್ ಬರ್ಗ್‌ಮನ್, ವಾಲ್ಟರ್ ಮೇಯರ್ ಮತ್ತು ಲಿಯೋಪಾಲ್ಡ್ ಇನ್‌ಫೆಲ್ಡ್.

### ವಲಸೆ ಬಂದ ಯಹೂದಿಗಳು

ಐನ್‌ಸ್ಟೈನರು ಅಮೇರಿಕಾದಲ್ಲಿ ನೆಲಸಿದ ಮೇಲೆ ಜರ್ಮನಿಯಿಂದ ಹೊರದೂಡಲ್ಪಟ್ಟ ಯಹೂದಿಗಳನೇಕರು ಅಲ್ಲಿಗೆ ಬರಲಾರಂಭಿಸಿದರು. ಅವರೆಲ್ಲರೂ ಐನ್‌ಸ್ಟೈನರ ಸಹಾಯವನ್ನಪೇಕ್ಷಿಸುತ್ತಿದ್ದವರೇ. ಹೀಗೆ ಸಹಾಯವನ್ನಪೇಕ್ಷಿಸಿ ಬಂದವರೆಲ್ಲರಿಗೂ ಅನುಕೂಲ ಮಾಡಿಕೊಡುವುದು ಐನ್‌ಸ್ಟೈನರಿಗೆ ಅಸಾಧ್ಯವಾಗಿತ್ತು. ಮೇಲಾಗಿ ಜನ ತಿಳಿದಷ್ಟು ಅಧಿಕಾರವಾಗಲೀ ಪ್ರಭಾವವಾಗಲೀ ಅವರಿಗೆ ಇರಲಿಲ್ಲ. ಇದರಿಂದ ಅನೇಕರಿಗೆ ನಿರಾಶೆಯುಂಟಾಗುತ್ತಿತ್ತು.

ಅಮೇರಿಕಾದಲ್ಲಿ ಐನ್‌ಸ್ಟೈನರ ಸಹಾಯವನ್ನು ನಿರೀಕ್ಷಿಸಿಕೊಂಡು ಅಲ್ಲಿಗೆ ಬಂದು ನಿರಾಶರಾದವರು ಕೆಲವರಾದರೆ, ಅಮೇರಿಕಕ್ಕೆ ಬರಲು ಅವರ ಸಹಾಯಕೋರಿ ನಿರಾಶರಾದವರು ಎಷ್ಟೋ ಮಂದಿ. ಹೀಗೆ ನಿರಾಶೆಗೊಂಡವರೆಲ್ಲರೂ ಐನ್‌ಸ್ಟೈನರನ್ನು ದೂಷಿಸಲಾರಂಭಿ

ಸಿದರು. ಜರ್ಮನಿಯಲ್ಲಿ ನಾಜಿಗಳಿಂದ ದೂಷಣೆ ನಡೆದಿದ್ದರೆ ಅಮೇರಿಕಾದಲ್ಲಿ ಯಹೂದಿಗಳಿಂದಲೇ ಅದನ್ನು ಕೇಳಬೇಕಾಯಿತು.

ಹೀಗೆಂದಮಾತ್ರಕ್ಕೆ ಐನ್‌ಸ್ಟೈನರು ಯಾರಿಗೂ ಸಹಾಯ ಮಾಡಲಿಲ್ಲವೆಂದಲ್ಲ, ತಮ್ಮಿಂದಾದಷ್ಟು ಸಹಾಯವನ್ನು ಐನ್‌ಸ್ಟೈನರು ವಲಸೆ ಬಂದ ಯಹೂದಿಗಳಿಗೆ ಮಾಡಿದರು. ಹಾಗೆ ಸಹಾಯ ಮಾಡುವುದು ತನ್ನ ಕರ್ತವ್ಯವೆಂಬುದನ್ನೂ ಅವರು ತಿಳಿದಿದ್ದರು. ಆದರೆ ತಂಡೋಪತಂಡವಾಗಿ ಯಹೂದಿಗಳು ಅಮೇರಿಕಾಕ್ಕೆ ನುಗ್ಗಲು ಮೊದಲು ಮಾಡಿದರು. ಅವರೆಲ್ಲರಿಗೂ ಸಹಾಯ ಮಾಡಲು ಸಾಧ್ಯವಿರಲಿಲ್ಲ.

ವಲಸೆ ಬಂದ ಯಹೂದಿಗಳಿಗೆ ಸಹಾಯ ಮಾಡಲು ಐನ್‌ಸ್ಟೈನರಿಗೆ ಕೆಲವು ತೊಡರುಗಳಿದ್ದವು. ಅವುಗಳಲ್ಲಿ ಮೊದಲನೆಯದು ಹಿಂದೆ ಹೇಳಿದಂತೆ ವಲಸೆ ಬಂದವರ ಸಂಖ್ಯೆ ಅತಿಯಾಗಿದ್ದುದು. ಎರಡನೆಯದು ಅಂದಿನ ಆರ್ಥಿಕ ಪರಿಸ್ಥಿತಿ, ಹಿಟ್ಲರನ ಅಧಿಕಾರಕ್ಕೆ ಬಂದ ಸಮಯದಲ್ಲಿ ಪ್ರಪಂಚದ ಎಲ್ಲ ಭಾಗಗಳಲ್ಲಿಯೂ ನಿರುದ್ಯೋಗ ಸಮಸ್ಯೆ ಎದ್ದಿದ್ದಿತು. ಪದಾರ್ಥಗಳ ಬೆಲೆ ಇಳಿದು ಹೋಗಿ ಹಣದ ಮುಗ್ಗಟ್ಟು ಎಲ್ಲ ದೇಶಗಳನ್ನೂ ಆವರಿಸಿತ್ತು. ಅಮೇರಿಕಾದಲ್ಲಿ ಅಧಿಕಾರದಲ್ಲಿದ್ದ ಅಧ್ಯಕ್ಷ ರೂಸ್‌ವೆಲ್ಟರೂ ಈ ಸಮಸ್ಯೆಯನ್ನು ಸ್ವಲ್ಪ ಮಟ್ಟಿಗೆ ಬಗೆಹರಿಸಿದ್ದರೂ ಅದು ಸಂಪೂರ್ಣವಾಗಿ ನಿವಾರಣೆಯಾಗಿರಲಿಲ್ಲ. ಆದ್ದರಿಂದ ಎಷ್ಟೋ ಜನ ಅಮೇರಿಕನ್ನರು ನಿರುದ್ಯೋಗದಿಂದ ನರಳುತ್ತಿದ್ದರು. ಅಂಥ ಸಮಯದಲ್ಲಿ ಹೊರ ದೇಶದಿಂದ ಬಂದ ಯಹೂದಿಗಳಿಗೆ ಐನ್‌ಸ್ಟೈನರು ಕೆಲಸ ಕೊಡಿಸಿ ಕೊಟ್ಟಿದ್ದರೆ, ಅಮೇರಿಕನ್ನರು ಸ್ವಾಭಾವಿಕವಾಗಿ ತಿರುಗಿ ಬೀಳುತ್ತಿದ್ದರು. ಆ ದೇಶದಲ್ಲಿ ಹುಟ್ಟಿ ಬೆಳೆದವರಿಗೇ ಕೆಲಸವಿಲ್ಲದಿರುವಾಗ ಹೊರದೇಶದಿಂದ ಬಂದವರಿಗೆ ಕೆಲಸ ಕೊಡಿಸಲು ಪ್ರಯತ್ನಪಡುವುದು ಅಧರ್ಮವಾಗಿ ತೋರಿತು. ಇವುಗಳ ಜೊತೆಗೆ ಖಾಲಿ ಬಿದ್ದ ಸ್ಥಳಗಳನ್ನೆಲಾ ಯಹೂದಿಗಳೇ ಆಕ್ರಮಿಸುತ್ತ ಬಂದಿದ್ದರೆ ಹೊರಗಿನ ಯಹೂದಿಗಳಿಗೂ ಅಮೇರಿಕನ್ನರಿಗೂ ದ್ವೇಷ ಬೆಳೆಯಲು ಅವಕಾಶ ಉಂಟಾಗುತ್ತಿತ್ತು. ಐನ್‌ಸ್ಟೈನರು ಇಂಥ ಪರಿಸ್ಥಿತಿಗೆ ತಾವು ಕಾರಣರಾಗಲು ಇಷ್ಟಪಡಲಿಲ್ಲ.

ಜರ್ಮನಿಯಿಂದ ಬಂದ ಯಹೂದಿಗಳಿಗೆ ಪ್ರೋತ್ಸಾಹ ಕೊಡಲು ಐನ್‌ಸ್ಟೈನರಿಗಿದ್ದ ಮೂರನೆಯ ತೊಡಕೆಂದರೆ ಆ ಯಹೂದಿಗಳ ಅಸಭ್ಯ ವರ್ತನೆ. ಅಮೇರಿಕಾದಲ್ಲಿ ನೆಲೆಸಿದ ಯಹೂದಿಗಳು ಆ ದೇಶವನ್ನು ತಮ್ಮ ತಾಯ್ನಾಡಿನಂತೆ ಕಂಡುಕೊಳ್ಳಲಿಲ್ಲ. ತಮ್ಮ ಹಿಂದಿನ ದೇಶವಾದ ಜರ್ಮನಿಯನ್ನು ಅವರು ಹೊಗಳುವುದರಲ್ಲಿಯೇ ನಿರತರಾಗಿದ್ದರು. ಸಮಯ ಬಂದಾಗ ಜರ್ಮನಿಗೆ ಹೋಗಿ ಅಲ್ಲಿ ನೆಲೆಸುವ ಅಭಿಲಾಷೆಯನ್ನು ತೋರುತ್ತಿದ್ದರೇ ಹೊರತು ಕಷ್ಟಕಾಲದಲ್ಲಿ ಆಶ್ರಯವಿತ್ತ ಅಮೇರಿಕಾವನ್ನು ತಮ್ಮ ಮಾತೃ ಭೂಮಿಯೆಂದು ಭಾವಿಸಲಾರದೆ ಹೋದರು. ಯಹೂದಿಗಳ ಈ ವರ್ತನೆ ಅಮೇರಿಕನ್ನರನ್ನು ಕುಪಿತರನ್ನಾಗಿ ಮಾಡಿತು. ಅಮೇರಿಕಕ್ಕೆ ಬಂದಿದ್ದ ಯಹೂದಿಗಳು ಕೇವಲ ಉದ್ಯೋಗ ಸಂಪಾದಿಸಲು ಅಲ್ಲಿಗೆ ಬಂದಿದ್ದವರೆಂದೂ ಅವರಿಗೆ ಪ್ರೋತ್ಸಾಹ ಕೊಡುವುದು ಅಮೇರಿಕನ್ ಜನತೆಗೆ ದ್ರೋಹ

ಒಗೆದಂತಾಗುತ್ತದೆಂದೂ ಅಮೇರಿಕನ್ನರು ಹೇಳತೊಡಗಿದ್ದರು. ಇದರಿಂದ ಯಹೂದಿಗಳಿಗೆ ಕೆಲಸ ದೊರಕಿಸಿ ಕೊಡುವುದು ಅಸಾಧ್ಯವಾಗಿತ್ತು.

ಐನ್‌ಸ್ಟೈನರನ್ನು ತೆಗಳುತ್ತಿದ್ದ ಯಹೂದಿಗಳಿಗೆ ಅಂದಿನ ತೊಂದರೆಗಳ ಪರಿಜ್ಞಾನವೇ ಇರಲಿಲ್ಲ. ಆದರೆ ತಮ್ಮ ತಪ್ಪನ್ನು ತಿಳಿದುಕೊಳ್ಳಲು ಅವರಿಗೆ ಬಹುಕಾಲ ಬೇಕಾಗಿರಲಿಲ್ಲ.

ನ್ಯೂಯಾರ್ಕ್ ಪಟ್ಟಣದಲ್ಲಿದ್ದ "ಕಾಲೇಜ್ ಆಫ್ ದಿ ಸಿಟಿ ಆಫ್ ನ್ಯೂಯಾರ್ಕ್" ಎಂಬ ಸಂಸ್ಥೆಯು ಪ್ರಸಿದ್ಧ ಬ್ರಿಟಿಷ್ ತಾತ್ವಿಕರಾದ ಬರ್ಟ್ರಾಂಡ್ ರಸಲ್‌ರನ್ನು ವಿಶಾರದರನ್ನಾಗಿ ಮಾಡುವ ಯೋಚನೆ ಮಾಡಿತು. ಕಾಲೇಜಿನ ಆಲೋಚನೆ ಪತ್ರಿಕೆಗಳಿಗೆ ಹೇಗೊ ತಿಳಿಯಿತು. ತಿಳಿದ ಕೂಡಲೇ ನಾಸ್ತಿಕರಾದ ರಸಲ್‌ರನ್ನು ಅಮೇರಿಕಾಕ್ಕೆ ಕರೆಸುವುದು ಅದರ ಸಂಸ್ಕೃತಿಗೆ ತಕ್ಕುದಲ್ಲವೆಂದು ಆ ಪತ್ರಿಕೆಗಳು ಬೊಬ್ಬೆ ಹಾಕಿದವು. ಐನ್‌ಸ್ಟೈನರಿಗೆ ಅಮೆರಿಕನ್ ಪತ್ರಿಕೆಗಳು ಮಾಡುತ್ತಿದ್ದ ಟೀಕೆಗಳು ಸರಿಕಾಣಲಿಲ್ಲ, ವಿಶ್ವವಿದ್ಯಾನಿಲಯಗಳು ಪ್ರಾಧ್ಯಾಪಕರನ್ನು ನೇಮಿಸಿಕೊಳ್ಳುವಾಗ ಅವರ ವಿದ್ಯಾಸಂಪನ್ನತೆಯನ್ನು ಮಾತ್ರ ಗಣನೆಗೆ ತಂದುಕೊಳ್ಳಬೇಕು ಅವರ ರಾಜಕೀಯ, ಸಾಮಾಜಿಕ ಅಭಿಪ್ರಾಯಗಳು ಗಣನೆಗೆ ಬರಕೂಡದು. ಹಾಗೆ ಒಬ್ಬಾತನನ್ನು ಆತನು ಸೇರಿರುವ ರಾಜಕೀಯ ಪಕ್ಷದ ದೆಸೆಯಿಂದಲೋ ಹುಟ್ಟಿರುವ ಮತದ ದೆಸೆಯಿಂದಲೋ ಅನರ್ಹನನ್ನಾಗಿ ಮಾಡಿದರೆ ವಿಜ್ಞಾನಶಾಸ್ತ್ರ ಅಭಿವೃದ್ಧಿ ಹೊಂದಲು ಅಡ್ಡಿ ಮಾಡಿದಂತಾಗುತ್ತದೆ ಎಂದು ಐನ್‌ಸ್ಟೈನರು ಹೇಳಿದರು. ಪತ್ರಿಕೆಗಳು ಮಾಡಿದ್ದ ಟೀಕೆಗಳನ್ನು ಕಟುವಾಗಿ ಖಂಡಿಸಿದರು. ಇದರಿಂದ ಐನ್‌ಸ್ಟೈನರ ಮೇಲೆ ಅಮೇರಿಕನ್ನರಿಗೆ ಕೋಪ ಉಂಟಾಯಿತು. "ಹೊರದೇಶದವರಾದ ಐನ್‌ಸ್ಟೈನ್ ನಮ್ಮ ಮನೆಯ ಮಾತುಗಳಲ್ಲಿ ಪ್ರವೇಶಿಸುವುದೇಕೆ? ಜರ್ಮನಿಯಿಂದ ಬಂದಿರುವ ಈ ನಿರಾಶ್ರಿತನಿಗೂ ಅಮೇರಿಕನ್ ಜನತೆಗೂ ಎಲ್ಲಿಯ ಸಂಬಂಧ?" ಎಂದು ಅವರನ್ನು ತೆಗಳಲು ಪ್ರಾರಂಭಿಸಿದುವು. ಅಧಿಕಾರ ಪ್ರಭಾವಗಳಿದ್ದರೂ ತಮಗೆ ಸಹಾಯ ಮಾಡುತ್ತಿಲ್ಲವೆಂದು ಐನ್‌ಸ್ಟೈನರನ್ನು ದೂರುತ್ತಿದ್ದ ಯಹೂದಿಗಳು, ಅಮೇರಿಕನ್ನರು ಐನ್‌ಸ್ಟೈನರನ್ನು ಆ ದೇಶದ ಪ್ರಜೆಯಂತೆ ಕಾಣುತ್ತಿರಲಿಲ್ಲವೆಂದು ಆಗ ಕಂಡುಕೊಂಡರು.

ಅಮೇರಿಕದಲ್ಲಿ ನಿಂತ ಕೇವಲ ಕೆಲವು ವರ್ಷಗಳಾದ ಮೇಲೆ ಐನ್‌ಸ್ಟೈನರ ಜೀವನದಲ್ಲಿ ಅತ್ಯಂತ ವಿಷಾದವಾದ ಘಟನೆ ನಡೆಯಿತು. ಸುಮಾರು ಇಪ್ಪತ್ತು ವರ್ಷಗಳಿಂದ ಅವರ ಬಾಳಿನ ಸಿಹಿ-ಕಹಿಗಳನ್ನು ಹಂಚಿಕೊಂಡು ಅವರ ಜೀವನವನ್ನು ಬೆಳಗಿಸಿದ್ದ ಎಲ್ಸಾ ಐನ್‌ಸ್ಟೈನರು ೧೯೩೬ರಲ್ಲಿ ತೀರಿಕೊಂಡರು. ಎಲ್ಸಾರ ಮರಣ ಐನ್‌ಸ್ಟೈನರನ್ನು ಅತ್ಯಂತ ಸಂಕಟಕ್ಕೀಡುಮಾಡಿತು. ಆ ವಿಯೋಗ ತುಂಬಲಾರದ ನಷ್ಟವನ್ನುಂಟುಮಾಡಿತು.

ಎಲ್ಸಾ ಮರಣಹೊಂದಿದ ಮೇಲೆ ಐನ್‌ಸ್ಟೈನರ ತಂಗಿಯು ಅಣ್ಣನನ್ನು ಬಂದು ಸೇರಿದಳು. ಅವಳು ಬಂದ ಮೇಲೆ ಐನ್‌ಸ್ಟೈನರ ಮನಸ್ಸು ಸ್ವಲ್ಪ ಸಮಾಧಾನಗೊಂಡಿತು. ಆಕೆಯೂ ಎಲ್ಸಾರ ಮಗಳು ಮಾರ್ಗರೆಟ್‌ರವರೂ ಮನೆಯ ಆಡಳಿತವನ್ನು ನೋಡಿ

ಕೊಳ್ಳುತ್ತಿದ್ದ ಡ್ಯೂಕಾಸರೂ ಐನ್‌ಸ್ಟೈನರನ್ನು ಸಂತೈಸಿದರು. ಅವರ ಜೀವನವನ್ನು ಸುಖಮಯವಾಗಿ ಮಾಡಲು ಈ ಮೂರು ಜನ ಕೊನೆಯವರೆಗೂ ದುಡಿದರು.

### ಆಟಂ ಬಾಂಬ್ ಜನನ

ನಾಜೀ ಸರ್ಕಾರದ ಅವಿವೇಕದಿಂದ ೧೯೩೯ನೇ ಸೆಪ್ಟೆಂಬರ್ ತಿಂಗಳಿನಲ್ಲಿ ಎರಡನೆಯ ಮಹಾಯುದ್ಧ ಆರಂಭವಾಯಿತು. ಈ ಯುದ್ಧಕ್ಕೆ ಜರ್ಮನಿ ಹಲವು ವರ್ಷಗಳ ಹಿಂದಿನಿಂದ ತಯಾರಾಗುತ್ತಿತ್ತು. ಇದರ ಪರಿಣಾಮವಾಗಿ 'ಕೈಸರ್ ವಿಲ್‌ಹೆಲ್ಮ್ ಇನ್‌ಸ್ಟಿಟ್ಯೂಟ್'ನಂಥ ಸಂಶೋಧನಾಲಯಗಳು ವಿನಾಶದ ಹಾದಿಯನ್ನು ಹಿಡಿದಿದ್ದುವು. ಭೌತಶಾಸ್ತ್ರದ ಸಂಶೋಧನೆಗಳು ನಡೆಯುತ್ತಿದ್ದ ಆ ಮಂದಿರಗಳಲ್ಲಿ ಶಸ್ತ್ರಾಸ್ತ್ರಗಳನ್ನು ಕಂಡುಹಿಡಿಯುವುದು ಮೊದಲಾಯಿತು. ಹೀಗೆ ಹೊಸ ಅಸ್ತ್ರಗಳನ್ನು ಕಂಡುಹಿಡಿಯುವುದರಲ್ಲಿ ತೊಡಗಿದ್ದ ವೈಜ್ಞಾನಿಕರಲ್ಲಿ ಇಬ್ಬರು ಅಣುಬಾಂಬನ್ನು ಉತ್ಪತ್ತಿ ಮಾಡಲು ಅನುಕೂಲವಾದ ಸಂಶೋಧನೆಯನ್ನು ನಡೆಸಿದ್ದರು. ಯುರೇನಿಯಂ ಪರಮಾಣುಗಳನ್ನು ಒಡೆಯುವುದರಿಂದ ಅಗಾಧವಾದ ಶಕ್ತಿ ಉತ್ಪತ್ತಿಯಾಗುವುದೆಂದು ಈ ವೈಜ್ಞಾನಿಕರು ಕಂಡುಹಿಡಿದರು. ಇದೇ ಸಮಯದಲ್ಲಿ ಎನ್ರಿಕೋ ಫರ್ಮಿ (Enrico Fermi) ಎಂಬ ಇಟಲಿಯ ವೈಜ್ಞಾನಿಕನು ಅತಿ ಪ್ರಯಾಸವಿಲ್ಲದೆ ಯುರೇನಿಯಂ ಅಣುಗಳನ್ನು ಒಡೆಯಬಹುದೆಂದು ತೋರಿಸಿದನು. ಫರ್ಮಿಯು ಮುಸೋಲಿನಿ ಸರ್ಕಾರದಲ್ಲಿ ಉದ್ಯೋಗಿಯಾಗಿದ್ದನು. ಇವೆರಡು ಸಂಶೋಧನೆಗಳಿಂದ ಅಣುಬಾಂಬನ್ನು ಉತ್ಪತ್ತಿ ಮಾಡಲು ಸಾಧ್ಯವೆಂದು ಖಚಿತವಾಯಿತು.

ಜರ್ಮನಿ ಮತ್ತು ಇಟಲಿ ದೇಶಗಳಲ್ಲಿ ನಡೆದ ಈ ಸಂಶೋಧನೆಗಳಿಗಿಂತ ಮೊದಲು ಪರಮಾಣುವನ್ನು ಒಡೆದು ಶಕ್ತಿಯನ್ನು ಉತ್ಪತ್ತಿ ಮಾಡಿಕೊಳ್ಳುವುದು ಅಷ್ಟು ಲಾಭದಾಯಕವಲ್ಲವೆಂದು ತಿಳಿದಿದ್ದರು. ಕಡಿಮೆ ಶಕ್ತಿಯನ್ನು ಉಪಯೋಗಿಸಿ ಅತಿ ಹೆಚ್ಚಿನ ಶಕ್ತಿಯನ್ನು ಉತ್ಪತ್ತಿ ಮಾಡಲು ಸಾಧ್ಯವೆಂದು ತೋರಿಸಿದ ಈ ಸಂಶೋಧನೆಗಳು ಹಿಂದಿನ ನಂಬಿಕೆಯನ್ನು ತಲೆಕೆಳಗೆ ಮಾಡಿದುವು. ಈ ಗುಟ್ಟನ್ನು ತಿಳಿದಿದ್ದ ಜರ್ಮನ್ ಮತ್ತು ಇಟಾಲಿಯನ್ ವೈಜ್ಞಾನಿಕರು ಅದರ ಆಧಾರದ ಮೇಲೆ ಹೊಸ ಅಸ್ತ್ರಗಳನ್ನು ತಯಾರಿಸಲು ಪ್ರಯತ್ನಪಟ್ಟರು.

ಪರಮಾಣುಶಕ್ತಿಯ ಗುಟ್ಟನ್ನರಿತ ಫರ್ಮಿಯು ಬಹುಕಾಲ ಇಟಲಿ ದೇಶದಲ್ಲಿ ಇರಲಾಗಲಿಲ್ಲ. ಇಟಲಿಯ ಸರ್ಕಾರ ಆತನಿಗೆ ಅಸಾಧ್ಯವಾದ ಕಿರುಕುಳವನ್ನು ಕೊಡಲಾರಂಭಿಸಿತು. ಈ ಕಿರುಕುಳವನ್ನು ತಡೆಯಲಾರದೆ ಅವನು ಇಟಲಿಯಿಂದ ತಲೆತಪ್ಪಿಸಿಕೊಂಡನು. ಅದರಂತೆಯೇ ಜರ್ಮನಿಯಲ್ಲಿ ಪರಮಾಣುಶಕ್ತಿಯ ಮೇಲೆ ಸಂಶೋಧನೆಯನ್ನು ನಡೆಸುತ್ತಿದ್ದ ಲಿಯೋಸಿಲಾರ್ಡ್ (Leo Scilard) ಎಂಬ ಹಂಗೇರಿಯ ವೈಜ್ಞಾನಿಕನು ಆ ದೇಶವನ್ನು ಬಿಟ್ಟೋಡಿದನು. ಇಟಲಿ ಮತ್ತು ಜರ್ಮನಿ ದೇಶದಲ್ಲಿ ನಡೆಯುತ್ತಿದ್ದ ಶಸ್ತ್ರಾಸ್ತ್ರಗಳ ಸಂಶೋಧನೆಯನ್ನು ಮಿತ್ರ ರಾಷ್ಟ್ರಗಳಿಗೆ ತಿಳಿಸಬೇಕೆಂದು ಈ ಇಬ್ಬರೂ ಬಯಸಿದರು. ಇದರಿಂದ

ಜರ್ಮನಿ ಮತ್ತು ಇಟಲಿ ದೇಶಗಳು ಯುದ್ಧದಲ್ಲಿ ಪಡೆಯಬಹುದಾದ ಜಯವನ್ನು ತಪ್ಪಿಸಿದಂತಾಗುತ್ತದೆಂದು, ಅವರು ಯೋಚಿಸಿದರು.

ಮಿತ್ರ ರಾಷ್ಟ್ರಗಳಿಗೆ ಗೋಪ್ಯವಾದ ಈ ವಿಷಯವನ್ನು ತಿಳಿಸುವುದು ಸುಲಭವಾಗಿರಲಿಲ್ಲ. ಫರ್ಮಿಯೂ, ಸಿಲಾರ್ಡನೂ ಅಮೇರಿಕಾಕ್ಕೆ ಹೊಸಬರಾಗಿದ್ದುದರಿಂದ ಅಲ್ಲಿನ ಉನ್ನತಾಧಿಕಾರಿಗಳಾದರೂ ಅವರಿಗೆ ಪರಿಚಿತರಾಗಿರಲಿಲ್ಲ. ಅವರು ಸರಕಾರದ ಅಧಿಕಾರಿಗಳ ಭೇಟಿಯನ್ನು ಸಂಪಾದಿಸುವುದು ಕಷ್ಟವಾಗಿದ್ದಿತು. ಒಂದು ವೇಳೆ ಅತಿ ಪ್ರಯಾಸಪಟ್ಟು ಭೇಟಿಯನ್ನು ಪಡೆದುಕೊಂಡರೂ ಅದರಿಂದ ಪ್ರಯೋಜನವಾಗುತ್ತಿರಲಿಲ್ಲ, ಕಾರಣವೇನೆಂದರೆ ಅಮೇರಿಕನ್ ಸರಕಾರವು ಆಗಂತುಕರಾದ ಇಬ್ಬರು ವೈಜ್ಞಾನಿಕರ ಮಾತನ್ನು ಆಧಾರವಾಗಿಟ್ಟುಕೊಂಡು ಪರಮಾಣು ಶಕ್ತಿಯ ಮೇಲೆ ಸಂಶೋಧನೆ ನಡೆಸಲು ಲಕ್ಷಾಂತರ ಡಾಲರುಗಳನ್ನು ಖರ್ಚುಮಾಡಲು ಸಿದ್ಧರಿರಲಿಲ್ಲ. ಈ ಸಾಧಕ-ಬಾಧಕಗಳನ್ನು ಯೋಚಿಸಿ ಅವರಿಬ್ಬರೂ ಐನ್‌ಸ್ಟೈನರನ್ನು ನೋಡುವುದು ಲೇಸೆಂದು ತೀರ್ಮಾನಿಸಿದರು. ಯೂಜಿನ್ ವಿಗ್ನರ್ (Eugine Wigner) ಎಂಬ ಗೆಳೆಯನ ಸಹಾಯದಿಂದ ಅವರು ಐನ್‌ಸ್ಟೈನರನ್ನು ನೋಡಲು ಸಾಧ್ಯವಾಯಿತು.

ಫರ್ಮಿ ಮತ್ತು ಸಿಲಾರ್ಡರು ಐನ್‌ಸ್ಟೈನರನ್ನು ನೋಡಲು ಎರಡು ಕಾರಣಗಳಿದ್ದುವು. ಐನ್‌ಸ್ಟೈನರು ರೂಸ್‌ವೆಲ್ಟರ ಗೆಳೆಯರಾಗಿದ್ದುದು ಮೊದಲನೆಯ ಕಾರಣ. ಎರಡನೆಯದೆಂದರೆ ಪರಮಾಣುವಿನಿಂದ ಶಕ್ತಿಯನ್ನು ಉತ್ಪತ್ತಿ ಮಾಡುವುದಕ್ಕೆ ಐನ್‌ಸ್ಟೈನರ $E = mc^2$ ಎಂಬ ಸಮೀಕರಣವು ಆಧಾರವಾಗಿದ್ದುದು. ಅವರು ಐನ್‌ಸ್ಟೈನರನ್ನು ಭೇಟಿಮಾಡಿ ಪರಮಾಣು ಶಕ್ತಿಯಿಂದ ಶಸ್ತ್ರಾಸ್ತ್ರಗಳನ್ನು ತಯಾರು ಮಾಡುವುದು ಸಾಧ್ಯವೆಂಬುದನ್ನು ತೋರಿಸಿಕೊಟ್ಟರು. ಆ ವಿಚಾರವಾಗಿ ಅಧ್ಯಕ್ಷ ರೂಸ್‌ವೆಲ್ಟರಿಗೆ ಪತ್ರ ಬರೆಯಬೇಕೆಂದು ಕೇಳಿಕೊಂಡರು.

ಫರ್ಮಿ ಮತ್ತು ಸಿಲಾರ್ಡರ ವಿವರಣೆಯಿಂದ ಐನ್‌ಸ್ಟೈನರಿಗೆ ವಿಷಯವೇನೋ ಮನದಟ್ಟಾಯಿತು. ಆದರೆ ಅವರಿಂದ ಬಂದ ಸೂಚನೆ ಐನ್‌ಸ್ಟೈನರನ್ನು ಧರ್ಮಸಂಕಟಕ್ಕೆ ಗುರಿಮಾಡಿತು. ವೈಜ್ಞಾನಿಕರ ಸೂಚನೆಯಂತೆ ಅಧ್ಯಕ್ಷರಿಗೆ ಪತ್ರ ಬರೆದರೆ ಶಸ್ತ್ರಾಸ್ತ್ರಗಳ ತಯಾರಿಕೆಗೆ ಬೆಂಬಲ ಕೊಟ್ಟಂತಾಗುತ್ತದೆ. ಹಾಗಲ್ಲದೆ ಸುಮ್ಮನಿದ್ದರೆ ಜರ್ಮನಿಗೆ ಅಸ್ತ್ರಗಳನ್ನು ತಯಾರು ಮಾಡುವುದರಲ್ಲಿ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಇದರಿಂದ ಮಿತ್ರ ರಾಷ್ಟ್ರಗಳ ಸೋಲಿಗೆ ಆಸ್ಪದವಾಗುತ್ತದೆ—ಎಂಬ ಭಾವನೆಗಳು ಅವರನ್ನು ಬಾಧಿಸಹತ್ತಿದವು. ಯಾವ ಕಡೆಗೆ ವಾಲಿದರೂ ಅಧರ್ಮಕ್ಕೆ ಬೆಂಬಲ ಕೊಟ್ಟಂತಾಗುತ್ತದೆಂದು ಅವರಿಗೆ ಭಾಸವಾಯಿತು. ಅಂದಿನ ಅವರ ಸ್ಥಿತಿ ಕುರುಕ್ಷೇತ್ರದಲ್ಲಿ ಪಾಂಡವ-ಕೌರವ ಸೇನೆಗಳ ಮಧ್ಯೆ ನಿಂತ ಪಾರ್ಥನ ಪಾಡಿನಂತಾಗಿತ್ತು. ಆದರೆ ಅಂದಿನ ಪಾರ್ಥನಿಗೆ ದೊರಕಿದಂಥ ಸರಿಯಾದ ದಾರಿತೋರಬಲ್ಲ ಸಾರಥಿ ಐನ್‌ಸ್ಟೈನರಿಗಿರಲಿಲ್ಲ.

ಐನ್‌ಸ್ಟೈನರ ಮನಸ್ಸಿನಲ್ಲಿ ನಡೆಯುತ್ತಿದ್ದ ಒಳತೋಟಿ ಅನೇಕ ದಿನಗಳ ವರೆಗೆ ನಿಲ್ಲಲಿಲ್ಲ. ಅವರಿಗೂ ಚಿಂತಿಸಿ ಚಿಂತಿಸಿ ಸಾಕಾಯಿತು. ಕೊನೆಗೆ ರೂಸ್‌ವೆಲ್ಟರಿಗೆ ತಿಳಿಸುವುದೇ ಉತ್ತಮ ಮಾರ್ಗವೆಂಬ ತೀರ್ಮಾನಕ್ಕೆ ಅವರು ಬಂದರು. ಈ ತೀರ್ಮಾನದಂತೆ ಅಧ್ಯಕ್ಷರಿಗೆ ಪತ್ರ ಬರೆದು ಅದರಲ್ಲಿ ಪರಮಾಣು ಶಕ್ತಿಯ ವಿಚಾರದಲ್ಲಿ ನಡೆದಿರುವ ಸಂಶೋಧನೆಗಳು ಆ ಶಕ್ತಿಯ ಸಹಾಯದಿಂದ ಶಸ್ತ್ರಗಳನ್ನು ನಿರ್ಮಿಸುವುದು ಸಾಧ್ಯವೆಂದು ತೋರಿಸುತ್ತವೆಂದೂ, ಅಮೇರಿಕನ್ ಸರಕಾರ ಸಾಕಷ್ಟು ಎಚ್ಚರಿಕೆಯನ್ನು ತೆಗೆದುಕೊಳ್ಳದಿದ್ದರೆ ಮುಂದೆ ಪರಿತಾಪ ಪಡಬೇಕಾಗುವುದೆಂದೂ ಸೂಚಿಸಿದರು, ಈ ಕಾಗದವು ತಲುಪಿದ ಕೂಡಲೇ ಅಧ್ಯಕ್ಷ ರೂಸ್‌ವೆಲ್ಟರು ತಕ್ಕ ಕ್ರಮ ತೆಗೆದುಕೊಂಡರು. ಅವರ ಯತ್ನದ ಫಲವಾಗಿ ಆಟಂ ಬಾಂಬ್ ಉತ್ಪತ್ತಿಯಾಯಿತು.

ಈ ಸಂದರ್ಭದಲ್ಲಿ ಐನ್‌ಸ್ಟೈನರು ಅಧ್ಯಕ್ಷ ರೂಸ್‌ವೆಲ್ಟರಿಗೆ ಪತ್ರ ಬರೆದುದರ ಔಚಿತ್ಯವನ್ನು ವಿಮರ್ಶಿಸುವುದು ಅನಿವಾರ್ಯವಾಗಿದೆ. ಯುದ್ಧಗಳುಂಟಾಗುವುದನ್ನು ತಪ್ಪಿಸಲು ಸರ್ವರೂ ಪ್ರಯತ್ನ ಮಾಡಬೇಕೆಂದು ಬೋಧಿಸುತ್ತಿದ್ದ ಅವರು ಆಟಂ ಬಾಂಬಿನಂತಹ ವಿನಾಶಕಾರೀ ಅಸ್ತ್ರದ ತಯಾರಿಕೆಗೆ ಪರೋಕ್ಷವಾಗಿ ಸಹಾಯ ಮಾಡಿದ್ದು ಸರಿತೋರುವದಿಲ್ಲ. ಹಾಗೆ ಮಾಡಿದ್ದರಿಂದ ಅವರು ತಾವು ಬೋಧಿಸುತ್ತಿದ್ದ ಆದರ್ಶಕ್ಕೇ ವಿರುದ್ಧವಾಗಿ ನಡೆದಂತೆ ಕಾಣುತ್ತದೆ. ಆದರೆ ಮತ್ತೊಂದು ದೃಷ್ಟಿಯಿಂದ ಈ ಸಮಸ್ಯೆಯನ್ನು ನೋಡಬೇಕಾಗುತ್ತದೆ.

ಸಮಸ್ತ ಜನಾಂಗಗಳ ಹಿತವನ್ನು ಬಯಸುತ್ತಿದ್ದವರಾರೂ ಎರಡನೆಯ ಮಹಾ ಯುದ್ಧದಲ್ಲಿ ನಾಜೀಗಳು ಗೆಲ್ಲಬೇಕೆಂದು ಹಾರೈಸುತ್ತಿರಲಿಲ್ಲ. ನಾಜೀಗಳು ಜಯಗಳಿಸಿದ್ದ ಪಕ್ಷದಲ್ಲಿ ಅದುವರೆಗೆ ಪ್ರಪಂಚದಲ್ಲಿ ಬೆಳೆದು ಬಂದಿದ್ದ ಪ್ರಜಾಪ್ರಭುತ್ವ ಅಳಿಯುತ್ತಿತ್ತು. ಆದ್ದರಿಂದ ವಿಚಾರಪರನಾರೂ ನಾಜಿಗಳು ಯುದ್ಧದಲ್ಲಿ ಗೆಲ್ಲಲು ಯಾವ ವಿಧದಲ್ಲಿಯೂ ಸಹಾಯ ಮಾಡುವಂತಿರಲಿಲ್ಲ. ಪ್ರತಿಯಾಗಿ ಅದನ್ನು ಸೋಲಿಸಲು ಮಿತ್ರರಾಷ್ಟ್ರಗಳಿಗೇ ಸಹಾಯ ಮಾಡಬೇಕಾಗಿದ್ದಿತು.

ಐನ್‌ಸ್ಟೈನರು ಅಧ್ಯಕ್ಷ ರೂಸವೆಲ್ಟರಿಗೆ ಪತ್ರ ಬರೆಯದೆ ಹೋಗಿದ್ದಿದ್ದರೆ ಪ್ರಾಯಶಃ ನಾಜೀಗಳು ಯುದ್ಧದಲ್ಲಿ ಗೆಲ್ಲುತ್ತಿದ್ದರು. ಅಧ್ಯಕ್ಷರಿಗೆ ಈ ಕಾಗದ ಹೋದ ಸಮಯದಲ್ಲಿ ನಾಜೀಗಳು ಪರಮಾಣುಶಕ್ತಿ ವಿಚಾರವಾಗಿ ಸಂಶೋಧನೆ ನಡೆಸುತ್ತಿದ್ದರು. ಮಿತ್ರರಾಷ್ಟ್ರಗಳಾದರೋ ಆ ಕಡೆಗೆ ತಮ್ಮ ಗಮನವನ್ನೇ ಕೊಟ್ಟಿರಲಿಲ್ಲ. ಆದ್ದರಿಂದ ಐನ್‌ಸ್ಟೈನರು ಸೂಚನೆ ಕೊಡದೆ ಇದ್ದಿದ್ದರೆ ಮಿತ್ರರಾಷ್ಟ್ರಗಳು ಆಟಂ ಬಾಂಬನ್ನು ತಯಾರಿಸಲು ಅಸಮರ್ಥವಾಗುತ್ತಿದ್ದವು. ಜರ್ಮನಿಯೇ ಅದನ್ನು ಮೊದಲು ಉತ್ಪತ್ತಿ ಮಾಡುತ್ತಿತ್ತು. ಇದರಿಂದ ಮಿತ್ರರಾಷ್ಟ್ರಗಳು ಜಯಗಳಿಸುವುದು ಕಷ್ಟವಾಗುತ್ತಿತ್ತು. ಪ್ರಜಾಪ್ರಭುತ್ವಕ್ಕೆ ಭಾರೀ ಪೆಟ್ಟು ತಗಲುತ್ತಿತ್ತು. ಐನ್‌ಸ್ಟೈನರು ಅಧ್ಯಕ್ಷರಿಗೆ ಪತ್ರ ಬರೆದದ್ದು ಇಂಥ ಪರಿಸ್ಥಿತಿಯನ್ನು ತಪ್ಪಿಸುವ ಉದ್ದೇಶದಿಂದ,

ಆಟಂ ಬಾಂಬ್ ಅಮೇರಿಕಾದಲ್ಲಿ ತಯಾರಾಗಲು ಅವರು ಪರೋಕ್ಷವಾಗಿ ಸಹಾಯವನ್ನೇನೋ ಮಾಡಿದರು. ಆದರೆ ಅದರ ಉಪಯೋಗವನ್ನು ಐನ್‌ಸ್ಟೈನರು ಮೊದಲಿನಿಂದಲೂ ತೀವ್ರವಾಗಿ ವಿರೋಧಿಸುತ್ತಿದ್ದರು. ಆ ಮಾರಣಾಸ್ತ್ರವು ಅಮೇರಿಕಾ ಮುಂತಾದ ಮಿತ್ರರಾಷ್ಟ್ರಗಳ ರಕ್ಷಣೆಗೆ ಇರಬೇಕೇ ಹೊರತು ಶತ್ರುರಾಷ್ಟ್ರಗಳನ್ನು ಧ್ವಂಸಮಾಡಲು ಸಾಧನವಾಗಬಾರದು ಎಂಬುದು ಅವರ ಅಭಿಪ್ರಾಯವಾಗಿದ್ದಂತೆ ತೋರುತ್ತದೆ. ಜರ್ಮನಿ ಮತ್ತು ಇಟಲಿಗಳು ತಮ್ಮ ಶತ್ರುಗಳ ಮೇಲೆ ಆ ಅಸ್ತ್ರವನ್ನು ಉಪಯೋಗಿಸಲು ಪ್ರಯತ್ನಿಸಿದಲ್ಲಿ 'ಇದೋ ಆ ಅಸ್ತ್ರ ನಮ್ಮಲ್ಲಿಯೂ ಇದೆ. ನಿಷ್ಕಾರಣವಾಗಿ ನೀವು ಅದನ್ನು ಉಪಯೋಗಿಸಿದಲ್ಲಿ ನಾವೂ ಉಪಯೋಗಿಸಬೇಕಾದೀತು' ಎಂಬ ಎಚ್ಚರಿಕೆಯನ್ನು ಕೊಡಬಲ್ಲ ಶಕ್ತಿಯನ್ನು ಮಿತ್ರರಾಷ್ಟ್ರಗಳಿಗೆ ದೊರಕಿಸಿಕೊಡಲು ಅವರು ಅಧ್ಯಕ್ಷರಿಗೆ ಪತ್ರ ಬರೆದಂತೆ ತೋರುತ್ತದೆ ೧೯೪೫ನೇ ಡಿಸೆಂಬರ್‌ನಲ್ಲಿ ನಡೆದ ನೋಬೆಲ್ ವಾರ್ಷಿಕೋತ್ಸವದ ಸಮಯದಲ್ಲಿ ಐನ್‌ಸ್ಟೈನರು ಮಾಡಿದ ಭಾಷಣದಿಂದ ಈ ಭಾವನೆ ವ್ಯಕ್ತವಾಗುತ್ತದೆ.

"ಎಲ್ಲ ಕಾಲಕ್ಕೂ ಅತ್ಯಂತ ಭೀಕರವೂ, ಅಪಾಯಕರವೂ ಆದ ಅಸ್ತ್ರದ ತಯಾರಿಕೆಯಲ್ಲಿ ಭಾಗವಹಿಸಿದ ಭೌತಶಾಸ್ತ್ರಜ್ಞರು ಅಷ್ಟೇ ಭಯಂಕರ ಜವಾಬ್ದಾರಿಯಿಂದ—ಏಕೆ ಅಪರಾಧದಿಂದ—ಪೀಡಿತರಾಗಿದ್ದಾರೆ. ಪ್ರಪಂಚದ ರಾಷ್ಟ್ರಗಳು ಮತ್ತು ಅವುಗಳ ಸರ್ಕಾರಗಳು ತಮ್ಮ ತಮ್ಮ ನಡುವಿನ ವ್ಯವಹಾರಗಳನ್ನು ರೂಪಿಸಿಕೊಳ್ಳುವುದರಲ್ಲಿ ಇಂದಿನ ಧೋರಣೆಯನ್ನು ಬದಲಾಯಿಸಿಕೊಳ್ಳದಿದ್ದರೆ ಹೇಳಲಾಗದ ವಿಪತ್ತು ಉಂಟಾಗುತ್ತದೆ. ಈ ವಿಷಯವನ್ನು ಸರ್ಕಾರಗಳಿಗೆ ಮನದಟ್ಟು ಮಾಡಲು ನಮ್ಮ ಪ್ರಯತ್ನವಾವುದನ್ನೂ ಸಡಿಲಮಾಡುವದಿಲ್ಲೆಂದು ಅವರಿಗೆ ಪುನ: ಪುನಃ ಎಚ್ಚರಿಕೆ ಕೊಡಬೇಕಾಗುತ್ತದೆ. ಮಾನವವರ್ಗದ ಶತ್ರುಗಳಾದವರು ಈ ಅಸ್ತ್ರವನ್ನು ತಮಗಿಂತ ಮೊದಲೇ ಪಡೆಯದಂತೆ ತಪ್ಪಿಸಬೇಕೆಂಬ ಉದ್ದೇಶದಿಂದ ನಾವು ಅದರ ನಿರ್ಮಾಣದಲ್ಲಿ ಸಹಾಯಕರಾದೆವು. ನಾಜೀಗಳಂಥ ಜನರಿಗೆ ಅದೇನಾದರೂ ದೊರಕಿದಲ್ಲಿ ಸರ್ವನಾಶವಾಗುತ್ತಿತ್ತು. ಪ್ರಪಂಚದ ಉಳಿದ ಜನಾಂಗಗಳು ಗುಲಾಮಗಿರಿಯಲ್ಲಿರಬೇಕಾಗುತ್ತಿತ್ತು. ಬ್ರಿಟಿಷ್ ಮತ್ತು ಅಮೇರಿಕನ್ ಜನರು ಎಲ್ಲ ಜನಾಂಗಗಳ ಧರ್ಮದರ್ಶಿಗಳಾಗಿ ಸ್ವಾತಂತ್ರ್ಯ ಮತ್ತು ಶಾಂತಿಗಾಗಿ ಹೋರಾಡುವವರಾಗಿದ್ದಾರೆ ಎಂಬ ಭರವಸೆಯಿಂದ ಈ ಅಸ್ತ್ರವನ್ನು ನಾವು ಅವರಿಗೆ ಕೊಟ್ಟೆವು. ಆದರೆ ಶಾಂತಿ ರಕ್ಷಣೆಗಾಗಿ ಕೊಟ್ಟ ಭರವಸೆ ಪಾಲಿಸಲ್ಪಡುತ್ತಿರುವುದು ನಮಗೆ ಕಂಡುಬಂದಿಲ್ಲ. ಅಟ್ಲಾಂಟಿಕ್ ಪ್ರಣಾಳಿಕೆಯಲ್ಲಿ ಎಲ್ಲ ರಾಷ್ಟ್ರಗಳಿಗೂ ಭರವಸಾರೂಪವಾಗಿ ನೀಡಲ್ಪಟ್ಟ ಸ್ವಾತಂತ್ರ್ಯಗಳಾವುವೂ ಪಾಲಿಸಲ್ಪಟ್ಟಿಲ್ಲ. ಯುದ್ಧದಲ್ಲಿ ಜಯಗಳಿಸಿದ ದೇಶಗಳು ಶಾಂತಿಪಾಲನೆಯಲ್ಲಿ ಸೋತಿವೆ. ಹೋರಾಟದ ಸಮಯದಲ್ಲಿ ಒಂದಾಗಿದ್ದ ಹಿರಿಯ ದೇಶಗಳು ಶಾಂತಿಸ್ಥಾಪನೆಯ ಸಮಯದಲ್ಲಿ ಬೇರೆ ಬೇರೆಯಾಗಿವೆ" ಎಂದಿದ್ದಾರೆ.

"ಯುದ್ಧಾನಂತರ ಪ್ರಪಂಚದ ಚಿತ್ರ ಅಷ್ಟೇನೂ ಆಶಾದಾಯಕವಾಗಿಲ್ಲ. ಶುದ್ಧ ವೈಜ್ಞಾನಿಕರಾದ ನಾವು ರಾಜಕೀಯ ಪಟುಗಳೇನೂ ಅಲ್ಲ. ರಾಜಕೀಯ ವಿಷಯಗಳಲ್ಲಿ ತಲೆ ಹಾಕುವ ಆಶೆಯೂ ನಮಗಿಲ್ಲ. ಆದರೆ ರಾಜಕೀಯ ತಜ್ಞರಿಗೆ ತಿಳಿಯದ ಕೆಲವು ಸಂಗತಿಗಳು ನಮಗೆ ಗೊತ್ತಿವೆ...ಇಂದಿನ ಸಂದರ್ಭದಲ್ಲಿ ಧೈರ್ಯವಾದ ಪ್ರಯತ್ನವೂ, ನಮ್ಮ ಧೋರಣೆಯಲ್ಲಿ ವಿಶೇಷವಾದ ಮಾರ್ಪಾಡೂ ರಾಜಕೀಯ ಭಾವನೆಗಳಲ್ಲಿ ಬದಲಾವಣೆಯೂ ಅನಿವಾರ್ಯವಾಗಿವೆ" ಎಂದು ಸಾರಿದ್ದಾರೆ.

### ಇಂದಿನ ಸಮಸ್ಯೆಗಳು

ಐನ್‌ಸ್ಟೈನರ ವೈಯಕ್ತಿಕ ಜೀವನದಲ್ಲಿಯೂ, ಅವರ ಹುಟ್ಟುದೇಶವಾದ ಜರ್ಮನಿಯಲ್ಲಿಯೂ ಸಂಭವಿಸಿದ ದುಃಖಕರವಾದ ಘಟನೆಗಳು ಅವ್ಯಾಹತವಾಗಿ ಸಾಗುತ್ತಿದ್ದ ಅವರ ವಿಚಾರವಾಹಿನಿಯ ದಿಕ್ಕನ್ನು ಬದಲಾಯಿಸಲು ಅಸಮರ್ಥವಾಗಿದ್ದುವು. ಬರ್ಲಿನ್ ನಗರದಲ್ಲಿ ಅವರು ನಡೆಸುತ್ತಿದ್ದ ಸಂಶೋಧನೆಗಳು ಕುಂಠಿತವಾಗದೆ ಅಮೇರಿಕಾದಲ್ಲಿಯೂ ಮುಂದುವರೆಯುತ್ತಿದ್ದುವು. ೧೯೫೨ರಲ್ಲಿ ಏಕಕ್ಷೇತ್ರವಾದ (Unified Field Theory) ಪ್ರಕಟವಾಯಿತಷ್ಟೇ. ಆದಾದನಂತರ ಅವರ ಮನಸ್ಸು ಮೂರು ಬಗೆಯ ಸಮಸ್ಯೆಗಳನ್ನು ಬಿಡಿಸುವದರಲ್ಲಿ ತೊಡಗಿದ್ದಿತ್ತು. ಅವುಗಳಲ್ಲಿ ಮೊದಲನೆಯದು 'ಕ್ಷೇತ್ರ' ಮತ್ತು 'ವಸ್ತು' ಗಳಿಗಿರುವ ಮತ್ತು ಕಣ್ಣಿಗೆ ಗೋಚರಿಸುತ್ತಿರುವ ಭಿನ್ನತೆ ಭ್ರಮಿಕವಾದದ್ದೇ, ನಿಜವಾದದ್ದೇ ಎಂಬುದನ್ನು ಪರೀಕ್ಷಿಸುವುದು. ಎರಡನೆಯದು ಕ್ವಾಂಟಂ ಸಿದ್ಧಾಂತದಿಂದ ಮಾತ್ರ ವಿವರಿಸಬಹುದಾದ ಘಟನೆಗಳನ್ನು ಏಕಕ್ಷೇತ್ರ ಸಿದ್ಧಾಂತದಿಂದ ವಿವರಿಸಲು ಸಾಧ್ಯವೋ ಎಂಬುದು, ಮೂರನೆಯದು ಪರಮಾಣುವಿನೊಳಗೆ ನಡೆಯುವ ಘಟನಾವಳಿಗಳನ್ನು ಏಕಕ್ಷೇತ್ರ ಸಿದ್ಧಾಂತದಿಂದ ವಿಶದೀಕರಿಸಲು ಸಾಧ್ಯವೇ ಎಂಬುದು.

ವೇದಾಂತ ಭಾಷೆಯನ್ನು ಭೌತಶಾಸ್ತ್ರದಲ್ಲಿ ಉಪಯೋಗಿಸಬಹುದಾದರೆ ಐನ್‌ಸ್ಟೈನರು, ಅದ್ವೈತಿಗಳು. ವಸ್ತುಗಳಲ್ಲಿ ಕಂಡುಬರುವ ವೈವಿಧ್ಯತೆ ಕೇವಲ ಭ್ರಮಾತ್ಮಕವಾದುದು ಎಂದು ಅವರ ಎಣಿಕೆ. ತಮ್ಮ ಎಣಿಕೆಯು ವೈಜ್ಞಾನಿಕ ದೃಷ್ಟಿಯಿಂದಲೂ ಸತ್ಯವಾದುದು ಎಂಬುದನ್ನು ತೋರಿಸಿಕೊಡಬೇಕೆಂದು ಅವರ ಅಭಿಲಾಷೆಯಾಗಿತ್ತು. ಅವರು ಸಂಶೋಧನೆಗಳನ್ನು ನಡೆಸುತ್ತಿದ್ದುದು ಈ ಉದ್ದೇಶದಿಂದ.

ಗುರುತ್ವ ಕ್ಷೇತ್ರದಲ್ಲಿ ವಸ್ತುಗಳು ಹೇಗೆ ಚಲಿಸುತ್ತವೆ ಎಂಬುದನ್ನು ಸಾಪೇಕ್ಷ ಸಿದ್ಧಾಂತವು ವಿವರಿಸುತ್ತದೆ. ಆದ್ದರಿಂದ ಆ ಸಿದ್ಧಾಂತದ ಪ್ರಕಾರ 'ವಸ್ತು' ಮತ್ತು 'ಕ್ಷೇತ್ರ' ಎಂಬ ಪದಗಳು ಬೇರೆ ಬೇರೆ ಭಾವನೆಗಳನ್ನು ಸೂಚಿಸುವಂತೆ ಉಪಯೋಗವಾಗಿವೆ. ಆದರೆ ವಸ್ತು ಮತ್ತು ಕ್ಷೇತ್ರ—ಈ ಪದಗಳು ಸೂಚಿಸುವ ಭಾವವನ್ನು ಸಾಪೇಕ್ಷ ಸಿದ್ಧಾಂತವು ವಿವರಿಸುವುದಿಲ್ಲ. ಅವುಗಳಿಗಿರುವ ವ್ಯತ್ಯಾಸವನ್ನು ವಿಶದೀಕರಿಸುವದಿಲ್ಲ. ವಸ್ತು ಮತ್ತು ಕ್ಷೇತ್ರಗಳು ಒಂದೇ ಸತ್ವದ ವಿವಿಧ ರೂಪಗಳು ಯಾಕಿರಬಾರದು,

ಈ ಬಗೆಯ ತರ್ಕಕ್ಕೆ ಸಾಪೇಕ್ಷ ಸಿದ್ಧಾಂತ ಅವಕಾಶವನ್ನು ಕೊಡುತ್ತದೆ. ವಸ್ತುವಿಗೂ ಕ್ಷೇತ್ರಕ್ಕೂ ಅತಿ ನಿಕಟವಾದ ಸಂಬಂಧವಿದೆ ಎಂಬುದನ್ನು ಅದು ತೋರಿಸಿಕೊಡುತ್ತದೆ. ಅದರಂತೆ ವಸ್ತುವಿನ ಇರುವಿಕೆಯಿಂದ ಕ್ಷೇತ್ರವು ಬದಲಾವಣೆ ಹೊಂದುತ್ತದೆ; ಮತ್ತು ಕ್ಷೇತ್ರದ ಇರುವಿಕೆಗೆ ವಸ್ತುವೇ ಮೂಲಾಧಾರವಾಗಿದೆ. ಈ ವಾದವನ್ನು ಮುಂದುವರಿಸಿದರೆ ವಸ್ತು ಎನ್ನುವದು ಕ್ಷೇತ್ರಶಕ್ತಿಯ ಕೇಂದ್ರೀಕರಣವಲ್ಲದೆ ಬೇರೆಯಲ್ಲ ಎಂದು ಹೇಳಬೇಕಾಗುತ್ತದೆ. ಹೀಗೆ ಹೇಳಿದರೆ ವಸ್ತು ಮತ್ತು ಕ್ಷೇತ್ರಗಳು ಬೇರೆ ಬೇರೆಯಾದುವುಗಳು ಎಂಬ ಭಾವನೆಯೇ ಮಾಯವಾಗುತ್ತದೆ. 'ಕ್ಷೇತ್ರದಲ್ಲಿ ವಸ್ತುವು ಚಲಿಸುತ್ತದೆ' ಎಂದು ನಾವು ಹೇಳುತ್ತಿರುವುದು ಸುಳ್ಳಾಗುತ್ತದೆ. ಅದಕ್ಕೆ ಬದಲು, 'ಎರಡು ಕ್ಷೇತ್ರಗಳು ಒಂದರ ಹತ್ತಿರ ಮತ್ತೊಂದಿದ್ದರೆ ತಮ್ಮ ತಮ್ಮ ಇರುವಿಕೆಯನ್ನು ಮಾರ್ಪಾಡು ಮಾಡಿಕೊಳ್ಳುತ್ತವೆ' ಎಂಬ ಮಾತುಗಳನ್ನು ಬಳಸಬೇಕಾಗುತ್ತದೆ. ಈ ಪರಿಸ್ಥಿತಿ ಉಂಟಾಗಬೇಕಾದಲ್ಲಿ ಕೇವಲ ಕ್ಷೇತ್ರ ಸಮೀಕರಣದಿಂದ ಎಲ್ಲ ಘಟನೆಗಳನ್ನೂ ವಿವರಿಸಲು ಸಾಧ್ಯವಾಗಬೇಕು. ಸಾಪೇಕ್ಷವಾದದಲ್ಲಿ ಎರಡು ತರಹೆಯ ಸಮೀಕರಣಗಳಿವೆ. ಕ್ಷೇತ್ರದ ಗುಣಲಕ್ಷಣಗಳನ್ನು ವಿವರಿಸುವುದೇ ಒಂದು ಗುಂಪು; ವಸ್ತುವಿನ ಚಲನೆಯನ್ನು ವಿವರಿಸುವುದು ಮತ್ತೊಂದು ಗುಂಪು; ವಸ್ತು ಮತ್ತು ಕ್ಷೇತ್ರ—ಇವೆರಡೂ ಒಂದೇ ಎಂದು ತೋರಿಸಿ ಕೊಡಲು ಸಾಧ್ಯವಾದಲ್ಲಿ ಈ ಎರಡು ಗುಂಪುಗಳಿಗೂ ಇರುವ ಭಿನ್ನತೆ ಹೋಗಬೇಕು. ಆದ್ದರಿಂದ ಇವುಗಳ ಸಮನ್ವಯ ಮಾಡುವುದು ಹೇಗೆ ಎಂದು ಐನ್‌ಸ್ಟೈನರು ಆಲೋಚಿಸುತ್ತಿದ್ದರು.

ಮ್ಯಾಕ್ಸ್ ಪ್ಲಾಂಕರಿಂದ ಪ್ರತಿಪಾದಿಸಲ್ಪಟ್ಟಿದ್ದ ಕ್ವಾಂಟಂ ಸಿದ್ಧಾಂತ ಅನೇಕ ಸಂಶೋಧನೆಗಳಿಗೆ ಎಡೆಮಾಡಿಕೊಟ್ಟಿತ್ತು. ಈ ಸಂಶೋಧನೆಗಳಿಂದ ಹೊರಬಿದ್ದ ಫಲಿತಾಂಶಗಳನ್ನು ವಿವರಿಸಲು ಹಿಂದಿನ ಸಿದ್ಧಾಂತಗಳಿಂದ ಸಾಧ್ಯವಾಗಿರಲಿಲ್ಲ. ಸಾಪೇಕ್ಷ ಸಿದ್ಧಾಂತವೂ ಅಷ್ಟಾಗಿ ಪ್ರಯೋಜನಕ್ಕೆ ಬಂದಿರಲಿಲ್ಲ. ಆದ್ದರಿಂದ ಈ ಅಂಶಗಳನ್ನು ವಿವರಿಸಲು ಒಂದು ಹೊಸ ಸಿದ್ಧಾಂತವೇ ಹುಟ್ಟಿಕೊಳ್ಳಬೇಕಾಯಿತು. ಇದೇ ಪ್ರಸಿದ್ಧವಾಗಿರುವ 'ಅನುಪೂರಕ ಸಿದ್ಧಾಂತ' ಇದನ್ನು ಪ್ರತಿಪಾದಿಸಿದವನು ನೀಲ್ಸ್ ಬೋರ್ (Niels Bohr) ಎಂಬ ವಿಜ್ಞಾನಿ. ಈ ಸಿದ್ಧಾಂತದಿಂದ ಹೊಸ ಹೊಸದಾಗಿ ಕಂಡು ಹಿಡಿದ ಅಂಶಗಳನ್ನು ವಿವರಿಸಲು ಸಾಧ್ಯವೇನೋ ಆಯಿತು. ಆದರೆ ಅದು ತರ್ಕದ ದೃಷ್ಟಿಯಿಂದ ದೋಷಯುಕ್ತವಾಗಿತ್ತು. ಆ ವಾದದಲ್ಲಿ ಮುಖ್ಯ ದೋಷವಾವುದೆಂದರೆ, ಕ್ಷೇತ್ರದ ಅರ್ಥವನ್ನು ವಿವರಿಸದೆ ಅದು ಅಳತೆಯ ಸಾಧನವನ್ನು ಹೇಗೆ ಮಾರ್ಪಡಿಸುತ್ತದೆ ಎಂಬುದನ್ನು ಮಾತ್ರ ಹೇಳುವುದು. ಈ ದೋಷವನ್ನು ಐನ್‌ಸ್ಟೈನರು ಸುಲಭವಾಗಿ ತೋರಿಸಿಕೊಟ್ಟರು. ಆದರೆ ಹೀಗೆ ಬೇರೆ ಸಿದ್ಧಾಂತದಲ್ಲಿರುವ ದೋಷಗಳನ್ನು ತೋರಿಸಿಕೊಟ್ಟರೆ ವೈಜ್ಞಾನಿಕ ಕೆಲಸ ಮುಗಿಯಲಿಲ್ಲ. ಅದರಲ್ಲೂ ಐನ್‌ಸ್ಟೈನರಂಥ ಮಹಾ ವೈಜ್ಞಾನಿಕರು ಇಷ್ಟರಿಂದಲೇ ತೃಪ್ತಿಪಡಲಾರರು. ಆದ್ದರಿಂದ ಅನುಪೂರಕ ಸಿದ್ಧಾಂತದಲ್ಲಿನ ದೋಷಗಳೆಲ್ಲವನ್ನೂ ಪರಿಪಡಿಸಿ ಅದನ್ನು ಕ್ಷೇತ್ರಸಿದ್ಧಾಂತಕ್ಕೆ ಹೇಗೆ ಹೊಂದಿಸುವುದು ಎಂಬುದರ ಬಗ್ಗೆ ಅವರು ಚಿಂತನೆ ಮಾಡುತ್ತಿದ್ದರು.

೧೯೨೯ರಲ್ಲಿ ಪ್ರಕಟವಾದ ಏಕಕ್ಷೇತ್ರ ಸಿದ್ಧಾಂತವು ವಿದ್ಯುತ್ಕಾಂತ ಕ್ಷೇತ್ರ ಮತ್ತು ಗುರುತ್ವಕ್ಷೇತ್ರ ಇವುಗಳನ್ನು ಸಮನ್ವಯ ಮಾಡುವ ಪ್ರಯತ್ನವಾಗಿತ್ತು. ಇವೆರಡಕ್ಕೂ ಸಂಬಂಧಿಸಿದಂತೆ ಬೇರೊಂದು ಕ್ಷೇತ್ರವಿದೆ. ಅದು ಪರಮಾಣುವಿನ ಒಳಪ್ರಪಂಚಕ್ಕೆ ಸೇರಿದುದು. ಕ್ಷೇತ್ರ ಸಿದ್ಧಾಂತ ಈಗಿರುವ ರೂಪಿನಲ್ಲೇ ಉಳಿದುಕೊಂಡರೆ ಅದು ವಿದ್ಯುತ್ಕಣಗಳಿಗೆ ಸಂಬಂಧಪಟ್ಟ ಘಟನೆಗಳನ್ನು ವಿವರಿಸಲು ಸಮರ್ಥವಾಗುವದಿಲ್ಲ. ಆದ್ದರಿಂದ ಅದನ್ನು ವಿವರಿಸಲು ಸಾಧ್ಯವಾಗುವಂತೆ ಮಾಡುವುದು ಐನ್‌ಸ್ಟೈನರ ಗುರಿಯಾಗಿತ್ತು. ಕೋಟ್ಯಾನು ಕೋಟಿ ಮೈಲಿ ದೂರದಲ್ಲಿದ್ದು ನಮ್ಮ ಊಹೆಗೂ ನಿಲುಕದಷ್ಟು ಅಪಾರವಾಗಿರುವ ನಕ್ಷತ್ರ ನೀಹಾರಿಕೆಗಳನ್ನೂ, ಸೂಕ್ಷ್ಮದರ್ಶಿನಿಯ ಸಹಾಯದಿಂದಲೂ ನೋಡಲಾಗದ ಅಣು ಪರಮಾಣುಗಳನ್ನೂ ಬಂಧಿಸಿರುವ ಭೌತಿಕ ಸೂತ್ರ ಒಂದೇ ಎಂಬುದನ್ನು ತೋರಿಸುವುದು ಅವರ ಗುರಿಯಾಗಿತ್ತು. ಆ ಗುರಿಯನ್ನು ಮುಟ್ಟುವತನಕ ಸಾಪೇಕ್ಷವಾದ ಪೂರ್ಣವಾದಂತಾಗುವುದಿಲ್ಲ. ಆದ್ದರಿಂದ ಸಾಪೇಕ್ಷವಾದದ ಸಮೀಕರಣಗಳು ಪರಮಾಣು ಪ್ರಪಂಚದಲ್ಲಿ ನಡೆಯುವ ಘಟನೆಗಳನ್ನು ವಿವರಿಸುವಂತೆ ಪರಿಷ್ಕರಿಸುವುದು ಐನ್‌ಸ್ಟೈನರ ಧ್ಯೇಯವಾಗಿತ್ತು. ಇದರಲ್ಲಿ ಜಯಶೀಲರಾದರೆ ತಾವು ಕೃತಕೃತ್ಯರಾದಂತೆ ಎಂದು ಐನ್‌ಸ್ಟೈನರು ಭಾವಿಸುತ್ತಿದ್ದರು. ಇಂದಿನ ಶೋಧನೆಗಳನ್ನು ನೋಡಿದರೆ ಐನ್‌ಸ್ಟೈನರ ಈ ಪ್ರಯತ್ನ ಸಫಲವಾದಂತೆ ಕಾಣುವುದಿಲ್ಲ. ಏನೇ ಆಗಲಿ ಅವರು ಭೌತಿಕ ಪ್ರಪಂಚದಲ್ಲಿ ಕಾಣಬಯಸಿದ ಸಾಮರಸ್ಯ ಮಾನವ ಪ್ರಯತ್ನಕ್ಕೂ ಇಳಿದು ಜಾತಿ, ಮತ, ಜನಾಂಗಗಳ ನಡುವಿರುವ ಭಿನ್ನ ಭಾವನೆ ನಶಿಸಿದರೆ ಐನ್‌ಸ್ಟೈನರ ತಪಸ್ಸು ಫಲಿಸಿದಂತಾಗುತ್ತದೆ.

## ಅಮೇರಿಕದಲ್ಲಿ ಐನ್‌ಸ್ಟೈನರ ಜೀವನ

ಅಮೇರಿಕಾ ದೇಶವು ೧೯೪೧ರಲ್ಲಿ ಐನ್‌ಸ್ಟೈನರನ್ನು ಅದರ ಪೌರನನ್ನಾಗಿ ಪರಿಗಣಿಸಿತು. ಇದರಿಂದ ನೂರಾರು ವರ್ಷಗಳ ಹಿಂದೆಯೇ ಆ ದೇಶದಲ್ಲಿ ನೆಲಸಿದವರ ಮಕ್ಕಳು ಮರಿಮಕ್ಕಳಿಗೆ ಇರುವ ಹಕ್ಕುಗಳು ಐನ್‌ಸ್ಟೈನರಿಗೂ ದೊರಕಿದವು.

ಐನ್‌ಸ್ಟೈನರು ಅಮೇರಿಕಾದಲ್ಲಿ ನಡೆಸುತ್ತಿದ್ದ ಜೀವನವು ಬಹು ಸರಳವಾಗಿತ್ತು. ಪ್ರಾತರ್ವಿಧಿಗಳನ್ನು ಮುಗಿಸಿದ ನಂತರ ಅವರು ಅಲ್ಪ ಆಹಾರವನ್ನು ತೆಗೆದುಕೊಳ್ಳುತ್ತಿದ್ದರು. ಆ ಮೇಲೆ ತಮ್ಮ ಸಂಶೋಧನಾಲಯಕ್ಕೆ ಹೋಗುತ್ತಿದ್ದರು. ಅಲ್ಲಿ ಸ್ವಲ್ಪ ಹೊತ್ತು ಸಹಾಯಕರೊಡನೆಯೂ ವಿದ್ಯಾರ್ಥಿಗಳೊಡನೆಯೂ ವಿಜ್ಞಾನಕ್ಕೆ ಸಂಬಂಧಪಟ್ಟ ವಿಷಯಗಳ ಮೇಲೆ ಚರ್ಚೆ ನಡೆಸುತ್ತಿದ್ದರು. ಅನಂತರ ತಾವು ನಡೆಸಬೇಕಾದ ಸಂಶೋಧನೆಯಲ್ಲಿ ನಿರತರಾಗುತ್ತಿದ್ದರು. ಈ ಕಾರ್ಯಕ್ರಮ ಹೊರತು ಅವರು ಇನ್ನಾವ ಹವ್ಯಾಸವನ್ನೂ ಇಟ್ಟುಕೊಂಡಿರಲಿಲ್ಲ. ದೊಡ್ಡ ಮನುಷ್ಯರ ಮನೆಯಲ್ಲಿ ನಡೆಯುವ ಸಮಾರಂಭಗಳಿಗಾಗಲೀ ಅವರು ಏರ್ಪಡಿಸುವ ಸತ್ಕಾರಕೂಟಗಳಿಗಾಗಲೀ ಅವರು ವಿಶೇಷ ಹೋಗುತ್ತಿರಲಿಲ್ಲ. ಹಿಂದಿನ ಕಾಲದ ಋಷಿಶ್ರೇಷ್ಠರಂತೆ ಅವರು ಏಕಾಂತವನ್ನು ಬಯಸುತ್ತಿದ್ದರು. ಆದರೆ ಹೊರಗಿನ ಪ್ರಪಂಚ ಮಾತ್ರ

ಅವರು ಅಂಥ ಏಕಾಂತವನ್ನು ಅನುಭವಿಸಲು ಅವಕಾಶ ಕೊಡುತ್ತಿರಲಿಲ್ಲ. ವೈಜ್ಞಾನಿಕರು, ತಾತ್ವಿಕರು, ರಾಜಕೀಯ ಧುರೀಣರು, ಸಮಾಜಸೇವಕರು ಅವರ ಬೇಟಿಗಾಗಿ ಕಾದಿರುತ್ತಿದ್ದರು. ಭೇಟಿಗಾಗಿ ಬರುವ ಇಂಥ ಜನ ಪ್ರತಿದಿನದಲ್ಲೂ ಇದ್ದೇ ಇರುತ್ತಿದ್ದರು. ಪ್ರತಿದಿನ ಮಧ್ಯಾಹ್ನ ಐನ್‌ಸ್ಟೈನರು ಅಂಥವರಿಗೆ ಭೇಟಿಕೊಡುತ್ತಿದ್ದರು. ಐನ್‌ಸ್ಟೈನರನ್ನು ಸಂದರ್ಶಿಸಿದ ಜನ ತಾವು ಒಂದು ಯಾತ್ರೆ ಮಾಡಿದುದಾಗಿ ಭಾವಿಸುತ್ತಿದ್ದರು. ಜನಗಳಿಗೆ ಐನ್‌ಸ್ಟೈನರು ವಾಸಿಸುವ ಜಾಗವೂ ಪವಿತ್ರವಾಗಿತ್ತು.

ಭೇಟಿಗಾಗಿ ಬರುವ ಜನರು–ಹತ್ತಿರದ ಸಹೋದ್ಯೋಗಿಗಳು ಮತ್ತು ವಿದ್ಯಾರ್ಥಿಗಳು ಇವರನ್ನು ಬಿಟ್ಟರೆ ಐನ್‌ಸ್ಟೈನರು ಬೆರೆಯುತ್ತಿದುದ್ದು ಮಕ್ಕಳ ಸಂಗಡ. ಮಕ್ಕಳ ಸಹವಾಸ ಐನ್‌ಸ್ಟೈನರಿಗೆ ಅತ್ಯಂತ ಆನಂದವನ್ನು ಉಂಟುಮಾಡುತ್ತಿತ್ತು. ಅತ್ಯಂತ ಪ್ರಖ್ಯಾತಪುರುಷರಿಗೂ ದೊರೆಯದ ಐನ್‌ಸ್ಟೈನರ ಸಂಗ ಸಣ್ಣ ಮಕ್ಕಳಿಗ ಸುಲಭವಾಗಿ ಲಭಿಸುತ್ತಿತ್ತು. ತಲೆಗೆ ಹ್ಯಾಟಿಲ್ಲದೆ, ಕಾಲಿಗೆ ಕಾಲುಚೀಲಗಳಿಲ್ಲದೆ, ಮಳೆಯಾಗಲೀ ಬಿಸಿಲಾಗಲೀ ಕೊಡೆ ಹಿಡಿಯದೆ, ಕಾಲಿಗೆ ಬರೀ ಚಪ್ಪಲಿಗಳನ್ನು ಹಾಕಿಕೊಂಡು ಪ್ರಿನ್‌ಸ್ಟನ್ ಬೀದಿಗಳಲ್ಲಿ ತಿರುಗಾಡುತ್ತಿದ್ದ ಈ ಯುಗಪುರುಷ ಬೀದಿಯ ಮಕ್ಕಳೊಂದಿಗೆ ಸೇರಿ ಐಸ್‌ಕ್ರೀಮ್ ತಿನ್ನುತ್ತಿದ್ದರಂತೆ! ದೂರ ದೇಶಗಳ ಮಕ್ಕಳು ತಮಗೆ ಕಷ್ಟವೆಂದು ತೋರಿದ ಗಣಿತ ಸಮಸ್ಯೆಗಳಿಗೆ ಉತ್ತರಕ್ಕಾಗಿ ಅವರಿಗೆ ಕಾಗದ ಬರೆದರೆ ಕೂಡಲೇ ಉತ್ತರ ಬರೆದು ಕಳಿಸುತ್ತಿದ್ದರಂತೆ!

# ೮ | ವಿಶ್ವಧರ್ಮಾವಲಂಬಿ

ಐನ್‌ಸ್ಟೈನರ ಜೀವನ ಚರಿತ್ರೆಯನ್ನು ಆಳವಾಗಿ ಅವಲೋಕಿಸಿದವರಿಗೆ ಅವರು ಸಂಪ್ರದಾಯಗಳನ್ನು ಹೀಯಾಳಿಸುವ ಚಾರ್ವಾಕರೆಂದೂ, ದೈವಧರ್ಮಗಳನ್ನು ನಂಬದ ನಾಸ್ತಿಕರೆಂದೂ ಅನಿಸುತ್ತದೆ. ಅವರು ಯಹೂದಿ ಮತದಿಂದ ಹೊರಬಂದುದಲ್ಲ, ಅದನ್ನು ತೊರೆದ ಮೇಲೆ ಮತ್ತಾವ ಧರ್ಮಕ್ಕೂ ಶರಣಾಗದೆ ಯಾವ ವ್ರತ ಪೂಜೆಗಳನ್ನೂ ಆಚರಿಸದೆ ಹೋದುದೂ ಇಂಥ ಭಾವನೆಗೆ ಪುಷ್ಟಿ ಕೊಡುತ್ತದೆ. ಆದರೆ ಅವರ ಮನೋಧರ್ಮವನ್ನು ಕೂಲಂಕಷವಾಗಿ ವಿಮರ್ಶಿಸಿದರೆ ಆ ಭಾವನೆ ತೀರಾ ತಪ್ಪಾದುದೆಂದು ಹೊಳೆಯುತ್ತದೆ. ಅರ್ಥಶೂನ್ಯವಾದ ವ್ರತ, ನಿಯಮಗಳಿಗೆ ಬೇಸತ್ತು ಐನ್‌ಸ್ಟೈನರು ಯಹೂದಿ ಸಂಪ್ರದಾಯದಿಂದ ವಿಮುಕ್ತರಾದುದೇನೋ ನಿಜ. ಆದರೆ ಅವರು ಆ ಮತವನ್ನು ತ್ಯಜಿಸಿದುದು—ಅದರ ಗುರುಗಳು ಮೂಕ ಜನತೆಯಲ್ಲಿ ಅಂಧ ವಿಶ್ವಾಸವನ್ನು ಬೆಳಸಲು ಕಾರಣವಾಗಿದ್ದರೆಂಬುದರಿಂದ. ಆ ಧರ್ಮದಲ್ಲಿನ ಒಳ್ಳೆಯ ಸಂಪ್ರದಾಯಗಳಲ್ಲಿ ಅವರಿಗೆ ವಿಶೇಷ ಗೌರವವಿತ್ತು; ಅಂಥ ಉತ್ತಮವಾದ ಆಚರಣೆಗಳನ್ನು ಅವರು ತಮ್ಮ ಜೀವನದಲ್ಲಿಯೂ ಆಚರಿಸುತ್ತಿದ್ದರು; ಆ ಧರ್ಮವು ಬೋಧಿಸುತ್ತಿದ್ದ ಒಳ್ಳೆಯ ತತ್ವಗಳನ್ನು ಅವರು ಕೊನೆಯವರೆಗೂ ಪಾಲಿಸುತ್ತಿದ್ದರು. ಅವರು ವಿರೋಧಿಸುತ್ತಿದ್ದುದು ಜನಗಳ ಆತ್ಮವಿಕಾಸಕ್ಕೆ ಅಡ್ಡಿಯಾದ ಗುರುಸ್ಥಾನಗಳನ್ನು. ಗುರುಸ್ಥಾನಗಳು ಹಾಕಿಕೊಟ್ಟ ನೀತಿ ನಿಯಮಗಳನ್ನು ಚಾಚೂ ತಪ್ಪದೆ ಪಾಲಿಸುತ್ತಿದ್ದವರನ್ನು ಕಂಡರೆ ಅವರಿಗೆ ಅನುತಾಪ. ಯಾವ ಅಂಧ ಪದ್ಧತಿಯನ್ನೂ ಒಳಗೊಳ್ಳದೆ ಪರಿಶುದ್ಧವಾಗಿರುವ ಯಹೂದಿ ಧರ್ಮವೆಂದರೆ ಅವರಿಗೆ ತುಂಬ ಭಕ್ತಿ ಇತ್ತು.

ಅವರಿಗೆ ಸ್ವಧರ್ಮವಾದ ಯಹೂದಿ ಮತದಲ್ಲಿ ಎಂಥ ವಿಶ್ವಾಸವಿತ್ತೋ, ಲೋಕಪೂಜ್ಯರಾದ ಮಹಾನುಭಾವರಿಂದ ಸ್ಥಾಪಿತವಾದ ಇತರ ಧರ್ಮಗಳಲ್ಲಿಯೂ ಅಷ್ಟೇ ಗೌರವವಿತ್ತು. ಇಂದು ವಿವಿಧ ಧರ್ಮಗಳು ಇಳಿದಿರುವ ದುಃಸ್ಥಿತಿಗೆ ಮಠಗಳ ಅವಿವೇಕವೇ ಕಾರಣ. ಯಾವ ಧರ್ಮವೇ ಆಗಲಿ, ಅದು ಸ್ಥಾಪಿತವಾದಾಗ ಪರಿಶುದ್ಧವಾಗಿಯೇ ಇರುತ್ತದೆ ಅದನ್ನು ಸ್ಥಾಪಿಸಿದವರು ತಮ್ಮ ಜೀವನಾದ್ಯಂತವೂ ಪರಿಶುದ್ಧವಾಗಿ ಬಾಳಿ ಮಾನವಕೋಟಿಯ ಹಿತವನ್ನು ಹಾರೈಸುತ್ತಿದ್ದ ಪುಣ್ಯಪುರುಷರು. ಆದರೆ ಆ ಮಹನೀಯರು ಕಾಲವಾದ ಮೇಲೆ ಅವರು ನೆಟ್ಟ ಸಂಸ್ಥೆಗಳನ್ನು ಬೆಳೆಸುವ ಜವಾಬ್ದಾರಿ ಸ್ವಾರ್ಥಪರರ ಪಾಲಿಗೆ ಬಂದು, ಆಚಾರ್ಯಪುರುಷರ ಬೋಧನೆಗಳು ಕೊಳಕಾಗುತ್ತವೆ. ಕಟ್ಟುಕಥೆಗಳು ಹುಟ್ಟಿಕೊಳ್ಳುತ್ತವೆ. ನಾಕ-ನರಕಗಳ ಬೆದರಿಕೆ ಬೆಳೆದು ಜನರಲ್ಲಿ ಮೂಢ ನಂಬಿಕೆ ಉಂಟಾಗಲು ಮಠಗಳು ಕಾರಣವಾಗುತ್ತವೆ.

ಮಾನವನ ನಡತೆಯನ್ನು ಉತ್ತಮಪಡಿಸಬಲ್ಲ, ಆದರೆ ಮಠಾಧಿಪತಿಗಳ ಆಧಿಪತ್ಯಕ್ಕೆ ಒಳಪಡದ ಧರ್ಮವಾವುದೇ ಆಗಲಿ—ಅದರಲ್ಲಿ ಐನ್‌ಸ್ಟೈನರಿಗೆ ಅಚಲವಾದ ಗೌರವ, ಅಂಥ

ಧರ್ಮವು ಮಾನವನ ಸಂಸ್ಕೃತಿಯನ್ನು ಬೆಳೆಸುತ್ತದೆಂದೂ ಅವರು ನಂಬಿದ್ದರು. ಸದ್ಯದಲ್ಲಿ ಪ್ರಪಂಚದ ಯಾವ ಭಾಗದಲ್ಲಿಯೂ ಇಂಥ ಧರ್ಮ ನೆಲೆಗೊಂಡಿದ್ದಂತೆ ಕಾಣುವುದಿಲ್ಲ. ಐನ್‌ಸ್ಟೈನರ ಅಭಿಪ್ರಾಯದಲ್ಲಿ ಬೌದ್ಧ ಧರ್ಮ ಹತ್ತಿರ ಹತ್ತಿರ ಈ ಸ್ಥಿತಿಯನ್ನು ಮುಟ್ಟಿದೆ, ಆದ್ದರಿಂದ ಉಳಿದೆಲ್ಲವುಗಳಿಗಿಂತಲೂ ಬೌದ್ಧ ಧರ್ಮದಲ್ಲಿ ಅವರಿಗೆ ಹೆಚ್ಚು ಗೌರವವಿತ್ತು.

ಅನೇಕ ಶತಮಾನಗಳಿಂದ ಭೌತಶಾಸ್ತ್ರಜ್ಞರು ಪರಮ ಸತ್ಯವೆಂದು ತಿಳಿದಿದ್ದ ನ್ಯೂಟನ್ ತತ್ತ್ವಗಳನ್ನು ಧೈರ್ಯದಿಂದ ವಿಮರ್ಶಿಸಿದ ಐನ್‌ಸ್ಟೈನರು ಇಂದ್ರಿಯಾತೀತವಾದ ದೈವ, ಧರ್ಮ ಮೊದಲಾದ ಭಾವನೆಗಳನ್ನು ಅಷ್ಟೇ ಕೆಚ್ಚೆದೆಯಿಂದ ಪರೀಕ್ಷಿಸಿದ್ದಾರೆ. ಎಲ್ಲ ವಿಷಯಗಳನ್ನು ಬಿಚ್ಚು ಮನಸ್ಸಿನಿಂದ ತುಲನೆ ಮಾಡುವುದು ಅವರ ಮನೋಧರ್ಮ. ಹಳೆಯದೆಲ್ಲವೂ ಒಳ್ಳೆಯದೆಂದಾಗಲೀ, ಅಥವಾ ಗೊಡ್ಡುನಂಬಿಕೆಯೆಂದಾಗಲೀ ಆತುರದ ತೀರ್ಮಾನಕ್ಕೆ ಬರುವುದು ಅವರ ಸ್ವಭಾವಕ್ಕೆ ವಿರುದ್ಧವಾಗಿತ್ತು. ಎಲ್ಲ ಭಾವನೆಗಳನ್ನೂ ವಿಚಾರದ ಮೂಸೆಯಲ್ಲಿ ಕರಗಿಸಿ ಅನುಭವದ ಒರೆಗಲ್ಲಿಗೆ ತಿಕ್ಕಿ ಪರೀಕ್ಷಿಸಿ ಆ ಮೇಲೆ ಅವುಗಳ ಬೆಲೆ ಕಟ್ಟುತ್ತಿದ್ದರು. 'ಇಂದಿನ ಮಾನವ ಪ್ರಗತಿ ಹೊಂದಬೇಕಾದರೆ, ಅನಾದಿಕಾಲದಿಂದ ಜನಮನದಲ್ಲಿ ಬೆಳೆದುಬಂದಿರುವ ಧಾರ್ಮಿಕ ಭಾವನೆಗಳನ್ನು ಅವನು ಕೂಲಂಕಷವಾಗಿ ವಿಚಾರ ಮಾಡಬೇಕು; ಅವುಗಳಲ್ಲಿ ಒಳ್ಳೆಯದನ್ನು ಉಳಿಸಿಕೊಂಡು ವೃದ್ಧಿಮಾಡಿಕೊಳ್ಳಬೇಕು. ಅನೇಕ ಸಂದರ್ಭಗಳಲ್ಲಿ 'ದೇವನಿದ್ದಾನೆ' ಎಂಬ ನಂಬಿಕೆ ಮಾನವನ ಪ್ರಗತಿಗೆ ಅಡ್ಡ ಬಂದಿದೆ, ಆದ್ದರಿಂದ ಅಂಥ ಪಾರಮಾರ್ಥಿಕ ವಿಷಯಗಳನ್ನು ನಂಬುವ ಮೊದಲು ಆ ನಂಬಿಕೆಯಿಂದ ಯಾವ ಭಾವನೆಗಳು ಮನುಷ್ಯನಲ್ಲಿ ಬೆಳೆಯುತ್ತವೆ ಎಂಬುದನ್ನು ವಿಚಾರ ಮಾಡಬೇಕು. ಅಂಥ ನಂಬಿಕೆಯು ಇಡೀ ಮಾನವ ಜನಾಂಗದ ಸಂಸ್ಕೃತಿಯನ್ನು ವೃದ್ಧಿ ಮಾಡುವುದಾದರೆ ಮಾನವನಲ್ಲಿ ಹರಡಿರುವ ಮಲಿನವಾದ ಭಾವನೆಗಳನ್ನು ಹೋಗಲಾಡಿಸುವುದಾದರೆ ಅತ್ಯಾವಶ್ಯಕವಾಗಿ ನಾವು ಅದನ್ನು ಬೆಳೆಸಿಕೊಳ್ಳಬೇಕು' ಎಂದಿದ್ದಾರೆ. ಧರ್ಮದ ವಿಚಾರದಲ್ಲಿ ಅವರು ಆಡಿರುವ ಈ ಮಾತುಗಳನ್ನು ನೋಡಿ—

"ಹಸಿವು, ಕ್ರೂರ ಮೃಗಗಳು, ರೋಗ, ಮೃತ್ಯು—ಇವುಗಳ ಭಯವೇ ಅನಾಗರಿಕ ಆದಿಮಾನವನಲ್ಲಿ ಧಾರ್ಮಿಕ ಭಾವನೆಗಳು ಅಂಕುರಿಸಲು ಕಾರಣ, ಭಯವೇ ಧರ್ಮದ ಮೂಲವಾಗಿದ್ದ ಮಾನವನ ಚರಿತ್ರೆಯ ಈ ಘಟ್ಟದಲ್ಲಿ ಕಾರ್ಯ ಕಾರಣಗಳ ಸಂಬಂಧವನ್ನು ಅರಿಯುವಷ್ಟು ಅವನ ಗ್ರಹಣ ಶಕ್ತಿಯು ಬೆಳೆದಿರಲಿಲ್ಲ. ಆದ್ದರಿಂದ ಈ ಘಟ್ಟದಲ್ಲಿ ಮಾನವನ ಮನಸ್ಸು ತನ್ನಂತೆಯೇ ಇರುವ ಮತ್ತೊಂದು ವ್ಯಕ್ತಿಯನ್ನು ಸೃಷ್ಟಿಸಿಕೊಂಡಿತು; ಭಯಾನಕ ಘಟನೆಗಳೆಲ್ಲವೂ ಆತನ ಇಚ್ಛೆಯಿಂದಲೋ, ಲೀಲೆಯಿಂದಲೋ ನಡೆಯುತ್ತವೆಂದು ಭಾವಿಸಿತು. ತಲೆತಲಾಂತರಗಳಿಂದ ಬಂದ ಸಂಪ್ರದಾಯಗಳಿಗೆ ತಕ್ಕಂತೆ ಯಜ್ಞಯಾಗಾದಿಗಳನ್ನು ನಡೆಸುವದರ ಮೂಲಕವೋ, ವ್ರತಗಳನ್ನು ಆಚರಿಸುವದರ ಮೂಲಕವೋ ಈ ದೇವತೆಗಳ ಕೃಪೆ ಸಂಪಾದಿಸುವುದು ಅಂಥ ಮಾನವನ ಗುರಿಯಾಗಿರುತ್ತದೆ. ನಾನು ಈಗ ಹೇಳುತ್ತಿರುವುದು ಭಯದಿಂದಲೇ ಉತ್ಪನ್ನವಾಗುವ ಧರ್ಮದ ವಿಚಾರ...

"ಧಾರ್ಮಿಕ ಭಾವನೆಗಳು ರೂಪುಗೊಳ್ಳಲು ಇರುವ ಮತ್ತೊಂದು ಕಾರಣ

ಸಾಮಾಜಿಕ ಭಾವನೆಗಳು. ತಂದೆತಾಯಿಗಳು, ದೊಡ್ಡ ದೊಡ್ಡ ಗುಂಪುಗಳ ಯಜಮಾನರು— ಎಲ್ಲರೂ ಮರ್ತ್ಯರು; ತಪ್ಪು ಮಾಡುವಂಥವರು. ಆದ್ದರಿಂದ ಮಾರ್ಗದರ್ಶನ, ಒತ್ತಾಸೆ ಮತ್ತು ಪ್ರೀತಿ—ಇವುಗಳನ್ನು ಪಡೆಯುವ ಆಸೆ 'ದೇವರು ದೊಡ್ಡವನು' ಎಂಬ ಭಾವನೆಯನ್ನು ಹೊಂದುವಂತೆ ಮಾನವನನ್ನು ಪ್ರಚೋದಿಸುತ್ತವೆ. ದೇವರೆಂದರೆ ರಕ್ಷಿಸುವ, ಕೊಲ್ಲುವ, ಮನ್ನಿಸುವ, ಶಿಕ್ಷಿಸುವ ಶಕ್ತಿಯುಳ್ಳ ಒಂದು ವ್ಯಕ್ತಿ. ಭಕ್ತನ ನಂಬಿಕೆಗೆ ಅನುಗುಣವಾಗಿ ದೇವರು ಭಕ್ತಕುಲವನ್ನೋ ಇಡೀ ಮಾನವಕೋಟಿಯನ್ನೋ ಒಲ್ಮೆಸುವವನಾಗಿರುತ್ತಾನೆ; ಪಾಲಿಸುವವನಾಗಿರುತ್ತಾನೆ. ದುಃಖದಲ್ಲಿ ಸಮಾಧಾನ ಹೇಳುತ್ತಾನೆ; ಆಸೆಗಳು ಈಡೇರಿದಾಗ ಸಂತೈಸುತ್ತಾನೆ; ಸತ್ತವರ ಆತ್ಮಗಳನ್ನು ಕಾಪಾಡುತ್ತಾನೆ. ದೇವರ ವಿಷಯದಲ್ಲಿ ಬೆಳೆಯುವ ಸಾಮಾಜಿಕ ಭಾವನೆ ಇದು...

"ಎಲ್ಲ ನಾಗರಿಕ ಜನಾಂಗಗಳೂ—ಅದರಲ್ಲೂ ಪೌರ್ವಾತ್ಯ ದೇಶಗಳವರು ಅನುಸರಿಸುವ ಧರ್ಮಗಳು—ಮುಖ್ಯವಾಗಿ ನೈತಿಕಗಳಾಗಿವೆ. ಭಯದಿಂದ ಉತ್ಪನ್ನವಾದ ಧರ್ಮ ನೈತಿಕಧರ್ಮವಾಗಿ ಬೆಳೆದದ್ದು ಒಂದು ರಾಷ್ಟ್ರದ ಚರಿತ್ರೆಯಲ್ಲಿ ಮುಖ್ಯವಾದ ಹಂತ. ಎಲ್ಲ ನಾಗರಿಕ ಧರ್ಮಗಳೂ ನೈತಿಕ ಧರ್ಮಗಳು—ಎನ್ನುವ ಪೂರ್ವ ವಿಶ್ವಾಸ ನಮಗೆ ಬರದಂತೆ ನಾವು ಜಾಗರೂಕರಾಗಿರಬೇಕು. ಏಕೆಂದರೆ ಎಲ್ಲ ಧರ್ಮಗಳೂ ಈ ಎರಡು ಹಂತಗಳ ನಡುವೆ ಇರತಕ್ಕಂಥವು; ಸಾಮಾಜಿಕ ಜೀವನದ ಉನ್ನತ ಮಟ್ಟದಲ್ಲಿ ಮಾತ್ರ ನೈತಿಕ ಧರ್ಮವು ಪ್ರಧಾನವಾಗಿರುತ್ತದೆ.

"......ಆದರೆ ಮೇಲೆ ಹೇಳಿದ ಎರಡು ಗುಂಪುಗಳಿಗೂ ಸೇರದ ಮೂರನೆಯ ಹಂತವೊಂದಿದೆ; ಅದು ತನ್ನ ಶುದ್ಧ ರೂಪದಲ್ಲಿ ಎಲ್ಲಿಯೂ ಕಾಣದೆ ಹೋಗಬಹುದು. ಇದನ್ನು ನಾನು 'ವಿಶ್ವಧರ್ಮ ಭಾವನೆ' ಎಂದು ಕರೆಯುತ್ತೇನೆ...

"ಎಲ್ಲ ಕಾಲಗಳ ಧಾರ್ಮಿಕ ಪುರುಷರೂ ಮೂರನೆಯ ವಿಧದ ಧಾರ್ಮಿಕ ಭಾವನೆಯನ್ನು ಹೊಂದಿದ್ದಂಥವರೇ. ಅವರು ಉಳಿದ ಜನರಿಗಿಂತ ಭಿನ್ನರಾಗಿದ್ದುದು ಈ ಭಾವನೆಯನ್ನು ಬೆಳೆಸಿಕೊಂಡಿದ್ದರಿಂದಲೇ. ಈ ಭಾವನೆಯಲ್ಲಿ ಯಾವ ವಿಧವಾದ ಅಂಧಶ್ರದ್ಧೆಯನ್ನೂ, ಮಾನವನ ಗುಣಗಳನ್ನೇ ಹೊಂದಿರುವ ದೇವನಲ್ಲಿ ನಂಬಿಕೆಯನ್ನೂ ಕಾಣಲಾರೆವು. ಆದ್ದರಿಂದ ಅದರ ಆಧಾರದ ಮೇಲೆ ಯಾವ ಮತವನ್ನೂ ಕಟ್ಟಲಾಗುವುದಿಲ್ಲ. ಈ ಕಾರಣದಿಂದ ಸರ್ವೋತ್ಕೃಷ್ಟವಾದ ಧಾರ್ಮಿಕ ಭಾವನೆಗಳನ್ನು ಹೊಂದಿದವರು ತಮ್ಮ ಸಮಕಾಲೀನರಿಂದ ಪಾಷಂಡಿಗಳೆಂದೂ, ನಾಸ್ತಿಕರೆಂದೂ ಪರಿಗಣಿಸಲ್ಪಟ್ಟಿದ್ದರು; ಎಷ್ಟೋ ಹಲಕೆಲವು ಸಂದರ್ಭಗಳಲ್ಲಿ ಅವರು ಸಾಧುಗಳೆಂದು ಪೂಜಿಸಲ್ಪಟ್ಟರು. ಈ ಮಾತು ಎಲ್ಲ ಯುಗಗಳ ಧಾರ್ಮಿಕ ಪುರುಷರಿಗೂ ಅನ್ವಯಿಸುತ್ತದೆ...

"ದೇವರ ವಿಷಯದಲ್ಲಾಗಲೀ, ಶಾಸ್ತ್ರದ ವಿಷಯದಲ್ಲಾಗಲೀ ಒಂದು ನಿರ್ದಿಷ್ಟವಾದ ಅಭಿಪ್ರಾಯವನ್ನು ಕೊಡಲಾಗದ ವಿಶ್ವಧರ್ಮವು ವ್ಯಕ್ತಿಯಿಂದ ವ್ಯಕ್ತಿಗೆ ಹೇಗೆ ಪ್ರಸಾರವಾಗಬಲ್ಲದು? ನನ್ನ ಅಭಿಪ್ರಾಯದಲ್ಲಿ ಇಂಥ ಭಾವನೆಯನ್ನು ಪ್ರಚೋದಿಸುವುದೂ, ಅಂಥ ಭಾವನೆಯನ್ನು ಪಡೆಯಬಲ್ಲವರಲ್ಲಿ ಅದು ಸದಾ ಜೀವಂತವಾಗಿರುವಂತೆ ಮಾಡುವುದೂ ವಿಜ್ಞಾನ ಮತ್ತು ಕಲೆ ಮಾಡಬೇಕಾದ ಬಹು ಮುಖ್ಯವಾದ ಕರ್ತವ್ಯ. ಕಲೆ ಮತ್ತು ವಿಜ್ಞಾನ—ಇವುಗಳಿಂದ ಮಾತ್ರ ಪೋಷಿತವಾಗುವ ವಿಶ್ವಧರ್ಮವು ಎಲ್ಲ ಬಗೆಯ ಮೂಢ ನಂಬಿಕೆ

ಗಳಿಂದಲೂ ದೂರವಾಗಿರುತ್ತದೆ. ಭಯವನ್ನೇ ಆಧಾರವಾಗುಳ್ಳ ಆದಿ ಮಾನವನ ಧರ್ಮಕ್ಕೂ ಈ ವಿಶ್ವಧರ್ಮಕ್ಕೂ ಅಜಗಜಾಂತರ ವ್ಯತ್ಯಾಸ. ಈ ಧರ್ಮವು ಪ್ರಚೋದಿಸುವ ಭಾವನೆ ಯಾವುದೆಂದರೆ: ದೇವರು ಶಿಷ್ಟರನ್ನು ರಕ್ಷಿಸುವ, ದುಷ್ಟರನ್ನು ಶಿಕ್ಷಿಸುವ ದಂಡಾಧಿಕಾರಿಯಲ್ಲ; ಆತನು ಸೌಂದರ್ಯ ಮತ್ತು ಸತ್ಯಗಳ ಸ್ವರೂಪ ಎಂಬುದು. ಇಂಥ ವಿಶ್ವಧರ್ಮವನ್ನು ಅರ್ಥಮಾಡಿಕೊಳ್ಳಬಲ್ಲವನು ಪ್ರಕೃತಿಯಲ್ಲಿರುವ ಸಾಮರಸ್ಯವನ್ನೂ ಸೃಷ್ಟಿಯಲ್ಲಿರುವ ಚೆಲುವನ್ನೂ ಅರಿತು ಆನಂದ ಪಡುತ್ತಾನೆ.

"ಭೇದಿಸಲಸಾಧ್ಯವಾದ ರಹಸ್ಯ ಒಂದಿದೆ ಎಂಬ ಪರಿಜ್ಞಾನ, ಗಾಢವಾದ ಪ್ರಜ್ಞೆ ಮತ್ತು ದೇದೀಪ್ಯಮಾನವಾದ ಸೌಂದರ್ಯಗಳ ವಿರಾಟ್ ಸ್ವರೂಪವು ಸರಳ ರೂಪದಲ್ಲಿ ಮಾತ್ರ ನಮ್ಮ ತಿಳಿವಳಿಕೆಗೆ ಗೋಚರವಾಗಬಲ್ಲದು ಎಂಬ ಅರಿವು—ನಿಜವಾದ ಧರ್ಮದ ತಿರುಳು. ಈ ದೃಷ್ಟಿಯಿಂದ ಮಾತ್ರ ನಾನು ಧರ್ಮನಿಷ್ಠ. ತಾನೇ ಸೃಷ್ಟಿಸಿರುವ ಜೀವಜಂತುಗಳನ್ನು ಶಿಕ್ಷಿಸುವ ಮತ್ತು ರಕ್ಷಿಸುವ ದೇವನೊಬ್ಬನಿರುವನೆಂದು ನಾನು ಊಹಿಸಿಕೊಳ್ಳಲಾರೆ. ಅಥವಾ ನಮಗಿರುವಂಥದೇ ಇಚ್ಛಾಶಕ್ತಿಯನ್ನು ಹೊಂದಿರುವ ದೇವರನ್ನೂ ನಾನು ಊಹಿಸಲಾರೆ."

ಐನ್‌ಸ್ಟೈನರ ಧಾರ್ಮಿಕ ಭಾವನೆಗಳಿಗೆ ಅವರ ವೈಜ್ಞಾನಿಕ ಸಂಶೋಧನೆಯೇ ಸ್ಫೂರ್ತಿ. ವಿಶ್ವವನ್ನು ಅರ್ಥಮಾಡಿಕೊಳ್ಳುತ್ತಾ ಹೋದಂತೆ ಅವರಿಗೆ ಸೃಷ್ಟಿಯ ಹಿಂದೆ ಅಡಗಿರುವ ಗೂಢ ರಹಸ್ಯದಲ್ಲಿ ಭಕ್ತಿ-ಭಾವನೆ ಬೆಳೆಯುತ್ತಾ ಬಂತು. ಆದರೆ ಅವರ ಧರ್ಮ ದೃಷ್ಟಿಗೆ ಆಧಾರವಾಗಿರುವುದು ವೈಜ್ಞಾನಿಕ ಮನೋಭಾವವೆಯಲ್ಲ. ಧರ್ಮದ ತಾಯಿಬೇರಿರುವುದು ಅವರ ಹುಟ್ಟುಗುಣದಲ್ಲಿ. ವೈಜ್ಞಾನಿಕ ಸಂಶೋಧನೆಗಳು ಆ ತಾಯಿ ಬೇರಿಗೆ ನೀರೆರೆದು ಧರ್ಮವೃಕ್ಷವನ್ನು ಬೆಳೆಸಿದುವು, ಅಷ್ಟೆ. ವೈಜ್ಞಾನಿಕ ದೃಷ್ಟಿಯೊಂದೇ ನಮ್ಮ ಧಾರ್ಮಿಕ ಭಾವನೆಗಳನ್ನು ಬೆಳೆಸಲಾರದು ಎಂಬುದನ್ನು ಐನ್‌ಸ್ಟೈನರು ಸ್ಪಷ್ಟವಾಗಿ ಹೇಳುತ್ತಿದ್ದರು. ಅವರ ಅಭಿಪ್ರಾಯದಲ್ಲಿ ಧರ್ಮ ಅರಸುತ್ತಿರುವ ಗುರಿ ಬೇರೆ, ವಿಜ್ಞಾನ ಬಿಡಿಸುತ್ತಿರುವ ಸಮಸ್ಯೆ ಬೇರೆ. ಆದ್ದರಿಂದ ಧರ್ಮದಿಂದ ದೊರಕಿಸಿಕೊಳ್ಳಬಹುದಾದ ಪುರುಷಾರ್ಥವನ್ನು ವಿಜ್ಞಾನದಿಂದ ಪಡೆಯಲು ಅಪೇಕ್ಷಿಸುವುದು ಮಾವಿನ ಗಿಡದಿಂದ ನೇರಳೆ ಹಣ್ಣನ್ನು ಆಶಿಸಿದಂತೆ ಅನ್ನುತ್ತಿದ್ದರು.

"ವಿಶ್ವದಲ್ಲಿ ನಡೆಯುವ ಘಟನೆಗಳು ಹೇಗೆ ಒಂದಕ್ಕೊಂದು ಸಂಬಂಧಿಸಿವೆ. ಅವುಗಳಿಗಿರುವ ಕಾರ್ಯ-ಕಾರಣ ಸಂಬಂಧ ಎಂತಹುದು—ಎಂಬುದಕ್ಕಿಂತ ಹೆಚ್ಚಿನ ವಿಷಯವನ್ನು ವಿಜ್ಞಾನ ತಿಳಿಸಲಾರದು. ಯಥಾರ್ಥಜ್ಞಾನವನ್ನು ಪಡೆಯಬೇಕೆಂಬ ಉತ್ಕಟಾಕಾಂಕ್ಷೆ ಉತ್ಕೃಷ್ಟವಾದುದೇ ಆಗಿದೆ. ಈ ಕ್ಷೇತ್ರದಲ್ಲಿ ಮಾನವನು ನಡೆಸಿರುವ ಸಾಧನೆಗಳನ್ನೂ, ಪಡೆದಿರುವ ಸಿದ್ಧಿಗಳನ್ನೂ ನಾನು ಅಲಕ್ಷ್ಯ ಮಾಡಲಾರೆ. ಆದರೆ ವಾಸ್ತವಿಕ ಜಗತ್ತಿನ, ಜ್ಞಾನ ಸಾಧನೆಯ ಪರಮಗುರಿಯನ್ನು ತಿಳಿಸಲಾರದು; ಇದು ಸ್ಪಷ್ಟವಾಗಿಯೇ ಇದೆ. ವಾಸ್ತವಿಕ ಸ್ಥಿತಿ ಹೇಗಿದೆ ಎಂಬುದರ ವಿಚಾರವಾಗಿ ಅತಿ ಸ್ಪಷ್ಟವಾದ ಮತ್ತು ಪೂರ್ಣವಾದ ಜ್ಞಾನವನ್ನು ಪಡೆಯಲು ಸಾಧ್ಯ. ಆದರೂ ಅಂಥ ಜ್ಞಾನದಿಂದ ಮಾನವನ ಗುರಿ ಏನಾಗಿರಬೇಕು ಎಂಬುದನ್ನು ನಿರ್ಧರಿಸಲು ಆತ ಅಸಮರ್ಥನಾಗಿರಬಹುದು. ಯಥಾರ್ಥ ಜ್ಞಾನವು ಗುರಿಯನ್ನು

ತಲುಪಲು ಅತ್ಯುಪಯುಕ್ತವಾದ ಸಾಧನಗಳನ್ನು ಮಾತ್ರ ದೊರಕಿಸಿ ಕೊಡುತ್ತದೆ. ಆದರೆ ಮಾನವನ ಹೆಗ್ಗುರಿ ಏನೆಂಬುದರ ತಿಳಿವಳಿಕೆಯೂ ಮತ್ತು ಅದನ್ನು ತಲುಪುವ ಉತ್ಕಟ ಆಕಾಂಕ್ಷೆಯೂ ಬೇರೆ ಕಡೆಯಿಂದಲೇ ಬರಬೇಕು.

"ವಿಜ್ಞಾನ ಮತ್ತು ಧರ್ಮ—ಇವುಗಳು ಬೇರೆ ಬೇರೆಯಾಗಿದ್ದರೂ ಅವುಗಳ ಫಲವನ್ನು ಪಡೆಯುವ ಮಾರ್ಗ ಭಿನ್ನ ಭಿನ್ನವಾಗಿದ್ದರೂ, ಮಾನವನ ಪೂರ್ಣ ವಿಕಾಸಕ್ಕೆ ಎರಡೂ ಅತ್ಯಾವಶ್ಯಕವಾದುವುಗಳು. ಇವೆರಡನ್ನೂ ಸಮನ್ವಯಗೊಳಿಸುವದರಿಂದ ಮಾತ್ರ ಮಾನವ ಸುಖವಾಗಿ ಬಾಳಬಲ್ಲ; ಒಂದನ್ನು ತೊರೆದು ಮತ್ತೊಂದನ್ನು ಅನುಸರಿಸಿದಲ್ಲಿ ಅವನ ಬಾಳು ಅರೆ ಬಾಳಾಗುತ್ತದೆ. ಸಮನ್ವಯದೃಷ್ಟಿಯಿಂದ ನೋಡುವವನಿಗೆ ಧರ್ಮ ಮತ್ತು ವಿಜ್ಞಾನಗಳು ಒಂದಕ್ಕೊಂದು ಪೂರಕವಾಗಿ ಬಾಳನ್ನು ಪೂರ್ಣಗೊಳಿಸುತ್ತವೆ.

"ಧರ್ಮ ಮತ್ತು ವಿಜ್ಞಾನ—ಇವುಗಳ ಅಧಿಪತ್ಯಗಳು ಬೇರೆಯಾಗಿದ್ದರೂ ಕೂಡ ಅವುಗಳ ನಡುವೆ ಅತ್ಯಂತ ನಿಕಟವಾದ ಸಂಬಂಧವಿದೆ; ಅಲ್ಲದೆ ಒಂದನ್ನು ಮತ್ತೊಂದು ಅವಲಂಬಿಸಿದೆ... ಸತ್ಯವನ್ನರಿಯಬೇಕೆಂಬ ಉತ್ಕಟೇಚ್ಛೆಯಿದ್ದವರು ಮಾತ್ರ ವಿಜ್ಞಾನವನ್ನು ಸೃಜಿಸಬಲ್ಲರು...ವಿಶ್ವದ ಇರುವಿಕೆಗೆ ಕಾರಣಗಳಾದ ನೀತಿ-ನಿಯಮಗಳನ್ನು ನಮ್ಮ ವಿಚಾರದಿಂದ ಗ್ರಹಿಸಬಹುದು-ಎಂಬ ವಿಶ್ವಾಸಕ್ಕೆ ಆಧಾರವಾಗಿರುವದು ಧಾರ್ಮಿಕ ಭಾವನೆಯೇ. ಇಂಥ ವಿಶ್ವಾಸವನ್ನು ಹೊಂದದಿರುವ ಯಾವ ವೈಜ್ಞಾನಿಕನಾದರೂ ಇರುವನೇ ಎಂಬುದನ್ನು ನಾನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಧರ್ಮದಿಂದ ಸ್ಫೂರ್ತಿ ಪಡೆಯುವ ವಿಜ್ಞಾನ ಕುಂಟು; ವಿಜ್ಞಾನದಿಂದ ಬೆಳಕು ಪಡೆಯದ ಧರ್ಮ ಕುರುಡು."

ಭೌತಿಕ ಪ್ರಪಂಚದಲ್ಲಿ ಕಂಡುಬರುವ ಸಾಮರಸ್ಯವನ್ನೇ ಸಾಧಕನು ಇಂದ್ರಿಯಾತೀತವಾದ ಪಾರಮಾರ್ಥಿಕ ವಲಯಗಳಲ್ಲಿಯೂ ಕಾಣಬಹುದು. ಇದುವರೆಗೆ ಮಾನವನಿಂದ ಸಾಧಿತವಾದದ್ದರಲ್ಲಿ ಹಿತವಾದದ್ದೆಲ್ಲವನ್ನೂ ಉಳಿಸಿಕೊಂಡು, ಬೆಳೆಸಿಕೊಳ್ಳಬೇಕು. ವಿಜ್ಞಾನದಲ್ಲಿಯೇ ಆಗಲಿ, ಪಾರಮಾರ್ಥಿಕ ವಿಷಯಗಳಲ್ಲಿಯೇ ಆಗಲಿ, ಮಾನವನ ಉದ್ಧಾರಕ್ಕೆ ಸಹಾಯ ಮಾಡುವ ಅಂಶಗಳನ್ನು ಅವುಗಳೊಡನೆ ಬೆರೆತಿರುವ ಕಲ್ಮಶಗಳಿಂದ ಬೇರೆ ಮಾಡಬೇಕು. ಹೀಗೆ ಗಟ್ಟಿಯಾದುದನ್ನೆಲ್ಲಾ ಬೇರೆ ಮಾಡಿಕೊಂಡು, ಅದರಿಂದ ಮಾನವನನ್ನು ಅಮರತ್ವಕ್ಕೆ ಒಯ್ಯಬಲ್ಲ ಅಮೃತದ ಪಾಕವನ್ನು ಇಳಿಸಿಕೊಳ್ಳಬೇಕು. ಇಂಥ ಪ್ರಯತ್ನವೇ ನಿಜವಾದ ಮಾನವಧರ್ಮ. ಐನ್‌ಸ್ಟೈನರು ಬೋಧಿಸಿದುದು ಈ ಧರ್ಮವನ್ನು.

ಐನ್‌ಸ್ಟೈನರು ಜ್ಞಾನಯೋಗಿ. ಅವರ ಭಾವನೆಗಳೂ, ಶ್ರದ್ಧೆಯೂ ಆ ಜ್ಞಾನಯೋಗದ ಫಲ. ಅವರ ಉದಾತ್ತ ಭಾವನೆಗಳು ಕೇವಲ ತರ್ಕದಿಂದ ಹೊರಬಿದ್ದ ಫಲಿತಾಂಶಗಳಾಗಿರದೆ ಅವರ ಬಾಳಿನಲ್ಲಿ ಹಾಸುಹೊಕ್ಕಾಗಿ ಹೊಂದಿಕೊಂಡಿದ್ದವು; ಅವರ ಜೀವನವನ್ನು ಭವ್ಯವನ್ನಾಗಿ ಮಾಡಿದ್ದುವು. ಜ್ಞಾನಯೋಗದಿಂದ ಮಾನವ ಎಷ್ಟರಮಟ್ಟಿಗೆ ಪ್ರಕೃತಿಯ ರಹಸ್ಯವನ್ನು ತಿಳಿಯಬಲ್ಲನೋ, ಪಾರಮಾರ್ಥಿಕ ವಿಷಯಗಳನ್ನು ಸಾಧಿಸಬಲ್ಲನೋ ಅಷ್ಟನ್ನೂ ಐನ್‌ಸ್ಟೈನರು ತಿಳಿದಿದ್ದರು, ಸಾಧಿಸಿದ್ದರು.

# ೬ | ಮೃತ್ಯೋರ್ಮಾ ಅಮೃತಂ ಗಮಯ

ಸಾವಿರದ ಒಂಬೈನೂರ ಐವತ್ತೈದನೇ ಏಪ್ರಿಲ್ ಹದಿನೆಂಟರ ರಾತ್ರಿ. ಸುಸಂಸ್ಕೃತರಾದ ನಾಗರಿಕರು ತಮ್ಮ ತಮ್ಮ ದೈನಂದಿನ ಕಾರ್ಯಗಳನ್ನು ಮುಗಿಸಿ ಪ್ರಪಂಚದ ವಿದ್ಯಮಾನಗಳನ್ನು ತಿಳಿಯುವ ಉದ್ದೇಶದಿಂದ ರೇಡಿಯೋಗಳ ಮುಂದೆ ಕುಳಿತಿರುವ ಸಮಯ, ಆಕಾಶ ತರಂಗದಲ್ಲಿ ತೇಲಿ ಬಂದ ವಾರ್ತೆಯೊಂದು ಹೀಗೆ ಕುತೂಹಲಿಮನಸ್ಕರಾಗಿದ್ದ ಸಭ್ಯರನ್ನು ವಜ್ರಾಯುಧದಿಂದ ಹೊಡೆಯಿತು. ಪ್ರಪಂಚದ ಅತಿಶ್ರೇಷ್ಠ ವೈಜ್ಞಾನಿಕರೆಂದೂ, ಸತ್ಯಾನ್ವೇಷಕರೆಂದೂ, ಯುಗಾಚಾರ್ಯರೆಂದೂ ಹೆಸರುಗೊಂಡ ಐನ್‌ಸ್ಟೈನರ ಮರಣವೇ ಆ ವಾರ್ತೆ. ಅವರ ಅನಾರೋಗ್ಯದ ವಿಷಯವಾಗಿ ಯಾವ ಮುನ್ಸೂಚನೆಯೂ ಇರಲಿಲ್ಲವಾದ್ದರಿಂದ ಹಠಾತ್ತನೆ ಬಂದ ಈ ಸಾವಿನ ಸುದ್ದಿ ಕೇಳುತ್ತಿದ್ದವರ ಕಿವಿಗೆ ಸಿಡಿಲಿನಂತೆರಗಿತು.

ಅನಾರೋಗ್ಯದ ನಿಮಿತ್ತ ಮೂರು ದಿನಗಳ ಮೊದಲೇ ಐನ್‌ಸ್ಟೈನರು ಆಸ್ಪತ್ರೆಗೆ ಸೇರಿದ್ದರಾದರೂ ಆ ಸಂಗತಿ ಅವರ ಸಮೀಪದಲ್ಲಿದ್ದವರಿಗೆ ಹೊರತು ಬೇರೆಯವರಿಗಾರಿಗೂ ತಿಳಿದಿರಲಿಲ್ಲ. ತಮ್ಮ ಅನಾರೋಗ್ಯದ ವಿಷಯವನ್ನು ಪ್ರಕಟಿಸಬಾರದೆಂದು ಐನ್‌ಸ್ಟೈನರ ಆಸೆಯಾಗಿತ್ತು. ಕೋಟ್ಯಂತರ ಅಭಿಮಾನಿಗಳ ಮನಸ್ಸನ್ನು ದುಗುಡಗೊಳಿಸುವುದರಿಂದ ಅಪ್ರಿಯವಾದ ಈ ವಾರ್ತೆಗೆ ಅನಾವಶ್ಯಕವಾದ ಪ್ರಕಟನೆ ಬೇಡ—ಎಂಬುದು ಅವರ ಉದ್ದೇಶವಾಗಿದ್ದಿರಬಹುದು ಅಥವಾ ಆಶ್ಚರ್ಯಕರವಾದ ಘಟನೆಗಳು ನಡೆಯುವ ಈ ವಿಶಾಲ ವಿಶ್ವದಲ್ಲಿ ಒಬ್ಬ ಮನುಷ್ಯನ ಸಾವು ಒಂದು ಸಾಧಾರಣವಾದ ಘಟನೆ, ಇಂಥ ಸಾಮಾನ್ಯ ಘಟನೆಗೆ ಅತಿಯಾದ ಪ್ರಚಾರ ಸಲ್ಲದು ಎಂಬುದು ಅವರ ಅಭಿಪ್ರಾಯವಾಗಿದ್ದಿರಬಹುದು. ಅಂತೂ ಜೀವಂತರಾಗಿದ್ದಾಗ ಹೇಗೆ ವನಸುಮದಂತೆ ಬಾಳನ್ನು ನಡೆಯಿಸಲು ಇಚ್ಛೆಪಟ್ಟಿದ್ದರೋ ಮರಣಕಾಲದಲ್ಲೂ ಅದೇ ರೀತಿಯಲ್ಲಿ ಕೀರ್ತಿಶನಿಯಿಂದ ದೂರವಿರಲು ಇಷ್ಟಪಟ್ಟರು. ಯುಗಪುರುಷ ಐನ್‌ಸ್ಟೈನ್ ಮಹಾನುಭಾವರ ಮರಣ ಅವರ ಜೀವನದಂತೆಯೇ ಪ್ರಪಂಚಕ್ಕೆ ಸಂದೇಶವಾಗಬಲ್ಲದು.

ಐನ್‌ಸ್ಟೈನರಿಗೆ ಬಂದಿದ್ದ ಕಾಯಿಲೆ ಅತ್ಯಂತ ಕ್ರೂರವಾಗಿದ್ದುದರಿಂದ, ಅವರು ಶಸ್ತ್ರಚಿಕಿತ್ಸೆಯನ್ನು ಪಡೆಯುವಂತೆ ಗೆಳೆಯರನೇಕರು ಅವರನ್ನು ಒತ್ತಾಯಪಡಿಸಿದರಂತೆ. ಅವರಾದರೋ ಗೆಳೆಯರ ಸೂಚನೆಗಳನ್ನು ದೂರಮಾಡಿದರಲ್ಲದೆ, ಶಸ್ತ್ರಚಿಕಿತ್ಸೆಯ ಪ್ರಯತ್ನವನ್ನು ಸಂಪೂರ್ಣವಾಗಿ ವಿರೋಧಿಸಿದರಂತೆ. ಎಪ್ಪತ್ತಾರು ವರ್ಷಗಳ ಭವ್ಯ ಜೀವನವನ್ನು ನಡೆಸಿದ ಈ ಜ್ಞಾನಯೋಗಿ ಎಲ್ಲ ಅಭಿಮಾನಿಗಳನ್ನೂ ತೊರೆದು ಶಾಂತರೀತಿಯಿಂದ ಪ್ರಾಣ ಬಿಟ್ಟರು.

ಪ್ರಾಣ ಹೋದಮೇಲೆ ಮಣ್ಣಾಗುವದಕ್ಕೋ ಬೂದಿಯಾಗುವದಕ್ಕೋ ಅರ್ಹವಾದ ಈ ಶರೀರ ಒಂದು ಭವ್ಯವಾದ ಆತ್ಮಕ್ಕೆ ವಾಸಸ್ಥಾನವಾಗಿದ್ದರೆ ಲೋಕೋಪಕಾರಿಯಾಗಬಲ್ಲದು,

ಮಹಾತ್ಮಾ ಕಬೀರದಾಸರ ಮರಣಾನಂತರ ಅವರ ಕಳೇಬರಕ್ಕಾಗಿ ಹೋರಾಡಿದ ಹಿಂದೂ-ಮುಸ್ಲಿಮರಿಗೆ ಪ್ರೇಮದ ಹಿರಿಮೆಯನ್ನು ಬೋಧಿಸಿದ ಅವಶೇಷದಂತೆ. ತಮ್ಮ ಮರಣಾನಂತರ ಕೆಲವು ಅವಶೇಷಗಳನ್ನು ಸಂಶೋಧನೆಗಾಗಿ ಪ್ರಯೋಗಶಾಲೆಗೆ ಕಳುಹಿಸುವಂತೆ ಐನ್‌ಸ್ಟೈನರು ಉಯಿಲು ಬರೆದಿಟ್ಟಿದ್ದರು. ಅದರಂತೆ ಮೆದುಳು ಮತ್ತಿತರ ಕೆಲವು ಅಂಗಗಳನ್ನು ತೆಗೆದನಂತರ ಅಸಾಧಾರಣವಾದ ಜ್ಯೋತಿಯೊಂದಕ್ಕೆ ಆಗರವಾಗಿದ್ದ ಆ ಶರೀರ ಯಾವ ರೂಢಮೂಲ ಸಂಸ್ಕಾರವೂ ಇಲ್ಲದೆ ದಹನ ಮಾಡಲ್ಪಟ್ಟಿತು. ಹಿಮಾಲಯದಂಥ ಶುಭ್ರವೂ ಭವ್ಯವೂ ಆದ ಆತ್ಮವನ್ನು ಧರಿಸಿದ್ದ ಆ ಶರೀರಕ್ಕೆ ಮತ್ತಾವ ಸಂಸ್ಕಾರ ಬೇಕು?

ಅಮೇರಿಕದ ಪತ್ರಿಕೋದ್ಯೋಗಿಯೊಬ್ಬನು ಒಮ್ಮೆ ಆಚಾರ್ಯ ವಿನೋಬಾಭಾವೆಯವರನ್ನು "ಗಾಂಧೀಜಿ ನಿಧನದ ಸುದ್ದಿಯನ್ನು ಮೊದಲು ಕೇಳಿದಾಗ ನಿಮ್ಮ ಮನಸ್ಸಿನಲ್ಲಿ ಏನು ವಿಚಾರ ಹುಟ್ಟಿತು?" ಎಂದು ಪ್ರಶ್ನೆ ಮಾಡಿದ.

ಅದಕ್ಕೆ ವಿನೋಬಾರವರ ಉತ್ತರ ಹೀಗಿತ್ತು: "ಗಾಂಧೀಜಿ ನಿಧನರಾಗಲಿಲ್ಲವೆಂದು ನನಗನಿಸಿತು. ಇಂದಿಗಾದರೂ ಅವರು ಜೀವಂತರಾಗಿದ್ದಾರೆಂದೇ ನನಗೆ ಅನಿಸುತ್ತದೆ. ಸಜ್ಜನರು ಸಾಯುವುದೇ ಇಲ್ಲ. ಅವರು ಮೃತ್ಯುಂಜಯರು."

ವಿನೋಬಾಜಿಯ ಈ ಮಾತುಗಳು ವಿಭೂತಿ ಪುರುಷರಾದ ಐನ್‌ಸ್ಟೈನರಿಗೂ ಅನ್ವಯವಾಗುತ್ತವೆ.

ಶಾಂತಿಪ್ರಿಯರ ನಾಡಾದ ಭಾರತದ ಪ್ರಧಾನಿ ಪಂಡಿತ ಜವಾಹರಲಾಲರು ತಮ್ಮ ಇತ್ತೀಚಿನ ಅಮೇರಿಕಾ ಪ್ರವಾಸದಲ್ಲಿ ಐನ್‌ಸ್ಟೈನರೊಡನೆ ಕೆಲವು ರಸನಿಮಿಷಗಳನ್ನು ಕಳೆದಿದ್ದರು. ಐನ್‌ಸ್ಟೈನರು ಮೃತಹೊಂದಿದಾಗ ಜವಾಹರಲಾಲರು ಬಾಂಡುಂಗ್‌ದಲ್ಲಿದ್ದರು. ಜಗತ್ತಿನಲ್ಲಿ ಅಶಾಂತಿಗೆ ಕಾರಣಗಳಾದ ವಸಾಹತು ಪದ್ಧತಿಯನ್ನೂ, ರಾಷ್ಟ್ರ-ರಾಷ್ಟ್ರಗಳಿಗಿರುವ ಪರಸ್ಪರ ವೈಮನಸ್ಸನ್ನೂ ನಿರ್ಮೂಲ ಮಾಡುವ ಸಾಧನಗಳನ್ನು ಚರ್ಚಿಸುವ ಸಲುವಾಗಿ ಏಷ್ಯಾ-ಆಫ್ರಿಕಾ ರಾಷ್ಟ್ರಗಳು ಅಂದು ಬಾಂಡುಂಗ್‌ನಲ್ಲಿ ಸಭೆ ಸೇರಿದ್ದುವು. ಈ ಸಮ್ಮೇಳನಕ್ಕೆ ಸ್ಫೂರ್ತಿ ಮತ್ತು ಸೂತ್ರಧಾರಿಗಳಾಗಿದ್ದವರು ಜವಾಹರರೇ. ಈ ಸಮ್ಮೇಳನವು ಯಶಸ್ವಿಯಾಗಿ ನಡೆಯಲೆಂದು ಐನ್‌ಸ್ಟೈನರು ಆಶೀರ್ವಾದ ಮಾಡಿದ್ದರು. ಐನ್‌ಸ್ಟೈನರ ಮರಣದ ವಾರ್ತೆಯನ್ನು ಕೇಳಿ ವ್ಯಾಕುಲಗೊಂಡ ಜವಾಹರಲಾಲರು ಹೀಗೆ ಹೇಳಿದರು: "ಪ್ರೊಫೆಸರ್ ಐನ್‌ಸ್ಟೈನರ ನಿಧನವನ್ನು ಕೇಳಿ ನನಗೆ ಅಪಾರವಾದ ದುಃಖವಾಗಿದೆ. ಅವರು ಈ ಯುಗದ ಅತ್ಯಂತ ಶ್ರೇಷ್ಠ ವೈಜ್ಞಾನಿಕರು. ಅನೃತವನ್ನೂ, ಅಮಂಗಳವಾದದ್ದನ್ನೂ ತಮ್ಮ ಬಳಿ ಬರಗೊಡದಿದ್ದ ಸತ್ಯಾನ್ವೇಷಕರು ಅವರು; ಅತಿ ಕಷ್ಟವಾದ ಪರೀಕ್ಷೆಗೊಳಪಡಿಸುವ ಸಂದರ್ಭಗಳಲ್ಲಿ ದುರ್ಬಲರಾಗುವಂಥವರಿಗೆ ತಕ್ಕ ಬಲ ಕೊಡಬಲ್ಲ ಶಕ್ತಿದಾಯಕರಾಗಿದ್ದರು." ಜವಾಹರರ ಈ ಮಾತುಗಳು ಐನ್‌ಸ್ಟೈನರ ಜೀವನ ಸಾಧನೆಗಳ ಸಂಕ್ಷಿಪ್ತ ಜೀವನ ಚರಿತ್ರೆಯಾಗಿವೆ. ಒಬ್ಬ ಮಹಾವ್ಯಕ್ತಿ ಮತ್ತೊಬ್ಬ ಮಹಾಪುರುಷನನ್ನು ಕುರಿತ ಮೆಚ್ಚಿಗೆಯ ನುಡಿಗಳಾಗಿವೆ.

— ೦ —

## ಗ್ರಂಥಋಣ

*Einstein, his life & times* — Phillip Frank.

*Albert Einstein (Maker of Universes)* — Gordon Garbedian.

*The World as I see it* — Albert Einstein.

*Out of my later years* — Albert Einstein.

*Evolution of Physics* — Albert Einstein. & Leopold Infeld.

*Space, Time & Gravitation* — Sir Arthur Eddington.

*The Theory of Relativity* — Erwin Freundlich.

Printed by K. Ganesh Pai
Shri Ganesh Printers, Alke, Mangalore-575 003.

Rs. 2-40